AKS 15. APP. 90

1904ನೇ ಸಂಪುಟವು ದಿವಂಗತ ಪ್ರಭಾವತಿಯವರ ಕಂಠ ಮುಕ್ತೇಶ್ವರ ಕಂಠು ಕಾಳ್ಳು ವಾಗಿದೆ.

ಸ್ಥಾಪನೆ : ೧೮೬೫

1905

ಸಂಸ್ಥಾಪಕರು

40

ಜೀವನ ಶಿಕ್ಷಣ ಪತ್ರಿಕೆಯು

ಶತಮಾನೋತ್ತರ ಬೆಳ್ಳಿ ಹಬ್ಬವ

ಪುಸ್ತಕ ಪ್ರದರ್ಶನ ೧೯೮೯

ಶತಮಾನೋತ್ತರ ಬೆಳ್ಳಿ ಹಬ್ಬ

(ಏಪ್ರಿಲ್ ೧೯೮೯ ರಿಂದ)

ವರ್ಷ 1905

ಶ್ರೀ. ಚನ್ನಬಸಪ್ಪನವರು

(೧೮೬೩–೧೯೪೧)

ನೆಯ ಸಂಪುಟ

ಶೈಕ್ಷಣಿಕ ಶಾಲಾ ಪತ್ರಿಕೆ

ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚನ್ನಬಸಪ್ಪ ವೃತ್ತ, ರೊದ್ದರಸ್ತೆ, ಧಾರವಾಡ – ೮

ಶಾಲಾಪತ್ರಿಕೆ.

ಪದ್ಯಂ.

ವಿದ್ಯಾವಿದ್ಯಾಗುರುವರ್ಯರುನ್ನತಿಳಿಯಂ ಸಚ್ಛಿಷ್ಟಕೋತ್ಕರ್ಷಣಂ
ಬುಧಸಚ್ಛಾಸ್ತ್ರಂ ಪ್ರತಿಪಾದಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಸಯದಿಂದಿತ್ತಪವೋದುಪಾರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ;
ಪನ್ನಿಯಿಂದ ಲಸತ್ಪವಿದ್ದ ವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಯರಿಗಂ

ಪುಸ್ತಕ ೪೨] ಜನವರಿ ೧೯೦೫. [ಸಂಚಿಕೆ ೧

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮುಂಬಯಿನಗರದಲ್ಲಿ ಈ ಸಾರೆ ಔದ್ಯೋಗಿಕ ಪ್ರದರ್ಶನ ಸಮಾರಂಭವು ಬಹು ಪ್ರೇಕ್ಷಣೀಯವಾಯಿತೆಂದು ತಿಳಿಯುವದು. ಈ ಪ್ರದರ್ಶನವು ಜನವರಿ ತಿಂಗಳ ಕೊನೆಯ ವರೆಗೆ ಇರುವದೆಂದು ಗೊತ್ತಾಗಿದೆ. ಹೆಂಗಸರ ಕೈಕೆಲಸವೂ ನೋಡತಕ್ಕಂಥಾದ್ದದೆ. ಈ ಸಾರೆ ಸರಕಾರದ್ಯವರು ಒಕ್ಕಲಿಗರಿಗೆ ಉಪಯೋಗವಾಗಬೇಕೆಂದು ಕೃಷಿಶಾಸ್ತ್ರದ ಸಂಬಂಧದ ಅನೇಕ ವಸ್ತುಗಳನ್ನು ದೇಶದೇಶಗಳಿಂದ ಸಂಗ್ರಹಿಸಲಿಡಲಿಕ್ಕೆ ಪ್ರದರ್ಶನ ಕವಿಾಟಿಯವರಿಗೆ ನೆರವಾದದ್ದಲ್ಲದೆ ಈ ಇಲಾಖೆಯ ಒಂದೊಂದು ಜಿಲ್ಲೆಯಿಂದ ಹಲ ಜನ ರೈತರನ್ನು ತಮ್ಮ ಖರ್ಚಿನಿಂದ ಈ ಪ್ರದರ್ಶನವನ್ನು ನೋಡಲಿಕ್ಕೆ ಕಳಿಸಬೇಕೆಂದು ಗೊತ್ತು ಮಾಡಿದ್ದಾರೆ. ಇದರಿಂದ ರೈತರಿಗೆ ಬಹು ಪ್ರಯೋಜನವಾಗುವದೆಂದು ನಂಬುತ್ತೇವೆ.

ಹೊಸ ಪುಸ್ತಕಗಳನ್ನು ಸಿದ್ಧಗೊಳಿಸುವದಕ್ಕಾಗಿ ಏರ್ಪಾಡಾದ ಕವಿಾಟಿಯು ಮಾರ್ಚ ತಿಂಗಳ ಕೊನೆಯ ವರೆಗೆ

ಶಾಲಾಪತ್ರಿಕೆ.

ಪದ್ಯಂ.

ವಿದ್ಯಾವಿದ್ಯಾಗುರುವರ್ಯರುನ್ನತಿಳಿಯಂ ಸಚ್ಛಾಸ್ತ್ರಾಕ್ಷ ---
ಬಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಸಯದಿಂದಿತ್ತವೆವೋದುಪಾರ್ಗಸುಗುಣಂ ತೋರಲ್ಕೆ ಕೈಕೊಂಬುದ್ಯ(
ದಯೆಯಿಂದೋಪಪತಿದ್ದ ವೇಳ್ವುದುಮುಧರ್ಜ್ಞಾನಾಳಿವೃದ್ಧಿಪ್ಪಯರಿಗಂ

ಪುಸ್ತಕ ೪೨] ಜನವರಿ ೧೯೦೫. [ಸಂಚಿಕೆ ೧

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮುಂಬಯಿನಗರದಲ್ಲಿ ಈ ಸಾರೆ ಔದ್ಯೋಗಿಕ ಪ್ರದರ್ಶನ ಸಮಾರಂಭವು ಬಹು ಪ್ರೇಕ್ಷಣೀಯವಾಯಿತೆಂದು ತಿಳಿಯುವದು. ಈ ಪ್ರದರ್ಶನವು ಜನವರಿ ತಿಂಗಳ ಕೊನೆಯ ವರೆಗೆ ಇರುವದೆಂದು ಗೊತ್ತಾಗಿದೆ. ಹೆಂಗಸರ ಕೈಕೆಲಸವೂ ನೋಡತಕ್ಕಂಥಾದ್ದದೆ. ಈ ಸಾರೆ ಸರಕಾರದ್ಧವರು ಒಕ್ಕಲಿಗರಿಗೆ ಉಪಯೋಗವಾಗಬೇಕೆಂದು ಕೃಷಿಶಾಸ್ತ್ರದ ಸಂಬಂಧದ ಅನೇಕ ವಸ್ತುಗಳನ್ನು ದೇಶದೇಶಗಳಿಂದ ಸಂಗ್ರಹಿಸಲಿಡಲಿಕ್ಕೆ ಪ್ರದರ್ಶನ ಕವಿಾಟಿಯವರಿಗೆ ನೆರವಾದದ್ದಲ್ಲದೆ ಈ ಇಲಾಖೆಯ ಒಂದೊಂದು ಜಿಲ್ಲೆಯಿಂದ ಹಲಜನ ರೈತರನ್ನು ತಮ್ಮ ಖರ್ಚಿನಿಂದ ಈ ಪ್ರದರ್ಶನವನ್ನು ನೋಡಲಿಕ್ಕೆ ಕಳಿಸಬೇಕೆಂದು ಗೊತ್ತು ಮಾಡಿದ್ದಾರೆ. ಇದರಿಂದ ರೈತರಿಗೆ ಬಹು ಪ್ರಯೋಜನವಾಗುವದೆಂದು ನಂಬುತ್ತೇವೆ.

ಹೊಸ ಪುಸ್ತಕಗಳನ್ನು ಸಿದ್ಧಗೊಳಿಸುವದಕ್ಕಾಗಿ ವಿಶೇಷವಾದ ಕವಿಾಟಿಯು ಮಾರ್ಚ ತಿಂಗಳ ಕೊನೆಯ ವರೆಗೆ

ಇರುವದೆಂದು ಗೊತ್ತಾಗಿದೆ. ನಮ್ಮ ಭಾಗದ ಪುಸ್ತಕಗಳ ಕೈಬರಹದ ಪ್ರತಿಗಳು ಎಂಟೂ ಸಿದ್ಧವಾಗಿರುವವೆಂದು ಗೊತ್ತಾಗುವದು. ಹೊಸ ಪುಸ್ತಕಗಳು ಜೋರಾಗಿ ಪ್ರಚಾರದಲ್ಲಿ ಬರಲಿಹುದೆಂದು ತರ್ಕಿಸಲಿಕ್ಕೆ ಆಸ್ಪದವುಂಟು.

ಮನುಷ್ಯಶರೀರವು ಒಂದುನೂರಾಐವತ್ತೈದು ಪೌಂಡು ತೂಕವಿದ್ದರೆ ಅದರಲ್ಲಿ ಈ ಕೆಳಗಿನ ಪದಾರ್ಥಗಳು ಇಷ್ಟಿಷ್ಟು ಪ್ರಮಾಣದಲ್ಲಿರುತ್ತವೆಂದು ಶಾರೀರಶಾಸ್ತ್ರಜ್ಞರು ಗೊತ್ತು ಪಡಿಸಿದ್ದಾರೆ. ಅದು ಹ್ಯಾಗಂದರೆ– ಆಕ್ಸಿಜನ್ ೯೬ ಪೌಂಡು ಹೈಡ್ರೋಜನ್ ೧೫ ಪೌಂಡು, ನೈಟ್ರೋಜನ್ ೪ ಪೌಂಡು, ಕ್ಲೋರಾಯಿನ್ ೬೬ ಔಂಸ, ಫಿಫ್ಟಿ ಔಂಸು ಫ್ಲೋರಾಯಿನ್, ಕಾರ್ಬನ್ ೪೮ ಪೌಂಡು, ಫಾಸ್ಪರಸ್ ೭೬ ಔಂಸ, ಫಿಫ್ಟಿ ಔಂಸ ಗಂಧಕ, ೩ ಪೌಂಡು ಕ್ಯಾಲ್ಸಿಯಮ್, ೭೪ ಔಂಸ ಪೊಟ್ಯಾಸಿಯಮ್, ೧೫ ಕಬ್ಬಿಣ ಇತ್ಯಾದಿ.

ಒಟ್ಟಿಗೆ ಶರೀರವು ಹದಿಮೂರು ಪದಾರ್ಥಗಳ ಮಿಶ್ರಣವಿರುವದು. ಅದರಲ್ಲಿ ಎಂಟು ಘನಪದಾರ್ಥಗಳುಂಟು.

ಕಾಲೇಜದ ಪ್ರವೇಶಪರೀಕ್ಷೆಯು ಮುಗಿಯಿತು. ಧಾರವಾಡ, ಬೆಳಗಾವ, ಬಿಜಾಪೂರ, ಕಾರವಾರ ಜಿಲ್ಲೆಗಳಿಗೆ ಕ್ರಮವಾಗಿ [೧೦ । ೯ । ೬ । ೩] ಮಂದಿಯನ್ನು ಪಗಾರೀ ವಿದ್ಯಾರ್ಥಿಗಳಾಗಿಯೂ [೧೦ । ೯ । ೬ । ೪] ಮಂದಿಯನ್ನು ಬಿನ್‌ಪಗಾರೀ ವಿದ್ಯಾರ್ಥಿಗಳಾಗಿಯೂ ತೆಗೆದುಕೊಂಡಿರುವರು.

ಹೆಣ್ಣುಮಕ್ಕಳ ಟ್ರೇನಿಂಗ ಸ್ಕೂಲ ಪ್ರವೇಶಪರೀಕ್ಷೆಯು ಮುಗಿಯಿತು. ಅವರೊಳಗೆ ಜೆನ್ನಾಗಿ ಉತ್ತೀರ್ಣರಾದ ಹತ್ತು ಮಂದಿಯನ್ನು ತೆಗೆದುಕೊಂಡರು. ಈ ಸಾರೆ ಈ ಶಾಲೆಯಲ್ಲಿ ಎರಡು ವರ್ಗಗಳಾದ್ದರಿಂದ ಇನ್ನೊಬ್ಬ ಅ॥ನ್ನು ಕೊಡುವ ವಿಚಾರವುಂಟು. ಈಗ ಹತ್ತು ವರುಷದ ಈ ಸಂಸ್ಥೆಯು ಸಾಲೆಯ ಸ್ವರೂಪವನ್ನು ಪಡೆದದ್ದಲ್ಲದೆ.

ಇಪ್ಪತ್ತು ಮಂದಿ ಸಗಾರಿಯ ವಿದ್ಯಾರ್ಥಿನಿಯರನ್ನೂ, ನಾಲ್ಕು ಮಂದಿ ಮಿಶನರೀ ವಿದ್ಯಾರ್ಥಿನಿಯರನ್ನೂ ಸಂಗ್ರಹಿಸಿರುವದು. ಒಟ್ಟಿಗೆ ಎರಡೂ ವರ್ಗದಲ್ಲಿ ಕೂಡಿ ಮುವ್ವರು ಮಾಸ್ತರ ಜನರ ಹೆಂಡರಿರುವರು.

NANJANGOOD.
ನಂಜಿನಗೂಡು.

ಈ ಗ್ರಾಮವು ಕಬ್ಬನಿ ಅಥವಾ ಕಪಿಲಾ ಎಂಬ ಹೊಳೆಯ ದಂಡೆಯಲ್ಲಿ ಮೈಸೂರ ದಕ್ಷಿಣಕ್ಕೆ ಹನ್ನೆರಡು ಮೈಲು ಅಂತರದಲ್ಲಿ ನೆಲಸಿರುವದು. ಮೈಸೂರಿಂದ ನೀಲಗಿರಿಯ ಮೇಲಿರುವ ಮೇಲಾದ ಆರೋಗ್ಯದ ಸ್ಥಳವೆಂದು ಕರೆಯಲ್ಪಡುವ ಊಟಕಮಾಂಡು ಎಂಬಲ್ಲಿಗೆ ಹೋಗುವ ರಾಜಮಾರ್ಗವು ಈ ಊರ ಮೇಲಿಂದಲೇ ಹೋಗಿದೆ ಈ ಗ್ರಾಮವು ತಾಲೂಕಿನ ಮುಖ್ಯ ಸ್ಥಳವಾಗಿರುವದು. ಇಲ್ಲಿ ಮುನಸಿಪಾಲಟಿ ಉಂಟು. ಮೈಸೂರ ಸ್ಟೇಟ ರೇಲವೆಯ ಕಡೆ ಉಕ್ಕಡದ ಸ್ಟೇಶನ್ನು ಈ ಊರ ಬಳಿಯಲ್ಲಿ ಉಂಟು. ಊರ ಬೀದಿಗಳು ತಕ್ಕಷ್ಟು ವಿಶಾಲವಾಗಿರುವವು. ಬಾಜಾರಿನ ಸಾಲು ಚೆನ್ನಾಗಿ ಒಪ್ಪುವದು. ಮನೆಗಳಾದರೂ ತಕ್ಕಮಟ್ಟಿಗೆ ನೆಟ್ಟಗೆ ಅವೆ. ಬಾಲ ಬಾಲಿಕಾ ಪಾಠಶಾಲೆಗಳುಂಟು. ಈ ಊರ ನೆರೆಹೊರೆಯ ಪ್ರದೇಶದಲ್ಲಿ ಎರೆ ನೆಲವಿಲ್ಲ. ಆದದರಿಂದ ಗೋದಿ, ಹತ್ತಿ, ಕಡ್ಲೆ ಮುಂತಾದ ಹಿಂಗಾರಿಯ ಧಾನ್ಯಗಳು ಬೆಳೆಯುವದಿಲ್ಲ. ಕಾವೇರಿಗಳಿಂದ ಬೆಳೆಯುವ ಬೆಳೆಗಳಾದರೂ ಕಡಿಮೆ. ಈ ತಾಲೂಕಿನಲ್ಲಿ ಎರಡು ಹೊಳೆಗಳು ಹರಿಯುತ್ತಿದ್ದರೂ ಅವುಗಳಿಗೆ ಒಣ್ಣು ಹಾಕಿ ಕಾಲಿವೆಗಳನ್ನು ಮಾಡಿಲ್ಲ. ಅಲ್ಲಲ್ಲಿಗೆ ದೊಡ್ಡ ಕೆರೆಗಳು ಮಾತ್ರ ಉಂಟು ಇಂಥ ಕೆರೆಗಳಿಂದ ಅಲ್ಪ ಸ್ವಲ್ಪ ಭೂಮಿಯು ಮಾತ್ರ ತೊಯ್ಯುವದು. ಈ ಊರ ದಕ್ಷಿಣಕ್ಕಿರುವ ನರಸಾಂಬುಧಿ ಎಂಬ ಕೆರೆಯು ದೊಡ್ಡದು. ಈ ತಾಲೂಕಿನೊಳಗಿನ ಬೆಳಸುಗಳಲ್ಲಿ ಜೋಳವೇ ಮುಖ್ಯವಾದದ್ದು.

ಈ ಗ್ರಾಮವು ಊರೊಳಗಿನ ನಂಜುಂಡೇಶ್ವರನೆಂಬ ಶಿವಾಲಯದಿಂದ ಪ್ರಸಿದ್ಧಿಯನ್ನು ಪಡೆದಿದೆ. ನಂಜು ಅಂದರೆ

ಏಪವು; ಶಿವನು ಹಾಲ್ಗಡಲೊಳಗೆ ಉತ್ಪನ್ನವಾದ ಹಾಲಾಹಲ ವೆಂಬ ವಿಷವನ್ನು ಪಾನ ಮಾಡಿದ್ದು ಪುರಾಣಪ್ರಸಿದ್ಧವು. ಈ ವಿಷ ಕುಡಿದ ಶಂಕರನು ಈ ಸ್ಥಳದಲ್ಲಿ ವಾಸ ಮಾಡಿದ್ದರಿಂದ ಈ ಊರಿಗೆ ನಂಜುಂಡನ ಗೂಡು ಎಂದು ಹೆಸರು ಬಿತ್ತು. ಮುಂದೆ ಅದು ಅಪಭ್ರಷ್ಟವಾಗಿ ನಂಜನಗೂಡು ಎಂದು ರೂಢವಾಗಿದೆ. ಈ ದೇವಾಲಯವು ನೋಡತಕ್ಕಂಥಾದ್ದು. ಇದು ೫೯೫ ಫೂಟು ಉದ್ದವಾಗಿಯೂ ೧೬೦ ಫೂಟು ಅಗಲಾಗಿಯೂ ಇರುವದು. ಇಂಥ ವಿಸ್ತೀರ್ಣವಾದ ಶಿವಮಂದಿರದಲ್ಲಿ ನೂರು ದೀಡನೂರು ಕಂಬಗಳಿರುವವು. ಮಹಾದ್ವಾರದ ಮೇಲಿನ ಗೋಪುರವು ಬಹು ಅಂದವಾಗಿರುವದು. ಸುತ್ತಲಿನ ಗೋಡೆಯು ಮೇಲೆ ಗಚ್ಚಿನಿಂದ ಮಾಡಿದ ತರ ತರದ ವಿನಾಯಕನ ಮೂರ್ತಿಗಳನ್ನು ನೋಡಬಹುದು. ಗೋಪುರವನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ಸ೯೧೪ರಲ್ಲಿ ಕಟ್ಟಿಸಿದರು. ಶಿವಾಲಯದ ಮಧ್ಯಭಾಗದಲ್ಲಿರುವ ಕೃಷ್ಣಶಿಲೆಯಿಂದ ನಿರ್ಮಿತವಾದ ಶಿವಲಿಂಗವು ಭವ್ಯವಾಗಿ ತೋರುವದು. ಪಕ್ವವಾದ ನೇರಿಲ ಹಣ್ಣಿನ ಆಕಾರವನ್ನೂ ವರ್ಣವನ್ನೂ ಹೋಲುವ ಬಾಣವು ಪ್ರತಿ ಒಬ್ಬ ಭಾರತೀಯನನ್ನು ಭಕ್ತಿಸಾಗರದಲ್ಲಿ ಮುಳುಗಿಸದೆ ಬಿಡದು. ಈ ಮುಖ್ಯ ಲಿಂಗದ ಹೊರ್ತು ಒಳಪ್ರಕಾರದಲ್ಲಿಯೇ ಮೃಕಂಡುಜನನ್ನು ಕಾಲನ ಬಾಧೆಯಿಂದ ಉದ್ಧರಿಸಿದಂಥವೇ ಮೊದಲಾದ ಇಪ್ಪತ್ತೇಳು ಶಿವಲೀಲೆಯನ್ನು ವ್ಯಕ್ತಪಡಿಸುವ ಶಿಲಾಮೂರ್ತಿಗಳು ಕಂಗೊಳಿಸುವವು. ಇದಲ್ಲದೆ ವಿಷ್ಣುವಿನ ಅವತಾರದ ಮೂರ್ತಿಗಳೂ ಉಂಟು. ನಂಜುಂಡೇಶ್ವರನ ಹಿಂಬದಿಗೇ ಶ್ರೀ ಪಾರ್ವತಿಯ ಗುಡಿಯುಂಟು. ನಂಜುಂಡೇಶ್ವರನಿಗೆ ತ್ರಿಕಾಲ ಪೂಜಾ ನೈವೇದ್ಯಗಳು ಯಥಾಸಾಂಗವಾಗಿ ನಡೆಯುವವು, ಅದಕ್ಕಾಗಿ ಸರಕಾರದಿಂದ ಸುಮಾರು ಇಪ್ಪತ್ತುಸಾವಿರ ರೂಪಾಯಿಗಳು ದೊರೆಯುತ್ತವೆ.

ಈ ದೇವಾಲಯವು ಅತಿ ಪ್ರಾಚೀನ ಕಾಲದ್ದೆಂದು ತೋರುವದು. ಚೋಳರಾಜರ ಕಾಲದಲ್ಲಿ ಅಂದರೆ ಸುಮಾರು ಹನ್ನೊಂದನೇ ಶತಕದ ಪೂರ್ವದಲ್ಲಿ ಇದು ಇತ್ತೆಂದು ತಿಳಿ

ಯುವೆದು. ಆದರೆ ಆಗ ಈಗಿನಷ್ಟು ವಿಸ್ತಾರ ವೈಭವದೊಂ ದಿಗೆ ಇದ್ದಿಲ್ಲ ಮುಂದೆ ಚೋಳ ಅರಸರೂ ಮೊನ್ನೆ ಮೊನ್ನೆ ಪೂರ್ಣಯ್ಯನವರೂ ಈ ದೇವಾಲಯವನ್ನು ಬೆಳಿಸಿ ಕಟ್ಟಿಸಿ ದರೆಂದು ಗೊತ್ತಾಗುವದು. ಮೈಸೂರ ಹಿರಿ ಕೃಷ್ಣರಾಜರು ಸಹ ಕೆಲವು ಭಾಗವನ್ನು ಜೀರ್ಣೋದ್ಧಾರ ಮಾಡಿಸಿದರು. ಈ ಕೃಷ್ಣರಾಜರ ರುಮಾಲು ಹಾಕಿಕೊಂಡು ನಿಂತ ಕೃಷ್ಣ ಶಿಲೆಯ ಮೂರ್ತಿಯು ಎಡಬದಿಯ ಪ್ರಾಕಾರದಲ್ಲಿ ನಿಂತಿರು ವದು.

ಇದಲ್ಲದೆ ಈ ಊರಲ್ಲಿ ಮಧ್ವಮತದ ಒಂದು ಶಾಖೆಯಾ ದ ರಾಘವೇಂದ್ರ ಸ್ವಾಮಿಗಳ ಮಠವುಂಟು. ಇದಾದರೂ ವಿಸ್ತಾರವಾಗಿದೆ. ಊರೊಳಗೆ ಒಂದು ಅರಮನೆಯುಂಟು. ಅರಸರು ದೇವದರ್ಶನಕ್ಕಾಗಿ ಬಂದಾಗ ಇಲ್ಲಿಯೇ ಉಳ ಕೊಳ್ಳುವರು.

ಕಪಿಲಾನದಿಗೆ ಸೋಪಾನಗಳನ್ನು ಕಟ್ಟಿ ಸ್ನಾನಾದಿ ಕಾರ್ಯಗಳಿಗೆ ಅನೂಕೂಲ ಮಾಡಿದ್ದಾರೆ, ನೀರು ಅಷ್ಟು ಆರೋಗ್ಯಕಾರಕವಲ್ಲ. ಈ ನದಿಗೆ ಮುಂದೆ ಕುಂಡಿನ್ಯ ವೆಂಬ ಬೇರೊಂದು ಹೊಳೆಯು ಕೂಡುವದು. ಆ ಸ್ಥಳಕ್ಕೆ ಪರಶುರಾಮ ಕ್ಷೇತ್ರವೆನ್ನುವರು. ಅಲ್ಲಿ ಒಂದು ಪರಶುರಾ ಮನ ಗುಡಿಯೂ ಉಂಟು ಇಲ್ಲಿ ಒಂದು ಬಗೆಯ ಅಲರ್ಜಿ ದೊರೆಯುವದು. ಭಾವಿಕರು ಅದಕ್ಕೆ ಮೃತ್ತಿಕೆಯೆಂದು ಬಹು ಭಕ್ತಿಯಿಂದ ಬಯ್ಸುವರು. ಆ ಮೃತ್ತಿಕೆಯಿಂದ ಹಲವು ಚರ್ಮ ರೋಗಗಳು ವಾಸಿಯಾಗುತ್ತವಂತೆ

ಈ ಊರೊಳಗಿನ ಬಾಲ ಬಾಲಿಕಾ ಪಾಠಶಾಲೆಗಳು ಸರಸಾಗಿ ನಡೆದಿರುತ್ತವೆಂದು ತಿಳಿಯುವದು. ಹೆಣ್ಣುಮಕ್ಕ ಳ ಸಾಲೆಯ ಮುಖ್ಯ ಶಿಕ್ಷಕಿಯು ಬ್ರಾಹ್ಮಣ ವಿಧವೆ ಇರು ವಳು. ಈಕೆಯು ತನ್ನ ವರ್ಣದಲ್ಲಿ ವರ್ಜಿಸಲ್ಪಟ್ಟ ವೈಧವ್ಯ ಲಾಂಛನವನ್ನು ಸಂಪೂರ್ಣವಾಗಿ ಧಾರಣ ಮಾಡಿರುವಳು. ಈ ಸ್ಥಿತಿಯು ಅನ್ಯದೇಶದವರಿಗೆ ಅಥವಾ ಬೇರೆ ಬಗೆಯ ಜನರಿಗೆ ಹ್ಯಾಗೇ ಕಾಣಲಿ, ನಮಗಂತೂ ವಂದನೀಯವಾಗಿ ಯೂ ಶ್ಲಾಘನೀಯವಾಗಿಯೂ ತೋರಿತು ಸಾಲೆಯು ಹುಡಿ

ಗೆಯರ ಅಭ್ಯಾಸವು ಬಹು ಸರಸವಾಗಿತ್ತು. ಕವಿತೆಗಳನ್ನಂ
ತೂ ಬಹು ವಿನೋದರವಾಗಿ ಅಂದರು. ಆ ದೇಶದಲ್ಲಿ
ಸ್ವಭಾವಿಕವಾಗಿ ಗಾಯನಕ್ಕೆ ಮೆಚ್ಚಿದವರ ಸಂಖ್ಯೆಯೇ
ಹೆಚ್ಚು. ಒಟ್ಟಿಗೆ ಸಾಲೆಯ ವಿದ್ಯಾರ್ಥಿಗಳಲ್ಲಿ ನಾಗರಿಕತೆ
ಯು ಹೆಚ್ಚು ಪ್ರಮಾಣದಿಂದಿರುವದೆಂದು ತೋರಿತು. ಈ
ಪ್ರಾಂತದಲ್ಲಿ ನಡೆಯುವ ಶಿಕ್ಷಣದ ಸಂಬಂಧವಾಗಿ ನಾವು
ಸ್ವತಂತ್ರವಾಗಿ ಬರೆಯುವವರಿದ್ದರಿಂದ ಇಲ್ಲಿ ವಿಸ್ತರಿಸಿ
ಬರೆಯಲಾರೆವು.

CHOUTH & SIRDESHMUKHI.

ಚೌಥಾಯಿ ಸರದೇಶಮುಖಿ ಹಕ್ಕುಗಳು.

(ಎಲ್ಲಿಂದ ಪುಟದಿಂದ ಮುಂದೆ ಸಾಗಿದ್ದು.)

ಸರ್ ಗಂಟಿಂಗರಲ್ಲಿ ಶಿವಾಜಿಯು ಈ ಹಕ್ಕುಗಳನ್ನು ಬೇಡಿ
ದ್ದು ಇತಿಹಾಸದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಈ ಕಲದಲ್ಲಿ
ಶಿವಾಜಿಯು ರಾಜ್ಯದ ಮೇರೆಯು ಪೂರ್ಣ, ಸುಫೆ ಪರಗಣೆಗ
ಳೂ ಇವುಗಳ ನೆರೆಹೊರೆಯ ಕೆಲ್ಲೆಗಳೂ ಇಷ್ಟು ಪ್ರದೇಶಗ
ಳನ್ನು ದಾಟಿ ಹಬ್ಬಿದ್ದಿಲ್ಲ ಇವನು ಮಹಾರಾಷ್ಟ್ರದಲ್ಲಿ ತನ
ಗೆ ಸರದೇಶಮುಖಿಯ ಪತನವು ಸಿಗಬೇಕೆಂದು ಬಯಸು
ತ್ತಿದ್ದನು. ಇವನ ಮನೆತನವು ಇವನ ಅಜ್ಜನ ಕಾಲದಿಂದ
ಪ್ರಸಿದ್ಧಿಯನ್ನು ಪಡೆದಿತ್ತು. ಈ ಮನೆತನದವರು ಮಾಲ
ಪಡಿಯ ಘಾಟಗೆ, ಪಲಟಣದ ನಿಂಬಾಳಕರ, ಜತ್ತಿಯ ಡಫ
ಳೆ, ಸಾವಂತವಾಡಿಯ ಭೋಸಲೆ, ಮುಂತಾದ ಪುರಾತನ
ದೇಶಮುಖರೊಂತಸೆ ಶರೀರಸಂಬಂಧವನ್ನು ಮಾಡಿದ್ದರು.
ಆದರೂ ಶಿವಾಜಿಯು ಅಜ್ಜನಿಗೂ, ತಂದೆಗೂ ದೇಶಮುಖಿಯ
ಪತನವೆಂದೂ ಸಿಗಲಿಲ್ಲ ಅದಿಲಶಾಹೀ ನಿಜಾಮಶಾಹೀ
ರಾಜ್ಯಗಳು ಸ್ಥಾಪನವಾದಂದಿನಿಂದ ಈ ದೇಶಮುಖಿಯು ಪತ
ನಗಳು ಉದಯವಾದವು. ಈ ದೇಶಮುಖರ ಕರ್ತವ್ಯಗ
ಳಲ್ಲಿ ರಾಜ್ಯದೊಳಗೆ ಸ್ವಸ್ಥತೆಯನ್ನೂ, ಶಾಂತತೆಯನ್ನೂ
ನಿಲಿಗೊಳಿಸುವದೂ, ಬೇಕಾದಾಗ ಒಡೆಯನಿಗೆ ನೆರವಾಗು
ವದೂ ಇವೇ ಎರಡು ಮುಖ್ಯವಾದವುಗಳು. ಇದಲದೆ ಕಂ

ದಾಯ ತ್ತುನ ಜವಾಬದಾರಿಯಾದರೂ ಇವರದೇ ಈ ದೇಶಮುಖರು ತಮ್ಮ ತಮ್ಮ ಕೈಯೊಳಗಿನ ನಾಡಿನ ಹಣವನ್ನ ಎತ್ತಿ ಅರಸನಿಗೆ ಮುಟ್ಟಿಸುವರು. ಆ ಬಂದ ಹಣದಲ್ಲಿ ನೂರಕ್ಕೆ ಹತ್ತರಂತೆ ತಾವು ತಮ್ಮ ಶ್ರಮದ ಫಲವೆಂದು ಇಸಕೊಳ್ಳುವರು. ಈ ನೂರಕ್ಕೆ ಹತ್ತರಂತೆ ಬರುವ ಹಣದಲ್ಲಿ ಐದು ರೋಖ ಹಣದ ರೂಪದಿಂದಲೂ ಉಳಿದ ಐದು ಉಂಬಳಿ ಭೂಮಿಯ ರೂಪದಿಂದಲೂ ಸಿಗುತ್ತಿತ್ತು. ಇದೇ ಸರದೇಶಮುಖಿಯ ವತನವು. ಈ ವತನವನ್ನು ಸಂಪಾದಿಸಬೇಕೆಂದು ಶಿವಾಜಿಯು ಇಚ್ಛೆ ಇಟ್ಟು

ಜುನ್ನರ, ಅಹಮ್ಮದನಗರ ಪ್ರಾಂತಗಳಲ್ಲಿ ತಮ್ಮ ಪಿತರಾರ್ಜಿತ ಆಸ್ತಿಯುಂಟು. ಆದ್ದರಿಂದ ಆದೇ ಪ್ರಾಂತದ ಸರದೇಶಮುಖಿಯ ಉತ್ಪನ್ನವು ತನಗೆ ದೊರೆಯಬೇಕೆಂದು ಶಿವಾಜಿಯು ಮೊದಲು ದಿಲ್ಲಿಯ ಬಾದಶಹನಿಗೆ ವಿನಂತೀ ಮಾಡಿದನು ಬೇಕಾದರೆ ಐದು ಸಾವಿರ ಸ್ವಾರರೊಂದಿಗೆ ಬಾದಶಹನ ಚಾಕರಿಗೆ ಕರೆದಾಗ ಸಿದ್ಧನಿರುವೆನೆಂತಲೂ ಅರಿಕೆ ಮಾಡಿಕೊಂಡನು. ಆದರೆ ಶಹಾಜಹಾನ ಬಾದಶಹನು ಈ ಮಾತಿಗೆ ಕಿವಿಗೊಡಲಿಲ್ಲ ಆದರೂ ಶಿವಾಜಿಯು ಎದೆಗುಂದದೆ ಸ್ವತಃ ದಿಲ್ಲಿಯವರೆಗೆ ಹೋಗಿ ಈ ಮಾತಿಗಾಗಿ ವಿನ್ನಹ ಮಾಡಿಕೊಂಡನು ಸರ್ ರಿಚರ್ಡ್ ಹೆರಲ್ಡ್ ಶಹಾಜಹಾನನ ಆಳಿಕೆಯಲ್ಲಿ ಅವರಂಗಜೇಬನು ದಕ್ಷಿಣಕ್ಕೆ ದಂಡೆತ್ತಿ ಬರಲು ಅವನ ಮುಂದೆಯೂ ಶಿವಾಜಿಯು ತನ್ನ ಪ್ರಶ್ನವನ್ನು ಇಟ್ಟನು ಈ ಕಾಲದಲ್ಲಿ ಮಾತ್ರ ಅವನಿಗೆ ಸ್ವಲ್ಪ ಯಶ ದೊರೆಯಿತೆಂದು ಹೇಳಬಹುದು ಈ ವಿನಂತಿಗೆ ಅವರಂಗಜೇಬನು ಶಿವಾಜಿಯು ದಂಡನ್ನು ಕೂಡಿಸಿ ಸಮುದ್ರ ದಂಡೆಗಿರುವ ದಾಭೋಳ ಮುಂತಾದ ಪರಗಣೆಗಳನ್ನು ಕೈವಶ ಮಾಡಿಕೊಳ್ಳಬೇಕೆಂತಲೂ, ಅವರಂಗಜೇಬನು ಇಲ್ಲದಾಗ ಮುಘರಾಷ್ಟ್ರವನ್ನು ಸಂರಕ್ಷಿಸಬೇಕೆಂತಲೂ ಉತ್ತರ ಕೊಟ್ಟನು ಅದಕ್ಕೆ ಶಹಾಜಹಾನ ಬಾದಶಹನ ಒಪ್ಪಿಗೆಯು ದೊರೆಯಿತು ಈ ಮಾತಿಗೆ ಶಿವಾಜಿಯು ಒಡಂಬಟ್ಟು ಕೊಂಕಣ ಪ್ರಾಂತವನ್ನು ಕೈವಶ ಮಾಡಿಕೊಂಡನು. ಆಮೆ

ರೆ ಸರದೇಶಮುಖಿಯ ಹಕ್ಕು ಇನ್ನೂ ದೊರೆತಿದ್ದಿಲ್ಲ ಆವ ರಂಗಜೇಬನು ನಿನ್ನ ನಂಬಿಗೆಯ ಕಾರಭಾರಿಯನ್ನು ದಿಲ್ಲಿಗ ಕಳಿಸು ಅಂದರೆ ಈ ಮಾತಿನ ಯೋಗ್ಯ ವಿಚಾರವನ್ನು ಮಾಡುವೆವು ಎಂದು ನುಡಿದನು.

ಮುಂದೆ ಸ೯ ೧೬೭೬ ರ ವರೆಗೆ ಈ ಹಕ್ಕಿನ ಸಂಬಂಧದ ಪ್ರಶ್ನೆಯು ಸ್ವಸ್ಥವಾಗಿ ಮಲಗಿತ್ತು. ಆ ವರುಷ ಪುರಂದರ ದಲ್ಲಿ ಶಿವಾಜಿಗೂ ಜಯಸಿಂಗನಿಗೂ ಒಪ್ಪಂದದ ಸಂಧಾನವು ನಡೆದಾಗ ಮತ್ತೆ ಮುಂದೆ ಬಂತು. ಈ ಒಡಂಬಡಿಕೆಯಲ್ಲಿ ಶಿವಾಜಿಯು ತನ್ನ ಆಧೀನದಲ್ಲಿರುವ ಯಾವತ್ತು ದುರ್ಗಕೋಟೆಗಳನ್ನು ಬಾದಶಹನಿಗೆ ಒಪ್ಪಿಸುತ್ತೇನೆಂತಲೂ, ತಾನು ಸ್ವತಃ ದಿಲ್ಲಿಯ ವರೆಗೆ ಬಂದು ಬಾದಶಹನನ್ನು ಕಾಣುತ್ತೇನೆಂತಲೂ ಒಪ್ಪಿದನು ಆದರೆ ನಿಜಾಮನ ರಾಜ್ಯದಲ್ಲಿ ನನ್ನ ಅಜ್ಜ ಮುತ್ತೆಂದಿರ ಕಾಲದಿಂದ ನಡೆದು ಬಂದ ಕೆಲವು ಹಕ್ಕುಗಳುಂಟು. ನಿಜಾಮುಶಾಹಿಯಿಂದ ಬಾದಶಹನು ಕೆಲವು ಪ್ರಾಂತಗಳನ್ನು ಗೆದ್ದುಕೊಂಡು ವಿಜಾಪುರದ ಪ್ರಾಂತಕ್ಕೆ ಜೋಡಿಸಿರುವನು. ಆದರೆ ಆ ಪ್ರಾಂತದೊಳಗಿನ ನಮಗಿರುವ ಹಕ್ಕುಗಳ ಸಂಬಂಧದಿಂದ ನಮಗೆ ಏನಾದರೂ ಸಿಗತಕ್ಕದ್ದು, ಎಂದು ಆಕ್ಷೇಪಿಸಿದನು. ಇದಲ್ಲದೆ ಈ ಒಪ್ಪಂದದಲ್ಲಿ ಈ ಸರದೇಶಮುಖಿಯ ಹಕ್ಕನ್ನೊಂದೇ ಅಲ್ಲ, ಚೌಥಾಯಿ ಅಂದರೆ ಉತ್ಪನ್ನದ ೪ ವನ್ನು ಎತ್ತುವ ಹಕ್ಕನು ಕೇಳಿದನು. ಈ ಹಕ್ಕುಗಳನ್ನು ವಸೂಲು ಮಾಡುವದಕ್ಕಾಗಿ ಹತ್ತುವ ಖರ್ಚುಗಳನ್ನು ನಾನೇ ಸೋಸುವೆನು. ಇದಲ್ಲದೆ ಈ ಹಕ್ಕು ಪ್ರಾಪ್ತವಾದ ಬಳಿಕ ವರ್ಷ ಮೂರು ಲಕ್ಷ ರೂಪಾಯಿಗಳಂತೆ ೪೦ ಲಕ್ಷ ರೂಪಾಯಿಗಳನ್ನು ಕಾಣಿಕೆಯೆಂದು ಮುಟ್ಟಿಸುವೆನು. ಇದಲ್ಲದೆ ಬಾದಶಹನ ಉಪಯೋಗಕ್ಕಾಗಿ ಐದು ಸಾವಿರ ಮಂದಿ ರಾಹುತರನ್ನು ಸ್ವಂತ ಖರ್ಚಿನಿಂದ ಇಡುವೆನು, ಎಂದು ಒಪ್ಪಿಕೊಂಡನು. ಚೌಥಾಯಿ ಸರದೇಶಮುಖಿಗಳ ಹಕ್ಕಿನ ಸಂಬಂಧದಿಂದ ಆಗ ಏನೂ ನಿರ್ಣಯವಾಗಲಿಲ್ಲ. ಜಯಸಿಂಗನು ಆ ಒಪ್ಪಂದದ ಯಾದಿಯನ್ನು ಮುಂಜೂರಿಗಾಗಿ ಬಾದಶಹನ ಕಡಿಗೆ ಕಳಿಸಲು

ಬಾದಶಹನು ಶಿವಾಜಿಯು ಸ್ವತಃ ದಿಲ್ಲಿಗೆ ಬಂದು ಕಾಣಿಕೆ ಯನ್ನು ಕೊಟ್ಟ ಹೊರತು ಈ ಒಪ್ಪಂದದ ಕಾಗದದೊಳ ಗಿರುವ ಸೂಚನೆಗಳ ಸಂಬಂಧದಿಂದ ವಿಚಾರ ಮಾಡಲಾರೆ ನು ಎಂದು ನಿಷ್ಕ್ರೂಣವಾಗಿ ಹೇಳಿದನು. ಶಿವಾಜಿಯು ದಿಲ್ಲಿಗೆ ಹೋಗಿ ಏನೊಂದು ಫಲವನ್ನು ಪಡೆಯಲಿಲ್ಲ. ಸೆರೆಯಲ್ಲಿ ಮಾತ್ರ ಬೀಳಬೇಕಾಯಿತು. ಮುಂದೆ ಇವನು ಸೆರೆಮನೆ ಯೊಳಗಿಂದ ಓಡಿ ಬಂದ ಬಳಿಕ ಮರಳಿ ಬಾದಶಹನೊಡನೆ ಕಾಳಗ ಹೂಡಿದನು. ಆಗ ಬಾದಶಹನಿಗೆ ಪಶ್ಚಾತ್ತಾಪ ಹುಟ್ಟಿ ಅವನು ೧೬೬೭ ರಲ್ಲಿ ಶಿವಾಜಿಗೆ ವರ್ಹಾಡದೊಳಗೊಂ ದು ಜಹಾಗೀರವನ್ನೂ, ರಾಜನೆಂಬ ಪದವಿಯನ್ನೂ, ಅವನ ಮಗ ಸಂಭಾಜಿಗೆ ಸರದಾರ ಪದವಿಯನ್ನೂ ಕೊಟ್ಟನು. ಆದರೆ ಶಿವಾಜಿಯು ಇವೆಲ್ಲವುಗಳಿಂದಲೂ ಸಂತುಷ್ಟನಾಗದೆ ತಾನು ಆರಂಭದಲ್ಲಿ ಬೇಡಿದ ಚೌಥಾಯಿ, ಸರದೇಶಮುಖಿ ಗಳ ಹಕ್ಕುಗಳನ್ನೇ ಕೊಡಬೇಕೆಂದು ಹಟ ಹಿಡಿದನು. ಆದ ರಂತೆ ೧೬೬೮ ರಲ್ಲಿ ಗೋವಳಕೊಂಡದ ಬಾದಶಹನನ್ನು ಹಣ್ಣಿಗೆ ತಂದು ಅವನಿಂದ ಚೌಥಾಯಿ ಸರದೇಶಮುಖಿಯ ಹಣವನ್ನು ಎತ್ತಿದನು. ಇದೇ ಸಂಧಿಗೆ ವಿಜಾಪುರದ ಬಾದ ಶಹನೂ ಈ ಹಕ್ಕುಗಳನ್ನೊಪ್ಪಿಕೊಂಡು ವರ್ಷಾ ಮೂರು ಲಕ್ಷ ರೂಪಾಯಿಗಳನ್ನು ಕೊಡುತ್ತೇನೆಂದು ಒಡಂಬಟ್ಟನು. ಇದೇ ಸಮಯದಲ್ಲಿ ಗೋವಳಕೊಂಡದವರು ಐದು ಲಕ್ಷ ರೂಪಾಯಿಗಳನ್ನು ವಸೂಲು ಕೊಟ್ಟು ಬಿಟ್ಟರು ೧೬೭೧ ರಲ್ಲಿ ಮೊಗಲರ ವಶದೊಳಗಿರುವ ಖಾನದೇಶದಲ್ಲಿ ಶಿವಾಜಿ ಯು ಚೌಥಾಯಿ ಸರದೇಶಮುಖಿಗಳನ್ನು ಎತ್ತಿದನು. ೧೬೭೪ ರಲ್ಲಿ ಕೊಂಕಣದೊಳಗಿರುವ ಪೋರ್ತುಗೀಜರಲ್ಲಿ ಚೌಥಾಯಿ ಸರದೇಶಮುಖಿಗಳನ್ನು ಕೊಡಿರೆಂದು ಗಂಟು ಬಿದ್ದನು ಅವರು ಕಾಳಗ ಮಾಡಿ ಕಾಟ ಸಾಗದೆಂದು ಈ ಹಣವನ್ನು ಕೊಡಲೊಪ್ಪಿದರು. ಇದಕ್ಕೆ ಶಿವಾಜಿಯು ನಿವೃತ್ತನ್ನು ಮೊಗಲರ ಉಪಟಳದಿಂದ ಸಂರಕ್ಷಿಸುವೆನೆಂದು ಒಪ್ಪಿಕೊಂಡನು. ಇದರಿಂದ ಈ ಉಭಯ ರಾಜರಿಗೂ ಬಹಳ ಹಿತವಾಯಿತು. ಬೆದನೂರ ಅರಸನೂ, ಸ್ವಾದಿಯ

ಅವನನ್ನೂ ಶಿವಾಜಿಗೆ ಕಪ್ಪ ಕೊಡಲಿಕ್ಕೊಡಂಬಟ್ಟರು
ಗಿಜಿಜಿ ರಲ್ಲಿ ಶಿವಾಜಿಯು ಕರ್ನಾಟಕಕ್ಕೆ ದಾಳೀ ಇಟ್ಟು ಆ
ಪ್ರಾಂತದಲ್ಲಿ ಸಹ ಈ ಹಕ್ಕುಗಳನ್ನು ನೆಲೆಗೊಳಿಸಿದನು.
೧೬೮೦ ರೊಳಗಾಗಿ ಅಂದರೆ ಇವನು ಸಾಯುವದರೊಳಗಾ
ಗಿ ದಕ್ಷಿಣದೊಳಗಿನ ಯಾವತ್ತೂ ಹಿಂದೂ ಮುಸಲ್ಮಾನ
ಅರಸರೆ ಸಂರಕ್ಷಣೆಯ ಭಾರವನ್ನು ತನು ಹೊತ್ತುಕೊಂ
ಡು ಅವರೆಲ್ಲರಿಂದಲೂ ಚೌಥಾಯಿ, ಸರದೇಶಮುಖಿಗಳೆಂ
ಬ ಹಕ್ಕುಗಳನ್ನು ನಿರ್ವಿವಾದವಾಗಿ ಎತ್ತತೊಡಗಿದ್ದನು.
ಅದರಂತೆ ಆಯಾ ಅರಸರ ಕೂಡ ಒಪ್ಪಂದದ ಕಾಗದಗಳ
ನ್ನು ಮಾಡಿದ್ದನು ಸ್ವತಃ ಮೊಗಲ ಸಾಮ್ರಾಜ್ಯಕ್ಕೊಳಪಟ್ಟ
ಎಷ್ಟೋ ಪ್ರಾಂತಗಳಲ್ಲಿ ಅವನು ಚೌಥಾಯಿ ಸರದೇಶಮುಖಿ
ಯ ಹಣವನ್ನು ನಿರಾತಂಕವಾಗಿ ಎತ್ತುವನು ಒಟ್ಟಿಗೆ ಸರ
ದೇಶಮುಖಿಯೆಂದರೆ ಭೂಮಿಯ ಕಂದಾಯವನ್ನು ಎತ್ತುವ
ವೆಚ್ಚಕ್ಕಾಗಿ ಕೊಡಲ್ಪಡುವ ಹಣವೂ ಶೇಮುಷಿಯೂ ಎಂದು
ತಿಳಿಯುತಕ್ಕದ್ದು. ಚೌಥಾಯಿ ಹಕ್ಕಿನ ಉದ್ದೇಶವೇನಂದ
ರೆ, ಪರಚಕ್ರಗಳಿಂದ ಆ ಅರಸನನ್ನು ಸಂರಕ್ಷಿಸುವದು.
ಎಂದು ತಿಳಿಯುಬೇಕು ಇದರಿಂದ ವೆಲ್ಲಸ್ಲಿಯು ೧೯ನೇ
ಶತಕದ ಆರಂಭದಲ್ಲಿ ಪ್ರಚಾರದಲ್ಲಿ ತಂದ ಮುದ್ದತ ಸೈನ್ಯಪ
ದ್ಧತಿಯ ಸ್ವರೂಪದ ಕಲ್ಪನೆಯು ಆರಂಭದಲ್ಲಿ ಶಿವಾಜಿಯ
ಮನೆದಲ್ಲಿಯೇ ಉದ್ಭವಿಸಿತ್ತೆಂದೂ ಅವನು ಅದನ್ನು ಬಳಿಕ
ಯಲ್ಲಿ ತಂದಿದ್ದನೆಂದೂ ಇದರಿಂದ ಸ್ಪಷ್ಟವಾಗಿ ತಿಳಿಯುವದು.

ಸಶೇಷ)

KANARESE LANGUAGE.

ಕನ್ನಡ ನುಡಿ.

(೨೯ನೇ ಪುಟದಿಂದ ಮುಂದೆ ಸಾಗಿದ್ದು)

ಪೂರ್ವದಲ್ಲಿ ಅನ್ಯದೇಶಭಾಷೆಗಳ ಸಂಪರ್ಕವಿರಲಿಲ್ಲ.
ಆದ್ದರಿಂದ ಅಂತಹ ಶಬ್ದಗಳನ್ನು ಭಾಷೆಯಲ್ಲಿ ಪ್ರಯೋಗಿಸು
ವ ರೀತಿ ಮೊದಲಾದ ವಿಚಾರವನ್ನು ಪ್ರಾಯಶಃ ಪ್ರಾಚೀನ
ರು ಹೇಳಲಿಲ್ಲ. ಈಗ ಅವುಗಳ ಪ್ರಯೋಗವು ವಿಶೇಷವಾ

ಗಿರುವದರಿಂದ ಆ ರೀತಿಯನ್ನು ವಿಚಾರ ಮಾಡುವುದು ಅದರಲ್ಲಿಯೂ ನೀವು ನೂತನ ಮಾರ್ಗವನ್ನೇ ಸಾಧಾನ್ಯ ವೆಂದೆಣಿಸದೆ ಹಿಂದಿನ ರೀತಿಯನ್ನು ತಕ್ಕಷ್ಟು ಅನುಸರಿಸು ವದು ಉತ್ತಮವೇ. ಈ ರೀತಿ ವಿಮರ್ಶೆಯಿಂದ ಶಬ್ದಸಾ ಧುತ್ವವಿಚಾರವನ್ನು ಹೇಳುವದು ವಂದಮತಿಯಾದ ನನಗೆ ಅಸಾಧ್ಯವಾದ ಕಾರ್ಯವೇ ಸರಿ ಆದರೂ ನನಗಿಂತ ಜ್ಞಾನ ನವೃದ್ಧರೂ ವಯೋವೃದ್ಧರೂ ನಿರ್ಮತ್ಸರರೂ ಆದ ಸೇವೆ ಲ್ಲರೂ ಹೇಳಲೇಬೇಕೆಂದು ನನ್ನನ್ನು ಪ್ರೋತ್ಸಾಹಗೊಳಿಸಿ ದುದರಿಂದ ನಾನು ಯಥಾಮತಿಯಿಂದ ಹೇಳುವೆನು ಅಪ್ರ ತಿಪತ್ಯಾದಿ ದೋಷಗಳು ಮನುಷ್ಯರಲ್ಲಿ ಸಾಮಾನ್ಯವಾಗಿರು ವದರಿಂದ ನನ್ನ ವಾಕ್ಯದಲ್ಲಿಯು ಅಂತಹ ದೋಷಗಳು ಬರ ಬಹುದು. ಆದರೂ ಸುಜ್ಞರಾದವರು ನೀರಕ್ಷೀರ ನ್ಯಾಯ ದಿಂದ ಗುಣವನ್ನು ಮಾತ್ರ ಸ್ವೀಕರಿಸಿ ದೋಷಗಳನ್ನು ದೂ ರ ಮಾಡಬೇಕು ಮತ್ತು "ಯುಕ್ತಿಯುಕ್ತಂ ವಚೋಗ್ರಾ ಹ್ಯಂ ಬಾಲಾದಪಿಶುಕಾದಪಿ" ಎಂಬ ಆಭಿಯುಕ್ತೋ ಕ್ತಿಯಂತೆ ಯುಕ್ತಿಯುಕ್ತವಾದ ವಾಕ್ಯವನ್ನು ಬಾಲ (ಇತರ ವಿಷಯಗಳಲ್ಲಿ ಪರಿಚಿತನಾಗಿ ಹೇಳಬೇಕಾದ ವಿಷಯದಲ್ಲಿ ಸಾಧಾರಣ ಜ್ಞಾನವುಳ್ಳವ) ನು ಹೇಳಿದರೂ ಸ್ವೀಕರಿಸಬೇಕಲ್ಲವೇ? ಇದು ಹಾಗಿರಲಿ. ಪ್ರಕೃತವನ್ನು ಅನುಸರಿಸುವ ವಿಷಯೋಪನ್ಯಾಸದ ಪೂರ್ವದಲ್ಲಿ ಹೇಳಿದ ವಿ ಷಯವನ್ನು ವಿಭಾಗಿಸಿ ಬಳಿಕ ಒಂದೊಂದು ಭಾಗದಲ್ಲಿ ಪೂ ರ್ವೋಕ್ತ ಈ ಸಂದರ್ಭವಿರುವಂತೆ ತಿಳಿದ ಸಂಗತಿಯನ್ನು ಹೇಳಬೇಕು.

(೧) ಭಾಷೆಯೆಂದರೇನು? ಈ ವಿಷಯದಲ್ಲಿರುವ ಭಿನ್ನ ಭಿನ್ನಾಭಿಪ್ರಾಯಗಳೂ ವಿಚಾರಕ್ರಮ ಮುಂತಾದ್ದು.

(೨) ಭಾಷೆಯಲ್ಲಿರುವ ಮುಖ್ಯ ಭೇದಗಳು ಅದಕ್ಕೆ ಕಾ ರಣಗಳು.

(೩) ವ್ಯಾಖ್ಯಾನದ ಮುಖ್ಯ ವಿಷಯವಾದ ಕರ್ನಾಟಕ ಪದದ ವಿವರಣ ಕರ್ನಾಟಕ ಭಾಷೆಯು ಪ್ರಚಾರದಲ್ಲಿರ್ದ ದೇಶ ಮುಂತಾದ್ದು.

(೪) ಅದರಲ್ಲಿರುವ ಶಬ್ದಗಳ ಸಾಧುತ್ವ ಮತ್ತು ವ್ಯವಹಾ ರ ಮುಂತಾದ ವಿಷಯ.

(೧) ಭಾಷೆ=ಇದು ಭಾಷಾಶಬ್ದದ ತದ್ಭವ "ಸಂಸ್ಕೃತದಲ್ಲಿ ಭಾಷ್ ವ್ಯಕ್ತಾಯಾಂವಾಚಿ (ವ್ಯಕ್ತವಾಗಿ ನುಡಿವುದು) ಎಂಬರ್ಥದ ಧಾತುವಿಗೆ ಗುರೋಶ್ಚ ಹಲಃ ಎಂಬ ಔಣಾದಿಕ ಸೂತ್ರದಿಂದ ಅ ಪ್ರತ್ಯಯ ಸೇರಿ ಭಾಷಾ ಎಂಬ ರೂಪವಾಗಿದೆ. "ವ್ಯಕ್ತವಾಗಿ ನುಡಿವುದು" ಅಂದರೆ ಮೊದಲು ಅವ್ಯಕ್ತರೂಪದಿಂದ ಇರುವದನ್ನು ಬಳಿಕ ಪ್ರಕಾಶವಾಗಿ ನುಡಿವುದೆಂದರ್ಥವಾಗಬಹುದು ವ್ಯಕ್ತವಾದ ನುಡಿಯು ಮುಖವಿವರದಿಂದ ಪ್ರಕಾಶವಾಗುವದರಿಂದ ಅದರ ಕಾರಣವು ಅವ್ಯಕ್ತರೂಪದಿಂದ ಒಳಗೆ ಇರಲೇಬೇಕು. ಅದು ಬಾಹ್ಯೇಂದ್ರಿಯಗಳಿಗೆಗೋಚರವಾಗಿದ್ದುದರಿಂದಅವ್ಯಕ್ತವೆನಿಸುವದು. ಅದನ್ನೆ ಮನಸ್ಸಿನ ವ್ಯಾಪಾರ ಅಥವಾ ಆಲೋಚನೆ ಎಂದು ಹೇಳಬಹುದು. ಕೇಳುವದು ಮೊದಲಾದ ಕಾರಣಗಳಿಂದ ಸಂಸ್ಕಾರ ರೂಪವಾಗಿ ಮನಸ್ಸಿನಲ್ಲಿರುತ್ತದೆ ಅದನ್ನೇ ವ್ಯಕ್ತ ಪಡಿಸುತ್ತೇವೆ. ಈ ಕ್ರಮವನ್ನು ಪ್ರಾಚೀನರು ಸ್ಪಷ್ಟವಾಗಿ ಹೇಳಿರುವರು. "ಆತ್ಮಬುಧ್ಯಾ ಸಮೇತ್ಯಾರ್ಥಾನ್ ಮನೋಯುಙ್ಕ್ತೇತತಃ ಪರಂ ಮನಃ ಕಾಯಾಗ್ನಿಮಾಹಂತಿ ಸಕ್ಕೇರಯತಿ ಮಾರುತಂ ಮಾರುತ ಸ್ತೂರನಿಜರ್ಣಮುಂದ್ರಂಜನಯತಿಸ್ವರಂ" ಅಂದರೆ ಜೀವನು ಬುದ್ಧಿಯಿಂದಯುಕ್ತನಾಗಿ ವಿಷಯಜ್ಞಾನಾರ್ಥವಾದ ಮನಸ್ಸನ್ನು ಕ್ರೇರಿಸಲು ಅದು ಕಾಯಾಗ್ನಿಯನ್ನು ಹೊಡೆಯ್ದದು ಆಗ ಅದು ವಾಯುವನಸ್ನು ಕ್ರೇರಿಸಲು ಸ್ವರವು ಉತ್ಪನ್ನವಾಗಿ ತಾ ಲ್ವೋಷ್ಟಪುಟಾದಿಗಳ ಸಂಯೋಗದಿಂದ ವರ್ಣರೂಪವಾಗಿ ಗೋಚರಿಸುವದು. ಹೀಗೆಯೆ ಹೊರಗಿರುವ ಪದಾರ್ಥಗಳ ಸಂಯೋಗದಿಂದ ವಾಯುವಿನಲ್ಲಿ ಅಲೆಗಳುಂಟಾಗಿ ಅದು ಕ್ರಮದಿಂದ ನಮ್ಮ ಕರ್ಣ ವಿವರದ ಆಕಾರ ಮೂಲಕವಾಗಿ ಮನಸ್ಸಿಗೆ ಶಬ್ದ ರೂಪದಿಂದ ಗೋಚರವಾಗುವುದು. ಈ ಅಭಿಪ್ರಾಯವನ್ನು ಇತರರು ಹೇಳಿರುವರು. ಅಂತು ನಮ್ಮವರು ಶಬ್ದವನ್ನು ಗುಣವೆಂದು ಆಕಾಶದ ಕಾರ್ಯವೆಂದು ಹೇಳುತ್ತಾರೆ.

ಜೈನರು ಶಬ್ದಗೋಚರವಾಗುವ ರೀತಿಯನ್ನು ಹೀಗೆ ಹೇಳಿರುವರು.

ಅನುಕೂಲಪವನನಿಂಜೇ
ವನಿಪ್ಪದಿನಾಭಿ ಮೂಲದೊಳ್ ಕಹಳೆಯ ಪೊಂ
ಗಿನವೊಲ್ ಶಬ್ದದ್ರವ್ಯಂ
ಜನಿಯಿಸುಗುಂ ಶ್ವೇತವುದರಕಾರ್ಯಶಬ್ದಂ
ತನುವಾದ್ಯಂನಾಳಿಗವಾ
ದನದಂತಂಕರ್ತೃವಾತ್ಮನವನ ಮನೋವೈ
ತ್ತಿನಿಮಿತ್ತಶಬ್ದದ್ರವ್ಯಂ
ಜನಿಯಿಸುಗುಂ

ಜೀವನು ಮನಸ್ಸಿನಿಂದ ವಾಯುವನ್ನು ಪ್ರೇರಿಸಲು ಅದರಿಂದ ನಾಭಿಮೂಲದಲ್ಲಿ ಶಬ್ದದ್ರವ್ಯವು ಸ್ಪಷ್ಟವಾಗುವದು ಹೀಗೆ ಕಂಠ ವಿವರದೊಳಗೆ ಉತ್ಪನ್ನವಾದ ಶಬ್ದವೇ ತಾಲ್ವಾದಿಗಳ ವ್ಯಾಪಾರದಿಂದ ಹೊರಗೆ ಉಚ್ಚರಿತವಾದಾಗ (ಭಾಷಾ) ಅಕ್ಷರಾತ್ಮಕವಾದ ಶಬ್ದವೆನಿಸುವದು. ಅಂತು ಅವ್ಯಕ್ತರೂಪದಿಂದ ಇರುವ ಶಬ್ದವನ್ನು ವ್ಯಕ್ತರೂಪದಿಂದ ಹೇಳುವದೇ ಭಾಷೆಯೆನಿಸುವದೆಂದು ತೋರುವದು. ಆದರೆ ಶಬ್ದವು ದ್ರವ್ಯವೆಂದೂ ಬಿಳುಪಾಗಿರುವದೆಂದೂ ಜೈನರು ಹೇಳುತ್ತಾರೆ. ಅದು ದ್ರವ್ಯವೋ ಅಥವಾ ಗುಣವೋ ಯಾವದಾದರೂ ಆಗಲಿ ಅದರ ವಿಚಾರವೀಗ ಅನಾವಶ್ಯಕವು. ಅಂತು ಮೇಲಿನ ವಿವರಣೆಯಿಂದ ವ್ಯಕ್ತರೂಪವಾದ ನುಡಿಯೇ ಭಾಷೆಯೆಂದು ಆರ್ಥವಾಯಿತು.

AGRICULTURE.

ಕೃಷಿತಾಸ್ತ್ರವು

(ಎಷ್ಟನೇ ಪುಟದಿಂದ ಮುಂದೆ ಸಾಗಿದ್ದು)

ಮಣ್ಣು ಸುಡುವದರಿಂದ ಯಾಂತ್ರಿಕ ಮತ್ತು ರಸಾಯನಿಕ ವ್ಯಾಪಾರಗಳು ನಡೆಯುತ್ತವೆ.

೧. ಭೂಮಿಯ ರಚನೆಯು ಚೆನ್ನಾಗಿ ಸುಧಾರಿಸುತ್ತದೆ.

ಮತ್ತು ಜಿಗಟು ಮಣ್ಣಿನ ಭೂಮಿಯ ಮೇಲೆ ಬೂದಿಯನ್ನು ಹರುವುವದರಿಂದ ಅದು ಬಹಳ ಹೆಗುರಾಗುತ್ತದೆ.

೨ ಆಮ್ಲದಲ್ಲಿ ಕರಗಬಹುದಾದ ದ್ರವ್ಯದ ಪ್ರಮಾಣವು ನೂರಕ್ಕೆ ೬ರಿಂದ ೯ ಅಥವಾ ಹತ್ತರ ತನಕ ಹೆಚ್ಚಾಗುತ್ತದೆ. ಈ ಹೆಚ್ಚು ವಿಕೆಯು ಮುಖ್ಯವಾಗಿ (Soda) ಸೋಡಾ (Potash) ಪೊಟ್ಯಾಶ ಮತ್ತು ಪಂಗು ತಿಂದ ಕಟ್ಟಿಣದಲ್ಲಿ ಆಗುತ್ತದೆ. ಭೂಮಿಯಲ್ಲಿ ಸುಣ್ಣದ ಹರಳುಗಳಿದ್ದರೆ ಅವು ಸುಣ್ಣ ಆಗುವ ಕೃತಿಯಲ್ಲಿ ನಡೆದ ಪೃಥಕ್ಕರಣ ವ್ಯಾಪಾರದ ಸಹಾಯದಿಂದ ನಮಗೆ (Phosphates of Limestone) ಫಾಸಫೇಟ ಆಫ ಲಾಯಿಮು ಸ್ಟೋನವು ಸಿಗುತ್ತದೆ ಬಹಳ ಉಷ್ಣತೆಯಲ್ಲಿದ್ದ ಭೂವಿಯೊಳಗಿನ (Silicates) ಸಿಲಿಕೇಟಗಳ ಮೇಲೆ ಸುಣ್ಣದ ವ್ಯಾಪಾರವು ನಡೆದು ಪೊಟ್ಯಾಶದ ಕೂಡ ಕೂಡಿದ ಅದ್ರಾವ್ಯ ವಸ್ತುಗಳಿಂದ ಅದನ್ನು ಅಂದರೆ ಪೊಟ್ಯಾಶವನ್ನು ಕೆಲವಂಶ ಬೇರೆ ಮಾಡುತ್ತದೆ. ಸಾಧಾರಣ ಭೂಮಿಯಲ್ಲಿ ಕಡಿಯುವದರಿಂದ ಲಾಭಗಳಾಗಬೇಕಾದರೆ ಸುಡುವದಕ್ಕಿಂತ ಮೊದಲು ಭೂಮಿಯಲ್ಲಿ ಸುಣ್ಣವನ್ನು ಹಾಕಬೇಕು. ಇದರಿಂದಾಗುವ ಹಾನಿಗಳ್ಯಾವವೆಂದರೆ, ೧. ಇದರಿಂದ ಸರಾಸರಿ ಎಲ್ಲ (Nitrogen) ನೈತ್ರೋಜನ್ನ ಹೊರಟು ಹೋಗುತ್ತದೆ. ೨. ಮತ್ತು ಕೆಲಕೆಲವು ಪ್ರಸಂಗಗಳಲ್ಲಿ (Phosperic Pentoxide) ಫಾಸಫೆರಿಕ ಪೆಂಟೋಕ್ಸಾಯಿಡ ಇದು ಮೊದಲಿಗಿಂತ ತುಸು ಕಡಿಮೆ ದ್ರಾವ್ಯವಾಗುತ್ತದೆ. ಭೂಮಿಯಲ್ಲಿ ವನಸ್ಪತಿ ದ್ರವ್ಯವು ಬಹಳ ಇದ್ದರೆ ನನುಗೆ ಬಹಳೇ (Phosperic acid) ಫಾಸಫೆರಿಕ ಆಸಿಡ್ಡು ಶಿಗಬಹುದೆಂದು ಓಯೆಲ್ಟರ ಎಂಬವನು ಹುಡುಕಿ ತೆಗೆದಿದ್ದಾನೆ.

ಕಡಿಯುವದು ಮತ್ತು ಸುಡುವದು.

ಭೂಮಿಯೊಳಗಿನ ಕಳೆಗಳನ್ನೂ ಬೀಜಗಳನ್ನೂ ತೆಗೆದು ಹಾಕಬೇಕಾದರೆ ಈ ವ್ಯವಸಾಯದ ಕೆಲಸವು ನಡೆಯುತ್ತದೆ. ವಿಶೇಷವಾಗಿ ಹಳೇ ಬೀಜಗಳನ್ನು ಕಿತ್ತು ಹಾಕಬೇಕಾದಾಗ್ಗೆ ಇದನ್ನು ಮಾಡುತ್ತಾರೆ. ಭಟಕಾಯಿಸುವ ರಂಟೆ

ಯಿಂದ ಮೇಲಿನ ೧ ಇಂಚು ಅಥವಾ ಎರಡು ಇಂಚು ಭೂ
ಮಿಯನ್ನು ತೆಗೆದು ಹಾಕುತ್ತಾರೆ. ಇದಕ್ಕೆ (Kaftring)
ರ್ಯಾಪ್ಟರಿಂಗ ಪದ್ಧತಿ ಎನ್ನುತ್ತಾರೆ. ಆ ಮೇಲೆ ಒಂದು ಬಿಟ್ಟು
ಒಂದು ನೇಗಿಲು ಸಾಲುಗಳನ್ನು ಕಡಿಯುತ್ತಾರೆ. ಆ ಮೇಲೆ
ನೇಗಿಲು ಸಾಲಿನ ಮಣ್ಣನ್ನು ಕಡಿಯದೇ ಇದ್ದ ಭೂಮಿಯ
ಮೇಲೆ ಹಾಕುತ್ತಾರೆ. ಇದಾದ ಮೇಲೆ ಎಲ್ಲ ಭೂಮಿಯ
ನ್ನು ಸುಡುತ್ತಾರೆ ಈ ಕೃತಿಯಿಂದ ಎಪೆಫ್ಟೋ ನೈತ್ರೋಜ
ನ್ನ ಮುಕ್ತ ಸಸ್ಯಾದಿ ದ್ರವ್ಯವು ಇಲ್ಲದಂತಾಗುತ್ತದೆ ಆದರೆ
ಕಳೆಗಳು ಮತ್ತು ನಿರುಪಯುಕ್ತವಾದ ಎಲ್ಲ ದ್ರವ್ಯವು ತೀ
ವ್ರವೇ ಹೊರಟು ಹೋಗುತ್ತವೆ.

ಮಣ್ಣು ಕೂಡಿಸುವದು.

ಭೂಮಿಯಲ್ಲಿ ಬಿಡುವು ಹಾಕುವದು ಮುಂತಾದ ವ್ಯಾಪಾ
ರಗಳ ವರ್ಗದಲ್ಲಿ ಇದು ಬರುತ್ತದೆ ಮಣ್ಣು ಭೂಮಿಯು
ಲ್ಲಿ ಉಸುಬು ಕೂಡಿಸುವದರಿಂದ ಕೇವಲ ಯಾಂತ್ರಿಕ ವ್ಯಾ
ಪಾರವಾಗುತ್ತದೆ. ಆದರೆ ಉಸುಬಿನ ಭೂಮಿಯಲ್ಲಿ ಮಣ್ಣು
ಕೂಡಿಸುವದರಿಂದ ಯಾಂತ್ರಿಕ ಮತ್ತು ರಸಾಯನ ಎರಡೂ
ವ್ಯಾಪಾರಗಳಾಗುತ್ತವೆ ಮಣ್ಣು ಉಸುಬಿನ ಕೂಡಾ ಕೂಡಿ
ಅದನ್ನು ಘಟ್ಟಿ ಮಾಡುತ್ತದೆ. ಮತ್ತು ಮೊದಲು ಉಸುಬಿ
ನಲ್ಲಿ ಸಾಧಾರಣ ಪ್ರಮಾಣದಲ್ಲಿ ಇಲ್ಲದಂಥ ಮಣ್ಣಿನ ಮತ್ತು
ಲವಣದ ದ್ರವ್ಯಗಳನ್ನು ಅದಕ್ಕೆ ಕೊಡುತ್ತದೆ. ಈ ದ್ರವ್ಯ
ಗಳು ಸಸ್ಯದಿಗಳ ಅನ್ನವಾಗುತ್ತವೆ.

ಮಣ್ಣು ಕಡಿಮೆ ಇದ್ದ ೧ ಎಕರೆ ಭೂಮಿಗೆ ೧೦೦ರಿಂದ
೧೫೦ ಘನಯಾರ್ಡು ಮಣ್ಣನ್ನು ಹಾಕುತ್ತಾರೆ. ಒಂದರ
ಕ್ಕಿಂತ ಹೆಚ್ಚು ದ್ರವ್ಯಗಳಿಂದುಂಟಾದ ಭೂಮಿಯಲ್ಲಿ ಮಣ್ಣನ್ನು
ಕೂಡಿಸುವದರಿಂದುಂಟಾಗುವ ಲಾಭಗಳು ಸೃಷ್ಟಿಯಲ್ಲಿಯೇ
ಕಂಡುಬರುತ್ತವೆ. ಉದಾಹರಣಾರ್ಥವಾಗಿ ಇಸೆಕ್ಸ ಪರ
ಗಣೆಯ ಜವೆಗೋಧಿಯು ಚಿಕಿತ್ಸೆಯಿಂದ ಪ್ರಸಿದ್ಧವಾದ ಪ್ರದೇಶ
ಸಳ್ಳಿಯ ಬಿಡುವಿನ ಕೂಡ ಲಂಡನ್ನಿನ ಮಣ್ಣು ಮಿಶ್ರವಾಗಿ
ರುತ್ತದೆ.

ಹಗುರಾದ ಒಂದು ಎಕರೆ ಭೂಮಿಗೆ ಮಣ್ಣು ಕೂಡಿಸುವದರಿಂದ ಬರುವ ಜಿಲೆಯು.

	ಪೌ.ಶಿ.ಪೇ.
ಅಗಿಯುವದು ಮತ್ತು ಮಣ್ಣು ಹರವುವದು ೧ ಯಾರ್ಡಿಗೆ ಳತ್ತಿ ಪೇನಸಿನಂತೆ ೧೫೦ ಯಾರ್ಡಿಗೆ	೨-೧೬-೦
ಒಂದು ದಿನಕ್ಕೆ ೨ ಶಿ. ೬ ಪೇ. ನ ಪ್ರಕಾರ ನಾಲ್ಕು ದಿವಸಕ್ಕೆ ನಾಲ್ಕು ಕುದುರೆಗಳಿಗೆ	೨- ೦-೦
ಕುದುರೆಯನ್ನು ಹೊಡೆಯುವವರಿಗೆ	೦-೧೦-೦
ಸವಕಳಿಯನ್ನು ಹಿಡಿದು ಬೇರೆ ಚಿಲ್ಲರ ಖರ್ಚುಗಳು	೦- ೩-೦
	೫- ೯-೦

ಹಗುರಾದ ಭೂಮಿಯು ಕೂಡ ಕೂಡಿಸುವದರದಿಂದ ಬಹಳ ದೂರದಿಂದ ಮಣ್ಣನ್ನು ಕಳುಹಿಸುವದರಿಂದ ಖರ್ಚು ಬಹಳೇ ಹತ್ತುತ್ತದೆ. ಭೂಮಿಯಲ್ಲಿ ಹರಿದಾಡುವ ಉಸುಬು ಇದ್ದರೆ ಮಣ್ಣು ಅದರ ಕೂಡ ಯಾಂತ್ರಿಕ ರೀತಿಯಿಂದ ಕೂಡಿ ಅದನ್ನು ಘಟ್ಟಿ ಮಾಡುತ್ತದೆ. ಇಂಥ ಪ್ರಸಂಗದಲ್ಲಿ ಸವಿಾಪದಲ್ಲಿದ್ದ ಮಣ್ಣನ್ನು ಕೂಡಿಸಿದರೆ ಖರ್ಚು ಕಡಿಮೆ ಬರುತ್ತದೆ. ಉಸುಬಿನ ಕೂಡ ತುಸು ಮಣ್ಣು ಕೂಡಿಸಿದರೆ ಸಾಕು ಆದರೆ ಮಣ್ಣು ಭೂಮಿಯಲ್ಲಿ ಎಷ್ಟು ಉಸುಬನ್ನು ಕೂಡಿಸಿದರೂ ಸಾಕಾಗುವದಿಲ್ಲ. ಈ ಸಂಗತಿಯನ್ನು ನಾವು ಮರೆಯಬಾರದು. ಆದ್ದರಿಂದ ಮಣ್ಣಿನ ಭೂಮಿಗೆ ಉಸುಬನ್ನು ಹಾಕುವದು ನಿಷ್ಪ್ರಯೋಜನವಾದ ಕೆಲಸವು.

(ಸಶೇಷ.)

DEPARTMENTAL NOTICE.

ನೋಟೀಸು.

ಪಬ್ಲಿಕ್‌ಸರ್ವಿಸ್ ಸರ್ಟಿಫಿಕೇಟ ಪರೀಕ್ಷೆಯು

ದಕ್ಷಿಣಭಾಗ.

ದಕ್ಷಿಣ ಭಾಗದೊಳಗೆ ಅಂದರೆ ಬೆಳಗಾವ ಧಾರವಾಡ ಕಾರವಾರ ಬಿಜಾಪೂರ ರತ್ನಾಗಿರಿ ಕುಲಾಬಾ ಜಿಲ್ಲೆಗಳಲ್ಲಿ

ಯೂ ಕೊಲ್ಹಾಪುರ ಮೊದಲಾದ ಸಂಸ್ಥಾನಗಳಲ್ಲಿಯೂ ಸರ್ ೧೯೦೫—೧೯೦೬ನೇ ಇಸವಿಯಲ್ಲಾಗುವ ದೇಶಭಾಷೆಯ ಮುಖ್ಯ ಪರೀಕ್ಷೆಯು, ೧೯೦೫ನೇ ಇಸವಿಯ ನವಂಬರ ೧೬ನೇ ತಾರೀಖಿನ ಸರಕಾರಿ ಗ್ಯಾಝೆಟಿನ ಮೊದಲನೇ ಭಾಗದ ೮೭೫ರಿಂದ ೮೭೬ನೇ ಪುಟಗಳಲ್ಲಿ ವಿವರಿಸಿದ ನಿಯಮಗಳಿಗನುಸಾರವಾಗಿ ತೆಗೆದುಕೊಳ್ಳಲ್ಪಡುವದು. ಈ ಪರೀಕ್ಷೆಗೆ ಗೊತ್ತುಪಡಿಸಿದ ಪುಸ್ತಕಗಳು ಕೆಳಗೆ ಬರೆದಂತೆ.

೧ ಬೆಳಗಾವಿ, ಬಿಜಾಪೂರ, ಕಾಠವಾರಗಳಲ್ಲಿ ಈ ಪರೀಕ್ಷೆಯು ಕನ್ನಡ ಹಾಗೂ ಮರಾಠಿ ಇವೆರಡು ಭಾಷೆಗಳಲ್ಲಿಯೂ ನಡೆಯುವದು. ಧಾರವಾಡದಲ್ಲಿ ಮಾತ್ರ ಕನ್ನಡದಲ್ಲಿಯೂ ಕೊಲ್ಹಾಪೂರ, ರತ್ನಾಗಿರಿ, ಕುಲಾಬಾಗಳಲ್ಲಿ ಬರೇ ಮರಾಠಿ ಭಾಷೆಯಲ್ಲಿಯೂ ನಡೆಯುವದು.

೨ ಮರಾಠಿಯ ಭಾಷೆಯಲ್ಲಿ ಪರೀಕ್ಷೆ ಕೊಡಲಪೇಕ್ಷಿಸುವಂಥ ಧಾರವಾಡ ಜಿಲ್ಲೆಯ ಉಮೇದವಾರರು ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರ ಅಪ್ಪಣೆಯನು ಪಡಕೊಂಡು ಬೆಳಗಾವಿಯಲ್ಲಿ ಪರೀಕ್ಷೆಗೆ ಕೂಡ್ರಬಹುದು.

೧. ಮರಾಠಿ-ವಾಚನ—೬ನೇ ಪುಸ್ತಕ ಸಂಪೂರ್ಣ.
ಕವಿತೆ – ಮರಾಠಿ ೮ರನೇ ಪುಸ್ತಕದ ೧೮೫ರಿಂದ ೧೯೦ರ ವರೆಗಿರುವ ಕವಿತೆಗಳು ಅರ್ಥಸಹಿತ ಬಾಯಿಪಾಠ

೨ ಕನ್ನಡ ವಾಚನ—೮ರನೇ ಪುಸ್ತಕದ ೮ರನೇ ಪುಟದಿಂದ ೨೦೦ ಪುಟಗಳು.
ಕವಿತೆ—ಜೈಮಿನಿಯ ೧ನೇ ಸಂಧಿ ಹಾಗು ೨ನೇ ಸಂಧಿಯೊಳಗಿನ ೮ರಂಭದ ನಾಲ್ವತ್ತು ಶ್ಲೋಕಗಳು.

೩. ಹಿಂದುಸ್ತಾನಿ—ತಾನಬಟನನಸೂಬ-ಮುನಸಿ ನಾಜೀರ ಅಹಮ್ಮದರವರು ಮಾಡಿದು

ಧಾರವಾಡ,
ತಾ. ೧೫-೧೧-೧೯೦೫.

G. J. Agashe,
ಅ. ಎ. ಇ. ದಕ್ಷಿಣಭಾಗ.

CORRESPONDENCE.

ಪತ್ರವ್ಯವಹಾರ.

ಬರದು ಬಂದದ್ದು.

ಶಾಲಾಪತ್ರಕರ್ತರ ಸನ್ನಿಧಿಗೆ

ಸಾ. ನ. ವಿನಂತಿ ತಾ. ೮ನೇ ದಿಜಂಬರ ೧೯೦೪ನೇ ದಿವಸ ಮುಂಜಾನೆ ೪ ಗಂಟೆಗೆ ಟ್ರೇನಿಂಗಕಾಲೇಜದ ಲೆಕ್ಚರಹಾಲಿನಲ್ಲಿ ರಾ. ರಾ. ನಾರಾಯಣರಾವ ತಾರವಾಸ್ಕರ ಇವರು ಆಫ್ರಿಕಾಖಂಡದ ಪ್ರವಾಸವೆಂಬ ವಿಷಯವನ್ನು ಕುರಿತು ವ್ಯಾಖ್ಯಾನವನ್ನು ಕೊಟ್ಟರು. ಅದು ಉಪಯುಕ್ತವಾಗಿತೋರಿದ್ದರಿಂದ ಬಂಧುಗಳ ಉಪಯೋಗಕ್ಕಾಗಿ ಇಬರಡಿಯಲ್ಲಿ ಬರೆದು ಕಳಿಸಿದ್ದೇನೆ.

ವ್ಯಾಖ್ಯಾನದಪೂರ್ವದಲ್ಲಿ ಗುರುವರ್ಯ ರಾ. ರಾ. ರಾಮಚಂದ್ರರಾವ ಕುಲಕರ್ಣಿ ಎಲ್ ಸಿ ಇ. ಇವರು ಈ ವ್ಯಾಖ್ಯಾನದ ಪ್ರಯೋಜನವೆನ್ನು ಕುರಿತು ನಾಲ್ಕು ಮಾತುಗಳನ್ನು ಹೇಳಿದರು. ಅವರು ಅಂದದ್ದೇನಂದರೆ:—"ಅಸ್ಥಿಪಂಜರವನ್ನು ನೋಡುವದರಿಂದ ಮನುಷ್ಯನ ರೂಪಗುಣಗಳು ಹ್ಯಾಗೆ ಗೊತ್ತಾಗುವದಿಲ್ಲವೋ ಅದೇ ಪ್ರಕಾರ ಯಾವದೊಂದು ಪ್ರದೇಶದ ಭೂಗೋಲವನ್ನು ಓದುವದರಿಂದ ಆ ಪ್ರದೇಶದ ಯಥಾರ್ಥಸ್ವರೂಪವು ಗೊತ್ತಾಗುವದಿಲ್ಲ. ಯಥಾರ್ಥ ಜ್ಞಾನವಾಗಬೇಕಾದರೆ, ದೇಶದಲ್ಲಿ ಸಂಚರಿಸಿ ಬಂದವರ ಲೇಖಗಳನ್ನು ಓದಬೇಕು. ಇಲ್ಲವೆ ಅವರ ವ್ಯಾಖ್ಯಾನಗಳನ್ನು ಕೇಳಬೇಕು. ಈ ಹೊತ್ತಿನ ದಿವಸ ರಾ. ರಾ. ನಾರಾಯಣರಾವ ಪರ್ವತ್ರೀಕರ ಇವರು ತಾವು ನೋಡಿದ ಆಫ್ರಿಕಾ ಖಂಡದ ಭೂಪ್ರದೇಶವನ್ನು ಕುರಿತು ನಮ್ಮೆಲ್ಲರಿಗೆ ಹೇಳತಕ್ಕವರಿರುತ್ತಾರೆ. ಇವರು ಬುದ್ಧಿಪೂರ್ವಕವಾಗಿ ದೇಶನೋಡಲಿಕ್ಕೆ ಹೋದವರಲ್ಲ, ಸರಕಾರಿ ಉದ್ಯೋಗದ ನಿಮಿತ್ತವಾಗಿ ಹೋದವರು; ಆದರೂ ಸಹಜವಾಗಿ ಅವರ ಕಣ್ಣಿಗೆ ಬಿದ್ದ ಕೆಲವು ಸಂಗತಿಗಳನ್ನು ನಮ್ಮ ಮುಂದೆ ಇಡುತ್ತಾರೆ ಅವುಗಳನ್ನು ಸಮಾಧಾನದಿಂದ ಕೇಳಿಕೊಂಡು ಉಪಯೋಗ ಮಾಡಿಕೊಳ್ಳುವದು ನಿಮ್ಮ ಕೆಲಸವಾಗಿದೆ."

ಬಳಿಕ ವ್ಯಾಖ್ಯಾತರಾದ ನಾರಾಯಣರಾಯರು ಎದ್ದು ನಿಂತು ಯಾವತ್ತೂ ಸಭಾಸದರ ಸಮ್ಮತಿಯನ್ನು ಪಡೆದು, ವ್ಯಾಖ್ಯಾನಕ್ಕೆ ಪ್ರಾರಂಭ ಮಾಡಿದರು.

"ನಾನು ವಿಶೇಷವಾಗಿ ಕಲಿತವನಲ್ಲ; ಮತ್ತು ವ್ಯಾಖ್ಯಾನವನ್ನು ಕೊಡುವ ರೂಢಿಯೂ ನನಗಿಲ್ಲ; ಆದರೂ ನೋಡಿದ ಸಂಗತಿಗಳನ್ನು ತಮಗೆ ಹೇಳುವದಕ್ಕೋಸ್ಕರ ರಾ. ಸಾ. ಕುಲಕರ್ಣಿಯವರು ಹೇಳಿದ್ದರಿಂದ ಈ ಸಾಹಸದ ಕೆಲಸವನ್ನು ಕೈಕೊಂಡಿರುತ್ತೇನೆ.

ನಾನು ಇದೇ ಪ್ರಾಂತದವನು, ಪೋಸ್ಟಖಾತೆಯಲ್ಲಿ ತಾರವಾಸ್ತರನಿರುತ್ತೇನೆ; ಲಷ್ಕರೀಖಾತೆಗೆ ಪೋಸ್ಟ, ಇಂಜನೀಯರಿಂಗ, ಮೆಡಿಕಲ್, ಕಮಿಶಾಸನ್ ಮೊದಲಾದ ಕೆಲವು ಖಾತೆಗಳ ಸಹಾಯವು ಬೇಕಾಗುತ್ತದೆ. ಯುದ್ಧಪ್ರಸಕ್ತಿಯು ಒದಗಿದಾಗ ಸರಕಾರದವರು ಆಯಾ ಖಾತೆಯೊಳಗಿನ ಜನರಿಗೆ ಸೈನ್ಯದ ಸಂಗಡ ಹೊರಡಲಿಕ್ಕೆ ಒಪ್ಪಿಗೆಯನ್ನು ಕೇಳುತ್ತಾರೆ. ಈಗ ೬೭ ತಿಂಗಳುಗಳ ಹಿಂದೆ ಪೂರ್ವ ಆಫ್ರಿಕಾಖಂಡದ ಉತ್ತರಕ್ಕಿರುವ ಸೋಮಾಲೀ ಜನರ ಮುಖ್ಯಸ್ಥನಾದ ಮ್ಯಾಡಮುಲ್ಲನು ಇಂಗ್ಲಿಷರ ವಿರುದ್ಧ ಬಂಡು ಮಾಡಿದ ಸಂಗತಿಯು ನಿಮ್ಮೆಲ್ಲರಿಗೆ ಗೊತ್ತಿರಬಹುದು ಆ ಕಾಲಕ್ಕೆ ಅಲ್ಲಿಗೆ ಹೊರಡುವ ಉದ್ದೇಶವಾಗಿ ಎಂದಿನಂತೆ ಸರಕಾರದವರು ನಮ್ಮ ಒಪ್ಪಿಗೆಯನ್ನು ಕೇಳಲು ನಾನು ಒಪ್ಪಿಕೊಂಡೆನು. ಹಿಂದುಸ್ಥಾನದ ಹೊರಗೆ ನೌಕರಿ ಮಾಡಲೊಪ್ಪಿದ ಜನರಿಗೆ ಇಮ್ಮಡಿ ಪಗಾರವನ್ನೂ ಹೋಗಬರುವ ದರ್ಜೆ ವೆಚ್ಚವನ್ನೂ ಸ್ವಂತ ಖರ್ಚಿಗಾಗಿ ಕೆಲವು ಭತ್ತೆಯನ್ನೂ ಕೊಡುತ್ತಾರೆ.

ಕಳೆದ ಅಗಸ್ಟ ತಿಂಗಳ ೧೧ನೇ ತಾರೀಖಿಗೆ ಸೋಮಾಲೀ ದೇಶಕ್ಕೆ ಹೋಗುವದಕ್ಕೋಸ್ಕರ ನಾನು ಇಲ್ಲಿಯ ಕೆಲಸದಿಂದ ಬಿಡುಗಡೆ ಹೊಂದಿ ೫ನೇ ಸಪ್ಟಂಬರ ದಿವಸ ಹೊರಟು ಮುಂಬಯಿಗೆ ತಲ್ಪಿದೆನು ಅಲ್ಲಿ ನಮ್ಮ ಖಾತೆಯ ಅಧಿಕಾರಸ್ಥರಾದ ಪೋಸ್ಟಮಾಸ್ತರ ಜನರಲ್ಲ ಸಾಹೆಬರವರನ್ನು ಕಾಣಲು ಅವರು ೧೦ನೇ ತಾರೀಖಿಗೆ ಇಲ್ಲಿಂದ ವಿಲಾಯತಿಗೆ

ಹೋಗುವ ಹಡಗವನ್ನು ಏರಬೇಕೆಂದು ಆಜ್ಞಾಪಿಸಿದರು ಅಲ್ಲಿಯವರೆಗೆ ಜಗತ್ತಿನಲ್ಲಿ ಪ್ರಸಿದ್ಧಿಯನ್ನು ಹೊಂದಿದ ಮುಂಬಯಿ ಪಟ್ಟಣದ ಕೆಲಕೆಲವು ಭಾಗಗಳನ್ನು ನೋಡುವದರಲ್ಲಿಯೂ, ಮುಂದೆ ನಾನು ಮಾಡತಕ್ಕ ಕೆಲಸವನ್ನು ಗೊತ್ತು ಮಾಡಿಕೊಳ್ಳುವದರಲ್ಲಿಯೂ ನಮ್ಮ ಕಾಲವು ಹೋಯಿತು. ಆ ಮೇಲೆಂದೇ ಸಪ್ಟಂಬರ ದಿವಸ ಜನರಲ್ಲ ಸಾಹೆಬರವರು ನನಗೂ ನನ್ನಂತೆ ಹೊಸಬರುವ ಬೇರೆ ಇಬ್ಬರು ಪಾರ್ಸೀ ಗೃಹಸ್ಥರಿಗೂ ಉಗೆಹಡಗದಲ್ಲಿ ಸೇಕಂಡಕ್ಲಾಸದಿಂದ ಪ್ರವಾಸ ಮಾಡುವದಕ್ಕೋಸ್ಕರ ಪಾಸುಗಳನ್ನು ಕೊಟ್ಟರು. ಆಗ ನಾವು ಮೂವರೂ ಬಂದರಕ್ಕೆ ತೆರಳಿದೆವು. ಅಲ್ಲಿ ಪರದೇಶಕ್ಕೆ ಹೋಗುವವರು ಡಾಕ್ಟರನಿಂದ ಪರೀಕ್ಷಿಸಲ್ಪಡುತ್ತಾರೆ ಆರೋಗ್ಯದಿಂದ ಇದ್ದವರು ಮಾತ್ರ ಹಡಗವನ್ನು ಏರಬಹುದು. ಈ ನಿಯಮದ ಪ್ರಕಾರ ನಾವು ಡಾಕ್ಟರನಿಂದ ಸರ್ಟಿಫಿಕೇಟನ್ನು ಹೊಂದಿ ಡೋಣಿಗಳ ಮುಖಾಂತರವಾಗಿ ದಂಡೆಯಿಂದ ಬಹು ದೂರವಾಗಿ ನಿಂತಿರುವ ಹಡಗವನ್ನು ಏರಿದೆವು.

ಉಗೆಹಡಗಗಳು ಈ ಇವಾರತಿಯ ಇನ್ಮುಡಿಯುಷ್ಟು (ಅಜವಾಸ ೮೦ ಫೂಟು ಎತ್ತರವಾಗಿರುತ್ತವೆ ಮತ್ತು ಮನೆಗಳಿಗೆ ಇರುವಂತೆ ಅವುಗಳಿಗೂ ಅಂತಸ್ತುಗಳಿರುತ್ತವೆ ಸೇಕಂಡ ಕ್ಲಾಸದ ಕೋಣೆಗಳು ನೀರಿನ ಪೃಷ್ಠಭಾಗದ ಕೆಳಗೆ ಇರುವ ಅಂತಸ್ತಿನಲ್ಲಿರುವವು. ಅವು ಉಗೆ ಬಂಡಿಯಲ್ಲಿರುವ ಫಸ್ಟ್ ಕ್ಲಾಸದ ಕೋಣೆಗಳನ್ನು ಹೋಲುತ್ತಿದ್ದು, ಅವುಗಳಲ್ಲಿ ಗಾದಿಗಳಿಂದ ಸಹಿತವಾದ ಎರಡು ಮಂಚಗಳು ಇರುವವು ಆದರೆ ಅಲ್ಲಿ ವಾಯುದೇವನ ಸಂಚಾರವು ಕಡಿಮೆಯಾದ ಕಾರಣ ನಮಗೆ ಅಲ್ಲಿರುವದು ಸುಖವಾಗದ್ದರಿಂದ ನಮ್ಮ ಸಾಮಾನುಗಳನ್ನು ಮಾತ್ರ ಅಲ್ಲಿಟ್ಟುಕೀಲಿ ಹಾಕಿ ಫಸ್ಟ್ ಕ್ಲಾಸದಲ್ಲಿ ಬಂದು ಕೂಡಹತ್ತಿದೆವು. ಫಸ್ಟ್ ಕ್ಲಾಸವು ನೀರಿನ ಪೃಷ್ಠಭಾಗದ ಮೇಲೆ ಇದ್ದು ಸಮುದ್ರವೂ ಆಕಾಶವೂ ಕಾಣುತ್ತಿರುತ್ತವೆ. ಆದರೆ ಅಲ್ಲಿ ಕೂಡಲಿಕ್ಕೆ ಅನುಕೂಲವಾದ ಸ್ಥಳವೂ ಸ್ವಚ್ಛತೆಯೂ ಇರುವದಿಲ್ಲ. (ಸಶೇಷ.)

ಪಸ್ತು ಪಾಠ.

ಒನೇ ಇಯತ್ತೆ.

ಭೂಮಿಯು ದೈನಂದಿನ ಗತಿ

ಉದ್ದೇಶ—ಭೂಮಿಯು ದೈನಂದಿನ ಗತಿಯನ್ನೂ, ಹಗಲು ರಾತ್ರಿಗಳ ಕಾರಣವನ್ನೂ ತಿಳಿಸುವದು.

ಉಪಕರಣ—ಖಗೋಲದ ಮಧ್ಯದಲ್ಲಿರುವ ಭೂಗೋಲವನ್ನು ತೋರಿಸುವ ಯಂತ್ರ, ಚಂದ್ರಸೂರ್ಯರನ್ನು ತೋರಿಸುವ ತಂತಿಯ ವರ್ತುಲಗಳು; ಮೇಣ, ಸೂಜಿ.

ಉಪೋದ್ಘಾತ—ಭೂಮಿಯ ಆಕಾರವನ್ನು ಕೇಳಿ ಪಾಠಕ್ಕೆ ಆರಂಭಿಸುವದು.

ಪ್ರಶ್ನ	ಉತ್ತರ.
(೧) ಸೂರ್ಯನ ಉದಯಾಸ್ತ ಸ್ಥಳಗಳ ನಡುವೆ ಆಕಾಶದೊಳಗೆ ಅವನು ಹೋಗುವ ಮಾರ್ಗದ ಆಕಾರವನ್ನು ನೋಡಿದ್ದು ನೆನಪಿಗೆ ತಂದು ಹೇಳಲಿ?	(೧) ಅವನು ಹೋಗುವ ಪ್ರತಿದಿವಸದ ಮಾರ್ಗವು ಕಂಸಾಕಾರವಾಗಿರುತ್ತದೆ.
(೨) ಸೂರ್ಯನು ಉದಯನಾದ ಬಳಿಕ ಅವನು ಎಲ್ಲಿಗೆ ಬಂದರೆ ಮಧ್ಯಾಹ್ನವಾಗುವದೆಂಬದದ್ದು ನೋಡಿದ್ದನ್ನು ಹೇಳಲಿ?	(೨) ಸೂರ್ಯನು ತಲೆಯಮೇಲೆ ಅಥವಾ ತಲೆಯ ನಿರುತ ಬರುತ್ತಾನೆ.

(೩) (ಅ) ಸೂರ್ಯನು ಪೂರ್ವ ಕ್ಷಿತಿಜದಲ್ಲಿಯೇ ಸ್ಥಿರವಾಗಿದ್ದು ಅವನು ನಮ್ಮ ತಲೆಯ ಮೇಲೆ ಬರಬೇಕಾದರೆ ನಾವು ವಾಸ ಮಾಡುವ ಭೂಮಿಯಮೇಲಿನ ಸ್ಥಳವು ಎಲ್ಲಿಗೆ ಹೋಗಬೇಕೆಂಬದನ್ನು ಹೇಳಲಿ?

(೩) (ಅ) ನಾವು ಇರುವ ಸ್ಥಳವು ಸೂರ್ಯನ ಕೆಳಗೆ ಹೋಗಬೇಕಾಗುವದು.

(ಆ) ಭೂಗೋಲವು ಒಂದೇ ಸ್ಥಳದಲ್ಲಿ ಸ್ಥಿರವಾಗಿದ್ದು ಅದರ ಮೇಲೆ ನಾವಿರುವ ಸ್ಥಳವು ಸೂರ್ಯನ ಕೆಳಗೆ ಹೋಗಬೇಕಾದರೆ ಅದು ಏನು ಮಾಡಬೇಕೆಂಬದನ್ನು ಕೃತ್ರಿಮ ಗೋಲವನ್ನು ನೋಡಿ ಹೇಳಲಿ?

(ಆ) ಭೂಮಿಯು ತನ್ನ ಮೈಸುತ್ತು ತಿರಿಗಿಕೊಳ್ಳಬೇಕು.

ಟೀಪು—ಸೂರ್ಯನು ಪೂರ್ವದಿಂದ ಪಶ್ಚಿಮಕ್ಕೆ ಹೋದರೆ, ಅಥವಾ ಭೂಮಿಯು ಪಶ್ಚಿಮದಿಂದ ಪೂರ್ವಕ್ಕೆ ತನ್ನ ಮೈಸುತ್ತು ತಿರುಗಿದರೆ ಸೂರ್ಯನು ನಮ್ಮ ತಲೆಯಮೇಲೆ ಬರುತ್ತಾನೆಂದ ಹಾಗಾಯಿತು. ಪರಂತು ಸೂರ್ಯನು ಭೂಮಿಯ ಸುತ್ತು ತಿರುಗುವದಿಲ್ಲ ಭೂಮಿಯೇ ತನ್ನ ಮೈಸುತ್ತು ತಿರುಗುತ್ತದೆ. ಇದಕ್ಕೆ ದೈನಂದಿನಗತಿಯೆನ್ನುತ್ತಾರೆ. ಈಗ ಈ ಗತಿಯನ್ನು ಕುರಿತು ಸಿದ್ಧಮಾಡುವಾ.

(೪) ಶುದ್ಧಪ್ರತಿಪದೆಯಿಂದ ಪೌರ್ಣಿಮೆಯ ವರೆಗೆ ಚಂದ್ರನನ್ನು ನೋಡಿದ್ದರ ಮೇಲಿಂದ ಅವನ ಗತಿಯು ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಇರುತ್ತದೆಂಬದನ್ನು ಹೇಳಲಿ?

(೪) ಚಂದ್ರನ ಗತಿಯು ಪಶ್ಚಿಮದಿಂದ ಪೂರ್ವಕ್ಕೆ ಇರುತ್ತದೆ.

(ಖ) ಶುದ್ಧ ಅಷ್ಟಮಿಯ ದಿವಸ ಮತ್ತೂ ಹುಣ್ಣಿಮೆಯ ದಿವಸ ಸೂರ್ಯಾಸ್ತ ಸಮಯಕ್ಕೆ ಸಾಧಾರಣವಾಗಿ ಚಂದ್ರನು ಎಲ್ಲಿರುತ್ತಾನೆಂಬದನ್ನು ನೋಡಿದ್ದನ್ನು ಹೇಳಲಿ?

(ಖ) ಚಂದ್ರನು ಅಷ್ಟಮಿಯ ದಿವಸ ಸಾಧಾರಣವಾಗಿ ತಲೆಯುಮೇಲೆ ಅಥವಾ ತಲೆಯ ನಿಗುತ ಇರುತ್ತಾನೆ. ಹುಣ್ಣಿಮೆಯ ದಿವಸ ಪೂರ್ವ ಕ್ಷಿತಿಜದಲ್ಲಾಗಲೀ ಅದಕ್ಕೂ ಸ್ವಲ್ಪ ಮೇಲಕ್ಕಾಗಲೀ ಇರುತ್ತಾನೆ.

(ಟ) (ಈ) ಅದೇ ದಿವಸಗಳ ಸರಾಸರಿ ಮಧ್ಯರಾತ್ರಿಯಲ್ಲಿ ಮತ್ತು ಬೆಳಗ್ಗಿನ ಜಾವ ಚಂದ್ರನು ಎಲ್ಲೆದ್ದನೆಂಬದನ್ನು ಹೇಳಲಿ?

(ಟ) (ಈ) ಮಧ್ಯರಾತ್ರಿಯಲ್ಲಿ ತಲೆಯಮೇಲೆ ಮತ್ತು ಬೆಳಿಗ್ಗೆ ಪಶ್ಚಿಮ ಕ್ಷಿತಿಜದಲ್ಲಿ ಇದ್ದನು.

ಟೀಪು—ಶುದ್ಧ ಪ್ರತಿಪದೆಯಿಂದ ಹುಣ್ಣಿಮೆಯ ವರೆಗೆ ಚಂದ್ರನು ಪಶ್ಚಿಮದಿಂದ ಪೂರ್ವಕ್ಕೆ ನಡೆದ ಅಂತರವನ್ನು ನಿತ್ಯ ತಾರಾಗಳಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ನಡೆಯುವದು ಅಸಂಭವವಿರುವದರಿಂದಲೂ ಅವನ ಗತಿಯು ಪೂರ್ವಕ್ಕೇ ಇರುವದರಿಂದಲೂ ಅವನು ಪಶ್ಚಿಮಕ್ಕೆ ಹೋಗುವದಿಲ್ಲೆಂದು ಹೊರಡಿಸುವದು.

(ಇ) ಚಂದ್ರನು ಪಶ್ಚಿಮಕ್ಕೆ ಹೋಗದಿದ್ದರೆ ಹುಣ್ಣಿಮೆಯ ದಿವಸ ಅವನು ಪೂರ್ವ ಕ್ಷಿತಿಜದಿಂದ ನಮ್ಮ ತಲೆಯಮೇಲೆ ಬರುವ ಬಗೆ ಹ್ಯಾಗೆ?

(ಇ) ಭೂಮಿಯು ತನ್ನ ಮೈಯನ್ನು ಪಶ್ಚಿಮದಿಂದ ಪೂರ್ವಕ್ಕೆ ತಿರುಗಿಸಬೇಕಾಗುವದು.

(ಈ) ಅದೇ ದಿವಸ ತಲೆಯುಮೇಲಿನ ಚಂದ್ರನು ಪಶ್ಚಿಮಕ್ಕೆ ಹೋಗಿ ಅಸ್ತನಾಗಬೇಕಾದರೆ ಮತ್ತು ಮತ್ತೊಮ್ಮೆ ತಲೆಯುಮೇ

(ಈ) ಚಂದ್ರನು ಅಸ್ತನಾಗಬೇಕಾದರೆ ಭೂಮಿಯು ಕಾಲುಕಂಸದಷ್ಟು ತಿರುಗಿಕೊಳ್ಳಬೇಕು. ಮತ್ತೊಮ್ಮೆ

ಲೆ ಬರಬೇಕಾದರೆ ಪೃಥ್ವಿಯು ತನ್ನ ಮೈಯನ್ನು ಸರಾಸರಿ ಎಷ್ಟು ದಿಂದ ಎಷ್ಟು ತಿರುಗಿಸಬೇಕೆಂಬದನ್ನು ಕೃತ್ರಿಮ ಗೋಲವನ್ನು ತಿರುಗಿಸಿ ನೋಡಿ ಹೇಳಲಿ?

ತಲೆಯಮೇಲೆ ಬರಬೇಕಾದರೆ ಪೂರ್ವಕ್ಕಿಂತ ಸ್ವಲ್ಪ ಹೆಚ್ಚು ತಿರುಗಿಕೊಳ್ಳಬೇಕು.

ಟೀಪು—ಭೂಮಿಯು ತನ್ನ ಮೈಸುತ್ತು ಪಶ್ಚಿಮದಿಂದ ಪೂರ್ವಕ್ಕೆ ತಿರುಗಿಕೊಳ್ಳುವದರಿಂದ ಸೂರ್ಯ ಚಂದ್ರ ನಕ್ಷತ್ರ ಮುಂತಾದವುಗಳು ಪೂರ್ವದಿಂದ ಪಶ್ಚಿಮಕ್ಕೆ ಹೋದಂತೆ ಕಾಣುತ್ತವೆಂದು ಹೊರಡಿಸುವದು.

(೭) (ಅ) ನೀವು ನಿಮ್ಮ ಮೈಸುತ್ತು ಸಾವಕಾಶವಾಗಿಯೂ, ತೀವ್ರವಾಗಿಯೂ ತಿರುಗಿದಾಗ ನಿಮ್ಮ ಸುತ್ತಲಿನ ಪದಾರ್ಥಗಳು ಹ್ಯಾಗೆ ಕಾಣಿಸಿದವು ಎಂಬದನ್ನು ನೋಡಿದ್ದು ನೆನಪಿಗೆ ತಂದು ಹೇಳಿರಿ?

(ಆ) ನಿಮ್ಮಲ್ಲಿ ಯಾರಾದರೂ ಹೊಗೆಬಂಡಿಯಲ್ಲಿ ಕೂತು ಪ್ರಯಾಣ ಮಾಡಿದ ಕಾಲಕ್ಕೆ ಆ ಬಂಡಿಯು ಎಡಬಲದ ಭೂಮಿಗಳ ಮೇಲಿನ ಪದಾರ್ಥಗಳು ಹ್ಯಾಗೆ ಕಂಡವು ಎಂಬದನ್ನು ನೆನಪಿಗೆ ತಂದು ಹೇಳಿರಿ?

ಗತಿಯು ಹೆಚ್ಚಾದರೆ ಸುತ್ತಲಿನ ಅಥವಾ ಎಡಬಲದ ಪದಾರ್ಥಗಳು ತಿರುಗಿದಂತೆ ತೋರಿ ನಾವು ಸ್ಥಿರವಿದ್ದಂತೆ ತೋರುತ್ತದೆ. ಆ ಪದಾರ್ಥಗಳು ನಾವ್ಹ ತಿರುಗುವ ದಿಕ್ಕಿನ ವಿರುದ್ಧ ದಿಕ್ಕಿಗೆ ತಿರುಗಿದಂತೆ ತೋರುತ್ತವೆ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಯೆಯಂ ಸಚ್ಛಿಕ್ಷಣೋತ್ಕರ್ಷಮಾಂ
ಚಯಿಸುತ್ತಂ ಪ್ರತಿಪಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ।
ಕೆಯುವಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ ।
ಕೆಯೆಯಿಂದೋಷದತಿದ್ದವೇಳ್ವುದುಮುದರಜ್ಞಾನಾಭಿವೃದ್ಧಿಪ್ರಯತ್ನಿಸಿ॥

ಪುಸ್ತಕ ೪೧] ಫೆಬ್ರುವರಿ ೧೯೦೫. [ಸಂಚಿಕೆ ೨

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಪ್ರತಿವರ್ಷದಂತೆ ಈ ವರ್ಷದ ಹೋಳಿ ಹಬ್ಬದ ಸೂಟಿಯಲ್ಲಿ ಧಾರವಾಡ ಟ್ರೇನಿಂಗ ಕ್ಕಾಲೇಜದೊಳಗೆ ದಕ್ಷಿಣಭಾಗದ ನಾಲ್ಕೂ ಕನ್ನಡ ಜಿಲ್ಲೆಗಳ ಶಾಲಾಧ್ಯಾಪಕರ ಪರಿಷತ್ತನ್ನು ಕೂಡಿಸುವ ನಿಶ್ಚಯವಾಗಿದೆ. ಪ್ರಸ್ತುತದಲ್ಲಿ ಧಾರವಾಡದೊಳಗೆ ನೀರಿನ ತಾಪತ್ರಯವಿದ್ದರೂ ಪಿಡುಗಿನ ಹಾವಳಿಯು ಉಗ್ರವಾಗಿರದೆ ಸಣ್ಣಗಿ ಸಾಗುತ್ತಿದ್ದರೂ ಈ ಸವಾರಂಭವು ನಡೆಯುವದು. ಮೋಲಿನ ತೊಂದರೆಗಳ ಬಗ್ಗೆ ಪ್ರಿನ್ಸಿಪಾಲ ಸಾಹೇಬರು ಈ ಮೊದಲೇ ತಕ್ಕ ಏರ್ಪಾಡುಗಳನ್ನು ಮಾಡಿರುವರು.

ಅಧ್ಯಾಪಕರು ಉತ್ಸುಕತೆಯಿಂದ ಬರತಕ್ಕದ್ದು. ಕೇವಲ ಕಾಟಾಚಳಿಯಲಿಕ್ಕೂ ಅಧಿಕಾರಿಗಳ ಅಪ್ಪಣೆಯನ್ನು ನಡಿಸಲಿಕ್ಕೂ ಬರುತ್ತೇವೆಂದು ತಿಳಿಯಕೂಡದು. ಶಿಕ್ಷಣಕಾರ್ಯವು ಪವಿತ್ರವೆಂತಲೂ, ಈ ಹೋರೆಯು ತನ್ನ ಜನ್ಮದ ಹೋರೆಯೆಂತಲೂ, ದೇಶೋದ್ಧಾರದ ಕಾರ್ಯಗಳಲ್ಲಿ ಪ್ರಾಥಮಿಕ ಶಿಕ್ಷಣಕಾರ್ಯವೇ ಆದ್ಯಕಾರ್ಯವೆಂತಲೂ ದೃಢವಾಗಿ ನಂಬಿ ಪರಿಷತ್ತಿಗೆ ಬರುವರೆಂದು ನಾವು ಬಯಸುತ್ತೇವೆ.

ಹೋದ ಸಾರೆಯ ಪರಿಷತ್ತಿನಲ್ಲಿ ಹಲವರು ಶಾಸ್ತ್ರೀಯ

ಪ್ರಯೋಗಗಳಿಗೆ ಬೇಕಾಗುವ ಉಪಕರಣಗಳನ್ನು ಹಾ
ವರು ಕೆಲವು ದೇಶೀಯ ಪದಾರ್ಥಗಳನ್ನು ತಂದಿದ್ದರೆ
ಬದು ಎಲ್ಲರಿಗೂ ಗೊತ್ತುಂಟು. ಇದಲ್ಲದೆ ಹಲವರ
ಕೆಲಕೆಲವು ವಿಷಯಗಳನ್ನು ಕಲಿಸಿ ತೋರಿಸಿದರು
ಶಿಕ್ಷಣದ ಮಾರ್ಗಗಳು ಅನೇಕವುಂಟು. ಅಂದರೆ ಕೇ
ವೊಂದು ವಿಷಯವನ್ನು ಇಂಥದೊಂದೇ ಬಗೆಯಿಂದ ಕಲಿಸಬೇ
ಕ್ಕೆಂದು ಯಾರೂ ನಿರ್ಬಂಧವಾಗಿ ಹೇಳಲಾರರು ಪ್ರ
ಸ್ತುತಿಗೂ, ಹುಡುಗರ ಬುದ್ಧಿಸಾಮರ್ಥ್ಯಕ್ಕೂ, ಮಾಸ್ತರನ
ಯೋಗ್ಯತೆಗೂ ಅನುಸರಿಸಿ ಒಂದೊಂದು ಪದ್ಧತಿಯು ಉಂ
ಟಾಗಿರುವದು. ಆದ್ದರಿಂದ ಬಹುವ ಅಧ್ಯಾಪಕರೆಲ್ಲ ತಮ
ತಮಗೆ ಚೆನ್ನಾಗಿ ಕಲಿಸಲಿಕ್ಕೆ ಬರುತ್ತದೆಂಬ ವಿಷಯವನ್ನು
ಕುರಿತು ಟಪ್ಪಣಿಯನ್ನು ತಕ್ಕೊಂಡು ಬರುವದಲ್ಲದೆ ಆದ
ನ್ನು ಸಭೆಯಲ್ಲಿ ಕಲಿಸಿ ತೋರಿಸಬೇಕು. ಆಂದರೆ ತಮ್ಮ
ಪದ್ಧತಿಯಲ್ಲಿ ತನಗೆ ಕಾಣದ ದೋಷಗಳು ಅನಾಯಾಸವಾಗಿ
ತಿದ್ದಲ್ಪಡುವವು ಅಥವಾ ತನ್ನ ನಿರ್ದುಷ್ಟ ಪದ್ಧತಿಯು ಸಾ
ಹ್ಯವೆಂದು ತಿಳಿದರೆ ಬಹು ಜನರಿಗೆ ಪ್ರಯೋಜನವಾಗು
ವದು.

ಸಭೆಯು ಮಾರ್ಚ್ ತಿಂಗಳ ೨೫|೨೬|೨೭ ತಾರೀಖುಗ
ಳಲ್ಲಿ ನೆರೆಯುವದು.

ಮುಂಬಯಿಯಲ್ಲಿ ರಾಯಲ್ ಏಸಿಯಾಟಿಕ ಸೊಸಾಯಿಟಿ
ಎಂಬದೊಂದು ಸಂಘವು ಇರುತ್ತದೆಂಬದು ಬಹು ಜನ ವಾ
ಚಕರಿಗೆ ಗೊತ್ತಿರಬಹುದು. ಈ ಸಂಘವು ಸ್ಥಾಪಿತವಾಗಿ
ಇಂದಿಗೆ ಒಂದುನೂರು ವರುಷಗಳಾದವು. ಜನವರೀ ತಿಂಗ
ಳಲ್ಲಿ ಈ ಸಂಘದ ಶತಸಾವತ್ಸರಿಕೋತ್ಸವವು ಸಾಂಗವಾಯಿ
ತು. ಆ ಕಾಲದಲ್ಲಿ ಆ ಸಭೆಯ ಮೆಂಬರರಾದ ಎಪ್ಪೋ ಜನ
ಯುರೋಪಿಯನ್ನರೂ ವಿದ್ವಾಂಸರಾದ ದೇಶೀಯ ಜನರೂ
ಮಿಲಿತರಾಗಿದ್ದರು. ಈ ಸಂಘದ ಉದ್ದೇಶವು ಪ್ರಾಚೀನ ಸಂ
ಸ್ಕೃತ, ಪಾಲೀ ಮುಂತಾದ ಭಾಷೆಗಳ ಗ್ರಂಥಗಳನ್ನು ಶೋ
ಧಿಸಿ ನೂತನ ಸಂಗತಿಗಳನ್ನು ಲೋಕಕ್ಕೆ ತರುವದೂ ಪ್ರಾಚೀ

'ನ ಶಿಲಾಲೇಖ ತಾಮ್ರಪಟಗಳನ್ನು ಸಂಗ ಹಿಸಿ ಅದರಿಂದ ಹೊರಡುವ ಸಂಗತಿಗಳನ್ನು ಪ್ರಕಟಿಸುವದೂ ಆಗಿರುವದು. ಅದರಂತೆ ಮೊನ್ನಿನ ದರಿಪತ್ತಿನಲ್ಲಿ ಡಾಕ್ಟರ ಭಾಂಡಾರಕರ, ಜಾಕ್ಸನ್, ನಾತೂ ಮೊದಲಾದ ವಿದ್ವಾಂಸರು ತಾವು ಗೊತ್ತು ಹಚ್ಚಿದ ಅನೇಕ ಹೊಸ ಸಂಗತಿಗಳನ್ನು ನಿಬಂಧರೂಪದಿಂದ ಪ್ರಕಟಿಸಿದರು. ಅವರಲ್ಲಿ ಬೆಳಗಾವಿಯ ಪ್ರಸಿದ್ಧ ವಕೀಲರಾದ ರಾ. ರಾ. ವಿಷ್ಣುಪಂತರು ವಿಜಯನಗರದ ರಾಜ್ಯದ ಸಂಬಂಧದಿಂದ ದೊರೆತ ಒಂದು ಹಳೆ ಲೇಖವನ್ನು ಕುರಿತು ನಿಬಂಧವನ್ನು ಓದಿದರು ಅದರ ಸಾರಾಂಶವು—

ಇವರು ನಿಬಂಧದ ಆರಂಭದಲ್ಲಿ, ತಾವು ನೋಡಿದ ಸಲಗಳ ವರ್ಣನೆಯನ್ನು ಸವಿಸ್ತರವಾಗಿ ವರ್ಣಿಸಿರುವರು. ಇದು ಈ ಮೊದಲೇ ಶಾಲಾಪತ್ರಿಕೆಯಲ್ಲಿ ಸಮಗ್ರ ಬಂದಿರುವ ದಪ್ಪೇ! ಆದರೆ ಇವರಿಗೆ ಹೊಸಪೇಟೆಯಲ್ಲಿ ಭೆಟ್ಟಿಯಾದ ಗೌಡ, ಎಂಬ ಅಡ್ಡ ಹೆಸರಿನ ಒಬ್ಬ ಸದ್ಗೃಹಸ್ಥರಲ್ಲಿ ಶಿಕ್ಕ ಬಂದು ತಾಮ್ರ ಶಾಸನದಲ್ಲಿ ಕೆಳಗಿನ ಸಂಗತಿಯುಂಟು. ಹೊಸಪೇಟೆಯ ಬಳಿಯಲ್ಲಿಯೇ ಚಿತವಾಡಿಗ ಎಂಬ ಗ್ರಾಮವುಂಟು. ಆ ಗ್ರಾಮದಲ್ಲಿ ಪೂರ್ವದಲ್ಲಿ ಗೌಡರದೊಂದು ಹೆಸರಾದ ಮನೆತನವಿತ್ತು. ವಿಜಯನಗರದ ಪ್ರಖ್ಯಾತನಾದ ಕೃಷ್ಣರಾಯನು "ಚಿತ್ರವಟಿಕಾ" ಎಂಬ ಗ್ರಾಮವನ್ನು ಕಟ್ಟಿಸಿದನು. ಅದೇ ಈ ಚಿತವಾಡಿಗೆಯಂತೆ. ವಿಜಯನಗರದ ಅರಸರ ಆಂಕಿತದೊಳಗಿದ್ದ ಚಿತ್ರದುರ್ಗದ ಪ್ರಧಾನಪುರುಷನಾದ ರಾಮರಾಜನಿಂದ ಈ ಚಿತವಾಡಿಗೆಯ "ಗೌಡ" ಮನೆತನಕ್ಕೆ ಗೌಡಕಿಯ ಅಧಿಕಾರವು ದೊರೆಯಿತು. ಮುಂದೆ ಕೆಲಕಾಲದ ವರೆಗೆ ಈ ಮನೆತನವು ನಡೆದು ವಿಜಯನಗರದ ಕೃಷ್ಣರಾಜನ ಕಾಲದಲ್ಲಿ ನಿಪುತ್ರಕವಾಯಿತು. ಆ ಕಾಲದಲ್ಲಿ ಗೌಡರ ಮನೆಯಲ್ಲಿ ಗಂಡು ಮಕ್ಕಳಿದ್ದಿಲ್ಲ. ಒಂದೇ ಹುಡಿಗೆಯು ಮಾತ್ರ ಇತ್ತು. ಆ ಹುಡಿಗೆಗೆ ಯೋಗ್ಯನಾದ ವರನು ಹ್ಯಾಗೆ ದೊರೆಯುವನೆಂದು ಅವಳ ಮುಪ್ಪಿನ ತಂದೆಯು ಯೋಚಿಸುತ್ತಿರಲು, ಒಬ್ಬ ಸುಂದರ ತರುಣನು ದೃಷ್ಟಿಗೆ ಬಿದ್ದನು. ಆ ಕಾಲದಲ್ಲಿ ಎತ್ತನೋಡಿದತ್ತ ಕದನದ

ಹಾವಳಿಯು ಪ್ರಬಲವಾಗಿದ್ದ ದರಿಂದ ಒಳ್ಳೊಳ್ಳೇ ಮನೆತನದವರು ದಿಕ್ಕಾಪಾಲಾಗಿ ಹರಿದಾಡುವದು ಸ್ವಾಭಾವಿಕವಾಗಿತ್ತು. ಅದರಂತೆ ಈ ಹುಡುಗನು ಒಬ್ಬ ಉತ್ತಮ ವರ್ಗದವನಿರಬಹುದೆಂದು ಆ ಹುಡಿಗೆಯ ತಂದೆಯು ಅವನನ್ನು ಮನೆಗೆ ಕರತಂದು ಚೆನ್ನಾಗಿ ಪರಾಮರಿಸುತ್ತಿದ್ದನು. ಕಡೆಯಲ್ಲಿ ಅವನಿಗೇ ತನ್ನ ಮಗಳನ್ನು ಮದುವೆ ಮಾಡಿಕೊಟ್ಟನು. ಆ ದಂಪತಿಗಳು ಸುಖದಿಂದಿರಲು, ಹಲಕಾಲದಲ್ಲಿ ಅನೇಕ ಗಂಡು ಹೆಣ್ಣು ಮಕ್ಕಳನ್ನು ಹಡೆದರು. ಮುಂದೆ ಕೆಲ ದಿವಸಗಳಲ್ಲಿ ಆ ಹುಡುಗನ ತಾಯಿಯು ಬಂದು ಇವನು ತನ್ನ ಮಗನೆಂದು ಗುರ್ತು ಹಿಡಿದಳು. ಆಕೆಯು ಹೀನಜಾತಿಯವಳು ಆದ ರಿಂದ ಆ ಗೌಡನು ತಾನು ಬ್ರಾಹ್ಮಣನಾಗಿ ಹೀನ ಜಾತಿಯವರೊಡನೆ ಶರೀರಸಂಬಂಧವನ್ನು ಮಾಡಿದೆನಲ್ಲಾ! ಎಂದು ಪಶ್ಚಾತ್ತಾಪಬಟ್ಟು ವಿಜಯನಗರದ ಅರಸನ ಬಳಿಗೆ ಬಂದು ಆತ್ಮಹತ್ಯಕ್ಕೆ ಅನುಮತಿಯನ್ನು ಪಡೆದನು. ಬಳಿಕ ತುಂಗಭದ್ರೆಯಲ್ಲಿ ತನ್ನ ಎಲ್ಲ ಬಳಗದವರೊಂದಿಗೆ ಹಾರಿಕೊಂಡು ಅಸುದೊರೆದನು.

ಈ ಮೇರೆಗೆ ಚಿತವಾಡಿಗಿಯ ಮೊದಲಿನ ಗೌಡಕೀ ಮನೆತನವು ನಷ್ಟವಾದ ಬಳಿಕ ನಾವು ಮೇಲೆ ಉಲ್ಲೇಖಿಸಿದ ರಾ. ಬ. ಗೌಡರ ಪೂರ್ವಜರು ವಿಜಯನಗರದ ನರಪತಿಗಳಿಗೆ ಅನೇಕ ವರಹಗಳ ಕಾಣಿಕೆಯನ್ನು ಕೊಟ್ಟು ತಾವು ಆ ಊರ ಗೌಡಕಿಯನ್ನು ಸಂಪಾದಿಸಿದರು. ಆ ವಂಶವು ಇಂದಿಗೂ ಅದೆ.

ಈ ಸಮಗ್ರ ಕಥೆಯು ಆ ಗೌಡರು ತೋರಿಸಿದ ತಾಮ್ರಪಟದಲ್ಲಿ ಕನ್ನಡ ನುಡಿಯಲ್ಲಿ ಬರೆದಿರುವದು.

ಬಿಜಾಪುರದ ಡಿಪೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾದ ರಾ. ಸಾ ಅಂಕಲಿ ಸಂಗಪ್ಪನವರು ಕಿನಕಸನ್ನು ತೆಗೆದುಕೊಂಡದ್ದರಿಂದ ಆ ಸ್ಥಳಕ್ಕೆ ರಾ. ಸಾ. ಅನ್ನಿಖಿಂಡೀ ಶಂಭೂರಾಯರನ್ನು ನೇಮಿಸಿದರು.

ಹಿಂದುಸ್ತಾನದೊಳಗೆ ಹೋದ ವರುಷ ಪೋಷ್ಟದ್ವಾರದಿಂದ ಹೋದ ಪತ್ರಗಳ ಸಂಖ್ಯೆಯು ಕೆಳಗೆ ಕೊಟ್ಟಂತೆ—

ಕಾರ್ಡು, ಪತ್ರ, ಬಂಗಿ—	೬೩೧೦೦೦೦೦
ವಿಲಾಯತಿಯಿಂದ ಬಂದ ಪತ್ರ ಮುಂತಾದವು	೫೯೦೫೬೦
ಇಲ್ಲಿಂದ ವಿಲಾಯತಿಗೆ ಹೋದವುಗಳು—	೪೬೮೦೪೦೩
ಒಟ್ಟು ಪೋಷ್ಟಖಾತೆಯ ನೌಕರರು—	೬೬೫೯೦
ಒಟ್ಟು ಹುಟ್ಟುವಳಿಯು—	೧೬೯೫೯೬೮

ಇದರಿಂದ ದಿನದಿನಕ್ಕೆ ಬೆಳೆಯುತ್ತಿರುವ ವಿದ್ಯಾಸುಧಾರಣೆಗಳೂ ಶಾಂತತೆಯು ಮಾನವೂ ಸರಸವಾಗಿ ವ್ಯಕ್ತವಾಗುತ್ತವೆ.

CHOUTH & SIRDESHMUKHI.

ಚೌಥಾಯಿ ಸರದೇಶಮುಖಿ ಹಕ್ಕುಗಳು.

(೧೦೫ ಪುಟದಿಂದಮುಂದೆ ಸಾಗಿದ್ದು.)

ಸ್ವಾತಂತ್ರ್ಯಕ್ಕಾಗಿ ನಡಿಸಿದ ಮಹಾರಾಷ್ಟ್ರರ ಯುದ್ಧವು ಮುಗಿದ ಬಳಿಕ ಈ ವೀರರು ಕರ್ನಾಟಕ, ಗಂಗವಾಡಿ, ವರ್ಹಾಡ, ಖಾನದೇಶ, ಮಾಳವ, ಗುಜರಾಥ ಮೊದಲಾದ ಪ್ರದೇಶಗಳಲ್ಲಿ ನೆಲೆಗೊಂಡು ನಿಂತರು. ಆಗ ಅವರ ಮನದಲ್ಲಿ ಚೌಥಾಯಿ, ಸರದೇಶ ಮುಖಿಗಳ ಕಲ್ಪನೆಯು ಉದ್ಭವಿಸಿತು. ಬಾಳಾಜಿ ವಿಶ್ವನಾಥನೂ, ಶಾಹೂರಾಜನ ಇತರ ಮಂತ್ರಿಗಳೂ ಮೊಗಲ್ ಸುಭೇದಾರರ ಕೂಡ ಒಪ್ಪಂದದ ಕೆಲಸವನ್ನು ನಡೆಸಿದಾಗೆಲ್ಲ ಈ ಮಾತಿನ ಪ್ರಸಕ್ತಿಯನ್ನು ಮರೆಯುತ್ತಿದ್ದಿಲ್ಲ. ಕಾಳಗ ನಡೆದಾಗ ಮಾತ್ರ ಈ ಹಕ್ಕುಗಳ ಚರ್ಚೆಯು ಕುಂದುತ್ತಿತ್ತು. ಶಾಹೂರಾಜಗೆ ಸ್ವರಾಜ್ಯವನ್ನು ಅಂದರೆ ಅವರಜ್ಜನು ೧೬೭೪ರಲ್ಲಿ ರಾಯಗಡದಲ್ಲಿ ಸಿಂಹಾಸನಾಭಿಷೇಕವನ್ನು ಮಾಡಿಕೊಂಡಾಗ ಅವನ ಆಧೀನದಲ್ಲಿದ್ದ ಪ್ರದೇಶವನ್ನೆಲ್ಲ ಇವನ ಅಂಕಿತದೊಳಗೆ ತಂದುಕೊಡುವದೇ ಮಹಾರಾಷ್ಟ್ರರ ಮುಂದಾಳುಗಳಾದ ಬಾಳಾಜಿವಿಶ್ವನಾಥ ಮುಂತಾದವರ ಪ್ರಧಾನ ಕಾರ್ಯವಾಗಿತ್ತು. ರಾಜಾರಾಮನು ಸತ್ತನಂತರ ಸ್ವರಾಜ್ಯವೆಂದರೆ ಮೇಲೆ ವರ್ಣಿಸಿದ ಪ್ರ

ದೇಶದ ಕೆಲವು ಭಾಗವು ಶಾಹೂರಾಜನ ಒಡೆತನದ್ದೆಂದು ಸ್ವತಃ ಔರಂಗಜೇಬನು ಒಪ್ಪಿಕೊಂಡದ್ದಲ್ಲದೆ ಅದರಂತೆ ೮ ಭಾಗಗಳನ್ನು ಬಿಡಿಸಿಕೊಳ್ಳಲಿಕ್ಕೆ ಯತ್ನಿಸಿದನು. ಸುಪೆ, ಇಂದಾ ಪುರಗಳಲ್ಲಿಯು ಶಾಹೂರಾಜನ ಪ್ರಧಾನ ಜಹಾಗೀರಿಯನ್ನೂ, ತಾನು ಶಾಹೂನ ಲಗ್ನಸಮಯದಲ್ಲಿ ಕೊಟ್ಟ ಅಕ್ಕಲಕೋಟ ನೇವಾಸೆ ಮಹಾಲುಗಳನ್ನೂ ಅವನ ಸ್ವಾಧೀನ ಮಾಡಿದನು. ಇದಲ್ಲದೆ ಶಾಹೂರಾಜನ ಮನ ಒಲಿಸಿಕೊಂಡು ಅವನ ಕೈಯಿಂದ ಎಲ್ಲ ಮಹಾರಾಷ್ಟ್ರ ಸರದಾರರಿಗೆ ನೀವು ಕಾಳಗವನ್ನು ನಿಲ್ಲಿಸಿ ಬಾದಶಹನಿಗೆ ಶರಣು ಬರ್ರಿ. ಎಂಬ ಅರ್ಥದ ಪತ್ರಗಳನ್ನು ಬರೆಸಿದನು. ಇದರಿಂದ ಔರಂಗಜೇಬನು ಕಾಳಗದಲ್ಲಿ ಸೇರಿದ ಹಾವತ್ತು ಮಹಾರಾಷ್ಟ್ರರ ಮೇಲೆ ಶಾಹೂವಿನ ಒಡೆತನವಿರುವದೆಂದು ಒಪ್ಪಿಕೊಂಡಂತಾಯಿತು. ಇಂಗಿ ರಕ್ಷಿ ಈ ತ್ರಾಸದಾಯಕವಾದ ಕಾಳಗವು ಮುಗಿದುಹೋಗಲಿ ಎಂಬ ಇಚ್ಛೆಯಿಂದ ಔರಂಗಜೇಬನು ದಕ್ಷಿಣದೊಳಗಿನ ತನ್ನ ಆರು ಸುಭೆಗಳಲ್ಲಿ ಸರದೇಶಮುಖಿಯನ್ನು ಎತ್ತುವ ಅಧಿಕಾರವನ್ನು ಮಹಾರಾಷ್ಟ್ರರಿಗೂ ಕೊಡಲೊಪ್ಪಿಕೊಂಡನು. ಆದರೆ ಅವರು ಆವುತರ ದಂಡನ್ನಿಟ್ಟುಕೊಂಡು ಪ್ರಾಂತದಲ್ಲಿ ಸುಖಶಾಂತಿಗಳನ್ನು ನೆಲೆಗೊಳಿಸಬೇಕು ಎಂದು ನಿರ್ಬಂಧ ಮಾಡಿದನು. ಈ ಬಗೆಯಾಗಿ ಐವತ್ತು ವರ್ಷಗಳಿಂದ ಅಂದರೆ ಶಿವಾಜಿಯು ಕಾಲದಿಂದ ಯಾವ ಹಕ್ಕಿನ ಸಂಪಾದನೆಗಾಗಿ ಭಗೀರಥ ಪ್ರಯತ್ನಗಳು ನಡೆದಿದ್ದವೋ ಆ ಹಕ್ಕು ಇಂದು ಮಹಾರಾಷ್ಟ್ರರಿಗೆ ನಿರಂತರವಾಗಿ ಪ್ರಾಪ್ತವಾಯಿತಲ್ಲದೆ ಅದಕ್ಕೆ ಬಾದಶಹನ ಯೋಗ್ಯವಾದ ಅನುಮತಿಯೂ ದೊರೆಯಿತು. ಆದರೆ ಈ ಕಾಲಕ್ಕೆ ಮಹಾರಾಷ್ಟ್ರ ವೀರರ ಸೊಕ್ಕು ಅಳತೆಗಟ್ಟಿತ್ತು. ಅದರಿಂದ ಅವರು ಅನೇಕ ಹೊಸ ಹೊಸ ಹಕ್ಕುಗಳನ್ನು ಬೇಡತೊಡಗಿದರು. ಇದು ಬಾದಶಹನಿಗೆ ಸರಿಬಾರದ್ದರಿಂದ ಕಾಳಗವು ಮುಂದೆ ಸಾಗಿತು. ಔರಂಗಜೇಬನ ಕಿರುವಾಯ ಅವನ ಮಕ್ಕಳಲ್ಲಿ ಒಡಕು ಹುಟ್ಟಿದ್ದರಿಂದ ಕಾಳಗವು ನಿಂತಿತು. ಶಾಹೂರಾಜನು ಪೂರಾಗಿ ಸ್ವದೇಶವನ್ನು

ಸ್ಕರಿದನು ಅವನಿಗೂ ಮೊಗಲರ ಅಪ್ಪಣೆಯು ದೊರೆತಿ
ತ್ತು. ಇದಲ್ಲದೆ ಶಾಹೂರಾಜನು ಮಹಾರಾಷ್ಟ್ರದಲ್ಲಿ ನೆಲೆ
ಗೊಂಡು ತನ್ನ ಅಧಿಕಾರವನ್ನು ಸ್ಥಾಪಿಸಿಡನೆಂದರೆ ಯುಕ್ತೀ
ಕಾರಖಾನನ ಅವರಂಗಜೇಬನ ಮಗನಾದ ಆಜೇಮುಶ
ಹನೂ ಅವನಿಗೆ ಅವನ ಅಜ್ಜನ ಕಾಲದಲ್ಲಿದ್ದ ಅವನ ದಾ
ವತ್ತು ಸ್ವರಾಜ್ಯವನ್ನು ಕೊಡುವದಲ್ಲದೆ ಭೀಮಾ ಗೋದಾ
ವರಿಗಳ ಮಧ್ಯಪ್ರದೇಶವನ್ನು ಉಂಬಳಿಯಾಗಿ ಕೊಡುತ್ತೇ
ವೆಂದು ವಚನ ಕೊಟ್ಟಿದ್ದರು ಶಾಹೂರಾಜನು ಸಾತಾರೆಯ
ಲ್ಲಿ ಪಟ್ಟವೇರಿದ ಬಳಿಕ ದಕ್ಷಿಣದೊಳಗಿನ ಮೊಗಲರ ಸುಭೇ
ದಾರನಾದ ದಾವೂದಖಾನನು ಕೆಲವು ಮಹಾರಾಷ್ಟ್ರ ಸರ
ದಾರರೊಡನೆ ಒಡಂಬಡಿಕೆಯನ್ನು ಮಾಡಿಕೊಂಡು ಅವನಿಗೆ
ಚೌಥದ ಹಕ್ಕನ್ನು ಕೊಟ್ಟನು. ಆದರೂ ಶಾಹೂರಾಜನ
ನೌಕರರೇ ಅದನ್ನೆತ್ತಬೇಕೆಂದು ನಿರ್ಬಂಧ ಮಾಡಿದ್ದನು.
ಈ ವ್ಯವಸ್ಥೆಯು ಸರ್ ೧೭೦೯ ರಿಂದ ೧೭೧೯ ರವರೆಗೆ ನಾ
ಲ್ಕು ವರ್ಷ ಸುಯುಂತ್ರವಾಗಿ ನಡೆಯಿತು. ಮುಂದೆ ಈ ದಾ
ವೂದಖಾನನಿಗೆ ಬದಲಾಗಿ ನಿಜಾಮು ಉಲ್ಮುಲ್ಕನು ದಕ್ಷಿಣ
ದ ಸುಭೇದಾರನಾದನು. ಅವನಿಗೆ ಈ ಪದ್ಧತಿಯು ಸರಿಬ
ರಲಿಲ್ಲ. ಆದ್ದರಿಂದ ಮಹಾರಾಷ್ಟ್ರರಿಗೂ ನಿಜಾಮುನಿಗೂ
ಜಗಳ ಹತ್ತಿತು. ಈ ಕಾಳಗವು ಇ ಸರ್ ೧೭೧೯ ರವರೆ
ಗೆ ನಡೆದು ಕಡೆಯಲ್ಲಿ ಒಡಂಬಡಿಕೆಯಾಯಿತು ಈ ಒಡಂ
ಬಡಿಕೆಯಿಂದ ಶಾಹೂರಾಜನಿಗೆ ಮೊಗಲರಿಂದ ಹತ್ತು ಸಾವಿ
ರ ಸವಾರರ ಅಧಿಕಾರವು ಪ್ರಾಪ್ತವಾಯಿತು. ಮುಂದೆ ಕೆಲ
ವು ದಿವಸಗಳಲ್ಲಿ ಬಾದಶಹನು ನಿಜಾಮುಲ್ಮುಲ್ಕನನ್ನು ದಿಲ್ಲಿ
ಗೆ ಕರಿಸಿಕೊಂಡು ಆ ಸ್ಥಳಕ್ಕೆ ಸೈಯದ ಬಂಧುಗಳಲ್ಲಿ ಒಬ್ಬ
ನನ್ನು ನೇಮಿಸಿದನು. ಈ ಸಯ್ಯದ ಸುಭೇದಾರನು ಶಂಕ
ರಾಜೆ ಎಂಬವನೊಬ್ಬ ವಯೋವೃದ್ಧನೂ, ಜ್ಞಾನವೃದ್ಧನೂ
ಆದ ಮುತ್ಸದ್ದಿಯನ್ನು ಇಟ್ಟುಕೊಂಡಿದ್ದನು. ಈ ಬ್ರಾಹ್ಮ
ಣನು ಜಿಂಜಿಯ ಲಢಾಯಿಯಲ್ಲಿ ಬಂದು ಮಹತ್ಪದ ಕಾ
ರ್ಯವನ್ನು ನೆರವೇರಿಸಿದ ಬಳಿಕ ಕಾಶಿಯಲ್ಲಿ ಹೋಗಿ ನಿಂತಿ
ದ್ದನು. ಈ ಬ್ರಾಹ್ಮಣನನ್ನೇ ಸಯ್ಯದ ಸುಭೇದಾರನು ವೆ

ಕೇಲನೆಂದು ಶಾಹೂನ ಕಡಿಗೆ ಕಳುಹಿಸಿದನು. ಬಳಿಕ ಶಾಹೂನ ಕಡೆಯ ಬಾಳಾಜಿವಿಶ್ವನಾಥನಿಗೂ ಈ ಶಂಕರಾಜಿಗೂ ಸ್ವರಾಜ್ಯದ ಸಂಬಂಧದಿಂದ ಹಲವು ವಾದವಿವಾದವಾಯಿತು. ಕಡೆಗೆ ಶಾಹೂರಾಜನಿಗೆ ಸ್ವರಾಜ್ಯವನ್ನೂ ದಕ್ಷಿಣದೊಳಗಿನ ಲಿರು ಸುಬೆಗಳೊಳಗಿನ ಚೌಥಾಯಿ ಸರದೇಶಮುಖಿಗಳ ಹಕ್ಕುಗಳನ್ನೂ ಕೊಡಬೇಕೆಂದು ನಿರ್ಣಯವಾಯಿತು. ಕರ್ನಾಟಕದೊಳಗಿನ ಪ್ರಾಚೀನ ಜಹಾಗೀರಿಯು ಸಹ ಶಾಹೂರಾಜನ ವಶಕ್ಕೆ ಬಂತು. ನಾಗಪುರದ ಭೋಸಲನು ವರ್ಹಾಡದಲ್ಲಿ ಗಳಿಸಿದ ಸೀಮೆಯು ಅವನ ವಶದಲ್ಲಿಯೇ ಇರಬೇಕು. ಶಾಹೂರಾಜನು ಬಾದಶಹನಿಗೆ ವರ್ಷಾ ಹತ್ತು ಲಕ್ಷ ರೂಪಾಯಿ ಕಾರಭಾರವನ್ನು ಕೊಡಬೇಕು. ಪರಶತ್ರುಗಳಿಂದ ದೇಶವನ್ನು ರಕ್ಷಿಸಬೇಕು. ಹದಿನೈದು ಸಾವಿರ ರಾಹುತರನ್ನು ಬಾದಶಹನ ಚಾಕರಿಗೆಂದು ಇಟ್ಟು ದಕ್ಷಿಣದೊಳಗಿನ ಮೊಗಲರ ಸುಭೇದಾರ ಮೊದಲಾದವರಿಗೆ ಕಾಲಕಾಲಕ್ಕೆ ನೆರವಾಗಬೇಕು. ಈ ಬಗೆಯ ಪರಸ್ಪರ ಕರಾರುಗಳಾದ ಬಳಿಕ ಶಂಕರಾಜಿಯು ಸಾದ್ಯಂತ ವರ್ತಮಾನವನ್ನು ಸಯ್ಯದ ಸುಭೇದಾರರಿಗೆ ತಿಳಿಸಿ, ಒಂದು ಒಪ್ಪಂದ ಪತ್ರವನ್ನು ಸಿದ ಮಾಡಿದನು. ಅದರಲ್ಲಿ ಸಯ್ಯದ ಸುಭೇದಾರರು ದಕ್ಷಿಣ ಹಿಂದುಸ್ತಾನ, ಮೈಸೂರ, ತ್ರಿಚನಾಪಳ್ಳಿ, ತಂಜಾವರ ಮುಂತಾದ ಪ್ರಾಂತಗಳು ತಮ್ಮ ಕೈಯಲ್ಲಿ ಇಲ್ಲ.

(ಸಶೇಷ.)

AGRICULTURE.

ಕೃಷಿಶಾಸ್ತ್ರವು.

(೨೭೬ನೇ ಪುಟದಿಂದ ಮುಂದೆ ಸಾಗಿದ್ದು)

ಉಗಿಯ ಯಂತ್ರದ ಸಹಾಯದಿಂದ ಸಾಗು ಮಾಡುವ ಪದ್ಧತಿಯ ನ್ಯೂನತೆಗಳು :—ಈ ಪದ್ಧತಿಯಿಂದ ಸಾಗು ಮಾಡಲಿಕ್ಕೆ ಬರುವ ಭೂಮಿಯ ಕ್ಷೇತ್ರಫಲವು ಭೂಮಿಯ ಸ್ಥಿತಿಗತಿಯಿಂದ (ಉದಾಹರಣಾರ್ಥವಾಗಿ ಗುಡ್ಡಗಾಡಭೂಮಿಯ ಮೇಲೆ ಉಗಿಯ ಯಂತ್ರಗಳನ್ನು ಉಪಯೋಗಿಸಲಿಕ್ಕೆ ಬರುವದಿಲ್ಲ.) ಹಾಗೂ ಹೊಲಗಳ ಸ್ವರೂಪದಿಂದ

(ಅಡ್ಡಅಡ್ಡ ಆ ಕೃತಿಯುಳ್ಳ ಸಣ್ಣ ಹೊಲಗಳಲ್ಲಿ ಈ ಯಂತ್ರಗಣ ಉಪಯೋಗಕ್ಕೆ ಅಯೋಗ್ಯವಾಗಿರುತ್ತವೆ,) ಮರ್ಯಾದಿತವಾಗಿರುತ್ತದೆ. ಇದಲ್ಲದೆ ದೇಶಪ್ರಕೃತಿಯಿಂದಾದರೂ ಈ ಕ್ಷೇತ್ರಫಲವು ಕೆಲವಂಶ ಮರ್ಯಾದಿವಾಗಿರುತ್ತದೆ.

೨ ಯಂತ್ರದ ಬೆಲೆಯು ಬಹಳೇ ಇರುವದರಿಂದ ಸಣ್ಣ ಹೊಲವನ್ನು ಸಾಗುಮಾಡುವ ಒಕ್ಕಲಿಗನು ಇಂಜಿನ್ನನ್ನು ಅಥವಾ ಇಬ್ಬರು ಮೂವರು ಕೂಡಿ ಉಗಿಬು ಸರಂಜಾಮನ್ನು ಕೊಳ್ಳಬೇಕಾಗುತ್ತದೆ.

೩ ಉಗಿಯ ಯಂತ್ರದಿಂದ ಹೊಲದ ಬಾಗಿಲುಕಂಭಗಳಿಗೂ ಹೊಲಪ ಮುಂಭಾಗದ ಭೂಮಿಗೂ ಹಾನಿಯಾಗುತ್ತದೆ.

೪ ಒಂದು ಹೊಲದಿಂದ ಮತ್ತೊಂದು ಹೊಲಕ್ಕೆ ಸ್ಥಳಾಂತರ ಮಾಡಬೇಕಾದರೆ ಬಹಳ ವೇಳೆಹಾಗುತ್ತದೆ. ಈದು ರೆಗಳನ್ನು ಹಚ್ಚಿ ಸಾಗುಮಾಡುವ ಪದ್ಧತಿಯಲ್ಲಿ ಇಷ್ಟು ವೇಳೆ ಹಿಡಿಯುವದಿಲ್ಲ.

ರೆಂಟೆ ಹೊಡಿಯುವದು. ತಳಭೂಮಿಯನ್ನು ಸಾಗು ಮಾಡುವದು, ಕೊಯ್ಯುವದು ಅಗಿಯುವದು ಮುಂತಾದ ವ್ಯಾಪಾರಗಳು ಉಗಿಯ ಯಂತ್ರದಿಂದ ಸಾಗುಮಾಡುವ ಪದ್ಧತಿಯಲ್ಲಿ ಸಮಾವೇಶವಾಗುತ್ತವೆ.

ಉಗಿಯ ಯಂತ್ರದಿಂದ ಹೆಚ್ಚು ಸಾಗು ಭೂಮಿಯನ್ನು ಸಾಗು ಮಾಡಲಿಕ್ಕೆ ಬರುತ್ತದೆ ಉದಾಹರಣಾರ್ಥವಾಗಿ ಉಗಿಯ ಯಂತ್ರದಿಂದ ಒಮ್ಮಿಗೇಲೆ ನಾಲ್ಕೂ ನೇಗಿಲು ಸಾಲುಗಳನ್ನು ಹೊಡಿಯಲಿಕ್ಕೆ ಬರುತ್ತದೆ. ಆದರೆ ಈದು ರೆಯಿಂದ ೧ ಸಾಲು ಆಗುತ್ತದೆ, ಮತ್ತು ಈದುರೆಗಳಿಂದ ೧ ತಾಸಿನಲ್ಲಿ ೧ ಅಥವಾ ೧½ ಎಕರೆ ಸಾಗು ಆಗುವಷ್ಟರಲ್ಲಿ ಉಗಿ ಯಂತ್ರದಿಂದ ೧೦ ಎಕರೆಗಳು ಸಾಗು ಆಗುತ್ತವೆ.

ಉಗಿಯ ಯಂತ್ರದಿಂದ ಸಾಗುಮಾಡುವ ಪದ್ಧತಿಗಳು.

ಈ ಪದ್ಧತಿಗಳಲ್ಲಿ ಸಾಧಾರಣವಾಗಿ ಒಂಟಿ ಇಂಜಿನ್ನನ್ನು ಜೋಡು ಇಂಜಿನ್ನನ್ನು ಉಪಯೋಗಿಸುತ್ತಾರೆ. ಈ

ಎರಡೂದರಲ್ಲಿ ಸಿಲಿಂದರ ಆಕೃತಿಯುಳ್ಳ ಕೊಳವಿಯು ಮೇಲೆ ಸುತ್ತಿದ ಉಕ್ಕಿನ ತಂತಿಯು ಹಗ್ಗದದಾರದಿಂದ ಯಂತ್ರಕ್ಕೆ ಎಳೆಯುವ ಶಕ್ತಿಯನ್ನು ಹಚ್ಚಿರುತ್ತಾರೆ. ಮೊದಲಿನ ಪದ್ಧತಿಯಲ್ಲಿ ಒಂದು ಪ್ರಕಾರದ ರಾಟೆಯು ಮನೆಯಲ್ಲಿ ಎರಡು ಸಿಲಿಂದರ ಆಕೃತಿಯುಳ್ಳ ಕೊಳವಿಯು ಬಿಟ್ಟು ಬಿಟ್ಟು ಜಗ್ಗುವದರಿಂದ ಯಂತ್ರವು ಹಿಂದಕ್ಕೂ ಮುಂದಕ್ಕೂ ಜಗ್ಗಲ್ಪಡುತ್ತದೆ. ಮತ್ತು ಯಂತ್ರವು ಮುಂದಕ್ಕೆ ಸಾಗಿಪ ಹಾಗೆ ನೇಗಿಲಿನ ತುದಿಗೆ ಪುಲಿಯೂಲಂಗರಗಳೂ ಮುಂದರಿಯುತ್ತವೆ. ಎರಡನೇ ಪದ್ಧತಿಯಲ್ಲಿ ಪ್ರತಿ ಒಂದು ಸಿಲಿಂದರ ಆಕೃತಿಯುಳ್ಳ ಕೊಳವಿಯನ್ನು ತನ್ನಷ್ಟಕ್ಕೆ ತಾನೇ ಸರಿಯುವ ಇಂಜಿನ್ನಿನ ಬಾಯಿಲರದ ಬುಡಭಲ್ಲಿ ಇಡುತ್ತಾರೆ ಮತ್ತು ನೇಗಿಲಿನ ಪ್ರತಿ ಒಂದು ತುದಿಯಲ್ಲಿರುವ ಇಂಟೆನ್ನು ಸರ್ದಿಯ್ಯುವೋಲೆ ರೆಂಟೆಯನ್ನು ತನ್ನ ಕಡೆಗೆ ಎಳೆದು ಕೊಳ್ಳುತ್ತದೆ. ಮತ್ತು ಎರಡನೇದು ಅದು ತಿರಿಗಿ ಬರುವ ಪ್ರದಲ್ಲಿ ಸಿದ್ಧ ಆಗಿದ್ದ ಸ್ಥಳದಲ್ಲಿ ಮುಂದಕ್ಕೆ ಸರಿಯುತ್ತದೆ.

ಶರತ್ಕಾಲದಲ್ಲಿ ಸಾಗುವ ಸಾಗುವಳಿಯು.

ಚಳಿಗಾಲದಲ್ಲಿ ಸಾಗುವಾಡುವದರಿಂದ ಭೂಮಿಯು ಯೋಗ್ಯ ವೇಳೆಯಲ್ಲಿ ಹವೆಗೆ ತೆರೆದಿಡಲ್ಪಟ್ಟದ್ದಾಗಿಯೂ ಶಿಥಿಲವಾಗಿಯೂ ಆಗುತ್ತದೆ. ಆದ್ದರಿಂದ ಹವೆಯ ವ್ಯಾಪಾರವು ಚನ್ನಾಗಿ ಸಾಗುವದಕ್ಕೆ ಅನುಕೂಲವಾಗುತ್ತದೆ. ಇದರಿಂದ ಭೂಮಿಯೊಳಗಿನ ಸಚೇತನ ದ್ರವದ ವಿನಾಶವಾಗಿ ನಿಷ್ಫಲದ್ರವ್ಯಗಳು ಜಾಗೃತವಾಗುತ್ತವೆ ಮತ್ತು ಭೂಮಿಯು ಹಗುರಾಗಿ ಬೀಜಗಳು ಅಂಕುರಿಸಲಿಕೆ ಅನುಕೂಲವಾಗುತ್ತದೆ. ಭೂಮಿಯು ಸಾಧಾರಣ ಹಿಗಿದ ಸ್ಥಿತಿಯಲ್ಲಿ ಬ್ಯಾಗ್ಗೆ ಸಾಗುವಾಡಲ್ಪಡುವದರಿಂದ ಅದು ಚನ್ನಾಗಿ ಸಾಗುವಾಗುತ್ತದೆ. ಹಾಗೂ ಅದಕ್ಕೆ ವಿಶೇಷ ಶ್ರಮವೂ ಬೇಕಾಗುವದಿಲ್ಲ. ಚಳಿಗಾಲದಲ್ಲಿ ಗಟ್ಟಿಯಾದ ಮಣ್ಣಿನ ಕೊಯಿಲು ಭೂಮಿಯಲ್ಲಿ ಸಾಗುವಳಿಯನ್ನು ಅದಪ್ಪು ಗಡಿಬಿಡಿಯಿಂದ ಮಾಡುತ್ತಾರೆ. ಯಾಕಂದರೆ ಚಳಿಗಾಲದಲ್ಲಿ ಆರಂಭಕ್ಕೆ ಅದನ್ನು ಸಾಗುವಾಡದಿದ್ದರೆ ವಸಂತಕಾಲದಲ್ಲಿ ಅದು ಬಹ

ಳ ಗಟ್ಟಯಾಗುವದರಿಂದ ಅದರಲ್ಲಿ ಚಳೋ ಬೆಳೆಯನ್ನು
ತೆಗೆದುಕೊಳ್ಳಲಿಕ್ಕೆ ಅಸಾಧ್ಯವಾಗುತ್ತದೆ. ಇದೇ ಕಾರಣ
ದಿಂದ ಗಟ್ಟಯಾದ ಮಣ್ಣಿನ ಭೂಮಿಯನ್ನು ಚಳಿಗಾಲದಲ್ಲಿ
ಯೇ ಸಾಗುಮಾಡುವದು ಒಳ್ಳೇದು. ಮತ್ತು ಇಂತಹ ಭೂ
ಮಿಯಲ್ಲಿಯೇ ಚಳಿಗಾಲದಲ್ಲಿ ಸಾಗು ಮಾಡುವ ಪದ್ಧತಿಯು
ಪರಿಣಾಮಗಳು ಚನ್ನಾಗಿ ಕಂಡು ಬರುತ್ತವೆ. ಸುಗ್ಗಿಯ
ನಂತರ ಚಳಿಗಾಲದಲ್ಲಿ ವಿಶೇಷ ಕೆಲಸವೇನೂ ಇರುವದಿಲ್ಲ.
ಆದರಿಂದ ಭೂಮಿಯನ್ನು ಚನ್ನಾಗಿ ಸಾಗುಮಾಡಲಿಕ್ಕೆ ಬರು
ತ್ತದೆ. ಆದರೆ ವಸಂತಕಾಲದಲ್ಲಿ ಹೀಗಾಗುವದಿಲ್ಲ. ಇದ
ಲ್ಲದೆ ಒಕ್ಕಲಿಗನು ಈ ಕಾಲದಲ್ಲಿ ವಿಶೇಷ ಹವೆಯ
ಮೇಲೂ ಅವಲಂಬಿಸಿ ಕೂಡುವಂತೆ ಇರುವದಿಲ್ಲ
ವಸಂತಕಾಲದಲ್ಲಿ ಭೂಮಿಗೆ ತುಸು ಸಾಗುವಳಿ ಬೇಕಾಗು
ವದರಿಂದ ಅವನಿಗೆ ಬೆಳೆಯಾದರೂ ತೀವ್ರವೇ ದೊರೆಯು
ಬಹುದು. ಚಳಿಗಾಲದಲ್ಲಿ ಕಳೆಗಳೂ ಅವುಗಳ ಬೀಜಗ
ಳೂ ಹುಳಗಳೂ ಹಿಮುಕ್ಕೂ ಪಕ್ಷಿಗಳಿಗೂ ತೆರೆದಿಡಲ್ಪಟ್ಟ
ರುತ್ತವೆ. ಹಿಮದಲ್ಲಿ ಪಕ್ಷಿಗಳ ತತ್ತಿಗಳನ್ನು ನಾಶಮಾಡು
ವ ಶಕ್ತಿಯು ತೀರ ಕಡಿಮೆಯಿರುತ್ತದೆಂಬುವ ಸಂಗತಿಯು
ನ್ನು ನೆನಪಿಡತಕ್ಕದ್ದು. ಹಿಂದೆ ಹೇಳಿದಂತೆ ಕಾವಲಿಗಳನ್ನು
ಸಾಗುಮಾಡುವ ಪದ್ಧತಿಗೆ ಚಳಿಗಾಲವು ಬಹಳೇ ಅನುಕೂ
ಲವಾದ ವೇಳೆಯಾಗಿರುತ್ತದೆ. ಬೇರುಗಳಿಗಂತೂ ಚಳ
ಗಾಲದಲ್ಲಿ ಸಾಗುಮಾಡುವ ಪದ್ಧತಿಯು ಬಹಳೇ ಹಿತಕರ
ವಾದದ್ದಲ್ಲದೆ ಅತಿಶಯ ಅವಶ್ಯಕವಾದದ್ದೂ ಇರುತ್ತದೆ
ಈ ಬೆಳೆಗಳಿಗೆ ಬಹಳ ವನಸ್ಪತಿ ಆಹಾರವುಳ್ಳ ಹಸನಾದ
ಮತ್ತು ಚೆಂದವಾದ ಬೀಜಗಳ ಮಡಿಯಿರಬೇಕು. ಕೇವಲ
ವಸಂತಕಾಲದಲ್ಲಿಯೇ ಸಾಗುಮಾಡುವದರಿಂದ ಈ ಸ್ಥಿತಿ
ತಿಗಳೆಲ್ಲ ನಮಗೆ ದೊರೆಯುವದಿಲ್ಲ. ಗೋದಿಯ ಕೊಯಿ
ಲುಳ್ಳ ಗಟ್ಟಯಾದ ಭೂಮಿಯಲ್ಲಿ ಚಳಿಗಾಲದಲ್ಲಿ ಸಾಗುಮಾ
ಡುವ ಪದ್ಧತಿಯ ಉದಾಹರಣೆಯನ್ನು ತೆಗೆದುಕೊಳ್ಳುವಾ.

೧ ಮೊದಲು ಸಾಗುಮಾಡತಕ್ಕದ್ದು. ಆ ಮೇಲೆ ಮೊ
ಳಲಿನ ಸಾಲಿನಲ್ಲಿಯೇ ಹುತ್ತು ಪುನಃ ಸಾಗುಮಾಡತಕ್ಕದ್ದು

ಅಥವಾ ಕೊಯ್ಯುವ ರಂಟೆಯಿಂದ ರಂಟೆ ಹೊಡೆಯುತಕ್ಕದ್ದು. ಕಳೆಗಳುಳ್ಳ ತಳಭೂಮಿಯು ಮೊದಲನೇ ಅಥವಾ ಎರಡು ಇಂಚಿನ ಭೂಮಿಯನ್ನು ಬೇರೆ ಮಾಡುವದೇ ಇದರ ಉದ್ದೇಶವಿರುತ್ತದೆ. ಇದನ್ನು ಗಟ್ಟಿಯಾದ ಮತ್ತು ಅಗಲಾದ ಕೊಯಿತದಿಂದಾಗಲೀ ಒಕ್ಕಲಿಗನು ತಾನು ಸ್ವತಃವಾಗಲೀ ಮಾಡತಕ್ಕದ್ದು. ಸುಗ್ಗಿಯ ನಂತರ ಧಾನ್ಯಗಳ ಬೆಳೆಯನೆಳಲು ಮೇಲೆ ಬೀಳುವದರಿಂದ ಕಳೆಗಳ ಬಲವೆಲ್ಲ ಹೊರಟು ಹೋಗುತ್ತದೆ.

೨ ಹಿಂದಕ್ಕೆ ತಿರುವಿ ಹಾಕಲ್ಪಟ್ಟ ಭೂಮಿಯ ಬುಡಕ್ಕೆ ಹೋಗುವಂತೆ ಗುದ್ದಲಿಯನ್ನಾಡಿಸಬೇಕು. ಆ ಮೇಲೆ ಬಿಮ್ಮಿ ಉರುಳಿಸಿ ಬುಡವನ್ನು ಮೇಲಕ್ಕೆ ತರುವಂತೆ ೩ ಅಥವಾ ೪ ಸಾರಿ ಬೇರೆ ಬೇರೆ ಕಡೆಯಲ್ಲಿ ಅಗಿಯುತಕ್ಕದ್ದು. ಆ ಮೇಲೆ ಬುಡದಿಂದಲೂ ಬೇರೆ ಕಳೆಗಳಿಂದಲೂ ಭೂಮಿಯು ಬೇರೆ ಆಗುವಂತೆ ಎರಡಾವರ್ತಿ ಸರಪಳಿಯ ಗುದ್ದಲಿಯನ್ನು ಪಯೋಗಿಸಬೇಕು.

೩ ಕಳೆಗಳನ್ನು ಒಟ್ಟುಗೂಡಿಸಿ ಅವುಗಳನ್ನು ಸುಡತಕ್ಕದ್ದು, ಮತ್ತು ಆ ಬೂದಿಯನ್ನು ನೆಲದ ಮೇಲೆ ಹರವಬೇಕು. ಈ ಮೂರು ವ್ಯಾಪಾರಗಳು ಭೂಮಿಯನ್ನು ಹಸನು ಮಾಡುವ ಪದ್ಧತಿಯಲ್ಲಿ ಬರುತ್ತವೆ. ಆದರೆ ಭೂಮಿಯು ಕೆಟ್ಟದಿದ್ದರೆ ಹುಸು ಹೆಚ್ಚು ಕಡಿಮೆ ಮಾಡಿ ಈ ವ್ಯಾಪಾರಗಳನ್ನು ಮೇಲಿಂದ ಮೇಲೆ ಮಾಡಬೇಕು.

೪ ಆ ಮೇಲೆ ಕಿರಿದಾಗಿ ರಂಟೆಹೊಡಿಯುತಕ್ಕದ್ದು, ಎರಡು ಮೂರಾವರ್ತಿ ಎಳೆಯಬೇಕು. ಆ ಮೇಲೆ ಉರುಳಿಸಿ ಮೂರು ನಾಲ್ಕು ಸಾರೆ ಅಗಿದು ಎರಡುಸಾರೆ ಸರಪಳಿಯ ಗುದ್ದಲಿಯನ್ನು ಉಪಯೋಗಿಸಬೇಕು. ಆ ನಂತರ ಮೊದಲಿನಂತೆ ಕಳೆಗಳನ್ನು ಒಟ್ಟುಗೂಡಿಸಿ ಸುಟ್ಟು ಅದರ ಬೂದಿಯನ್ನು ನೆಲದ ಮೇಲೆ ಹರವಬೇಕು. ಈ ಕೃತಿಗಳಿಂದ ಭೂಮಿಯು ಸಾಕಷ್ಟು ಹಸನಾಗುತ್ತದೆ.

೫ ಆ ಮೇಲೆ ಗೊಬ್ಬರವನ್ನು ಬಂಡಿಗಟ್ಟಲೆ ತಂದು ಹೊಲದಲ್ಲಿ ಹಾಕತಕ್ಕದ್ದು.

ಆ ಮೇಲೆ ಗೊಬ್ಬರವನ್ನು ಖೋಲವಾದ ಚಳಿಗಾಲ
ಲ್ಲಿ ಉಪಯೋಗಿಸುವ ನೇಗಿಲಿನಿಂದ ಗೊಬ್ಬರವನ್ನು ಹರ
ಬೇಕು.

ಚಳಿಗಾಲದಲ್ಲಿಬು ಸಾಗುವಳಿಯು ಎಪ್ಪು ಇರಬೇಕೆಂಬು
ದೂ ಯಾವ ಪ್ರಕಾರದ್ದಿರಬೇಕೆಂಬುವದೂ ಭೂಮಿಯು
ಣದ ಮೇಲೆ ಮತ್ತು ಹವೆಯಮೇಲೆ ಹಾಗೂ ಬೆಳೆಯು
ಲೆ ಅವಲಂಬಿಸಿ ಇರುತ್ತದೆ.

ಭೂಮಿಗಳ ಬೆಳಗಳ ಸ್ಥಿತಿಗಳಿಗೆ ಯೋಗ್ಯವಾದ ಸಾಗು
ಳಿಯ ಪದ್ಧತಿಗಳು.

ಬೇರೆ ಬೇರೆ ಋತುಗಳಲ್ಲಿ ಬೇರೆ ಬೇರೆ ಭೂಮಿಗಳಲ್ಲಿ
ೀರೆ ಬೇರೆ ಬೆಳೆಗಳನ್ನು ಬೆಳಕೊಳ್ಳುವ ಪದ್ಧತಿಗಳು ಬೇರೆ
ೀರೆ ಇರುತ್ತವೆ. ಉದಾಹರಣಾರ್ಥವಾಗಿ ಹಗುರು
ೂಮಿಯಲ್ಲಿ ಸಾಗುಮಾಡುವ ಪದ್ಧತಿಗಳನ್ನು ಜಡ ಭೂಮಿ
ುಲ್ಲಿ ಉಪಯೋಗಿಸಿದರೆ ಚಲೋ ಪರಿಣಾಮವಾಗುವದಿ
. ಅದರಂತೆ ಜಡ ಭೂಮಿಯೊಳಗಿನ ಪದ್ಧತಿಗಳನ್ನು
ಗುರು ಭೂಮಿಯಲ್ಲಿ ಉಪಯೋಗಿಸಿದರೆ ಹಿತವಾಗುವ
ಲ್ಲ, ಕ್ಷಾಳಿನ ಬೆಳೆಗಳನ್ನು ಬೆಳಕೊಳ್ಳುವ ಪದ್ಧತಿಯು
ಂದ ಮೂಲಗಳನ್ನು ಬೆಳೆಕೊಳ್ಳುವ ಪದ್ಧತಿಯಿಂದ ಬಿನ್ನ
ಾಗಿರುತ್ತದೆ. ಯಾಕಂದರೆ ಈ ಬೆಳೆಗಳು ಬೇರೆ ಬೇರೆ
ೀತಿಯಿಂದ ಬೆಳೆಯುವದರಿಂದ ಅವಕ್ಕೆ ಕೆಲವಂಶ ಬೇರೆ
ೀರೆ ಆಹಾರವೂ ಬೇರೆ ಬೇರೆ ರೀತಿಯಿಂದ ಸಾಗು ಮಾಡು
ಪದ್ಧತಿಗಳೂ ಬೇಕಾಗುತ್ತವೆ. ಇದಲ್ಲದೆ ಈ ಬೆಳೆಗಳು
ಂದೇ ವೇಳೆಗೆ ಬರುವದಿಲ್ಲ.

ಬೆಳೆಗಳ ಸ್ಥಿತಿಗಳಿಗೆ ಯೋಗ್ಯವಾಗಿ ಸಾಗು ಮಾಡುವ
ದ್ಧತಿಗಳು.

೧ ಕಂದಮೂಲಗಳ ಬೆಳೆಯು ಪುಷ್ಟಿಯುನ್ನಂಟು ಮಾಡು
ಬೇರುಗಳಗೋಸ್ಕರ ಈ ಬೆಳೆಗಳನ್ನು ತೆಗೆದುಕೊಳ್ಳು
ತ್ತಾರೆ. ಈ ಬೆಳೆಗಳಲ್ಲಿ ಟರ್ನಿಪ್ಪ ಗಜ್ಜರಿ ಮುಂತಾದವು
ಳು ಸವೊವೇಶವಾಗುತ್ತವೆ. ವಾಸ್ತವಿಕ ರೀತಿಯಿಂದ
ಟಾಟಯು ಬೇರು ಆಗಿರದಿದ್ದರೂ ಅದನ್ನು ಬೇರುಗಳಲ್ಲಿ
ವೊವೇಶಮಾಡಬಹುದು.

ಇವುಗಳ ಬೆಳೆಗೆ ಭೂಮಿಯು ಹಸನಾಗಿಯೂ ಸಣ್ಣ
ಸುಣ್ಣ ಪುಡಿಯಾಗಿಯೂ ಇರಬೇಕು. ಇದಲ್ಲದೆ ಬೇಕಾ
ದಾಗ್ಯೆ ಶಿಗುವ ವನಸ್ಪತಿ ಆಹಾರವಾದರೂ ಬಹಳೇ ಬೇಕಾ
ಗುತ್ತದೆ. ಹಗುರು ಭೂಮಿಯು ಇವುಗಳ ಬೆಳವಣಿಗೆ
ಅನುಕೂಲವಾಗಿರುತ್ತದೆ. ಇಲ್ಲಿ ಕಾರಿಗಳು ಇವನ್ನು ಎ
ಷ್ಟೇ ಸಾರಿ ತಿಂದು ಬಿಡುತ್ತವೆ, ಬೆಳೆಯುವದಕ್ಕಿಂತ ಮೊ
ದಲು ಇವುಗಳನ್ನು ಹ್ಯಾಗೆ ಸಾಗುಮಾಡಬೇಕೆಂಬುವದನ್ನು
ಹಿಂದೆ ಹೇಳಿದ್ದೇವೆ. ಉಳಿದದ್ದನ್ನೆಲ್ಲ ನಾಲ್ಕು ಭಾಗವಾಗಿ
ಮಾಡಬಹುದು. ಜಡ ಭೂಮಿಯಲ್ಲಿಯ ಕೆಟ್ಟ ಕೋಯಿ
ಲುಗಳಲ್ಲಿ ಬೆಳೆದ ಬೇರುಗಳು ಹಗುರು ಭೂಮಿಯಲ್ಲಿ
ಚಲೋ ಕೊಯಿಲಿನಲ್ಲಿ ಬೆಳೆದ ಬೇರುಗಳು ಜಡ ಭೂಮಿ
ಯಲ್ಲಿ ಚಳಿಗಾಲದಲ್ಲಿ ಭೂಮಿಯನ್ನು ಹೇಗೆ ಸಾಗುಮಾಡಬೇ
ಕೆಂಬುವದನ್ನು ಮೊದಲೇ ಹೇಳಿದ್ದೇವೆ ವಸಂತಕಾಲದಲ್ಲಿ
ಹರಗುವದರಿಂದಲೂ ಉರುಳಿಸುವದರಿಂದಲೂ ಆಗಿಯುವ
ದರಿಂದಲೂ ಭೂಮಿಯು ಚನ್ನಾಗಿ ಸಾಗು ಆಗುತ್ತದೆ. ಬೀ
ಜಗಳನ್ನು ದಿನ್ನಿಯಿ ಪದ್ಧತಿಯಿಂದಾಗಲೀ ಸಪಾಟು ಪದ್ಧತಿ
ಯಿಂದಾಗಲೀ ಬಿತ್ತುತ್ತಾರೆ. ಗಟ್ಟಿ ಭೂಮಿಯಲ್ಲಿಯ ಬೇರು
ದಿನ್ನಿಗೋಸ್ಕರ ಚಳಿಗಾಲದಲ್ಲಿ ಸಾಗುಮಾಡುವ ಪದ್ಧತಿಯನ್ನು
ಉಪಯೋಗಿಸುತ್ತಾರೆ. ಚಳಿಗಾಳದಲ್ಲಿ ಬೇರುಗಳಿಗಾಗಲೀ
ಹಗುರು ಭೂಮಿಗಾಗಲೀ ಸಗಣಿಯನ್ನು ಹಾಕಬಾರದು.
ಚಂದವಾದ, ವಿಮಲವಾದ ಹಸಿಯಾದ, ನಿರ್ಮಲವಾದ
ಖೊಲವಾದ ಬೀಹಗಳ ಮಡಿಗಳನ್ನು ದೊರಕಿಸುವದೇ
ಚಳಿಗಾಲದಲ್ಲಿ ಸಾಗುಮಾಡುವ ಪದ್ಧತಿಯ ಉದ್ದೇಶವಾಗಿ
ರುತ್ತದೆ.

DEPARTMENTAL NOTICE.

ನೋಟೀಸುಗಳು.

ನಂಬರ ೯೮೪.

ಮೆಹಬೂನ ಮಾರ್ಸಡೆನ್ನೆ ಸಾಹೇಬರು ಮಾಡಿದ ಹಿಂ
ದುಸ್ತಾನದ ಇತಿಹಾಸದ ಕನ್ನಡ ಭಾಷಾಂತರವನ್ನು ಬಿಡ

ನ್ನ ಆದನೇ ಏಳನೇ ಇಯತ್ತೆಗಳಲ್ಲಿ ಕಲಿಸಬಹುದು. ಈ ಪುಸ್ತಕವು ಇತಿಹಾಸದ ಕ್ಲಾಸಪುಸ್ತಕವೆಂದು ನಿರ್ಣಯಿಸಲ್ಪಟ್ಟಿಗೆ. ಆದರೆ ಬೇಕಾದವರು ವೆಹರ್ಬಾನ್ ಹಂಟರ ಸ್ಹೇಬರ ಇತಿಹಾಸವನ್ನು ಸಹ ಉಪಯೋಗಿಸಲಿಕ್ಕೆ ಅಡ್ಡಿಯುಂಟೆಂದು ತಿಳಿಯಲಾಗದು, ತಿಳಿಯುವದು.

ಕಾರೀಫು ತಿಸೇ ದಿಶಂಬರ ೧೯೦೫. } E. GILES, Director P. I. Bombay.

II

ಈ ನೋಟೀಸಿನಿಂದ ತಿಳಿಸುವದೇನಂದರೆ, ಕನ್ನಡದಲ್ಲಿ ಆಗುವ ವರ್ನಾಯಿಲರುಗಳ ಉಮೇದವಾರರ ಪರೀಕ್ಷೆಯು ೧೯೦೬ನೇ ಇಸವಿಯ ಫೆಬ್ರುವರಿ ತಿಂಗಳ ಕಾಳಿಪತ್ರಿಕೆಯ ಪಿ-೭೦ ಪುಟಗಳಲ್ಲಿ ಪ್ರಸಿದ್ಧಿಸಿದ ನಿಯಮಗಳ ಪ್ರಕಾರ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ೧೯೦೫ ಡಿಶೆಂಬರ ೧೧ನೇ ತಾರೀಖು ಸೋಮವಾರ ದಿವಸ ಕೆಳಗೆ ಸಹಿ ಮಾಡಿದವರಿಂದ ತೆಗದುಕೊಳ್ಳಲ್ಪಡುವದು. ಮೊದಲನೇ ಶಂರುಪಾಯಿದ್ದು ಎರಡನೇದು ೭೦ ರುಪಾಯಿದ್ದು ಈ ಪ್ರಕಾರ ಈ ಪರೀಕ್ಷೆಗೆ ೭೦ ಇನಾಮುಗಳಿರುವವ್ರ. ಈ ಪರೀಕ್ಷೆಗೆ ಉಮೇದವಾರರಾಗಲಪೇಕ್ಷಿಸುವವರು ತಮ್ಮ ಅರ್ಜಿಗಳನ್ನು ಬಹಳ ತಡವಂದರೆ ೧೯೦೬ ನವಂಬರ ೭೦ನೇ ತಾರೀಖಿನ ದಿವಸವಾಗೆಲೀ ಅದಕ್ಕೂ ಮೊದಲಾಗಲೀ ಕೆಳಗೆ ಸಹಿ ಮಾಡಿದವರ ಕಡೆಗೆ ಕಳುಹಿಸತಕ್ಕದ್ದು. ಪರೀಕ್ಷೆಯು ಬೆಳಿಗ್ಗೆ ಮದ್ರಾಸ ಟಾಯಿಮು ಪ್ರಕಾರ ೧೧ ಘಂಟೆಗೆ ಸುರುವು ಆಗುವದು.

ಧಾರವಾಡ ಶಾ. ಸಿ-೧೯೦೬. } B. R. Sahasrabudhe, ಎ ಇ. ದಕ್ಷಿಣಭಾಗ.

ವರ್ನಕ್ಯುಲರ್ ಪರೀಕ್ಷೆಯ ಪ್ರಶ್ನೆಗಳು.

೧. (ಅ) ಅಲಂಕಾರ, ಕವಿಸಮಯ, ಕಾಂತಿಕೈಶಿಕೀವೃತ್ತಿ ಚಂಪುಪ್ರಬಂಧಗಳ ಲಕ್ಷಣಗಳನ್ನು ವಿವರಿಸಿ.

(ಬ) ಅನನ್ವಯ, ಉಪಮೇಯೋಪಮೆಗಳಿಗೂ, ಅರ್ಥಾವೃತ್ತಿದೀಪಕ, ಪ್ರತಿವಸ್ತೂಪಮೆಗಳಿಗೂ, ದೃಷ್ಟಾಂತ ಪ್ರತಿವಸ್ತೂಪಮೆಗಳಿಗೂ, ಛೇಕಾನುಪ್ರಾಸದ್ವಿಪ್ರಾಸಗಳಿಗೂ ವೈಲಕ್ಷಣ್ಯವೇನು?

೨. ಉತ್ತಮ ಕಾವ್ಯ ಮೊಹಾ ಕಾವ್ಯಗಳಿಗೆ ವ್ಯತ್ಯಾಸವಿದೆಯೇ? ಸಕಾರಣವಾದ ಉತ್ತರವನ್ನು ಬರೆಯಬೇಕು. ರಾಜಶೇಖರ, ಸೋಮೇಶ್ವರ ಶತಕಗಳೂ ಯಾವದರಲ್ಲಿ ಸೇರುತ್ತವೆ.

೩. ಶಬ್ದಗುಣಗಳನ್ನು ಶಬ್ದಾಲಂಕಾರದಲ್ಲಿಯೂ, ಅರ್ಥಗುಣಗಳನ್ನು ಅರ್ಥಾಲಂಕಾರದಲ್ಲಿಯೂ ಸೇರಿರಬಹುದೇ? ಕಾರಣಪೂರ್ವಕವಾಗಿ ಹೇಳಿರಿ.

೪. (ಅ) ಎನಗಾಸೆದೋರಿಬಿಸಸಿತ।
ಮೆನಿಸುವ ನಿಜಹಾರಹಾರಲತೆಯಿಂದಂ ಹಂ ॥
ಸನವೊಲ್ಮಾನಸ ಸಂಭವ।
ಮೆನಿಪಮದೀಯಾಭಿಮಾನಮುಂ ಕಟ್ಟೊಯಿತ್ತಾ ॥

(ಬ) ಕೆಡೆದಪನಿರಿಯದೆ ಸೆಡೆದರೊ।
ಳೊಡರದೆ ತೊಡರ್ದವರೊಳಾಬಿರ್ದಲಗಂಕೊಳ್ಳ॥
ಪೊಡಕ್ಕಲಿಸೆನುತ್ತ ವೊಬ್ಬರ್ಂ।
ಕಡುಗಲಿಪಗೆ ವಡೆಯನಿರ್ಪುತವಿಸಿದವಾಗಳ್ ॥

ಮೇಲಿನ ಪದ್ಯಗಳಲ್ಲಿ ಅಭಿವ್ಯಜ್ಯಮಾನವಾಗುವ ರಸಗಳಾವುವು. ಸಾಧ್ಯವಾದರೆ ಲಕ್ಷಣ ಸಮನ್ವಯ ಮಾಡು.

೫. (ಅ) ನಿಜಕರದಿಂದೆ ರಾಜವಸುವೆಲ್ಲವನೊಯ್ಯನೆ ಕಳ್ದು ನೀಲಸೀ।
ರಜನಿಯ ಬಾಯಮುದ್ರಿಸಿ ಪಿಸುಣ್ಗೆದಪ್ಪಳಿನುತ್ತೆ ಮುತ್ತೆ ನೀ।
ರಜನಿಯಳೊಳ್ದು ಪುಪ್ಪವತಿಯೊಳ್ ದಿವದೊಳ್ಪರೆದಿಂತು ಸತ್ಪಥ।
ತ್ಯಜನವನಾಳ್ದುಬಿಳ್ದಳಿದ ಸೂರ್ಯನದುರ್ಯಶವು ಪ್ಪುದೀತಮುಂ ॥ ೧॥

(ಬ) ಅರಲುಣಿಯಾಹೂವಿನಬಂಡನುಂಡೂಡೆ।

ಮರಣಮುವಕೆ ನಿಶ್ಚಯಮುದರಿಂದಾ ।
ಗರಳಮನಿದರಿಂಕಿಡಿಸೆನೆನುತೆ ಬನಸಿರಿ ಚಂಪಕದ॥
ಬಿರಿವೊಗ್ಗೆಯ ತುದಿಗವ್ಯತದ ಘಟಕೆಯ ।
ನಿಟಿಸಿರವೊಲು ಮುತ್ತಿನ ಮೂಗುತಿಯಂ ।
ವಿರಚನೆಗೆಯ್ದಳದೋರ್ವಳ್ ತರುಣಿಯನಾಸಾ
ಮುಕುಳದೊಳು ॥ ೦ ॥

ಮೇಲಣ ಪದ್ಯಗಳ ವ್ಯಾಖ್ಯಾನವನ್ನು ಬರೆಯುವಾಗ ಕವಿಸಮಯ ವ್ಯಂಗ್ಯಾರ್ಥಗಳಿದ್ದರೆ ಸ್ಪಷ್ಟವಾಗಿ ವಿವರಿಸು.)

೬ (ಅ) ಘನನಾಮಂ ಕೇರ್ನಗೆಗೆಡೆಯಿನಿಸಿತ್ತ ಕಟಾಕ್ಷ
ಮ್ಮನೀಮಿ
ತ್ರನತೇಜಕ್ಕಡೆನಾದೆಂ ದ್ವಿಜಗತಿಗೆಡಿಸಿರ್ದಂಜಗ
ತ್ಪಂಕಮೆನ್ನಿಂ ।
ಜನಿಸಿತ್ತಾರಾಜಹಂಸಾಹಿತನೆನಿಗೆನೆಂದುಂ ಜಡ
ಗಾ್ರಹಿಯಾನಾ ।
ದೆನೆನುತ್ತಂ ಚಿಂತೆಯಿಂಬೆಳ್ಪಡರ್ದುಗೆನೆತದಬ್ಜಂ
ಶರನ್ಮೇಘಮಿರ್ದಂ ॥

(ಬ) ಸುರಸುಂದರೀಕದಂಬಕ ।
ಬರೀಭರಾಂಚಿತಸುಗಂಧಲುಬ್ಧ ಮಧುಕರೀ ॥
ಸುರುತಿಯು ತಂಗಿರಿ ತನಯೆಯು ।
ಚರಣಾಬ್ಜಂ ದೂರಗೆಯ್ದೆ ದುರಿವನೆಲ್ಲಂ ॥

(ಕ) ಜಲನಿಧಿಜಲಮಂ ಜಲಭೃ ।
ತ್ಕುಲಕ್ಕೆನಲಿದಿತ್ತು ದತ್ತಮಿತ್ತಂನದೀನಿ ॥
ರ್ಮಲಸಲಿಲಂ ದೊರೆದುದು ಗಡ ।
ನೆಲದೊಳ್ಕೊಟ್ಟಂಗೆ ಬಡತನಂಬಂದಪ್ರದೇ ॥

ಮೇಲಿನ ಪದ್ಯಗಳಲ್ಲಿರುವ ಶಬ್ದಾರ್ಥಾಲಂಕಾರಗಳನ್ನು ಲಕ್ಷಣಸಮನ್ವಯ ಮಾಡಿರಿ.

೦ನೇ ಪದ್ಯದಲ್ಲಿ ರೇಖಾಂಕಿತವಾದೆಡೆಯಲ್ಲಿ ಉಪಮಿತ ಸಮಾಸದ್ದಿಂದು ಉಪಮಾಲಂಕಾರವನ್ನು ಯಾಕೆ ಹೇಳಬಾರದು ಸ್ಪಷ್ಟವಾಗಿ ತಿಳಿಸು.

೭. (ಅ) ನಳಿನೋತ್ಪಲಾಳಿರುಚಿಗಳ ।
ನಳಕಾನನನಯನಯುಗಳದಿಂದಮಿಗೆಲಿಲ್ ॥

(ಬ) ಮುದದಲ್ಲಿಯೆಬಗೆದು ನನವನನುದಿನವೇದುಂ !
(ಕ) ಮನದೆ ನೆನದವರ ಕಿಡುಗುಂಜೆನಾಭಿಪಾ ನಿನ್ನ ಪಾ
ದಸಿಚಯಾಂಗಾಣಮುಂ !

ಈ ಪದ್ಯಾಂಕಗಳಲ್ಲಿರುವ ಕಾವ್ಯದೋಷಗಳೇನು ಸಂಧ್ಯಾವಂದರೆ ತಿದ್ದಿ ಬರೆಯಿರಿ.

೪. (ಅ) ಮಯೂರಧ್ವಜ, ಚಂದ್ರಹಾಸ, ಇವರ ಚರಿತ್ರೆಗಳಿಂದ ನಮಗಾವ ನೀತಿಗಳು ತಿಳಿಯುವವು ?

(ಬ) ಜೈಮಿನಿಭಾರತ, ವೀರನಾರಾಯಣನ ಭಾರತಕ್ಕೂ ವರ್ಣನೆ ಮುಂತಾದವುಗಳಲ್ಲಿರುವ ಸಾಮ್ಯವೈಪರೀತ್ಯಗಳೇನು ?

೯. (ಅ) ರಾಜಶೇಖರ, ಬಸವಪುರಾಣ ಇವುಗಳ ಮೂಲಗ್ರಂಥಗಳು ಯಾವ ಭಾಷೆಯಲ್ಲಿ ಯಾರಿಂದ ರಚಿತವಾಗಿದ್ದವು, ಅವನ್ನು ಕನ್ನಡಿಸಿದವರಾರು ?

(ಬ) ಬಸವಪುರಾಣ, ಜನ್ನಬಸವಪುರಾಣಗಳನ್ನು ರಚಿಸಿದವರ ದೇಶಕಾಲಾದಿಗಳನ್ನು ಅವರ ಗ್ರಂಥಗಳಿಂದ ತಿಳಿದ ಮಟ್ಟಿಗೆ ಹೇಳಿರಿ.

(ಕ) ಕನ್ನಡ ಭಾಷೆಯ ಲಕ್ಷಣ (ಕೋಶಗಳ ವಿನಹ) ಗಳನ್ನು ಬರೆದ ಲಿಂಗವಂತ ಕವಿಗಳ ಹೆಸರನ್ನು ಹೇಳಿರಿ.

CORRESPONDENCE.

ಪತ್ರವ್ಯವಹಾರ.

(ಮುಂದೆ ಸಾಗಿದ್ದು.)

ಮುಂಬಯಿಂದ ಹೊರಟ ಹಡಗವು ದಿಕ್ಕು ಬದಲು ಮಾಡದೆ ನೆಟ್ಟಗೆ ಪಶ್ಚಿಮಕ್ಕೆ ಅಯ್ದುವರೆ ದಿವಸ ಏಕಪ್ರಕಾರವಾಗಿ ಹೋಗಲು ಒನೇ ದಿವಸ ಸಾಯಂಕಾಲಕ್ಕೆ ಏಡನ್ನ ಬಂದರವು ಕಾಣಹತ್ತಿತು. ಏಡನ್ನ ಬಂದರವು ಬಹು ಸುಂದರವಾದದ್ದಿರುತ್ತದೆ. ದೂರದಿಂದಲೇ ಊರೊಳಗಿನ ೪೫ ಅಂತಸ್ತಿನ ಮನೆಗಳು ಕಾಣಹತ್ತುವವು. ಬಂದರದಲ್ಲಿ ಇಳಿದ ಕೂಡಲೆ ಮೊದಲು ನಮ್ಮ ದೇಹಾರೋಗ್ಯತೆಯ ಪರೀಕ್ಷೆ

ನಮಿತು ಒಬ್ಬ ಯುರೋಪಿಯನ್ನ ಡಾಕ್ಟರನು ಪರೀಕ್ಷೆ
ಾಡಿ ತುಸು ಸಂಶಯ ಕಂಡವನನ್ನು ಸಮುದ್ರದಲ್ಲಿ ಬಂದು
ತ್ತರವಾದ ನಡುಗಡ್ಡೆಯಂಥ ಪ್ರದೇಶದ ಮೇಲೆ ಇದ್ದ ಕ್ವಾ
ಟಾಯಿನಲ್ಲಿ ಹೋಗಶಿಕ್ಕೆ ಅಪ್ಪಣೆ ಕೊಡುತ್ತಿದ್ದನು.
ವರ ಅನುಗ್ರಹದಿಂದ ನಮಗೆ ಅಂಥ ಪ್ರಸಂಗವು ಬರ
ಲ್ಲಿ.

ಏಡನ್ನ ಬಂದರದಲ್ಲಿ ನಾವು ನಾಲ್ಕು ದಿವಸ ಇದ್ದೆವು ಅಲ್ಲಿ
ಒಬ್ಬ ಬ್ರಾಹ್ಮಣ ತಾರಮಾಸ್ತರನು ನಮಗೆ ಬಹಳ
ದರವಾಡಿದನು. ಏಡನ್ನ ಪಟ್ಟಣವು ಇಂಗ್ಲೀಷರ ಸ್ವಾಧೀನ
ಲ್ಲಿರುತ್ತದೆ ಈ ಪಟ್ಟಣದಲ್ಲಿ ಮೂರುಭಾಗಗಳಿರುತ್ತವೆ.
ಮೊದಲನೇದು ಶೇಕಉಸ್ಮಾನ. ಎರಡನೇದು ಕ್ರಾಂಪ. ಮೂರನೇ
ು ಇಂಗ್ಲಾಜಮತ ಇವುಗಳಲ್ಲಿ ಶೇಕ ಉಸ್ಮಾನವೆಂಬ
ಾಗವು ಮುಖ್ಯವಾದದ್ದು. ಇಲ್ಲಿ ಕೋಟ ಇರುತ್ತದೆ ಊರ
ೊಳಗೆ ಎಲ್ಲ ಕಡೆಗೆ ಕಲ್ಲಿನ ಅಂತಸ್ತಿನ ಮನೆಗಳಿರುತ್ತವೆ.
ನೇ ಭಾಗದಲ್ಲಿ ಮಳೆಯಾಗುವದಿಲ್ಲ. ಈ ಪಟ್ಟಣದಲ್ಲಿ
ುಡಿಯುವ ನೀರು ಇಲ್ಲ. ಸಮುದ್ರದನೀರು ಯಂತ್ರಗಳಿಂ
ಲೇ ನೀರ ಮಾಡಿ ಕುಡಿಯುತ್ತಾರೆ. ಈ ಏಡನ ಪಟ್ಟಣದ
ಿಾಪದಲ್ಲಿ ಒಂದು ಪರ್ವತವದೆ. ಅದರ ಮೇಲೆ ಹುಲ್ಲು
ಡ ಕಂಟಿ ಮುಂತಾದ್ದೇನೂ ಬೆಳೆದಿಲ್ಲ, ಅದರ ಪೃಷ್ಠಭಾಗ
ಮೇಲೆ ಕಲ್ಲುಗಳೂ ಬೂದಿಯೂ ಬಿದ್ದಂತೆ ಕಾಣುವದು.
ದು ಜ್ವಾಲಾಮುಖಿಯು ಪರ್ವತವಿರಬಹುದೆಂದು ಕೆಲವ
ತರ್ಕಿಸುತ್ತಾರೆ.

ಏಡನ್ನ ಪಟ್ಟಣದಿಂದ ಬರ್ಬರಾ ಪಟ್ಟಣವು ೧೫೬ ಮೈ
ಇರುತ್ತದೆ. ಬರ್ಬರಾದಲ್ಲಿ ಇಂಗ್ಲೀಷ ಆಫೀಸುಗಳು
ರುತ್ತವೆ. ನಕಾಶದಲ್ಲಿ ನೋಡಿದರೆ ಆಫ್ರಿಕದ ಈಶಾನ್ಯ
ೂಲೆಯಲ್ಲಿ ಸೋವಾಲಿ ಜನರ ದೇಶವು ಕಾಣುವದು
ದರಲ್ಲಿ ಉತ್ತರದ ಭಾಗವು ಇಂಗ್ಲೀಷರ ಸ್ವಾಧೀನದಲ್ಲಿರು
ದೆ. ಬರ್ಬರಾ ಪಟ್ಟಣವು ಸೋವಾಲಿ ಜನರ ಮುಖ್ಯ
ಟ್ಟಣವು. ಇಲ್ಲಿ ಮಾರವಾಡಿಗಳು ವ್ಯಾಪಾರಮಾಡುತ್ತಾರೆ.

ನೋಡಿರಿ ಮೊಗಾದಿಶುಗಳು ಎಂಥ ಸಾಹಸಿಗಳು ಅವರು ಹೋಗದಂಥ ಪ್ರದೇಶವೇ ಉಳಿದಿಲ್ಲ.

ಸೋಮಾಲಿ ಜನರು ಕಪ್ಪು ಇರುತ್ತಾರೆ. ಅವರ ಮೈಕಟ್ಟು ದೊಡ್ಡದು ಅವರು ಸುಧಾರಿಸಿದವರು ಎಷ್ಟೋ ದಿವಸಗಳ ವರೆಗೆ ಅವರಿಗೆ ಅರವೆ ಅಂಚಿಡಿ ಸಹ ಗೊತ್ತು ಇದ್ದಿಲ್ಲ ಇತ್ತೀಚ್ಚಲಾಗಿ ೮೦ ವರ್ಷಗಳಿಂದ ಇಂಗ್ಲಿಷ ಸರಕಾರದವರು ಅವರಿಗೆ ಅರಿವೆಗಳನ್ನು ಉಡಲಿಕ್ಕೆ ಕಲಿಸಿರುತ್ತಾರೆ. ಆ ಜನರು ಒಕ್ಕಲತನವನ್ನು ಅರಿಯರು. ಬೇಟೆಯಿಂದ ಉಪಜೀವಿಸುವರು. ಬಾಣ ಹೊಡೆಯುವದರಲ್ಲಿಯೂ ಬರ್ಚಿಗಳನ್ನು ಬಿಗೆಯುವದರಲ್ಲಿಯೂ ಒಳ್ಳೇ ಗಟ್ಟಿಗರು. ಬರ್ಚಿ ಬಿಗೆಯುವನನ್ನು ಒಂದು ಪ್ರಸಂಗದಲ್ಲಿ ನಾನು ಸ್ವತಃ ನೋಡಿದೆನು. ಈ ಪ್ರಕಾರ ಅವರು ಹಸಿ ಮಾಂಸ ಭಕ್ಷಕರೂ ಹಾಲು ಕುಡಿದು ಜೀವಿಸುವವರೂ ಆದಾಗ್ಯೂ ಇತ್ತೀತ್ತಲಾಗಿ ಧಾನ್ಯವ್ಯಾಪಾರವನ್ನು ಮಾಡತೊಡಗಿರುತ್ತಾರೆ. ಮತ್ತು ಇಂಗ್ಲೀಷ ಸರಕಾರದವರ ಕೈ ಕೆಳಗೆ ಬೇರೆ ಬೇರೆ ಖಾತೆಗಳಲ್ಲಿ ಉದ್ಯೋಗಗಳನ್ನು ಕೈಕೊಂಡಿರುತ್ತಾರೆ. ಅವರಲ್ಲಿ ಪಾತ್ರೆಗಳ ಉಪಯೋಗವು ಕಡಿಮೆ. ಕಟ್ಟಿಗೆಯ ಒಂದುಪ್ರಕಾರದ ಪಾತ್ರೆಗಳಿರುತ್ತವೆ.

ಅವರ ಹೆಂಗಸರಿಗೆ ಆಭರಣಗಳ ಆವಶ್ಯಕತೆ ಇಲ್ಲ, ಕಿವಿ ಮೂಗುಗಳನ್ನು ಚುಚ್ಚಿಕೊಳ್ಳುವ ಪದ್ಧತಿಯು ಅವರಲ್ಲಿಲ್ಲ. ಒಂದು ತರದ ಮಣಿಗಳನ್ನು ಮಾತ್ರ ಉಪಯೋಗಿಸುತ್ತಾರೆ,

ಅವರಲ್ಲಿ ಧರ್ಮಶ್ರದ್ಧೆಯು ಬಹಳ. ಒಮ್ಮೆ ೪೫ ಸಾವಿರ ಜನರು ನಿಮಾಜಕ್ಕೆ ಕೂಳಿತಾಗ ಅವರ ಒಡೆಯನಾದ ಮ್ಯಾಡಮುಲ್ಲಾನು ಯುದ್ಧದ ಸೂಚನೆಯನ್ನು ಕೊಟ್ಟನು. ಆದರೆ ನಿಮಾಜ ಬಿಟ್ಟು ಒಬ್ಬನೂ ಏಳಲಿಲ್ಲಾ,

ಬ್ರಿಟಿಶ್ ಸೋಮಾಲಿ ಪ್ರಾಂತದಲ್ಲಿ ಅಲ್ಲಲ್ಲಿಗೆ ಇಂಗ್ಲೀಷ ದಂಡಿನ ಕ್ಯಾಂಪುಗಳು ಅವೆ, ಅಲ್ಲಿ ಬುರಾವೋ ಎಂಬ ಕ್ಯಾಂಪಿನ ತಾರವಾಸ್ತರನ ಜಾಗಾಕ್ಕೆ ನನ್ನ ನೇಮಣೂಕ ಆಗಿತ್ತು. ಅಲ್ಲಿಗೆ ಹೋಗುವದಕ್ಕೆ ನಾವು ಬರ್ಬೇರಾದಿಂದ

ಹೊರಟೆವು. ನನ್ನ ಸಂಗಡ ಇನ್ನು ಇಬ್ಬರು ಇದ್ದರು. ಇದಲ್ಲದೆ ಕಲವು ಲಷ್ಕರೀ ಸಿಪಾಯಿಗಳೂ ಇದ್ದರು, ನಮ್ಮ ಸಾಮಾನುಗಳನ್ನು ಹೇರಲಿಕ್ಕೆ ಹೇಸರಗತ್ತೆಗಳನ್ನು ಕೊಟ್ಟಿದ್ದರು. ಅವುಗಳ ಮೇಲೆ ನಮ್ಮ ನಮ್ಮ ಸಾಮಾನುಗಳನ್ನು ನೀರನ್ನು ಹಾಕಿಕೊಂಡುಹೊರಟೆವು. ಬರ್ಬೇರಾದಿಂದ ೧೦ ಮೈಲಿನ ಮೇಲೆ ಒಂದು ಗುಡ್ಡವದೆ. ಆ ಗುಡ್ಡದ ವರೆಗೆ ಸಾಥವೆಂಬ ಪ್ರದೇಶವದೆ. ಅಲ್ಲಿ ನಾವು ಆ ಹೊತ್ತು ವಸ್ತೀ ಮಾಡಿದೆವು. ಅಲ್ಲಿ ಬೈಲೊಳಗೆ ಮಲಗಿದ್ದೆವು. ತಂಡಿಯು ಎಳ್ಳಷ್ಟು ಆಗಲಿಲ್ಲ. ಸಾಥ ದಿಂದ ೧೦ ಮೈಲಿನ ಮೇಲೆ ಇರುವ ಬೆಂಡಾಲಕ್ಕೆ ಹೋದೆವು. ಅಲ್ಲಿಯವರೆಗೆ ದಾರಿಯಲ್ಲಿ ಎಲ್ಲಿಯೂ ನೀರೇ ಇಲ್ಲ ನಾವು ಕ್ಯಾನಸ್ತರದ ಚೀಲಗಳಲ್ಲಿ ತೆಗೆದುಕೊಂಡು ಹೋದ ನೀರನ್ನೇ ಉಪಯೋಗಿಸಿಕೊಳ್ಳುತ್ತಿದ್ದೆವು. ಬೆಂಡಾಲದಿಂದ ೧೦ ಮೈಲಿನ ಮೇಲೆ ಇರುವ ಲೋಲರಶೇಖ ಎಂಬ ಕ್ಯಾಂಪಿಗೆ ಮುಟ್ಟಿದೆವು. ಅದು ನಮ್ಮ ದೇಶದ ಮಹಾಬಳೇಶ್ವರದಂತೆ ಎತ್ತರದ ಮೇಲೆ ಇರುತ್ತದೆ. ಅಲ್ಲಿಯು ಹವೆಯು ಚಳಿಯುಳ್ಳದ್ದು ಕಾರಣ ಎಷ್ಟೋ ಯುರೋಪಿಯನ್ನ ಜನರು ಅಲ್ಲಿ ಬಂಗಲೆಗಳನ್ನು ಕಟ್ಟಿಕೊಂಡು ಇರುತ್ತಾರೆ. ಲೋಲರ ಶೇಖದಿಂದ ೫೯ ಮೈಲಿನ ಮೇಲೆ ನನಗೆ ನೇಮಣೂಕ ಆದ ಬುರಾವು ಎಂಬ ಕ್ಯಾಂಪು ಇತ್ತು. ಈ ಕ್ಯಾಂಪಿಗೆ ಹೋಗುವ ಸಲುವಾಗಿ ನಮಗೆ ಒಂಟೆಯಗಾಡಿಗಳನ್ನು ಕೊಟ್ಟರು, ಶೇಖದಿಂದ ಹೊರಟು ಕೆಲವು ಮೈಲು ಹೋದ ಮೇಲೆ ಆ ಒಂಟೆಗಳು ನಡೆಯದಂತಾದವು. ಆಗ ನಮ್ಮ ಸಂಗತಿಗರು ಇಲ್ಲಿಯೇ ಉಳಕೊಳ್ಳೋಣವೆಂದು ಅನ್ನಹತ್ತಿದರು ಅದಕ್ಕೆ ನಾನು ಒಪ್ಪಲಿಲ್ಲ. ಕಡೆಗೆ ಅಲ್ಲಿಗೆ ಸವಿಾಪವಾಗಿದ್ದ ಕ್ಯಾಂಪಿಗೆ ಹೋಗಿ ಹೇಸರಗತ್ತೆಗಳನ್ನು ತಕ್ಕೊಂಡು ಬುರಾವುಕ್ಕೆ ಬಂದುಬಿಟ್ಟೆವು.

ಬರ್ಬೇರಾದಿಂದ ಬೂರಾವುದ ವರೆಗೆ ಮಾರ್ಗದಲ್ಲಿ ಸಾಗು ಭೂಮಿಯನ್ನೂ ಮಾವು ಹುಣಿಚೆ ಮೊದಲಾದ ಗಿಡಗಳನ್ನು ಕಾಣಲಿಲ್ಲ. ಅಲ್ಲಲ್ಲಿಗೆ ಸಣ್ಣ ಸಣ್ಣ ಜಾಲೀಗಿಡಗಳೂ ಹೊನ್ನವರಿ ಗಿಡಗಳೂ ಮಾತ್ರ ದೃಷ್ಟಿಗೆ ಬೀಳುತ್ತಿದ್ದವು

ಬುರಾಯ್ ಕ್ಯಾಂಪಿನಲ್ಲಿ ಒಂದು ಕೋಟೆ ಇರುತ್ತದೆ. ಆ ಕೋಟೆಯಲ್ಲಿ ಎಲ್ಲ ಆಫೀಸುಗಳು ಇರುತ್ತವೆ. ಅಲ್ಲಿಯು ಹವೆ, ನೀರು ಎಲ್ಲವೂ ಸುಖಕರವಾಗಿರುತ್ತವೆ. ನದೀ ಪಾತ್ರದಲ್ಲಿ ನೊಡ್ಡ ದೊಡ್ಡ ಗುಂಡಿಗಳನ್ನು ತೋಡಿ ಗಾಳಿಯ ಯಂತ್ರದಿಂದ ಅದರೊಳಗಿನ ನೀರು ತೆಗೆಯುತ್ತಾರೆ. ಆವೇ ನೀರುಗಳನ್ನು ಎಲ್ಲರೂ ಉಪಯೋಗಿಸುವರು.

ನಮ್ಮನ್ನು ಪರದೇಶಕ್ಕೆ ಕರಕೊಂಡು ಹೋದ ಇಂಗ್ಲಿಷರು ನಮ್ಮ ಧರ್ಮಾಚರಣೆಗಳಿಗೆ ಭಂಗ ಬಾರದಂತೆ ನಮ್ಮನ್ನು ಪರಿಪರಿಯಿಂದ ಕಾಪಾಡುತ್ತಾರೆ. ಹುಶ್ಶು ಅಲ್ಲಿ ಹೋಗಿ ಇದ್ದ ನಮ್ಮ ದೇಶದ ಜನರು ನಮ್ಮ ಕೂಡ ಪ್ರೀತಿಯಿಂದ ನಡಕೊಳ್ಳುತ್ತಾರೆ. ಆದದರಿಂದ ನನಗೆ ಅದು ದೇಶಾಂತರವೆನಿಸಲಿಲ್ಲ.

ಮುಂದೆ ಕಳೆದ ನವಂಬರ ತಿಂಗಳಲ್ಲಿ ಯುದ್ಧದ ಸಲುವಾಗಿ ಬೆಳೆಸಿದ ಖರ್ಚನ್ನು ತೆಗೆದುಹಾಕಬೇಕೆಂದು ಸರಕಾರದವರ ಅಪ್ಪಣೆಯಾದ ಕಾರಣ ನಮ್ಮೆಲ್ಲರಿಗೆ ಪುನಃ ಹಿಂದುಸ್ತಾನಕ್ಕೆ ಹೋಗಲಿಕ್ಕೆ ಅಪ್ಪಣೆಯಾಯಿತು. ಅದರಂತೆ ನಾವು ಹೊರಟು ದಾರಿಯಿಂದ ಪುನಃ ಮುಂಬಯಿಗೆ ದಿಜಂಬರ ೬ನೇ ತಾರೀಖಿಗೆ ಬಂದೆವು. ಬರುವಾಗ ಯಶ್‌ಕಿಂಚಿತ ಸಹ ತ್ರಾಸವಾಗಲಿಲ್ಲ. ಯಾಕಂದರೆ ಬರುವಾಗ ನಮ್ಮ ನೀರು ಮುಂತಾದ ಸಾಮಗ್ರಿಯನ್ನು ತೆಗೆದುಕೊಂಡು ಹೊರಟಿದ್ದೆವು.

ಈ ಮೇರೆಗೆ ಸ್ವಾಭಾವಿಕವಾಗಿ ನನ್ನ ಕಣ್ಣಿಗೆ ಬಿದ್ದ ಸಂಗತಿಗಳನ್ನು ನಿಮ್ಮ ಎದುರಿಗೆ ಇಟ್ಟಿರುತ್ತೇನೆ. ಇದರಲ್ಲಿ ನಿಮಗೆ ಉಪಯುಕ್ತಕಾರಕ ಭಾಗವನ್ನು ಸ್ವೀಕರಿಸಬೇಕೆಂದು ಹೇಳಿ ನನ್ನ ಸ್ಥಳದಲ್ಲಿ ಕುಳಿತುಕೊಳ್ಳುತ್ತೇನೆ.

ನಂತರ ಮು. ರಾ. ರಾ. ಗೋವಿಂದರಾವ ದೇಶಪಾಂಡೆ ಇವರು ವ್ಯಾಖ್ಯಾನದಿಂದ ಆದ ಉಪಯೋಗವನ್ನು ಸಾರಾಂಶ ರೂಪದಿಂದ ಹೇಳಿ ಅವರ ಆಭಾರ ಮನ್ನಿಸಿದರು. ಕಡೆಗೆ ಅಧ್ಯಕ್ಷರಾದ ಗುರುವರ್ಯರು ವ್ಯಾಖ್ಯಾತರ ಆಭಾರ ಮನ್ನಿಸಿ ಸಭೆಯ ಕೆಲಸವನ್ನು ಕೊನೆಗಾಣಿಸಿದರು.

ವಸ್ತುಗಣಿತ.

ಒನೇ ಇಯತ್ತ್ರೆ.

ಭೂಮಿಯ ದೈನಂದಿನ ಗತಿ.

ಟೀವು — ಇದರಂತೆ ಭೂಮಿಯು ವೇಗದಿಂದ ತಿರುಗುವದರಿಂದ ಅದರ ಮೇಲಿರುವ ನಮಗೆ ಭೂಮಿ ಸ್ಥಿರವಾಗಿದ್ದಂತೆ ತೋರಿ ಆಕಾಶವು ವಿರುದ್ಧ ದಿಕ್ಕಿಗೆ ತಿರುಗಿದಂತೆ ತೋರುತ್ತದೆಂದು ಹೊರಡಿಸುವದು.

(ಅ) ದೀಪದ ಮುಂದೆ ಗೋಲವನ್ನು ತಿರುಗಿಸಿದಾಗ ತಿಳಿಯಬಂದ ಸಂಗತಿಗಳನ್ನು ನೆನಪಿಗೆ ತಂದು ಹೇಳಲಿ.

(ಆ) ಯಾವಾಗಲೂ ಅರ್ಧಗೋಲದ ಮೇಲೆ ಬೆಳಕೂ ಅರ್ಧ ಗೋಲದ ಮೇಲೆ ಕತ್ತಲೆಯೂ ಇರುತ್ತವೆ.

ಟೀಪು — ಇದರಂತೆ ಸೂರ್ಯನ ಮುಂದೆ ಭೂಮಿಯು ತನ್ನ ಮೈಸುತ್ತು ತಿರುಗುವದರಿಂದ ಹಗಲು ರಾತ್ರಿಗಳುಂಟಾಗುತ್ತವೆಂಬದನ್ನು ಹೊರಡಿಸುವದು.

ಉಪಸಂಹಾರ—(೧) ಸೂರ್ಯನು ಹೋಗುವ ದಿನದ ಮಾರ್ಗವು ಕಂಸಾಕಾರವಾಗಿರುತ್ತದೆ.

(೨) ಸೂರ್ಯನು ಮಧ್ಯಾನ್ಹದಲ್ಲಿ ನಮ್ಮ ತಲೆಯ ನಿರುತ, ಅಥವಾ ತಲೆಯುಮೇಲೆ ಬರುತ್ತಾನೆ.

(೩) ನಾವಿರುವ ಸ್ಥಳವು ಸೂರ್ಯನ ಕೆಳಗೆ ಹೋಗಬೇಕಾಗುವದು.

(೪) ಭೂಮಿಯು ತನ್ನ ಮೈಸುತ್ತು ತಿರುಗುತ್ತದೆ. ಸೂರ್ಯನು ಭೂಮಿಯ ಸುತ್ತು ತಿರುಗುವದಿಲ್ಲ ಎಂಬ ದನ್ನು ಸಿದ್ಧ ಮಾಡಬಕ್ಕದ್ದು.

(೫) ಚಂದ್ರನ ಗತಿಯು ಪಶ್ಚಿಮದಿಂದ ಪೂರ್ವಕ್ಕಿರುತ್ತದೆ.

(೬) ಅಷ್ಟಮಿಯ ಮತ್ತು ಪೌರ್ಣಮಿಯ ದಿವಸಗಳಲ್ಲಿ ಕ್ರಮವಾಗಿ ಸೂರ್ಯಾಸ್ತ ಸಮಯಕ್ಕೆ ಚಂದ್ರನು ಸರಾಸರಿ ಮಾನದಿಂದ ತಲೆಯುಮೇಲಾಗಲೀ ಪೂರ್ವ ಕ್ಷಿತಿಜದಲ್ಲಾಗಲೀ ಇರುತ್ತಾನೆ.

(೭) ಮಧ್ಯರಾತ್ರಿಯಲ್ಲಿ ತಲೆಯುಮೇಲೆ ಮತ್ತು ಪೂರ್ವ ಕ್ಷಿತಿಜದಲ್ಲಿದ್ದನು.

(೮) ಭೂಮಿಯು ತನ್ನ ಮೈಯನ್ನು ಪಶ್ಚಿಮದಿಂದ ಪೂರ್ವಕ್ಕೆ ತಿರುಗಿಸಬೇಕಾಗುವದು.

(೯) ಚಂದ್ರನು ಅಸ್ತನಾಗಬೇಕಾದರೆ ಕಾಲು ಕಂಸದಷ್ಟು, ಮತ್ತೊಮ್ಮೆ ತಲೆಯುಮೇಲೆ ಬರಬೇಕಾದ ಪೂರ್ಣಕ್ಕಿಂತ ಸ್ವಲ್ಪ ಹೆಚ್ಚು ಭೂಮಿಯು ತಿರುಗಿಕೊಳ್ಳಬೇಕು.

(೧೦) ಭೂಮಿಯು ಪಶ್ಚಿಮದಿಂದ ಪೂರ್ವಕ್ಕೆ ತಿರುಗುವದರಿಂದ ಸೂರ್ಯ, ಚಂದ್ರ, ನಕ್ಷತ್ರ ಮುಂತಾದವು ಗಳು ಪೂರ್ವದಿಂದ ಪಶ್ಚಿಮಕ್ಕೆ ತಿರುಗಿದಂತೆ ತೋರುತ್ತವೆ. ಭೂಮಿಯು ವೇಗವು ಬಹಳವಿರುವದರಿಂದ ಅದು ಜಲನೆಯಲ್ಲಿರುವ ಹೊಗೆಬಂಡಿಯು ನಿಂತಿರವಿದ್ದಂತೆ ತೋರುತ್ತದೆ.

(೧೧) ಭೂಮಿಯು ಸೂರ್ಯನ ಮುಂದೆ ತನ್ನ ಮೈಸುತ್ತು ತಿರುಗುವದರಿಂದ ಹಗಲುರಾತ್ರಿಗಳಾಗುತ್ತವೆ.

ಸಿದ್ಧನಾಥ ನಾಚನ ಮುಂಸಿರ
ಮೊರಬ. ಜಿ ಧಾರವಾಡ.
ಶಾಲಾಪತ್ರಿಕೆ.

ಪದ್ಯಂ.

ವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಸೋತ್ಕರ್ಷಮಾ
ಹೃದಯ ತಿಮಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ಪದವಾ[illegible]ದುಪಗೈಸುಗುಣಂ ತೋರಲ್ಕೆ ಕೈಕೊಂಬುಮೈ;
ದಯೆದುಂದೋಷವಶಿಷ್ಟವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರಿಂ

ಪುಸ್ತಕ ೪೧] ಮಾರ್ಚ ೧೯೦೫. [ಸಂಚಿಕೆ ೩.

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಸೂರ್ಯಗೋಲದ ಮೇಲೆ ಕಾಣುವ ಕಪ್ಪು ಕಲೆಗಳು,

ಈ ಗೋಲವು ಯಾವತ್ತೂ ಚೇತನಾಚೇತನ ಸೃಷ್ಟಿಗೆ ಜೀವನಕಳೆಯಾಗಿರುವದು. ಇದರಿಂದ ನಮಗೆ ದೊರೆಯುವ ಬಿಸಿಲು ಬೆಳಕುಗಳಿಂದಲೇ ನಮ್ಮ ಯಾವತ್ತು ವ್ಯವಹಾರವು ಸಾಗುತ್ತದೆ. ಬರಿಗಣ್ಣಿಗೆ ಈ ಗೋಲವು ತೇಜೋಮಂಡಲದಂತೆ ಕಾಣುವದು. ಮ್ಯಾಗ್ನೇಸಿಯಾ ಹೈದ್ರೋಜನ್ ಮೊದಲಾದ ಅನೇಕ ಧಾತ್ವಧಾತುರೂಪತತ್ವಗಳು ಅತುಷ್ಣವಾದ ಬಾಷ್ಪರೂಪದಿಂದ ಈ ಗೋಲದಲ್ಲಿರುವವೆಂದು ವಿದ್ವಾಂಸರ ತರ್ಕವುಂಟು. ಅದರಿಂದ ಈ ಗೋಲದ ಉಷ್ಣವಮಾನವು ಎರಡು ಕೋಟಿ ಅಂಕವಿರುವದೆಂದ ಬಲ್ಲವರ ಮತವದೆ.

ಆದರೆ ಸೂರ್ಯಗೋಲದ ವಸ್ತುಸ್ಥಿತಿಯು ಬರಿಗಣ್ಣಿನಿಂದ ಕಾಣಿಸುವಂತೆಯೇ ಇರುವದಿಲ್ಲ. ದುರ್ಬೀನಿನಿಂದ ನೋಡಿದರೆ ಈ ತೇಜಃಪುಂಜವಾದ ಗೋಲದ ಮೇಲೆ ಅನೇಕ ಕಪ್ಪು ಕಲೆಗಳಿರುವವೆಂದು ಗೊತ್ತಾಗುವದು. ಉಳಿದ ಭಾಗವು ಒಂದು ಸ್ವಚ್ಛವಾದ ಪ್ರವಾಹೀ ಪದಾರ್ಥದಲ್ಲಿ ಅಕ್ಕಿಯನುಚ್ಚಾಗಲಿ ಬೇರೆ ಸಣ್ಣ ಜೊರಾಗಲಿ ತೇಲುವಂತೆ ಕಾಣ

ವೆದು ಕಪ್ಪು ಕಲೆಗಳ ಆಕಾರವು ಒಂದೇತರವಾಗಿ ಕಾಣುವ ದಿಲ್ಲ. ಸೂರ್ಯನು ತನ್ನ ಅಕ್ಷದ ಸುತ್ತು ಸುಮಾರು ಇಪ್ಪತ್ತೈದು ಇಪ್ಪತ್ತಾರು ತಾಸುಗಳಲ್ಲಿ ಪ್ರದಕ್ಷಿಣೆಯನ್ನು ಮಾಡುವದರಿಂದ ಈ ಕಲೆಗಳು ಸೂರ್ಯಬಿಂಬದ ಬೇರೆಬೇರೆ ಭಾಗಗಳಲ್ಲಿ ಭಿನ್ನಭಿನ್ನಪ್ರಕಾರದಿಂದ ದೃಷ್ಟಿಗೋಚರವಾಗುತ್ತವೆ. ಮಣ್ಣಿನ ಗೋಲಕ್ಕೆ ಒಂದು ಪಾವಲಿಯನ್ನು ಹಚ್ಚಿ ಆ ಗೋಲವನ್ನು ತಿರುಗಿಸಿದರೆ ಪಾವಲಿಯು ಕುದಿಯ ಕಡೆಗೆ ಹೋದ ಹೋದಂತೆ ಬೇರೆ ಬೇರೆ ಕಾಣುವದೆಂಬದನ್ನು ಸುಲಭವಾಗಿ ಮನಗಾಣಬಹುದು. ಆದರೆ ಈ ಕಲೆಗಳ ಆಕಾರವೈಲಕ್ಷಣ್ಯವು ಸೂರ್ಯಮಂಡಲದ ಅಕ್ಷಪ್ರದಕ್ಷಿಣೆಯಿಂದ ಮಾತ್ರ ಉಂಟಾಗುವದೆಂದು ಊಹಿಸಲಾಗದು. ಸ್ಯತಃ ಈ ಕಲೆಗಳೇ ಕಾಲಕಾಲಕ್ಕೆ ಬೇರೆ ಬೇರೆ ಆಕಾರದವಾಗುತ್ತವೆ ಕೆಲವು ಕಲೆಗಳಂತೂ ಕೆಲವು ದಿವಸಗಳವರೆಗೆ ಕಾಣಿಸಿ ಮಾಯವಾಗುತ್ತವೆ. ಕೆಲವು ಹಲವು ತಿಂಗಳುಗಳ ವರೆಗೆ ಕಾಣಿಸುತ್ತವೆ. ಕೆಲವು ಕಲೆಗಳು ಬರಿಗಣ್ಣಿಗೆ ಸಹ ಕಾಣಿಸುವಷ್ಟು ದೊಡ್ಡವಿರುತ್ತವೆ. ನಮ್ಮ ಪ್ರಾಚೀನರಿಗೂ ಈ ಕಪ್ಪು ಕಲೆಗಳು ಅಪರಿಚಿತವಾಗಿದ್ದಲ್ಲವೆಂದು ವರಾಹಮಿಹರನ ಗ್ರಂಥದಿಂದ ತಿಳಿಯುತ್ತದೆ ಈ ಬರಿಗಣ್ಣಿಗೆ ಕೂಡ ಕಾಣಿಸುವ ಕಲೆಯು ಸೂರ್ಯನ ಅಂತರವಾನದಿಂದ ವಿಚಾರಿಸಲು ಎಷ್ಟೋ ಲಕ್ಷ ಮೈಲುಗಳಷ್ಟು ವಿಸ್ತಾರವಾಗಿರಬೇಕೆಂಬದು ಸ್ಪಷ್ಟವದೆ. ಈ ಕಲೆಗಳ ಮಧ್ಯಭಾಗವು ತೀರ ಕಪ್ಪಾಗಿರುವದು. ಅದಕ್ಕೆ ನಮ್ಮ ಪ್ರಾಚೀನರು ಛಾಯಾ ಎಂದು ಹೆಸರಿಟ್ಟಿರುವರು. ಕಲೆಗಳ ಮಿಕ್ಕ ಭಾಗಕ್ಕೆ ಛಾಯಾಕಲ್ಪವೆಂಬ ಅಭಿಧಾನವನ್ನು ಕೊಟ್ಟಿರುವರು.

ದುರ್ಬಿಣಿಯೆಂಬ ದೃಷ್ಟಿಯಂತ್ರವು ಪ್ರಚಾರದಲ್ಲಿ ಬಂದ ಕೂಡಲೆ ಅಂದರೆ ಸುಮಾರು ಹದಿನಾರು ನೂರಾ ಹನ್ನೊಂದನೇ ಇಸವಿಯಲ್ಲಿ ಈ ಕಲೆಗಳ ಪ್ರಥಮ ಶೋಧವಾಯಿತು. ಈ ಕಲೆಗಳಿಂದಲೇ ಸೂರ್ಯನು ಅಕ್ಷದ ಸುತ್ತ ತಿರಗುತ್ತಾನೆಂಬದು ವ್ಯಕ್ತವಾಯಿತು. ಈ ಕಲೆಗಳ ಸಂಖ್ಯೆಯು

ಯಾವಾಗಲೂ ಒಂದೇಸಮನಾಗಿರುವದಿಲ್ಲ. ಉಲ್ಕೆಗಳು ಕೆಲಕೆಲವು ತಿಂಗಳಲ್ಲಿ ಹೆಚ್ಚು ಬೀಳುತ್ತಿರುವಂತೆ, ಈ ಕಲೆಗಳಾದರೂ ಹಲಕೆಲವು ಕಾಲಗಳಲ್ಲಿ ಹೆಚ್ಚಾಗಿ ಕಾಣುತ್ತವೆ. ಈ ಕಲೆಗಳು ಹೆಚ್ಚಾಗಿಯೂ ಕಡಿಮೆಯಾಗಿಯೂ ಕಾಣುವ ಕಾಲದಲ್ಲಿ ನಿಯಮವುಂಟೆಂದು ಗೊತ್ತಾಗಿದೆ. ಒಂದು ವರುಷ ಈ ಕಲೆಗಳು ಅತಿ ವಿಪುಲವಾಗಿ ಗೋಚರವಾದರೆ, ಮುಂದೆ ಹನ್ನೊಂದುಕಾಲು [illegible] ಸ್ಥಿತಿಯು ಪ್ರಾಪ್ತವಾಗುವದೆಂದು ನಿಶ್ಚಯವಾಗಿದೆ. ಇದೇ ಶಕದ ೧೪೧೦, ೨೩, ೩೩, ೪೪ ಮುಂತಾದ ವರ್ಷಗಳಲ್ಲಿ ತೀಕ್ಷ್ಣತರವಾದ ಕಲೆಗಳು ಕಂಡವು. ಆದರೆ ೧೪೦೪, ೧೬, ೨೯ ಮುಂತಾದ ವರುಷಗಳಲ್ಲಿ ಬಹಳವಾಗಿ ಗೋಚರವಾದವು. ಆದರೆ ಕಾಲಾವಧಿಯ ಕಾರಣವೇನೆಂಬದು ಇನ್ನೂ ನಿಶ್ಚಯಾತ್ಮಕವಾಗಿ ಗೊತ್ತಾಗಿಲ್ಲ. ಅದರೂ ಇದಕ್ಕೆ ಬಾಹ್ಯ ಕಾರಣಗಳೇನೂ ಇರದೆ ಸೂರ್ಯಗೋಲದ ಅಂತಃಸ್ಥಿತಿಯೇ ಬಲವಾದ ಕಾರಣವಾಗಿರಬೇಕೆಂಬದು ಸ್ಪಷ್ಟವದೆ.

ಸೂರ್ಯಬಿಂಬದ ಮೇಲೆ ಕಾಣುವ ಕಲೆಗಳಿಂದ ಮಳೆಬೆಳೆಗಳ ಅಂದಾಜು ಕಟ್ಟುವ ಪದ್ಧತಿಯು ಪ್ರಚಾರದಲ್ಲಿ ಬರಹತ್ತಿದೆ. ಡಾಕ್ಟರ ಹರ್ಶಲನು ಈ ಕಲೆಗಳು ಸ್ವಲ್ಪವಿದ್ದಾಗಿನ ಹವೆಯು ಬೆಳೆಗಳಿಗೆ ಹಿತಕರವಿರುತ್ತದೆಂತಲೂ, ಹೆಚ್ಚಾಗಿದ್ದಾಗ ತದ್ವಿಪರೀತ ಸ್ಥಿತಿಯು ಅನುಭವಕ್ಕೆ ಬರುವದೆಂತಲೂ ಅಭಿಪ್ರಾಯ ಪಡುತ್ತಾನೆ. ನಮ್ಮ ಅರ್ವಾಚೀನ ಜ್ಯೋತಿಷಿಯಾದ ಪ್ರೊಫೆಸರ ಫೆತ್ರೆ ಕೇರೋಪಂತರು ಬಹು ಪರಿಯ ಶೋಧದಿಂದ ಈ ಕಲೆಗಳಿಗೂ ದುಷ್ಕಾಳಕ್ಕೂ ಸಂಬಂಧವಿರಬಹುದೆಂದು ಅನುಮಾನ ಪಡಿಸಿದ್ದಾರೆ. ಮದ್ರಾಸದ ವೇಧಶಾಲೆಯ ಮುಖ್ಯರಾದ ವಾಗಸನ್ ಎಂಬವರು ಈ ಕಲೆಗಳಿಗೂ ಕರ್ನಾಟಕದ ಮಳೆಗೂ ಸಂಬಂಧವಿರುವದೆಂದು ಗೊತ್ತು ಹಚ್ಚಿದ್ದಾರೆ.

ಅರೋರಾ ಅಥವಾ ಉತ್ತರತೇಜವೆಂಬದನ್ನು ನೀವು ಬಲ್ಲಿರಿ. ಇದು ಉತ್ತರಧ್ರುವ ಪ್ರದೇಶದ ನರೆಯಲ್ಲಿರುವದು. ಇದಕ್ಕೂ ಈ ಕಲೆಗಳಿಗೂ ಸಂಬಂಧವುಂಟೆಂಬದು ಒಳ

ಗಡಯಾಲ್ಲ ಗೂಡಾಗಿದೆ. ಕಲೆಗಳು ಹಚ್ಚಾಗಿ ಕಾಣುವ ವರ್ಷ ಉತ್ತರ ತೇಜವು ಒಳ್ಳೇ ತೇಜಃಪುಂಜವಾಗಿ ಕಾಣುವದು.

ಈ ಕಲೆಗಳು ಬಹುತರವಾಗಿ ಸೂರ್ಯಬಿಂಬದ ವಿಷುವೃತ್ತದ ಮೇಲ್ಬದಿಗೂ ಕೆಳಬದಿಗೂ ಮುವ್ವತ್ತು ಅಂಶಗಳ ಅಂತರದವರೆಗೆ ಕಾಣುವವು. ಅದರಾಚೆಯವು ಇಷ್ಟು ನಿಚ್ಚಳವಾಗಿ ಕಾಣುವದಿಲ್ಲ. ಈ ಕಲೆಗಳ ಕಾರಣವನ್ನು ಸೇಚೀ ಎಂಬ ಪ್ರಸಿದ್ಧ ವೇಧಕುಶಲನು ವರ್ಣಿಸುವದು ಹ್ಯಾಗಂದರೆ, ಸೂರ್ಯಗೋಲದಲ್ಲಿರುವ ಹಾಯಡ್ರೋಜನ್, ಮ್ಯಾಗ್ನೆಸಿಯುಮ್, ಸೋಡಿಯುಮ್ ಮುಂತಾದ ಪದಾರ್ಥಗಳ ಅತ್ಯುಷ್ಣವಾದ ಬಾಷ್ಪವು ಸೂರ್ಯಗೋಲದಿಂದ ಹೊರಬಿರುತ್ತಿರುವದು. ಈ ಬಾಷ್ಪದಲ್ಲಿ ಪ್ರಕಾಶಕಿರಣಗಳನ್ನು ನುಂಗುವ ಶಕ್ತಿಯು ವಿಶೇಷವಿರುವದರಿಂದ, ಇವು ದಟ್ಟಾಗಿ ಕೂಡಿದ ಸ್ಥಳದಲ್ಲಿ ಸೂರ್ಯಗೋಲದಿಂದ ಬರುವ ಕಿರಣಗಳು ನುಂಗಲಡುತ್ತವೆ. ಅದರಿಂದ ನಮಗೆ ಆ ಭಾಗವು ಕಪ್ಪು ಕಾಣುವದು.

ಈಗ ಸವ್ಯಕ್ಕೆ ಸೂರ್ಯನ ಮೇಲೆ ಇಂಥದೊಂದು ದೊಡ್ಡ ಕಲೆಯು ಕಾಣುತ್ತದೆಂದು ಪುಣೆಯೊಳಗಿನ ಸರಕಾರದವರ ವೇಧಶಾಲೆಯ ಅಧಿಕಾರಿಗಳು ಶೋಧ ಮಾಡಿ ಪ್ರಕಟಿಸಿದ್ದಾರೆ. ಈ ಕಲೆಯು ಮುಂಜಾನೆ ಮೂರು ತಾಸುಗಳ ಪೂರ್ವದಲ್ಲಿ ಬರಿಗಣ್ಣಿಗೆ ಸಹ ಕಾಣುವದೆಂತಲೂ ಇದರ ವಿಸ್ತಾರವು ಎರಡು ಅಬ್ಜ ಮೈಲು ವಿಸ್ತಾರವಾಗಿರುವದೆಂತಲೂ ಅವರು ಸೊತುಹಚ್ಚಿದ್ದಾರೆ. ಜಿಜ್ಞಾಸುಗಳಾದ ವಾಚಕರು ಗ್ರಹಣ ನೋಡಲಿಕ್ಕೆ ಉಪಯೋಗಿಸುವ ಕಾಚಿನಿಂ ಅನುಭವ ನೋಡಬೇಕೆಂದು ನಮ್ಮ ಸೂಚನೆಯುಂಟು.

ಇದಲ್ಲದೆ ಇನ್ನೊಂದು ಸಂಗತಿಯು ಅನುಭವಕ್ಕೆ ಬಂದಿರುವದು. ಫೆಬ್ರುವರಿಯ ಆರಂಭದಲ್ಲಿ ಯಾವತ್ತು ಹಿಂದಿನ ಸಾನದಲ್ಲಿ ಬಿಮ್ಮಲೆ ಹವೆಯಲ್ಲಿ ಸ್ಥಿತ್ಯಂತರವಾಗಿ ಮಂಜಿನ ಚಳಿಯು ದುಃಸಹವಾಯಿತು. ಕಾಶೀವಾಡ ಮೊದಲಾದ ಊರುಗಳಲ್ಲಿ ಜೊಲಲಿ ಮೊಲಗಿದವರು ಅನುಬೊಬ್ಬೆಯರು. ಕೆ

ಕಾಶಿ, ಅಲ್ಲಾಬಾದ ಮುಂತಾದ ಹಿಮಾಲಯದ ಅಡಿಯ ಪ್ರದೇಶಗಳಿಂಗಿನ ಜಲಾಶಯಗಳ ನೀರು ಗಡ್ಡೆಗಟ್ಟಿದಷ್ಟು ಹಿಮಾಲಯದ ಮೇಲಂತೂ ಬರ್ಫವೃಷ್ಟಿಯು ಮಿತಿಮೀರಿಯಾಯಿತು. ಇವೆಲ್ಲ ಕಾರಣಗಳಿಂದ ಪವನದ ಉಷ್ಣಮಾನದ ಸ್ಥಿತ್ಯಂತರಕ್ಕೆ ಇವು ಕಾರಣೀಭೂತವಾಗಿರಬೇಕೆಂದು ತೋರುವದು.

ಕಲಕತ್ತೆಯ ವಿದ್ಯಾಪೀಠದ ಪದವೀದಾನ ಸಮಾರಂಭ ಕಾಲದಲ್ಲಿ ವ್ಹಾಯಿಸ ಚಾನ್ಸಲರಾದ ಮೆ ಗೇಡ್ಲರ ಸಾಹೇಬರು ಮಾಡಿದ ಭಾಷಣದಲ್ಲಿ ಕೆಲವು ಮಹತ್ವದ ಸೂಚನೆಗಳುಂಟು. ಅವುಗಳು :—ಹಿಂದುಸ್ಥಾನದಲ್ಲಿ ಪಾಶ್ಚಾತ್ಯ ವಿದ್ಯಾದಾನ ಸಂಪ್ರದಾಯವು ಪ್ರಚುರವಾಗಿ ಬಹು ಕಾಲವಾಯಿತು. ಆದರೆ ವಿದ್ಯಾಪೀಠದ ಪದವಿಗಳನ್ನು ಪಡೆದ ಜನರು ಯಾವದೊಂದು ಹೊಸ ಉದ್ಯೋಗವನ್ನು ಕೈಕೊಂಡು ದೇಶದ ಸಾಂಪತಿಕ ಸ್ಥಿತಿಯನ್ನು ವರ್ಧಿಸುವದಕ್ಕೆ ಪ್ರಯತ್ನ ಪಟ್ಟದ್ದು ನನ್ನ ಕೇಳಿಕೆಯಲ್ಲಿಲ್ಲ. ಯಾವದೊಂದು ಪರೀಕ್ಷೆಯಲ್ಲಿ ತೇರ್ಗಡೆಯಾದ ಕೂಡಲೆ ವಿದ್ಯಾರ್ಥಿಯು ಯಾವದೊಂದು ಸರಕಾರದ ನೌಕರಿಯನ್ನು ದೊರಕಿಸಲಿಕ್ಕೆ ಯತ್ನಿಸುತ್ತಾನಲ್ಲದೆ ಅನೇಕ ರತ್ನರೂಪವಾದ ದ್ರವ್ಯಗಳಿಂದ ಯುಕ್ತವಾದ ಭರತಖಂಡದ ಸೇವೆಯನ್ನು ಕೈಕೊಳ್ಳುವದಿಲ್ಲ. ಇದಕ್ಕೆ ಕಾರಣವೇನಿರಬಹುದು? ಅದೇ ಜನರು ತುಸು ದಿವಸಗಳಲ್ಲಿ ಈ ಪಾಶ್ಚಾತ್ಯ ಶಿಕ್ಷಣದಿಂದ ಎಷ್ಟೊ ಮುಂದರಿಸಿರುವರು. ಇದು ಶಿಕ್ಷಣದ ಫಲವೋ? ಜನರ ಆಲಸ್ಯ ಅಥವಾ ಚಟುವಟಿಕೆಯ ಫಲವೋ?

ಕಾಫರ ಸಲ್ಫೇಟು ಎಂಬ ದ್ರವ್ಯದಿಂದ ನೀರು ಬಹು ಬೇಗನೆ ಶುದ್ಧವಾಗುತದೆಂಬ ಸಂಗತಿಯು ಮೊನ್ನೆ ಮೊನ್ನೆ ಗೊತ್ತಾಗಿದೆ. ತಂಜಾವರದ ಬಳಿಯುದೊಂದು ಕೆರೆಯ ನೀರು ಕೆಟ್ಟು ಮಲಿನವಾಗಿತ್ತು. ಅದರ ವಿಸ್ತಾರವು ಒಂಬತ್ತುನೂರು ಫೂಟು ಉದ್ದವೂ, ನೂರು ಇಪ್ಪತ್ತೈದು ಫೂಟು ಅಗಲ

ವೊ ಇರುವದು. ಅದರಲ್ಲಿ ಒಂದು ಡೋಣಿಯನ್ನು ತೇಲ ಬಿಟ್ಟು ಅದಕ್ಕೆ ಒಂದು ಕಾಪರಸಲ್ಫೇಟ ತುಂಬಿದ ಚೀಲವ ನ್ನು ಕಟ್ಟಿದರು. ಆ ಡೋಣಿಯು ಸುಮಾರು ಎರಡು ಮೂ ರು ತಾಸು ನೀರಲ್ಲಿ ಸಂಚರಿಸಲು, ಚೀಲದೊಳಗಿನ ದ್ರವ್ಯ ವೆಲ್ಲ ಕರಗಿ ನೀರೊಳಗೆ ಬೆರತುಕೊಂಡಿತು. ಮರುದಿವಸ ಆ ನೀರು ತುಸು ತಿಳಿಯಾದವು. ಆದರ ಮರುದಿವಸವಂತೂ ಹೆಚ್ಚು ನಿರ್ಮಲವಾದವು. ನಾಲ್ಕನೇ ದಿವಸ ಆ ನೀರೆಲ್ಲ ತೀರ ಸಿದ್ಧಿಯಾದವು. ಇದರಿಂದ ತಾಮ್ರದ ಪಾತ್ರೆಯಲ್ಲಿ ನೀರು ತುಂಬಿಟ್ಟು ಕುಡಿಯುವದು ಹಿತಕರವೆಂದು ತಿಳಿಯು ವದು.

CHOUTH & SIRDESHMUKHI.

ಚೌಥಾಯಿ ಸರದೇಶಮುಖಿ ಹಕ್ಕುಗಳು.

(ಇದರ ಪುಟದಿಂದಮುಂದೆ ಸಾಗಿದ್ದು.)

ಶಾಹೂಮಹಾರಾಜನು ಬೇಕಾದರೆ, ಸ್ವಶಕ್ತಿಯಿಂದ ಅವುಗಳನ್ನು ಕೈವಶ ಮಾಡಿಕೊಳ್ಳಬೇಕು ಎಂಬದೊಂದು ಹೊಸ ಕಲ ಮನ್ನು ಹಾಕಿದನು. ಈ ಕಲಮಿನ ಆಧಾರದಿಂದಲೇ ಶಾ ಹೂರಾಜನು ತನ್ನ ಹತ್ತು ಸಾವಿರ ರಾಹುತರನ್ನು ಸಯ್ಯದ ಸುಭೇದಾರನ ನೆರವಿಗಾಗಿ ಕಳುಹಿದನು. ಈ ಸೈನ್ಯದಲ್ಲಿ ಬಹುತರವಾಗಿ ಪ್ರಮುಖ ಮಹಾರಾಷ್ಟ್ರ ಸರದಾರರು ಇ ದ್ದರು. ಅವರಲ್ಲಿ ಸಂತಾಜಿ ಭೋಸಲೇನೂ, ಉದಾಜಿ ಪವಾ ರನೂ, ಅಥವಲೆ ವಿಶ್ವಾಸರಾಯನೂ, ಅಗ್ರೇಸರರು. ಬಾ ಳಾಜಿ ವಿಶ್ವನಾಥನಿಗೂ, ಸಯ್ಯದ ಸುಭೇದಾರರಿಗೂ ಆದ ಈ ಒಡಂಬಡಿಕೆಯ ಕಾಗದಕ್ಕೆ ಬಾದಶಹನ ಸಮ್ಮತಿಯು ದೊ ರೆಯಿತು. ಈ ಕಾರ್ಯವು ಕೊನೆಗಂಡ ಕೂಡಲೇ ಸಯ್ಯದ ಸುಭೇದಾರನು ಒಮ್ಮಿಂದೊಮ್ಮೆ ದಿಲ್ಲಿಗೆ ದಾಳಿ ಇಟ್ಟನು. ಇವನೊಡನೆ ಮಹಾರಾಷ್ಟ್ರ ರ ೧೫೫೦೦ ಬಲಾಢ್ಯ ಸೈನ್ಯವು ಹೊರಟಿತು. ದಂಭಾಡೆ ಖಂಡೇರಾಯನೂ, ಬಾಳಾಜಿ ವಿಶ್ವ ನಾಥನೂ, ಖಾನೂಮಾಹಾದಾಜಿಯೂ ಇವರೊಡನೆ ಇದ್ದರು. ಇವರಲ್ಲಿ ಭೋಸಲೆ ಸಂತಾಜಿಯೂ ಖಾನು ಮಹಾದಾಜಿ

ಯೂ ಬಂದು ಚಿಕ್ಕ ಕದನದಲ್ಲಿ ಮಡಿದುಹೋದರು. ಇದೇ ಸಂಧಿಯಲ್ಲಿ ಬಾದಶಹನ ಕೊಲೆಯಾಗಿ, ಮಹಮ್ಮದಶಹನು ದಿಲ್ಲಿಯ ಪಟ್ಟವೇರಿದನು. ಇವನು ಶಾಹುರಾಜನಿಗಾಗಿ ಸ್ವ ರಾಜ್ಯ ಚೌಥಾಯಿ, ಸರದೇಶಮುಖಿ ಎಂಬ ಮೂರು ಸನ ದುಗಳನ್ನು ಬಾಳಾಜಿ ವಿಶ್ವನಾಥನ ಕೈಯಲ್ಲಿ ಕೊಟ್ಟನು ಈ ಮೇರೆಗೆ ಸರ್ ೧೭೧೯ ರಲ್ಲಿ ಮಹಾರಾಷ್ಟ್ರರ ರಾಜ್ಯದ ಸ್ಥಾಪಕನಾದ ಶಿವಾಜಿಯು ಬೇಡಿದ ಹಕ್ಕುಗಳು ಅವನ ಮೊ ಮ್ಮಗನಾದ ಶಾಹುರಾಜನ ಕಾಲಕ್ಕೆ ಜಾಣಮಂತ್ರಿಯಾದ ಬಾಳಾಜಿ ವಿಶ್ವನಾಥನಿಂದ ಸಂಪಾದಿಸಲ್ಪಟ್ಟವು.

ಈ ಬಗೆಯಾಗಿ ಮಹಾರಾಷ್ಟ್ರರಿಗೆ ಸ್ವರಾಜ್ಯವು ಪ್ರಾಪ್ತ ವಾಯಿತು. ಆದರೆ ಈ ಕಾಲದಲ್ಲಿ ಆ ರಾಜ್ಯದ ವಿಸ್ತಾರವು ಮೊದಲಿಗಿಂದ ಎಷ್ಟೋ ವೃದ್ಧಿ ಹೊಂದಿತ್ತು. ಇದರ ತಲಾ ವಾಯದಲ್ಲಿ ಮಹಾರಾಷ್ಟ್ರರು ಗಳಿಸಿದ ಸೀಮೆಯು ಸ್ವರಾ ಜ್ಯದೊಳಗೇ ಎಣಿಸಲ್ಪಡಹತ್ತಿತು ಸ್ವರಾಜ್ಯದ ಸನದಿನಲ್ಲಿ ಇದರ ವಿಸ್ತಾರವನ್ನು, ಮೇರೆಯನ್ನು ವಿವರಿಸಿದ್ದು ಹ್ಯಾಗಂ ದರೆ--ಘಟ್ಟದ ಮೇಲ್ಭಾಗದಲ್ಲಿ ಇಂದ್ರಾಯಣೀ, ಹಿರಣ್ಯಕೇ ಶಿಯ ನದಿಗಳ ನಡುವಿನ ಪ್ರದೇಶವು. ಮಾವಳ, ಸಾತಾರಾ ಕೊಲ್ಹಾಪುರ ಮುಂತಾದ ಪ್ರಾಂತಗಳೂ, ಭೀಮಾ, ನೀರಾ ನದಿಗಳ ನಡುವಿನ ಪ್ರದೇಶವೂ, ಉತ್ತರ, ದಕ್ಷಿಣ, ಕೊಂ ಕಣ ಪ್ರಾಂತಗಳೂ, ತೀರ ದಕ್ಷಿಣದಲ್ಲಿ ಗದಗ, ಕೊಪ್ಪಳ, ಹಲ್ಲಿಯಾಳ, ಬಳ್ಳಾರೀ ಪ್ರಾಂತಗಳೂ. ಈ ಕಡೆಯ ಪ್ರಾಂ ತಗಳು ತಂಜಾವರ, ಜಿಂಜೀ ಪ್ರಾಂತಗಳ ವರೆಗೆ ಅಡ್ಡಾಡಲಿ ಕ್ಕೆ ಅನುಕೂಲವಾಗಿದ್ದವು. ಈ ಸಾನ್ಯದಿಶೆಯಲ್ಲಿ ಈ ಸ್ವರಾ ಜ್ಯದ ಮೇರೆಯು ಸಂಗಮನೇರ, ಬಾಗಲಾಣ ಖಾನದೇಶ ಗಳ ವರೆಗೆ ಹಬ್ಬಿತು. ಖಾನದೇಶವು ಮಾತ್ರ ಸ್ವರಾಜ್ಯದಲ್ಲಿ ಸೇರಿದ್ದಿಲ್ಲ. ಅದರ ಬಡಲು ಪಂಢರಪುರದ ನಿಟ್ಟಿಗೆ ಶಾಹೂ ರಾಜನು ತನ್ನ ಹದ್ದನ್ನು ಬೆಳಿಸಿಕೊಳ್ಳಬಹುದೆಂದು ಅಪ್ಪಣೆ ಕೊಟ್ಟಿದ್ದನು. ವರ್ಹಾಡ, ಖಾನದೇಶ, ಅವರಂಗಾಬಾದ, ಬೇದರ, ಹೈದರಾಬಾದ, ಹಾಗೂ ವಿಜಾಪುರ ಇವೇ ಆರು

ಮೊಗಲರ ದಕ್ಷಿಣದ ಸುಭೆಗಳು ಈ ಆರು ಸುಭೆಗಳಲ್ಲಿ ಮಹಾರಾಷ್ಟ್ರರಿಗೆ ಚೌಥಾಯಿಯನ್ನು ಎತ್ತುವ ಅಧಿಕಾರವು ದೊರೆದಿತ್ತು. ಈ ಆರು ಸುಭೆಗಳ ಉತ್ಪನ್ನವು ೧೪ ಕೋಟಿ ಎಂದು ಗೊತ್ತಾಗಿತ್ತು. ಈ ಉತ್ಪನ್ನದಲ್ಲಿ ಚೌಥಾಯಿ ಅಂದರೆ ಹುಟ್ಟುವಳಿಯಲ್ಲಿ ನಾಲ್ಕನೇ ಪಾಲು, ಸರದೇಶಮುಖಿ ಅಂದರೆ ಹುಟ್ಟುವಳಿಯಲ್ಲಿ ೧೦ನೇ ಪಾಲು ಮಹಾರಾಷ್ಟ್ರರಿಗೆ ಬರತಕ್ಕವು. ಸರದೇಶಮುಖಿಯು ವತನವೆನಿಸಿಕೊಳ್ಳುತ್ತಿದ್ದಂತೆ ಚೌಥಾಯಿಯು ಅಲ್ಲ. ಇದು ಕೇವಲ ದೇಶದಲ್ಲಿ ಶಾಂತತೆಯನ್ನು ಕಾಯ್ದುಕೊಳ್ಳುವದಕ್ಕಾಗಿ ಸಲ್ಲುವ ಸಂಬಳವೆಂದು ತಿಳಿಯತಕ್ಕದ್ದು. ಮಹಾರಾಷ್ಟ್ರರಿಗೆ ಇವೆರಡೂ ಹಕ್ಕುಗಳು ಕೂಡಿ ಸುಮಾರು ೬೪ ಕೋಟಿ ರೂಪಾಯಿ ಬರತಕ್ಕದ್ದು. ಆದರೆ ಔರಂಗಜೇಬನ ಯುದ್ಧದಿಂದ ಬತ್ತಿನ ಹಣದಲ್ಲಿ ೪ನೇ ಪಾಲು ಸಹ ಕೈಗೆ ಹತ್ತುತ್ತಿದ್ದಿಲ್ಲ. ಈ ಸುಭೆಯಲ್ಲಿ ಸ್ಥಾನಿಕ ವೆಚ್ಚವಾದರೂ ಹಚ್ಚಿತ್ತು. ಇದಲ್ಲದೆ ಸುಭೇದಾರರು ಜವಾಬಂದಿಯು ಮುಕ್ತಲು ಹಣವನ್ನು ದಿಲ್ಲಿಗೆ ಕಳಿಸಬೇಕಾಗುತ್ತಿತ್ತು. ಪಸ್ತುಸಿತಿಯು ಈ ಮೇರೆಗೆ ಗೊಂದಲವುಳ್ಳದ್ದಿದ್ದದರಿಂದ ಮಹಾರಾಷ್ಟ್ರರಿಗೆ ಹಣವು ಸುಸೂತ್ರವಾಗಿ ಸಲ್ಲದಂತಾಯಿತು. ಆದರಿಂದ ಸನದು ಸಿಕ್ಕರೂ ಅಸಂತೋಷದ ಬೊಡ್ಡಿಯು ಹಾಗೇ ಉಳಿಯಿತು ಅವರು ಸರದೇಶಮುಖಿ ಚೌಥಾಯಿಗಳಿಗೆ ರಾಜಬಾಬತಿ ಎಂದು ಹೆಸರನ್ನಿಟ್ಟು ತಮ್ಮ ಕೈಸಾಧಿಸಿದಲ್ಲೆಲ್ಲಾ ಎತ್ತಲಿಕ್ಕೆ ಹತ್ತಿದರು. ಹೀಗೆ ಮಹಾರಾಷ್ಟ್ರರು ಮೊಗಲರ ಸುಭೆಯಲ್ಲಿ ತಮ್ಮ ಅಧಿಕಾರವನ್ನು ಕ್ರಮವಾಗಿ ನಡಿಸುತ್ತ ನಡಿಸುತ ಕಡೆಗೆ ಆ ಸುಭೆಗಳನ್ನೆಲ್ಲಾ ಬಹುತರವಾಗಿ ತಮ್ಮ ಅಧೀನದಲ್ಲಿಯೇ ತಂದರೆಂದು ಹೇಳಲಿಕ್ಕೆ ಅಡ್ಡಿ ಇಲ್ಲ ಈ ಕಾರ್ಯಕ್ಕೆ ಮಹಾರಾಷ್ಟ್ರರಿಗೆ ಬಹಳ ಶ್ರಮವು ಆಯಿತೆಂದು ಹೇಳುವ ಅವಶ್ಯವಿಲ್ಲ. ಬಾದಶಹನಿಂದ ಸನದು ಸಿಕ್ಕಿದ್ದರೂ ಸುಭೇದಾರರ ಕಡೆಯಿಂದ ಕೆಲಸ ಮಾಡಿಸಿಕೊಳ್ಳುವದು ಸಾಮಾನ್ಯವಾದ ಕಾರ್ಯವಲ. ಬಾ

ಶಹನು ಸಯ್ಯದರನ್ನು ಕೆಲಸದಿಂದ ತೆಗೆಯುವಾಕಿದ ಬಳಿಕ ನಿಜಾಮುಉಲ್ಮುಲ್ಕನು ದಕ್ಷಿಣದ ಸುಭೇದಾರನಾದನು. ಬಾದಶಹನು ಮಹಾರಾಷ್ಟ್ರರಿಗೆ ಈ ಹಕ್ಕುಗಳನ್ನು ಕೊಟ್ಟದ್ದು ಇವನಿಗೆ ಸರಿಬರಲಿಲ್ಲ. ಆದರಿಂದ ಇವನು ಚೌಥಾಯಿಸರದೇಶಮುಖಿಯ ಹಣವನ್ನು ಎಂದೂ ಸುರಕ್ಷಿತವಾಗಿ ಮುಟ್ಟಗೊಡಲಿಲ್ಲ. ಇವನು ಇಪ್ಪತ್ತು ವರ್ಷಗಳ ವರೆಗೆ ಮಹಾರಾಷ್ಟ್ರರೊಡನೆ ಹೋರಾಡಿದನು. ಕಡೆಗೆ ಎರಡನೇ ಬೇಶ್ಟಿಯನಾದ ಹಿರೇ ಬಾಜೀರಾಯನು ಇವನನ್ನು ಹಣ್ಣಿಗೆ ತಂದು ಆ ಸನದುಗಳಿಗೆ ಮಾನ್ಯ ಮಾಡುವಂತೆ ಮಾಡಿದನು. ಒಮ್ಮೆ ನಿಜಾಮನು ಕೊಲ್ಹಾಪುರದ ಅರಸನಿಗೆ ಜುಜ್ಜಿ ಕೊಟ್ಟು ಚೌಥಾಯಿ, ಸರದೇಶಮುಖಿಗಳಿಗೆ ತನ್ನದೂ ಹಕ್ಕು ಉಂಟೆಂದು ಅವನಿಂದ ನುಡಿಸಹತ್ತಿದನು. ಮತ್ತೊಮ್ಮೆ ನೀವು ದೇಶದಲ್ಲಿ ಶಾಂತತೆಯನ್ನು ಕಾಯ್ದುಕೊಂಡರೆ ಮಾತ್ರ ನೀವು ಈ ಹಕ್ಕಿಗೆ ಬಾಧ್ಯರು. ಆದರೆ ದೇಶದಲ್ಲಿ ಸ್ವಾಸ್ಥ್ಯ ಇಲ್ಲ. ನಿಮಗೆ ಈ ಹಣವು ಸಿಗಲಾರದೆಂದು ನೆಪ ತೆಗೆದನು. ಕಡೆಗೆ ಬಾಜೀರಾಯನು ಹೈದರಾಬಾದಿನ ನೆರೆಯ ಪ್ರದೇಶದ ಪೊರ್ತು ಎಲ್ಲ ಕಡೆಯಲ್ಲಿಯೂ ಈ ಹಣವನ್ನು ಎತ್ತಬಹುದೆಂದು ನಿಜಾಮನ ಒಪ್ಪಿಗೆಯನ್ನು ಪಡೆದನು. ಆದರೂ, ನಿಜಾಮನು ಹೊತ್ತು ಸಾಧಿಸಿ ಮುರಳಿ ಕೊಲ್ಹಾಪುರದ ರಾಜನ ಹಕ್ಕುಂಟೆಂದು ನುಡಿಯಹತ್ತಿದನು. ಕೊಲ್ಹಾಪುರದ ರಾಜನಾದರೂ ಇವನ ಮಾತಿಗೆ ಮರುಳಾಗಿ ಕದನ ಕೆದರಿದನು. ಕಡೆಗೆ ಸಾತಾರೆ, ಕೊಲ್ಹಾಪುರಗಳ ಅರಸರು ಕೈಬೆರಸಿ ಕಾದಾಡಿದರು. ಆದಗಲ್ಲಿ ಕೊಲ್ಹಾಪುರದವನು ಸೋತಬಳಿಕ ಈ ಇಬ್ಬರು ಅರಸರು ಸಾತಾರೆಯಲ್ಲಿ ಒಪ್ಪಂದ ಮಾಡಿಕೊಂಡರು. ಒಪ್ಪಂದದಲ್ಲಿ ಸ್ವರಾಜ್ಯ ಚೌಥಾಯಿ, ಸರದೇಶಮುಖಿ ಮುಂತಾದ ಬಾದಶಹನಿಂದ ದೊರೆತ ಹಕ್ಕುಗಳನ್ನು ಶಾಹುರಾಜನೇ ಅನುಭವಿಸಬೇಕೆಂತಲೂ ವಾರಣಾ ನದಿಯ ದಕ್ಷಿಣದಿಂದ ತುಂಗಭದ್ರೆಯವರೆಗಿರುವ ಸ್ವಾಂತವನ್ನೂ ಕೊಲಾಪುರದ ಅರಸನು ಆಳಬೇಕೆಂತಲೂ ಗೊತ್ತಾಯಿತ್ತು. ಈ ಮೇರೆಗೆ ಮೂರು ಬಾರಿ ಕಾ

ಳಗವೆಸಗಿ ಎರಡು ಸಾರಿ ಬಾದಶಹನ ಮುಂಜೂರಿಯು ದೊ
ರೆತು, ಕಡೆಗೆ ೧೫೭೦ ರಲ್ಲಿ ಈ ಹಕ್ಕುಗಳು ಕಾಯುದೆಯಂ
ತೆ ದೊರೆತ ಹಕ್ಕುಗಳೊಳಗೆ ಎಣಿಸಲ್ಪಟ್ಟವು. ಆದರೆ ದಪ್ಪೆ
ಣದೊಳಗಿನ ಮೊಗಲ ಸುಭೆಯ ಅಧಿಕಾರಿಗಳು ಸುಸೂತ್ರ
ವಾಗಿ ಈ ಹಕ್ಕಿನ ಹಣವನ್ನು ಕೊಡುತ್ತಿದ್ದಿಲ್ಲ. ಕಾಲಕಾ
ಲಕ್ಕೆ ಶೇಶವರು ಇವರೊಡನೆ ಕಾಳಗ ಮಾಡಿಯೇ ಹಣ
ತಕ್ಕೊಳ್ಳಬೇಕಾಗುತ್ತಿತ್ತು. ೧೬೬೦ರಿಂದ ೧೭೮೦ ಅನೇಕ
ಸಾರೆ ಕಾಳಗಗಳಾಗಿ ಅಹಮ್ಮದನಗರ, ಬೆಳಗಾವ, ಧಾರ
ವಾಡ, ಸೊಲ್ಲಾಪೂರ, ಬಿಜಾಪೂರ ಮುಂತಾದ ಪ್ರಾಂತಗಳ
ನ್ನು ತಕ್ಕೊಂಡರು. ಹೀಗಾಗಿ ಸ್ವರಾಜ್ಯದ ವಿಸ್ತಾರವು
ಬೆಳೆಯಿತು.

ಸಾರಾಂಶ--ನಾವು ಈಗೀರಡು ಮೂರು ತಿಂಗಳಿಂದ ಬರೆ
ಯುತ್ತಿದ್ದ ಈ ಲೇಖವನ್ನು ಮಥಿಸಿ ನೋಡಲು, ಶಿವಾಜಿಯು
ಅರಂಭದಿಂದ ಸಾವಭ್ರಾಜ್ಯಾಧಿಕಾರವನ್ನು ಬಯಸುತ್ತಿದ್ದನೆ
ಲ್ಲದೆ, ಕೆಲವೊಂದು ಪ್ರಾಂತವನ್ನು ಆಳುತ್ತ, ಮೈಭವವನ್ನು
ಅನುಭೋಗಿಸಬೇಕೆಂದು ಹವಣಿಸುತ್ತಿದ್ದಿಲ್ಲವೆಂಬದು ವ್ಯಕ್ತ
ವಾಗುವದು. ಆವಾಜೀನ ಕಾಲದಲ್ಲಿ ದುಡ್ಡು ಇಸಕೊಂ
ಡ ಸೈನ್ಯವನ್ನು ನೆರವು ಕೊಡುತ್ತ ತಮ್ಮ ವರ್ಚಸ್ಸನ್ನು ಸ್ಥಾ
ಪಿಸಲೆತ್ನಿಸುವ ರೀತಿಗೂ ಇದಕ್ಕೂ ಭೇದವಿಲ್ಲ. ಈ ಪದ್ಧ
ತಿಯು ಜ್ಞಾನವು ಮೆಲ್ಲಿಸ್ಲಿಗಿಂತ ನೂರಾರು ವರ್ಷ ಮೊದಲೇ
ಹುಟ್ಟಿದ ಶಿವಾಜಿಯ ಮನದಲ್ಲಿ ಮೊದಲಿಗೆ ಉದ್ಭವಿಸಿತು
ಇವನ ಉತ್ತರ ಅಧಿಕಾರಿಗಳು ಆದೇ ತತ್ವದ ಆಧಾರದಿಂ
ಮಹಾರಾಷ್ಟ್ರ ರಾಜ್ಯವನ್ನು ಸಾರ್ವಭೌಮಾಧಿಪತ್ಯದ ಸ
ರೂಪಕ್ಕೆ ತಂದದ್ದಲ್ಲದೆ, ಅದರ ವಿಸ್ತಾರವನ್ನು ಸಿಂಧು. ಗ
ಗಾ ನದಿಗಳಿಂದ ಕಾವೇರಿಯ ವರೆಗೂ ನರ್ಮದೆಯಿಂದ ಮ
ಹಾನದಿಯ ವರೆಗೂ ಹಬ್ಬಿಸಿದರು. ಮಹಾರಾಷ್ಟ್ರರ
ಗೆದ್ದಾಗ ತುಸು ಪ್ರದೇಶವನ್ನು ತಕ್ಕೊಳ್ಳುತ್ತ ಬಂದಿದ್ದ
ಅವರ ಮಹತ್ವಕಾಂಕ್ಷೆಯು ಎಂದಿಗೂ ನೆರವೇರುತ್ತಿದ್ದಿಲ್ಲ

KANARESE LANGUAGE.

ಕನ್ನಡ ನುಡಿ.

(೧೩ನೇ ಪುಟದಿಂದ ಮುಂದೆ ಸಾಗಿದ್ದು.)

ಇಂತಹ ಭಾಷೆಗೆ ಕಾರಣವಾದ ಲಿವ್ಯಕ್ತರೂಪ ವಿಷಯವು. ಗ್ರಂಥಗಳನ್ನೋದುವದರಿಂದಲಾಗಲೀ, ಕೇಳಿವ್ದರಿಂದಲಾಗಲೀ, ಮನಸ್ಸಿನಲ್ಲಿ ಸಂಸ್ಕಾರ ರೂಪದಿಂದ ಇರುವದನ್ನು: ಅಥವಾ ಸ್ಮತಃ ಮನಸ್ಸಿಗೆ ಗೋಚರವಾದುದನ್ನು; ವ್ಯಕ್ತಗೊಳಿಸುವದು. ಈ ವ್ಯಕ್ತರೂಪವಾದ ಭಾಷೆಯು ಶಬ್ದಾತ್ಮಕವಾಗಿ ಕಿನಿಗೆ ಕೇಳಿದರೆ ಶ್ರಾವಣ (ಕಿವಿಗೆ ಕೇಳಿದ್ದು) ವೆಂದು ಲಿಪಿಭೇದವೃತ್ತಿಯಿಂದ ಕಣ್ಣಿಗೆ ಕಂಡರೆ ಚಾಕ್ಷುಷ (ಕಣ್ಣಿಗೆ ಗೋಚರವಾದ್ದು) ಎಂದೂ ಎನಿಸಿಕೊಳ್ಳುವದು. ಈಯಭಿಪ್ರಾಯವನ್ನೇ ಕೇಶಿರಾಜನು,

ವ್ಯವಹರಿಪುವೆರಡುರೂಪಿಂ।
ದವೆಕ್ಕರಂ ಶ್ರಾವಣಂಸ್ವನೈಕಾಕಾರಂ॥
ವಿವಿಧಾಕಾರಂ ಲಿಪಿಭೇ।
ದವೃತ್ತಿಯಿಂ ಚಾಕ್ಷುಷಂ ಪುರಾತನ ಮತದಿಂ॥

ಎಂಬ ಸೂತ್ರದಿಂದ ಹೇಳಿರುವನು. ಇಲ್ಲಿ ಲಿಪಿಯೂ ಉಚ್ಚಾರಾನುಗುಣವಾಗಿರುವದರಿಂದ ಭಾಷೆಯೆನಿಸುವದು. ಎಂದು ತಿಳಿಯಬೇಕು. ಇಂತಹ ಭಾಷೆಯು ಪ್ರಾಯಶಃ ಶಬ್ದ (ಪದ) ಸಮೂಹವುಳ್ಳುದಾಗಿ ಸಂಪೂರ್ಣವಾದ ಒಂದು ಮನೋಭಿಪ್ರಾಯವನ್ನು ಪೂರ್ಣವಾಗಿ ತಿಳಿಸುತ್ತದೆ. ಹಾಗೆ ಸಂಪೂರ್ಣವಾದ ಮನೋಗತವನ್ನು ಸ್ಪಷ್ಟಪಡಿಸಲು ಅದು ಕೇವಲ ಶಬ್ದಾತ್ಮಕವಾಗಿರದೆ ಅರ್ಥವತ್ತಾಗಿಯೂ, ಪರಸ್ಪರಾನ್ವಯ ಯೋಗ್ಯವಾಗಿಯೂ, ನಿರಾಕಾಂಕ್ಷಿತವಾಗಿಯೂ, ವಿಕವಸ್ತುವಿಷಯಕವಾಗಿಯೂ ಇರುವ ಶಬ್ದಗಳುಳ್ಳದ್ದಾಗಿರಬೇಕು. ಇಂತಹ (ಭಾಷೆ) ಶಬ್ದಸಮೂಹವನ್ನೇ ವಾಕ್ಯವೆಂದೂ ನುಡಿ (ಮಾತು) ಯೆಂದೂ ವ್ಯವಹರಿಸುತ್ತಾರೆ. ಈ ವಿಷಯವನ್ನು "ತಿಙ್ಸುಬಂತಚಯೋವಾಕ್ಯಂ" (ಸುಂಬತ ತಿಙಂತಗಳ ಸಮೂಹವೇ ವಾಕ್ಯವು) ಅಥವಾ "ಕ್ರಿಯಾವಾ ಕಾರಕಾನ್ವಿತಾ" (ಕರ್ತ್ರಾದಿಕಾರಕಗಳಿಂದೊಡಗೂಡಿದ)

ಸಂಬದ್ಧವಾದ) ಕ್ರಿಯೆಯು ವಾಕ್ಯವು) ಎಂಬದಾಗಿ ಅವು
ರಸಿಂಹನೂ,

ವಾಕ್ಯಂ ತತ್ಸ್ಯಾಭಿಮತಂ ಪರಸ್ಪರಂ ಸವ್ಯಪೇಕ್ಷವೃತೀ
ನಾಂ ॥

ಸಮುದಾಯಶ್ಚಬ್ದಾನಾಮೇಕಪರಾಕಾಮನಾಕಾಂಕ್ಷಃ ॥
(ಪರಸ್ಪರಾನ್ವಯಯೋಗ್ಯವಾಗಿಯೂ ಏಕವಸುವಿಷಯ
ಕವಾಗಿಯೂ ನಿರಾಂಕ್ಷಿತವಾಗಿಯೂ ಇರುವ ಶಬ್ದಸಮುದಾ
ಯವು ವಾಕ್ಯವು) ಎಂದು ಅಲಂಕಾರಸೂತ್ರದಲ್ಲಿ ವಾಮನ
ನೂ ಇದೇ ರೀತಿಯೇ ಶಬ್ದಾನುಶಾಸನದಲ್ಲಿ ಭಟ್ಟಾಕಳಂ
ಕನೂ,

ವಿದಿತಾರ್ಥಂಕ್ಷೋದಕ್ಷಮು |
ಮುದಾತಶಬ್ದಂ ಪರಸ್ಪರಂ ಸಾಪೇಕ್ಷಂ ॥
ಪದಸಮುದಾಯುಂ ವಾಕ್ಯಂ |
ವ್ಯುದಸ್ತ ಕಾಂಕ್ಷಂ ತದೇಕವಸ್ತುನಿಬದ್ಧಂ ॥

ಎಂದು ಕಾವ್ಯಾವಲೋಕನದಲ್ಲಿ ನಾಗವರ್ಮನು ಹೇಳಿ
ರುವನು ಅಲ್ಲದೆ,

" ಱುರಿವಂತು ಪೆರರ ಬಗೆಯುಂ |
ತೆರೆಗಿರೆಪರಗೆರಿಪಲಾರ್ಪವಂ ಮಾತರಿವಂ ॥ "

(ತನ್ನ ಮನೋಭಿಪ್ರಾಯವನ್ನಾಗಲಿ ಇತರರ ಮನೋಭಿ
ಪ್ರಾಯವನ್ನಾಗಲಿ ಸ್ಫುಟವಾಗಿ ಇತರರಿಗೆ ತಿಳಿಸುವ ಸಾಮ
ರ್ಥ್ಯವುಳ್ಳವನೆ ಮಾತನ್ನು ಬಲ್ಲವನು) ಎಂದೂ " ನೆಟ್ಟಗೆ
ಮಾತಾಡುವ ಬಲ್ಮೆ ಚಿತಳೊರಲ್ದಿರ್ದರ್ಥಮುಂ ಕೂಡೆ ನಾ
ಲಿಗೆಯಿಂ ರಂಜಿಸುವ ಶಕ್ತಿ " (ಮನಸ್ಸಿನಲ್ಲಿರುವ ಅರ್ಥವನ್ನು
ವಾಕ್ಯದ ಮೂಲಕ ನಾಲಿಗೆಯಿಂದ ಹೊರಗೆ ಪ್ರಕಾಶಪಡಿ
ಸುವ ಶಕ್ತಿಯುಳ್ಳವನೆ ಮಾತನ್ನು ಬಲ್ಲವನು) " ಎಂಬದಾಗಿ
ಯೂ ನೃಪತುಂಗ ಕವಿಕಾಮರು ಕವಿಗಳನ್ನು ಪ್ರಶಂಸೆ
ಮಾಡುವಾಗ ತಮ್ಮನೋಭಿಪ್ರಾಯವನ್ನು ವ್ಯಕ್ತಪಡಿಸುವ
ವಾಕ್ಯವನ್ನು ಶ್ಲಾಘಿಸಿದ್ದಾರೆ. ಅಂತು ಅರ್ಥಜ್ಞಾನಕ್ಕಾಗಿ
ಭಾಷೆಯನ್ನು ವ್ಯವಹರಿಸುವದರಿಂದ ಆ ಅರ್ಥವು ಮೊದ
ಲು (ವಾಕ್ಯವನ್ನು ಕೇಳಿದಾಗ) ಅದರಲ್ಲಿರುವ ಪದಗಳಿಂದ

ಶಬ್ದ ಅರ್ಥಜ್ಞಾನವಾಗಿ ಬಳಿಕ ಅವುಗಳ ಪರಸ್ಪರ ಸಂಬಂಧ ಜ್ಞಾನಪೂರ್ವಕವಾದ ಅಖಂಡ ವಾಕ್ಯಾರ್ಥರೂಪವಾಗಿಯೇ ಗೋಚರಿಸುವದೆಂದು ಕೆಲವರೂ ವಾಕ್ಯಶ್ರವಣ ಸಮಯದಲ್ಲಿ ಮೊದಲೇ ಅದರಲ್ಲಿರುವ ಶಬ್ದಗಳ ಪರಸ್ಪರ ಸಂಬಂಧ ಜ್ಞಾನಪೂರ್ವಕವಾದ ಅಖಂಡ ವಾಕ್ಯಾರ್ಥವೇ ಗೋಚರವಾಗುವದೆಂದು ಮತ್ತೆ ಕೆಲವರೂ ಹೇಳುತಾರೆ. ಅದು ಹೇಗಾದರೂ ಇರಲಿ ಸಾಮಾನ್ಯವಾಗಿ ಮಾತನಾಡುವಾಗಲೀ ಅಥವಾ ಕೇಳುವಾಗಲೀ ಪ್ರಾಯಶಃ ಶಾಸ್ತ್ರಾರ್ಥ ಜ್ಞಾನಪೂರ್ವಕ ಶಬ್ದಪ್ರಯೋಗ ಮಾಡದಿದ್ದರೂ ಅಂಥವರ ವ್ಯವಹಾರವೂ ಕೂಡ ಕ್ರಮವಾಗಿ ನಡೆಯುವದನ್ನು ನೋಡಲು ಅವರೆಲ್ಲರಿಗೂ ವಾಕ್ಯಶ್ರವಣ ಸಮಯದಲ್ಲಿಯೇ ಶಬ್ದಗಳ ಪರಸ್ಪರ ಸಂಬಂಧ ಜ್ಞಾನರೂಪವಾದ ಅಖಂಡ ವಾಕ್ಯಾರ್ಥವೇ ಸ್ಫುರಿಸುವದೆಂದು ಹೇಳಬಹುದು.

ಮೇಲಿನ ವಿವರದಲ್ಲಿ ಹೇಳಿದಂತೆ ಭಾಷೆಯು ಅರ್ಥವತ್ತಾಗಿರಲು ಸ್ಪಷ್ಟೋಚ್ಚಾರಿತವಾಗಬೇಕು. ಉಚ್ಚಾರಣೆ ಮೊದಲಾದ ದೋಷಗಳಿಂದಲೇ ವಾಕ್ಯಾರ್ಥ ಜ್ಞಾನಕ್ಕೆ ಸಂಶಯವುಂಟಾಗುವದೆಂದು ಅನೇಕರು ಹೇಳಿರುವರು. ಆದುದರಿಂದ ಈ ವಿಷಯದಲ್ಲಿ ವಿಶೇಷ ಗಮನವನ್ನು ಕೊಡಬೇಕು. ವಿಚಾರಣೆಯ ಕ್ರಮವನ್ನು

"ಗಂಭೀರಂ ಮಧುರಂ ಮನೋಹರತರಂ ದೋಷವ್ಯಪೇತಂ ಹಿತಂ।
ಕಂಠೋಷ್ಠಾದಿವಚೋನಿಮಿತ್ತರಹಿತಂ ನೋವಾತರೋಷೋದ್ಗತಂ ॥
ಸ್ಪಷ್ಟಂತತ್ತದಭೀಪ್ಸವಸ್ತುಕಥಕಂ" (ಬಹಳ ಮೆಲ್ಲಗೂ ಬಹಳ ಗಟ್ಟಿಯಾಗಿಯೂ ಉಚ್ಚರಿಸದೆ, ಕೋಮಲವರ್ಣಯುಕ್ತವಾಗಿಯೂ ಕಿವಿಗಿಂಪಾಗಿಯೂ ದೋಷರಹಿತವಾಗಿಯೂ ವರ್ಣಗಳ ಸ್ಥಾನಗಳನ್ನತಿಕ್ರಮಿಸದೆಯೂ ಆಯಾ ಮನೋಭಾವವನ್ನು ಪ್ರಕಟಿಸುವಂತೆಯೂ ಉಚ್ಚರಿಸಬೇಕು)

(ಸಶೇಷ)

AGRICULTURE.

ಕೃಷಿಶಾಸ್ತ್ರವು.

(೩೪ನೇ ಪ್ರಟದಿಂದ ಮುಂದೆ ಸಾಗಿದ್ದು)

ಕಾಳಿನ ಬೆಳೆಗಳು—(ಅ) ಗೋಧಿ, ಜವೆಗೋಧಿ, Oats (ಓಟ್ಸ್) Rye (ರಾಯೆ) ಮುಂತಾದ ಖಾದ್ಯ ಧಾನ್ಯಗಳು ಅಥವಾ ಬಿಳಿ ಧಾನ್ಯದ ಬೆಳೆಗಳು (ಆ) ಬೇಳೆ ಅಥವಾ ಕರೆ ಧಾನ್ಯದ ಬೆಳೆಗಳು ಉದಾಹರಣಾರ್ಥವಾಗಿ ಅವರೆ ಕಾಳುಗಳು ಅಥವಾ ಬಟಗಡ್ಲಿ ಕಾಳುಗಳು.

ಕಾಳಿನ ಬೆಳೆಗಳಿಗೆ ಬೇರುಗಳ ಬೆಳೆಗಳಿಗೆ ಬೇಕಾಗುವ ಷ್ಟು ಕಠಿಣವಾದ ಸಾಗುವಳಿಯು ಪದ್ಧತಿಯು ಬೇಕಾಗುವದಿಲ್ಲ. ಈ ಬೆಳೆಗಳಿಂದ ಭೂಮಿಯು ಕಸುವು ಹೊರಟು ಹೋಗುತ್ತದೆ. ಆದರೆ ಬೇರುಗಳ ಬೆಳೆಗಳಿಂದ ಹೋದ ಕಸುವು ಪುನಃ ಬರುತ್ತದೆ. ಕಾಳುಗಳನ್ನು ಹೊಲದ ಹೊರಗೆ ಸಾಧಾರಣವಾಗಿ ಮಾರುವ ಕಾರಣ ಹೀಗಾಗುತ್ತದೆ.

ಸಾಗು ಮಾಡುವ ಸಾಧಾರಣ ಪದ್ಧತಿಯು—(ಅ) ಬೇರುಗಳ ಬೆಳೆಗಳಾದ ಮೇಲೆ ಭೂಮಿಯನ್ನು ಬಿತ್ತುವದು.

ನಾಲ್ಕು ಇಂಚು ಖೋಲವಾಗಿ ರಂಟೆ ಹೊಡೆಯಬೇಕು. ಆಮೇಲೆ ಹೊಸದಾಗಿ ತಿರಿವಿ ಹಾಕಿದ ನೇಗಿಲು ಸಾಲುಗಳಲ್ಲಿ ಕೈಚಳ್ಳಿಕೆಯಿಂದ ಬೀಜಗಳನ್ನು ಹಾಕಬೇಕು. ಕುಂಟೆಯನ್ನು ಹೊಡೆದು ಫಟ್ಟಿಯಾದ ನೇಗಿಲು ಸಾಲುಗಳನ್ನು ಒಡಿಯಬೇಕು. ಆಮೇಲೆ ಬೀಜಗಳನ್ನು ಮುಚ್ಚಬೇಕು. ವಸಂತಕಾಲದಲ್ಲಿ ರೂಲು ಆಡಿಸಿ ಕುಂಟೆ ಹೊಡೆಯಬೇಕು.

(ಬ) ಹುಲ್ಲಿನ ಬೆಳೆಯನಂತರ ಸಾಗು ಮಾಡುವದು.

ಮೊದಲು ರಂಟೆಯನ್ನು ಹೊಡೆದು, ಒತ್ತಿ, ಒತ್ತಿದ ನೇಗಿಲು ಸಾಲುಗಳಲ್ಲಿ ಬೀಜಗಳನ್ನು ಬಿತ್ತಬೇಕು. ಇಲ್ಲವೆ ರಂಟೆ ಹೊಡೆದು, ಒತ್ತಿ ಫಟ್ಟಿಯಾಗಿ ರೂಲನ್ನು ಆಡಿಸಬೇಕು. ಕುಂಟೆಯನ್ನು ಮೇಲಿಂದಮೇಲೆ ಹೊಡೆದು ಬೀಜವನ್ನು ಬಿತ್ತಬೇಕು.

(ಕ) ಅವರೆ ಮತ್ತು ಬಟಗಡ್ಲೆಗಳ ಬೆಳೆಗಳನಂತರ ಭೂಮಿಯನ್ನು ಸಾಗು ಮಾಡುವದು-ನೆಲದ ಮೇಲೆ ಸಗಣಿದು ನ್ನು ಹಾಕಿ ರಂಟೆ ಮತ್ತು ಕುಂಟೆಯನ್ನು ಹೊಡೆದು ಬೀಜ ಗಳನ್ನು ಬಿತ್ತಬೇಕು.

ಕಾಳುಗಳ ಬೆಳೆಗಳು ಫಲಿತ್ತಭೂಮಿಗೆ ತಕ್ಕವುಗಳಾಗಿರು ತ್ತವೆ. ಮತ್ತು ಇವುಗಳಿಗೆ ಫಲಿತ್ತವಾದ ಮಡಿ ಬೇಕಾಗು ತ್ತದೆ ಕರತಾಳದಲ್ಲಿ ಗೋಧಿಯನ್ನು ಬಿತ್ತಿದ್ದರೆ ಭೂಮಿಯ ಮೇಲ್ಬಾಗವನ್ನು ಹಾಗೇ ಫಲಿತ್ತವಾಗಿ ಬಿಟ್ಟುಬಿಡುವದು ಒಳ್ಳೇದು. ಯಾಕಂದರೆ ಹಾಗೆ ಮಾಡುವದರಿಂದ ಹೆಂಟೆಗಳು ಎಳೆ ಈ ಳುಗಳಿಗೆ ತಣ್ಣಗಿನ ಗಾಳಿಯು ಬಡಿಯದಂತೆ ಮಾ ಡುತ್ತವೆ

೩. ಹುಲ್ಲಿನ ಬೆಳೆಗಳು -- ಕ್ಲೊಹ್ವರ (Clover) ಎಂಬ ಹುಲ್ಲು ಸಾದಾ ಹುಲ್ಲುಗಳು ಮತ್ತು ಮೇವುಗಳ ಮಿಶ್ರಣದ ಲ್ಲಿ ಉಪಯೋಗಿಸಲ್ಪಡುವಂಥ ಎಲ್ಲ ಸಸಿಗಳು.

ಕ್ಲೊಹ್ವರ ಎಂಬ ಹುಲ್ಲಿನ ಮತ್ತು ಸಾದಾ ಹುಲ್ಲಿನ ಬೀಜ ಗಳನ್ನು ಧಾನ್ಯದ ಬೆಳೆಗಳ ಕೂಡ ಆಗಲೀ ಅವುಗಳಿಂದ ಮೇಲೆ ಆಗಲೀ ಬಿತ್ತುತ್ತಾರೆ. ಇಲ್ಲಿ ಧಾನ್ಯಗಳ ಬೆಳೆಗಳಂ ದರೆ ವಾಡಿಕೆಯಾಗಿ ಜವೆಗೋಧಿ ಇರುತ್ತದೆ. ಬೀಜಗಳ ನ್ನು ಬಹಳ ಹಗುರಾಗಿ ಬಿತ್ತಬೇಕು. ಕೇಂಬ್ರಿಜ ರೂಲಿ ನಿಂದ ಭೂಮಿಯನ್ನು ಒಡೆದು ಹುರುಬರುಕಾದ ಭೂಮಿ ಯ ಮೇಲೆ (Seed Harrw) ಸೀಡ ಬ್ಯಾರೋ ಎಂಬ ಯಂ ತ್ರದಿಂದ ಬೀಜಗಳನ್ನು ಬಿತ್ತುತ್ತಾರೆ. ಆಮೇಲೆ ಹುಲ್ಲಿನ ಬೀಜಗಳ ಕುಂಟೆಯಿಂದ ಹಗುರಾಗಿ ಭೂಮಿಯನ್ನು ಕುಂ ಟೆ ಹೊಡೆದು ಬ್ರಶ್ಶ ಅಂದರೆ ಕಸಬರಿಗೆಯನ್ನಾಡಿಸುತ್ತಾರೆ. ಇಲ್ಲವೆ ಸರಪಳಿಯ ಕುಂಟೆಯನ್ನು ಹೊಡೆಯುತ್ತಾರೆ.

ಕೆಂಪುಮಿಶ್ರ ಬಣ್ಣದ ಕ್ಲೊಹ್ವರ (Clover) ಎಂಬ ಹುಲ್ಲಿನ ಸಾಗುವಳಿಯು-- ಈ ಬೆಳೆಯನ್ನು ಸಾಧಾರಣವಾಗಿ ಇಂಗ್ಲಂ ಡದ ದಕ್ಷಿಣದಲ್ಲಿಯೇ ಬೆಳೆಯುತ್ತಾರೆ. ಇಂಗ್ಲಂಡದ ಉ ತ್ತರದಲ್ಲಿ ಈ ಬೆಳೆಯನ್ನು ಎಂದೂ ಬಿತ್ತುವದಿಲ್ಲ. ಕುರಿಗ ಳಿಗೆ ತಕ್ಕದಾದ ಉತ್ತಮ ಬೆಳೆಯು ವಸಂತಕಾಲದಲ್ಲಿ ಬರು

ತ್ತದೆ. ಹಸನಾದ ಜಿಗಟು ಮಣ್ಣಿನ ಮತ್ತು ಕೊಯಿಲು ಆ
ದ್ದ ಭೂಮಿಯಲ್ಲಿ ಈ ಬೆಳೆಯನ್ನು ಸಾಧಾರಣವಾಗಿ ಆಗಸ್ಟ
ದಲ್ಲಾಗಲೀ ಸಪಟಂಬರ ತಿಂಗಳ ಆರಂಭದಲ್ಲಾಗಲೀ ಬಿ
ತ್ತುತ್ತಾರೆ. ಮಯಲಿನ ಮೇಲೆ ನಾಲ್ಕು ಕುದುರೆಯ ಶಕ್ತಿ
ಯುಳ್ಳ ಯಂತ್ರಗಳನ್ನು ಎರಡೂ ದಿಕ್ಕಿನಲ್ಲಿ ಆಡಿಸುತ್ತಾರೆ.
ಆಮೇಲೆ ಕೈಯಿಂದ ಜೆಲ್ಲುವ ಯಂತ್ರಗಳಿಂದ ಬೀಜಗಳನ
ಬಿತ್ತಿ ಜನ್ನಾಗಿ ಕುಂಟೆ ಹೊಡೆಯುತ್ತಾರೆ ಇದಾದಮೇಲೆ
ಭೂಮಿಯಮೇಲೆ ಫಿಟ್ಟಿಯಾಗಿ ರೂಲನ್ನು ಆಡಿಸುತ್ತಾರೆ.

ಶಾಶ್ವತವಾಗಿ ಹುಲ್ಲು ಮೈದಾನವಾಗಿ ಮಾಡಿದ ಭೂಮಿಯ
ನ್ನು ಹೇಗೆ ಇಡಬೇಕೆಂಬುದರ ಬಗ್ಗೆ.—

ಕೆಸರುಮಣ್ಣಿನ ಭೂಮಿಯ ಬೆಲೆಯು ಕಡಿಮೆಯಾದದ್ದ
ರಿಂದಲೂ (ಗೋಧಿಯ ಬೆಲೆಯು ಈಗ ಬಹಳೇ ಇಳಿದಿರು
ತ್ತದೆ) ಮತ್ತು ಇಂಥ ಭೂಮಿಗಳನ್ನು ಸಾಗು ಮಾಡುವ
ವೆಚ್ಚವು ಬಹಳ ಬೀಳುವದರಿಂದಲೂ ಸಾಧಾರಣವಾಗಿ ಈ
ತರದ ಭೂಮಿಗಳನ್ನೆಲ್ಲ ಶಾಶ್ವತವಾದ ಹುಲ್ಲು ಮೈದಾನಗಳ
ನ್ನು ಮಾಡುವ ಕಡೆಗೇ ಈಗಿನ ಜನರ ಮನಸ್ಸು ಒಲಿಯು
ತ್ತದೆ. ಜಮೀನೋಧಿಗಳ ಕೂಡ ಆಗಲೀ ಇಲ್ಲವೆ ಬೇರೆ
ಅವಗಳಷ್ಟಕ್ಕೆ ಅವನ್ನೇ ಬೀಜಗಳನ್ನು ಬಿತ್ತಿ ಆಮೇಲೆ
ಎಷ್ಟೋ ವರುಷಗಳ ವರೆಗೆ ಭೂಮಿಯಲ್ಲಿ ಜನ್ನಾಗಿ ಗೊಬ್ಬ
ರ ಹಾಕಬೇಕು. ಮೊದಲು ಬೆಳೆಯನ್ನು ತಿಂದುಬಿಡಲಿಕ್ಕೆ
ಕೆಲವರು ಕುರಿಗಳನ್ನು ಹಚ್ಚಬೇಕಂತಲೂ ಬೇರೆ ಕೆಲವರು
ದನಗಳನ್ನು ಹಚ್ಚಬೇಕೆಂತಲೂ ಅನ್ನುತ್ತಾರೆ. ಯಾವ ಪ್ರಾ
ಣಿಗಳನ್ನು ಹಚ್ಚಿದಾಗ್ಯೂ ಅವುಗಳನ್ನು ತೀರ ಸವಿಾಪವಾಗಿ
ಮೇಯಿಸುವದು ಒಳ್ಳೇದಲ್ಲ. ಮೊದಲನೇ ವರುಷ ಸಾಧಾ
ರಣ ಚಲೋ ಬೆಳೆಯು ಮರುವರುಷ ಅದಕ್ಕೂ ಚಲೋ
ಬೆಳೆಯು ದೊರೆಯಬಹುದು. ಆಮೇಲೆ ಕೆಲವು ವರುಷಗ
ಳ ವರೆಗೆ ಬೆಳೆಯು ತೀರ ಕಡಿಮೆ ಕಡಿಮೆಯಾಗುತ್ತ ಹೋ
ಗುತ್ತದೆ ಆಮೇಲೆ ಅದು ಸುಧರಿಸಿ ೧೫-೨೦ ವರುಷಗ
ಳಲ್ಲಿ ಉತ್ತಮ ಹಳೇ ಹುಲ್ಲಬನ್ನಿಯಣಗುತ್ತದೆ ಹಳೇ ಹು
ಲ್ಲಬನ್ನಿ ಭೂಮಿಯಲ್ಲಿ ಜಾಗೃತವಾದ ವನಸ್ಪತಿ ಆಹಾರದ

ಎಷ್ಟೋ ಅಂಶವು ಇರುತ್ತದೆ. ವಿಶೇಷವಾಗಿ ಇಂಥ ಭೂಮಿಯಲ್ಲಿ ನಿರ್ಗಂಧವಾಯುವಿನ ದ್ರವ್ಯದ ಅಂಶವು ಬಹಳ ಇರುತ್ತದೆ ವನಸ್ಪತಿಗಳ ಬೇರುಗಳು ತಳಭೂಮಿಯಿಂದ ಇದನ್ನು ಹೀರಿಕೊಳ್ಳುವದರಿಂದಲೂ ಗೊಬ್ಬರದಿಂದಲೂ ಇದು ಉಂಟಾಗಿರುತ್ತದೆ. ದ್ವಿದಳದ (ಅವರೆ, ಬಟಗಡ್ಲೆ, ಕ್ಲೋಹೆರ ಮುಂತಾದವುಗಳು) ಬೆಳೆಗಳಿಗೆ ಈ ನಿರ್ಗಂಧವಾಯುವಿನ ಅಂಶವು ಹವೆಯಿಂದ ದೊರೆಯುತ್ತದೆ. ಆದಷ್ಟು ತುಸು ಕಾಲದಲ್ಲಿ ಶಾಶ್ವತವಾದ ಹುಲ್ಲುಬನ್ನಿಯ ಎಲ್ಲ ಲಕ್ಷಣಗಳುಳ್ಳ ಭೂಮಿಯನ್ನು ಸಿದ್ಧಮಾಡಲಿಕ್ಕೆ ಕೃಷಿಕರ್ಮದವರು ಪ್ರಯತ್ನ ಮಾಡುತ್ತಾರೆ. ಅವರು ಸಾಧಾರಣವಾಗಿ ಈ ನಾಲ್ಕು ಉಪಾಯಗಳಿಂದ ಇದನ್ನು ಸಿದ್ಧಮಾಡಲಿಕ್ಕೆ ಹವಣಿಸುತ್ತಾರೆ ಅವು ಯಾವವಂದರೆ ೧ ಭೂಮಿಯನ್ನು ಮೊದಲೇ ಚಲೋ ರೀತಿಯಿಂದ ತಯಾರು ಮಾಡುವದು. ೨ ಉತ್ತಮವಾದ ಬಿತ್ತುವ ಪದ್ಧತಿಗಳನ್ನು ಉಪಯೋಗಿಸುವದು. ೩ ಚಲೋ ಬೀಜಗಳನ್ನಾರಿಸಿ ಚಲೋ ಮಿಶ್ರಣವನ್ನು ಉಪಯೋಗಿಸುವದು ೪ ಇವಾದಮೇಲೆ ಚಲೋ ಪದ್ಧತಿಯನ್ನು ಅನುಸರಿಸುವದು. ವಾಡಿಕೆಯಾಗಿ ಬಿತ್ತುವ ಹುಲ್ಲುಗಳು ಯಾವವೆಂದರೆ—

(ಸಶೇಷ.)

CORRESPONDENCE.

ಪತ್ರವ್ಯವಹಾರ.

ಮು. ರಾ. ಶಾಲಾಪತ್ರಿಕೆಯ ಕರ್ತರಿಗೆ—

ಸಾಷ್ಟಾಂಗ ನಮಸ್ಕಾರ ವಿನಂತಿ—ಪ್ರಸ್ತುತದಲ್ಲಿ ಒಕ್ಕಲಿಗರಿಗೆ ಶಿಕ್ಷಣವು ವಿಶೇಷವಾಗಿ ಕೃಷಿಕರ್ಮ ಶಿಕ್ಷಣವು ಚನ್ನಾಗಿ ದೊರೆಯಬೇಕೆಂದು ಸರಕಾರದವರು ಪ್ರಯತ್ನ ಪಡುತ್ತಿರುವದು ಸರ್ವಶ್ರುತವಷ್ಟೇ. ಅದರಂತೆ ತಮ್ಮ ಪತ್ರದಲ್ಲಿಯೂ ಕೃಷಿಶಾಸ್ತ್ರದ ಲೇಖಗಳು ಬರತೊಡಗಿವೆ. ಹಾಗೂ ಪ್ರಾಥಮಿಕ ಶಿಕ್ಷಣದ ಶಾಲೆಯಲ್ಲಿ ಸ್ವತಂತ್ರವಾಗಿ ಕೃಷಿಶಾಸ್ತ್ರದ ಹಲವು ಮೂಲತತ್ವಗಳ ವಿವರಣೆಯು ಗ್ರಂಥಗ

ಳನ್ನು ಉಪಯೋಗಿಸುವ ವಿಚಾರಟು ಆಗಿರುವದಾಗಿ ಕೇಳಿ ದ್ದೇವೆ. ಆದ್ದರಿಂದ ಇಂಥ ಸಂಧಿಯಲ್ಲಿ ಈ ಕೆಳಗಿನ ವಿಷ ಯವು ತಕ್ಕಷ್ಟಾದರೂ ಪ್ರಯೋಜನಕರವಾದೀತಾಗಿ ನಂಬಿ ತಮ್ಮೆಡೆಗೆ ಕಳುಹಿದ್ದೇನೆ. ಮುದ್ರಿಸುವ ಮೆಹೆರ್ಬಾನಗಿ ಯಾಗಬೇಕು.

ಹೊಲಕ್ಕೆ ಗೊಬ್ಬರ ಹಾಕುವ ಪದ್ಧತಿಯು ಬಹು ಮುನಾ ದಿಯಿಂದ ಪ್ರಚಾರದಲ್ಲಿರುವದು. ಆದರೆ ಎಂಥ ಎಂಥ ಗೊ ಬ್ಬರವನ್ನು ಎಂಥ ಎಂಥ ಬೆಳೆಗಳಿಗೆ ಹಾಕಲು ಬೆಳಸುಗಳು ಹೆಚ್ಚು ಹುಲಸಾಗುವವು ಎಂಬದು ಬಹು ಜನರಿಗೆ ಗೊತ್ತಿರು ವದಿಲ್ಲ. ನಮ್ಮ ಈ ದೇಶದಲ್ಲಂತೂ ಸದ್ಯಕ್ಕೆ ರಸಾಯನ ಶಾಸ್ತ್ರದ ಜ್ಞಾನವಿಲ್ಲದವರೇ ವಿಶೇಷ. ಈಗೇನೋ ಜನರೂ ಸರಕಾರವೂ ತುಸು ತುಸು ಈ ಗೌರವದ ವಿಷಯದಲ್ಲಿ ಮನಸು ಹಾಕಹತ್ತಿರುವರು.

ಗೊಬ್ಬರದಲ್ಲಿ ಮುಖ್ಯವಾಗಿ ಸೇಂದ್ರಿಯಜನ್ಯ ನಿರಿಂದ್ರಿಯ ಜನ್ಯಗಳೆಂಬ ಎರಡು ವರ್ಗಗಳುಂಟು. ಸೇಂದ್ರಿಯ ಗೊ ಬ್ಬರದಲ್ಲಿ ಕೂಡಾ ಉದ್ಭಿಜ್ಜ, ಪ್ರಾಣಿಜಗಳೆಂದು ಎರಡು ಅವಾಂತರ ಭೇದಗಳನ್ನು ಕಲ್ಪಿಸಬಹುದು. ಇವೆರಡೂ ಗಿಡಗಳಿಗೆ ಬಹು ಪ್ರಯೋಜನಕರವಾಗಿರುವವು. ಇವುಗ ಳಲ್ಲಿ ಪ್ರಾಣಿಜ ಗೊಬ್ಬರವು ಬಹು ಫಲದಾಯಕವು ಯಾ ಕೆಂದರೆ, ಪ್ರಾಣಿಗಳು ವನಸ್ಪತ್ಯಾದಿ ಆಹಾರವನ್ನು ತಿಂದು ಅಂದರೆ ಪಚನವಾಡಿ ಗಿಡಗಳಿಗೆ ಅನುಗುಣವಾದ ಅನ್ನವ ನ್ನು ಆಯತವಾಗಿ ಸಿದ್ಧಮಾಡಿರುತ್ತವೆ ಅಂದರೆ ಪ್ರಾಣಿಗ ಳು ತಮ್ಮ ಜೀವನಕ್ಕಾಗಿ ಮಾಡುವ ವ್ಯಾಪಾರದಿಂದ ಅನಾ ಯಾಸವಾಗಿ ಪರರಿಗೆ ಅಂದರೆ ವನಸ್ಪತಿಗಳಿಗೆ ಪ್ರಯೋಜನ ವಾಗುತ್ತದೆ. ಈ ಅತ್ಯಾಶ್ಚರ್ಯಕರವಾದ ಈಶ್ವರನ ಘಟ ನೆಯನ್ನು ನೋಡಿ ಮನಸ್ಸಿನಲ್ಲಿ ಅತ್ಯಂತ ಪೂಜ್ಯಬುದ್ಧಿಯುಂ ಟಾಗುತ್ತದೆ.

ಸೇಂದ್ರಿಯ ಗೊಬ್ಬರದಲ್ಲಿ ಈ ಕೆಳಗಿನವು ಮುಖ್ಯವಾಗಿ ರುತ್ತವೆ- ೧ ಗಿಡದ ತೊಪ್ಪಲ. ೨ ಸಣ್ಣ ಸಣ್ಣ ಗಿಡಗಂಟೆ ಗಳು. ೩ ಹಿಂಡಿ. ೪ ಹುಲ್ಲು, ರವದಿ ಮುಂತಾದವುಗಳು. ೫

ಶಗಣಿ. ೬ ಕಟ್ಟಿಗೆಯ ಪುಡಿ. ೭ ರಕ್ತ. ೮ ಮಾಂಸ. ೯ ಮೂತ್ರ, ೧೦ ಕ್ರಿಮಿಕೀಟಕಗಳು ೧೧ ಕರಳು. ೧೨ ಕೊಗ ಲು. ೧೩ ಕೂದಲು. ೧೪ ಎಲವು ೧೫ ಉಣ್ಣೆ. ೧೬ ಪಶು ಪಕ್ಷಿ ಮನುಷ್ಯ ಮುಂತಾದ ಪ್ರಾಣಿಗಳ ಮಲ ಇತ್ಯಾದಿ.

ಇವುಗಳಲ್ಲಿ ಮೊದಲಿನದಾದ ಗಿಡದ ಎಲೆಗಳ ಗೊಬ್ಬರ ವನ್ನು ಕುರಿತು ಆಲೋಚಿಸುವಾ. ಗಿಡದ ಎಲೆಗಳು ಗೊಬ್ಬ ರಕ್ಕೆ ಬರುತ್ತವೆಂದು ತರಗೆಲೆಯನ್ನು ಎಂದೂ ಉಪಯೋಗಿ ಸಬಾರದು. ಅದರಿಂದ ಬೆಳೆಗೆ ಹಿತವಾಗುವದಕ್ಕಿಂತ ಅಹಿ ತವೇ ಹೆಚ್ಚು. ಯಾಕೆಂದರೆ, ಆ ಗಿಡಕ್ಕೆ ಬೇಡಾದಂಥ ಖನಿ ಜ ಪ್ರವ್ಯಗಳೇ ಎಲೆಗಳಲ್ಲಿ ಸಂಚಿತವಾಗಿ ಉಳಿಯುತ್ತವೆ. ಬೇಕಾದ ಖನಿಜಾಂಶವು ಗಿಡಗ ಪೋಷಣ ಕಾರ್ಯದಲ್ಲಿ ವೆಚ್ಚವಾಗುತ್ತದೆ. ಹೀಗೆ ಎಲೆಗಳಲ್ಲಿ ಸಂಚಿತವಾದ ನಿರುಪ ಯುಕ್ತ ಖನಿಜಾಂಶವು ಬೇರುಗಳಿಂದ ಬರುವ ಪೋಷಕ ರಸ ಕ್ಕೆ ಮಾರ್ಗ ಕೊಡುವದಿಲ್ಲ. ಅದರಿಂದ ಎಲೆಗಳು ಉಪಯೋ ಗ ಬಿದ್ದು ಕೆಲವು ದಿವಸಗಳಲ್ಲಿ ಸಾಯುವವು. ಇದೇ ಗಿಡಗ ಳ ಎಲೆಯುದುರುವ ಕಾರಣವು. ಆದ್ದರಿಂದ ಈ ತರಗೆಲೆಗ ಳು ಅವು ಯಾವ ಗಿಡದಿಂದ ಉದುರಿರುವವೋ ಆ ಗಿಡಕ್ಕೆ ಎಂ ದಿಗೂ ಹಿತಕರವಾದ ಗೊಬ್ಬರವಾಗಲಾರದು. ಬೇರೊಂದು ಗಿಡಕ್ಕೆ ಈ ಎಲೆಗಳು ಪ್ರಯೋಜನಕರವಾಗಬಹುದು. ಆದ್ದರಿಂದ ಎಳೆ ಎಲೆಗಳನ್ನು ಉಪಯೋಗಿಸಬೇಕು. ಇವು ಬೇಗನೆ ಕೊಳೆಯುವವು.

ಉಸುಬಿನ ಬಡನೆಲದಲ್ಲಿ ಉದ್ಭಿಜ್ಜಾಂಶವು ಬಹು ಕಡಿಮೆ ಇರುವದು. ಆದ್ದರಿಂದ ಇಂಥ ಹೊಲಗಳಿಗೆ ಈ ಎಲೆಗಳ ಗೊಬ್ಬರವು ಬಹು ಪ್ರಯೋಜನಕರವಾಗುವದು. ಬಟಾ ಟೆ, ಗಜ್ಜರಿ, ಮೂಲಂಗಿ ಮುಂತಾದ ಕಂದಮೂಲಗಳನ್ನು ಕಿತ್ತುಕೊಂಡ ಕೂಡಲೆ ಅವುಗಳ ಹಸರೆಲೆಗಳನ್ನು ಅದೇ ನೆಲದಲ್ಲಿ ಹುಗಿದು ಬಿಡಬೇಕು. ಅಂದರೆ ಆ ನೆಲವು ಒಳ್ಳೇ ಹಸುವುಳ್ಳದ್ದಾಗುವದು.

(ಸಶೇಷ.)

ವಸ್ತುಪಾಠ—ಕೋಳಿ.

೨ನೇ ಇಯತ್ತೆ.

ಉದ್ದೇಶ—ಕೋಳಿಯ ವಿಷಯವಾಗಿ ವಿವರವಾಗಿ ಹೇಳುವದು; ನೆಲದ ಮೇಲೆ ವಾಸ ಮಾಡುವ ಪಕ್ಷಿಯೆಂಬ ಭಾವ ಹುಟ್ಟಿಸುವದು.

ಉಪಕರಣ—ಕೋಳಿ, ಹುಂಜ; ಪತಿ.

ಉಪೋದ್ಘಾತ—ಕೋಳಿಯನ್ನು ತೋರಿಸಿ ಪಾಠವನ್ನು ಆರಂಭಿಸಬೇಕು.

ವಸ್ತುದರ್ಶನವು.	ಫಲಿತವು.
೧ ಹುಡುಗರು ಕೋಳಿಯನ್ನು ನೋಡಿ ಅದರ ಬಣ್ಣವನ್ನು ಹೇಳಲಿ.	೧ ಕೋಳಿಯು ಅನೇಕರಲ್ಲಿ ಗಿಳಿ ಪಾರಿವಾಳಗಳಂತೆ ಇರದೆ ಮುಂದೆ ಸಣ್ಣಗಿಯೂ ಹಿಂದೆ ಗಡುತರವಾಗಿಯೂ ಇರುವದು. ಇದರಿಂದ ಹಾರಲಿಕ್ಕೆ ಬರುವದಿಲ್ಲ. ಬಣ್ಣ ನಾನಾ ತರದ್ದು, ಹೆಣ್ಣಿಗಿಂತ ಗಂಡಿನ ಬಣ್ಣ ಹೊಳಪುಳ್ಳದ್ದು ಇರುತ್ತದೆ. ಮತ್ತು ಗಂಡು ಹೆಣ್ಣಿಗಿಂತ ದೊಡ್ಡದಿರುತದೆ

೨ ಕೋಳಿಗಳಿಗೆ ಗಂಡಿಗೆ ಮತ್ತು ಹೆಣ್ಣಿಗೆ ಏನು ಹೆಸರು ಹೇಳಲಿ.

೩ ಕೋಳಿಗಳಲ್ಲಿ ಗಂಡಿಗೆ ಜುಟ್ಟಿರುತ್ತದೆ, ಹೆಣ್ಣಿಗೆ ಹೇಟೆ ಅನ್ನುತ್ತಾರೆ.

೪ ಕೋಳಿಯ ಜಂಜು [illegible] ಒಂಟಿ ನೋಡಲಿಮ; ತ್ತ ಅದರ ಬಾಯಿ ತೆರೆದು ನೋಡಲಿ.

೪ ಕೋಳಿಯ ಜಂಜು [illegible]ಗಿಯೂ, ಘಟ್ಟಿಯಾಗಿಯೂ, ಚೂಪಾಗಿಯೂ, ತುದಿಯಲ್ಲಿ ಒಂಟಿಗಿದ್ದಾಗಿಯೂ ಇರುವದು; ಇದರಿಂದ ನೆಲದ ಮೇಲಿನ ಕಾಳುಕಡಿಗಳನ್ನು ಆರಿಸಿಕೊಳ್ಳಲಿಕ್ಕೂ ಬರುತ್ತದೆ. ಬಾಯಲ್ಲಿ ಹಲ್ಲು ಇಲ್ಲ. ಆದ್ದರಿಂದ ಇಡೀ ಕಾಳುಗಳನ್ನೂ ಹರಳನ್ನೂ ನುಂಗುವದು.

ಟೀಪು—ಕೋಳಿಯ ಹೊಟ್ಟೆಯೊಳಗೆ ಪಚನ ಮಾಡತಕ್ಕ ಅವಯವಗಳು ಮೂರು ಇರುತ್ತವೆ. ಒಂದನೇ ಎರಡನೇ ಅವಯವಗಳಲ್ಲಿ ನೆನಸಿದ ಕಾಳು ಮೂರನೇ ಅವಯವದಲ್ಲಿ ಕಲ್ಲಿನ ಸಂಗಡ ಪುಡಿಯಾಗಿ ಪಚನವಾಗುತದೆ.

೫ ಕೋಳಿಯ ಮೂಗು ಕಣ್ಣು ಕಿವಿ ಪರೀಕ್ಷಿಸಿ ಹೇಳಲಿ.

೫ ಕೋಳಿಯ ಮೂಗಿನ ಸೊಳಿಗಳು ಜಂಜುವಿನ ಮೇಲಭಾಗದಲ್ಲಿರುತ್ತವೆ. ಕಣ್ಣು ದೊಡ್ಡವಾಗಿಯೂ ಹೊಳಪುಳ್ಳವಾಗಿಯೂ ಪರಿಯಿಂದ ಮುಚ್ಚಲಿಕ್ಕೆ ಬರುವಂಥವಿರುತವೆ. ಕಿವಿಗಳು ಇರುತ್ತವೆ. ಅವು ಒಡೆದು ಕಾಣುವದಿಲ್ಲ. ತುಪ್ಪಳದಲ್ಲಿ ಮುಚ್ಚಿರುತ್ತವೆ.

೫ ಕೋಳಿಯ ಕುತ್ತಿಗೆ ತಲೆ ಜುಟ್ಟುಗಳನ್ನು ನಿರೀಕ್ಷಿಸಿ ಅಕಾರ ರಚನೆ ಹೇಳಲಿ.

೬ ಕೋಳಿಯ ಮೈಮೇಲಿನ ತುಪ್ಪಳ ಗರಿ, ರೆಕ್ಕೆಗಳನ್ನು ಹಿಡಿದು ನೋಡಲಿ, ಅವು ಹ್ಯಾಗೆ ಇರುತ್ತವೆ ಹೇಳಲಿ.

೭ ಕೋಳಿಯ ಕಾಲು ನೋಡಲಿ, ಅದರ ರಚನಾ ಹೇಳಲಿ.

೫ ಕೋಳಿಯ ಕುತ್ತಿಗೆಯು ಉದ್ದವಾಗಿ, ತಲೆ ಡೊಡ್ಡದಾಗಿ ಸಣ್ಣದಾಗಿ ಇರುತ್ತದೆ. ತಲೆ ಕುತ್ತಿಗೆಗಳು ಬೇಕಾದತ್ತ ತಿರುಗಿಸಲಿಕ್ಕೆ ಬರುತ್ತವೆ. ಇದೊಂದು ಪಕ್ಷಿಗಳಲ್ಲಿ ವಿಶೇಷ ಲಕ್ಷಣವು. ತಲೆಯ ಮೇಲೆ ಗಂಡಿಗೆ ಮಾತ್ರ ಜುಟ್ಟಿರುತ್ತದೆ. ಅದ್ದರಿಂದ ಅದಕ್ಕೆ ತಾಮ್ರಚೂಡವೆಂಬ ಹೆಸರು.

೬ ಮೈಮೇಲಿನ ಸಣ್ಣ ಸಣ್ಣ ಕೂದಲಕ್ಕೆ ತುಪ್ಪಳವೆನ್ನುವರು. ಬಾಲದಲ್ಲಿ ಇರುವ ಗರಿಗೆ ಪುಚ್ಛವೆನ್ನುವರು. ಪಕ್ಕದಲ್ಲಿ ಗರಿಗಳು ಇರುತ್ತವೆ. ಇವೆಲ್ಲ ಅದಕ್ಕೆ ಚಳಿಗಾಳಿ ತಗಲಬಾರದೆಂದು ದೇವರು ಹೊದಿಕೆ ಮಾಡಿದ್ದಾನೆ. ಪಕ್ಕ ಸಣ್ಣವಿರುವದರಿಂದ ಬಹಳ ಹಾರಲಿಕ್ಕೆ ಬರುವದಿಲ್ಲ. ರೆಕ್ಕೆ ಪುಚ್ಛ ಮುಂತಾದವುಗಳೆಲ್ಲ ಪೊಳ್ಳಾಗಿಯೂ ಗಟ್ಟಿಯಾಗಿಯೂ ಹಗುರಾಗಿಯೂ ಇರುವದರಿಂದ ಹಾರಲಿಕ್ಕೆ ಬರುತ್ತದೆ.

೭ ಕೋಳಿಯ ಕಾಲು ಉದ್ದವಿದ್ದು ತುದಿಗೆ ಮುಂದೆ ೩ ಹಿಂದೆ ಒಂದು ಬೆರಳು ಇರುತ್ತದೆ. ಬೆರಳ ತುದಿಗೆ ಉಗುರು ಇರುವವು. ಉಗುರಿನಿಂದ ನೆಲ ಕೆದರುವದು. ಕಾಲ ಬೆರಳು ಊರಿ ಹೆಜ್ಜೆ ಇಡು

ತ್ತ ನಡಿಯುವದು. ಇದರಿಂದ ಇದು ನೆಲದ ಮೇಲ ಇರುವ ಪ್ರಾಣಿಯಾಗಿದೆ.

ಲ ಕೋಳಿಯು ಏನು ತಿಂದು ಬದುಕುತ್ತದೆ ಹೇಳಲಿ

ಲ ಕೋಳಿಯು ಕಾಳು, ಹರಳು, ಹುಳಗಳನ್ನು ತಿಂದು ಬದುಕುತ್ತದೆ

ಈ ಕೋಳಿಯ ಸ್ವಭಾವವನ್ನು ಹುಡುಗನು ತನಗೆ ಗೊತ್ತಿದ್ದಮಟ್ಟಿಗೆ ಹೇಳಲಿ.

ಈ ಹೆಣ್ಣು ಕೋಳಿಯು ಸಹನಸೀಲ ಸ್ವಭಾವದ್ದು. ಅದು ತತ್ತಿಯ ಮೇಲೆ ಎಡೆಬಿಡದೆ ೨೧ ದಿವಸ ಕೂಡುವದು. ಆಗ್ಗೆ ಮೂರು ನಾಲ್ಕು ದಿವಸ ಕೂಳು ಸಹ ತಿನ್ನುವದಿಲ್ಲ. ನೀರನ್ನೂ ಕುಡಿಯುವದಿಲ್ಲ. ಹಾಗೇ ಇರುವದರ ಗಂಡಿಗೆ ಸಿಟ್ಟು ಬಹಳ. ಅದು ತನ್ನ ಕಾಲಹಿಂಬದಿಗೆ ಇರುವ ಗಳ್ಳನಿಂದ ಜಗಳಾಡುವದು. ಬೆಳಗಾಗಲು ಕೂಗುವದು.

೧೦ ಕೋಳಿಯು ತತ್ತಿ ಇಟ್ಟು, ಅದಕ್ಕೆ ಕಾವ್ಯಕೊಟ್ಟು ಮರಿ ಮಾಡುವದು. ಅವು ಹುಟ್ಟಿದ ಕೂಡಲೆ ಓಡಾಡಹತ್ತಿ ತಾಯಿಯು ಕೂಡ ಮಿಯ್ಯುವದರಿಂದ ಮರಿಗಳಿಗೆ ಗುಟುಕು ಕೊಡುವ ಕಾರಣವಿಲ್ಲ.

೧೦ ಕೋಳಿಯು ಉತ್ಪತ್ತಿಯು ಹ್ಯಾಗೆ ಮೊದಲು ನೋಡಿದ್ದು ನೆನಪಿಗೆ ತಂದು ಹೇಳಲಿ.

ಟೀಪು—ಕೋಳಿಗಳು ಈಲಾಗುವ ಕಾರಣ ಅವನ್ನು ಮನೆ ಕಟ್ಟಿ ಸಾಕುವರು. ಅದರ ತತ್ತಿ ಮಾಂಸಗಳನ್ನು ಕೆಲ
ನರು ತಿನ್ನುವರು. ಗರಿಗಳನ್ನು ಟೊಪ್ಪಿಗೆಗೆ ಹಚ್ಚುವರು. ಪುಚ ಗಳನ್ನು ತುಂಬಿ ತಲೆಗಿಂಬು ಮಾಡುವರು.

ಉಪಸಂಹಾರ.

೧ ಕೋಳಿಯು ನೆಲದ ಮೇಲೆ ವಾಸಿಸುವ ಪ್ರಾಣಿ ಎಂಬದು ಹ್ಯಾಗೆ?

೨ ಕೋಳಿಯ ಸ್ವಭಾವ ಹೇಳಿರಿ.

೩ ಕೋಳಿಯು ಉಪಯೋಗವೇನು?

೪ ಕೋಳಿಯು ಹರಳನ್ನು ಏಕೆ ನುಂಗುತದೆ?

ಧಾರವಾಡ
ತಾ ॥ ೧೦-೧-೧೯೦೫.

ಓರ್ವ ಶಿಕ್ಷಕ.

ಶಾಲಾಪತ್ರಕ.

ಪದ್ಯ.

ಶ್ರೀಮದ್ವಿದ್ಯಾಗುರುಪದಯುಗ್ಮಸ್ಮರಣಯಂ ಸಾಕ್ಷಲಕ್ಷ್ಮೀಕಳತ್ರಂ
ಸಮಯಸತ್ಯಂ ಪ್ರತಿಪಾಸಮಾದಿಗೊಲವಿಂದೀಪತ್ರಮಂ ಪುದ್ರಿಸಿ ॥
ಸಹೃದಯಿಂದಿಪ್ಪವಪೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ;
ದಯೆಯಿಂಪೋಷಪವಪಿದ್ದ ವೇಳ್ವುದುಮುಧರಣ್ಣಾವಿವೃದ್ಧಿಪ್ರಯತ್ನಿಸಿ

ಪುಸ್ತಕ ೪೧] ಎಪ್ರೀಲ ೧೯೦೫. [ಸಂಖ್ಯೆ ೪.

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಧಾರವಾಡ ಜಿಲ್ಲೆಯ ಡಿಪೂಟ ಎಜ್ಯುಕೇಶನಲ್ ಇನಸ್ಪೆಕ್ಟರರಾದ ರಾವಸಾಹೇಬ ಸವಣೂರ ರಾಮಚಂದ್ರರಾಯರು ಎಪ್ರೀಲ (೧೯೦೫) ಆರಂಭದಿಂದ ಪೆನ್‌ಶನ್ ತೆಗೆದುಕೊಂಡದ್ದರಿಂದ ಅವರ ಸ್ಥಳಕ್ಕೆ ಬೆಳಗಾವಿಯ ಡಿಪೂಟ ಇನಸ್ಪೆಕ್ಟರರಾದ ರಾವಸಾಹೇಬ ಕೆರೂರ ಬಾಬಾಚಾರ್ಯರೂ ಅವರ ಸ್ಥಳಕ್ಕೆ ಬಿಜಾಪೂರ ಹಾಯಸ್ಕೂಲ ಹೆಡ್‌ಮಾಸ್ತರರಾದ ರಾವಸಾಹೇಬ ಜೋಶಿ ವಿನಾಯಕರಾಯರೂ ನೇಮಿಸಲ್ಪಟ್ಟರು. ಅದರಂತೆ ಅವರವರು ಮುಂದನೇ ತಾರೀಖಿಗೆ ತಮ್ಮ ಕೆಲಸ ಮಾಡಲಾರಂಭಿಸಿದರು. ರಾವಸಾಹೇಬ ಗರ್ದೆ ಖಂಡೇರಾಯರನ್ನು ಬಿಜಾಪುರ ಡಿಪುಟಿಯ ಸ್ಥಳಕ್ಕೂ ರಾ. ಸಾ. ಅನೀಖಿಂಡೀ ಶಂಭೂರಾಯರನ್ನು ಇವರ ಸ್ಥಳಕ್ಕೂ ನಿಯಮಿಸಿದರು.

ಧಾರವಾಡ ಜಿಲ್ಲೆಗೆ ಒಂದು ಎಂಬತ್ತು ರೂಪಾಯಿಯ ಅಸಿಸ್ಟಂಟ ಡಿಪುಟಿಯ ಸ್ಥಳವನ್ನು ಹೊಸದಾಗಿ ಗೊತ್ತುಪಡಿಸಿ ಆ ಸ್ಥಳಕ್ಕೆ ಬಿಜಾಪುರ ಹಾಯಸ್ಕೂಲ ಅಸಿಸ್ಟಂಟರಾದ ಮಿ. ಮಹಿಷಿ ಎಂಬ ವದವೀಧರರನ್ನು ನೇಮಿಸಿದರು. ಅನೀಖಿಂಡೀ ಶಂಭೂರಾಯರ ತೆರವಾದ ಬಿಜಾಪೂರ ಅಸಿಸ್ಟಂಟ

ಪೂಟಯ ಸ್ಥಳಕ್ಕೆ ಟ್ರೇನಿಂಗಕಾಲೇಜದ ಗನೇ ಅಸಿಸ್ಟಂಟರಾ
ಗಿ ಹುವೆಗುಂದ ಕೃಷ್ಣರಾಯರು ನೇಮಿಸಲ್ಪಟ್ಟರು ಇವ
ರೂ ಪದವಿಧರರೇ. ಡಿಪೂಟ, ಅ. ಡಿಪೂಟ ಇನಸ್ಪೆಕ್ಟರ
ಠಳದಲ್ಲಿ ದಕ್ಷಿಣ ಭಾಗದೊಳಗೆ ಮುವ್ವರು ಪದವೀಧರರು
ೇರಿದರೆಂಬದು ಒಳ್ಳೇ ಸಮಾಧಾನಕರವಾದ ಸಂಗತಿಯು.

ಸವಣೂರ ರಾಮಚಂದ್ರರಾಯರು ಪೆನ್‌ಶನ್ ತೆಗೆದು
ಕೊಂಡು ಹೋದರಷ್ಟೇ? ಅವರನ್ನು ಅವರ ಆಫೀಸಿನ ಜನ
ರು ವೀಳೆಯ ಸಮಾರಂಭದಿಂದ ಸತ್ಕರಿಸಿದರು. ಇದಲ್ಲದೆ
ಕಾಲೇಜದ ಪ್ರಿನ್ಸಿಪಾಲರೂ ಭೋಜನಾದ್ಯುಪಚಾರಗಳಿಂದ
ಆದರಿಸಿದರು ಇವರಿಗೆ ಇದಕ್ಕು ಹೆಚ್ಚು ಆದರಣೆಯಾಗು
ತ್ತಿತ್ತು. ಆದರೆ ರಾಮಚಂದ್ರರಾಯರಿಗೆ ಅವರ ಸದ್ಗುಣ
ಯಾದ ಹಿರಿಮಗನು ತೀರಿದ ದುಃಖದಿಂದ ಮನಃಸ್ವಾಸ್ಥ್ಯವಿ
ದ್ದಿಲ್ಲವಾದ್ದರಿಂದ ಕೆಲವು ಆಮಂತ್ರಣಗಳನ್ನು ಸ್ವೀಕರಿಸ
ಬಾರದಾಯಿತು.

ಇವರ ಪೂರ್ವಜರು ಅಂದರೆ ಅಜ್ಜಂದಿರು ಇಂಗ್ರಜ ಸರ
ಕಾರದ ಆರಂಭದ ಅಮಲಿನಲ್ಲಿ ಸವಣೂರ ಸಂಸ್ಥಾನದ ಕಾ
ರಭಾರಿಗಳಾಗಿದ್ದರು. ಪಲ್ಲಕ್ಕಿಯು ಪೆದಸ್ಥರು. ಅಜ್ಜಂದಿರು
ತೀರಿದ ಬಳಿಕ ಇವರ ತಂದೆಗಳಿಗೂ ಇಂಗ್ಲೆಶ ಸರಕಾರದ
ವರು ಮನೆತನಸ್ಥರೆಂದು ದೊಡ್ಡದೊಂದು ನೌಕರಿಯನ್ನು
ಕೊಡಲಪೇಕ್ಷಿಸಿದರು. ಆದರೆ ಆ ಕಾಲದ ತಿಳುವಳಿಕೆಯಂ
ತೆ ಅವರು ಕೈಕೊಳ್ಳಲಿಲ್ಲ. ಆದರೂ ತಮ್ಮ ಮಕ್ಕಳಿಗೆ
ಪಾಶ್ಚಾತ್ಯ ಶಿಕ್ಷಣ ದೊರೆಯುವಂತೆ ಅನುವು ಮಾಡಿಕೊಟ್ಟ
ರು. ರಾಮಚಂದ್ರರಾಯರಿಗೆ ಮುವ್ವರು ಒಡಹುಟ್ಟಿದವ
ರು. ಇವರು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ
ಯಾದ ಕೂಡಲೆ ವಿದ್ಯಾಖಾತೆಯಲ್ಲಿ ಸೇರಿದರು. ಕೆಲವು
ಇಂಗ್ಲಿಷ ಸಾಲೆಯಲ್ಲಿ ಅಧ್ಯಾಪಕರಾಗಿದ್ದರು. ಬರಬರುತ್ತ
ಇವರ ಯೋಗ್ಯತೆಪುರಿತು ವರಿಷ್ಠರು ಬಿಜಾಪುರದ
ಡಿವೃಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ ನೇಮಿಸಿದರು.
ಅಲ್ಲಿಂದ ಬೆಳಗಾವಿಗೆ ವರ್ಗಾಗಿ ಹೋದರು. ಆ ಜಿಲ್ಲೆಯಲ್ಲಿ

ಸುಮಾರು ಇಪ್ಪತ್ತು ವರುಷ ಅದೇ ಕೆಲಸ ಮಾಡಿ ಧಾರವಾ
ಡಕ್ಕೆ ವರ್ಗಾಗಿ ಬಂದರು. ಈ ಜಿಲ್ಲೆಯಲ್ಲಿ ನಾಲ್ಕು ವರು
ಷ ಕೆಲಸ ಮಾಡಿ ಪೆನ್‌ಶನ್ ತೆಗೆದುಕೊಂಡರು.

ಇವರ ಕಾರ್ಯಭಾರದ ಧೋರಣವು ಮೂರು ಜಿಲ್ಲೆ
ಯವರಿಗೆ ಗೊತ್ತಿರುವ ಕಾರಣ ವಿಶೇಷ ಬಿಚ್ಚಿ ಹೇಳುವ
ಕಾರಣವಿಲ್ಲ. ಮುಖ್ಯವಾಗಿ ಇವರು ವರಿಷ್ಠರಗೂಡ ವಿನ
ಯದಿಂದಲೂ, ಕೈಕೆಳಗಿನವರೊಡನೆ ದಯದಿಂದಲೂ ವರ್ತಿ
ಸಿದರೆಂದು ಹೇಳಿದರೆ ಸಾಕು.

ಆದರೆ ಇವರ ಗೃಹಸ್ಥ ಲಕ್ಷಣಗಳನ್ನು ಮಾತ್ರ ಇಪ್ಪು
ಸಂಕ್ಷೇಪವಾಗಿ ಹೇಳುವಂತಿಲ್ಲ. ಇವರಿಗೆ ಐದು ಮಂದಿ
ಪತ್ನಿಯರು ನಾಲ್ವರು ಗತಿಸಿರುವರು. ಪ್ರತಿ ಒಬ್ಬರ ಹೊ
ಟ್ಟೆಯಿಂದ ಮಕ್ಕಳಿರುವರು. ಆದರೂ ಇವರ ತಾಳ್ಮೆಯಿಂ
ದಲೂ, ವ್ಯವಸ್ಥೆಯಿಂದಲೂ ಕುಟುಂಬದಲ್ಲಿ ಎಲ್ಲಿಯೂ ದೋ
ಷಕ್ಕೆ ಅಸ್ಪದವುಂಟಾಗಲಿಲ್ಲ. ಒಟ್ಟಿಗೆ ಇವರು ಮಾದರಿ
ತಕ್ಕೊಳ್ಳತಕ್ಕ ಗ್ರಹಸ್ಥರೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ಗಂ
ಡು ಹೆಣ್ಣು ಮಕ್ಕಳೂ, ಸೊಸೆಂದಿರೂ ಮೊಮ್ಮಕ್ಕಳೂ
ಮುಂತಾದವರಿಂದ ತುಂಬಿದ ಇವರ ಮನೆಯು ಗೋಕುಲ
ವನ್ನು ಹೋಲುವದು. ಆದರೆ ಸರ್ವಸುಖವುಳ್ಳ ಮನುಷ್ಯ
ನು ಭೂಮಿಯಲ್ಲಿ ಸಿಕ್ಕುವದು ಈಶಸಂಕಲ್ಪಕ್ಕೆ
ವಿದರೀತವಾದ ಸಂಗತಿಯೆಂದು ಹೇಳಬಹುದು. ಇವರು
ಪೆನ್‌ಶನ್ ತಕ್ಕೊಳ್ಳುವದಕ್ಕೆ ಸ್ವಲ್ಪ ದಿವಸಗಳಿರುತ್ತಿರಲು,
ಅಂದರೆ ಜನವರಿಯ ಅಂತ್ಯದಲ್ಲಿ ಇವರಿಗೆ ಪ್ರಬುದ್ಧನಾದ
ಪುತ್ರನ ವಿಯೋಗವಾಯಿತು. ಈಶಇಚ್ಛೆಗೆ ಉಪಾಯವಿ
ಲ್ಲ. ಉಳಿದ ಮಕ್ಕಳು ಸುಶಿಕ್ಷಿತರೂ ಪ್ರಬುದ್ಧರೂ ಇರುವ
ರು. ಅವರಿಂದ ಇನ್ನು ಮೇಲಾದರೂ ರಾಮಚಂದ್ರರಾಯ
ರು ಶೇಷಾಯುಷ್ಯವನ್ನು ಸಂಸಾರಸುಖದಲ್ಲಿಯೂ, ಪಾರ
ಮಾರ್ಥದಲ್ಲಿಯೂ ಕಳೆಯುತ್ತ ಸುಖದಿಂದಿರಲೆಂದು ದೇವ
ರನ್ನು ಪ್ರಾರ್ಥಿಸುವೆವು.

ಅಂಕಲೆ ಸಂಗಪ್ಪನವರಾದರೂ ಸರಕಾರದ ಉದ್ಯೋಗದಿಂದ ನಿವೃತ್ತರಾದದ್ದನ್ನು ಮೇಲೆ ತಿಳಿಸಿದ್ದೇನೆ ಇವರೂ ಬೆಳಗಾವಿಯವರೇ. ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಾದ ಕೂಡಲೆ ಇವರಾದರೂ ವಿದ್ಯಾಖಾತೆಯಲ್ಲಿ ಸೇರಿದರು. ಕೆಲವು ಕಡೆಯಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದ ಬಳಿಕ ಕಾಲೇಜದ ಪ್ರೈಸಪ್ರಿನ್ಸಿಪಾಲರಾದರು. ಮುಂದೆ ಕಾರವಾರ, ಬಿಜಾಪುರಗಳಲ್ಲಿ ಡಿಪೂಟಿ ಇನಸ್ಪೆಕ್ಟರರಾಗಿ ಕೆಲಸ ಮಾಡಿದರು. ಇವರಪ್ಪ ಕ್ರಮ ತಕ್ಕೊಂಡು ದುಡಿಯುವವರು ಅಪರೂಪ. ಇವರಿಗೂ ದೇವರು ಸಂತತಿ ಸಂಪತ್ತಿಯನ್ನು ದಯಪಾಲಿಸಿರುವನು. ಇವರಾದರೂ ಶೇಷಾಯುಷ್ಯವನ್ನು ಸುಖದಿಂದ ಕಳಿಯಲೆಂದು ಹಾರೈಸುವೆವು.

ಈ ಸಾರೆ ಮತ್ತೆ ಹಿಂದುಸ್ತಾನ ಸರಕಾರದವರು ಬೇರೆ ಬೇರೆ ಇಲಾಖೆಗಳ ಸರಕಾರಕ್ಕೆ ಶಿಕ್ಷಣಕ್ಕಾಗಿ ಹಣವನ್ನು ಕೊಟ್ಟಿರುವರು. ಮುಂಬಯಿ ಇಲಾಖೆಗೆ ಐದು ಲಕ್ಷ ರೂಪಾಯಿಗಳು ಬಂದಿರುವವು. ಇವುಗಳಿಂದ ಖಾತೆಯಲ್ಲಿ ವಿಶೇಷ ಸುಧಾರಣೆಗಳಾಗಬಹುದೆಂದು ತೋರುವದು.

ಕ್ರಮಿಕ ಪುಸ್ತಕಗಳ ಬಗ್ಗೆ ಕೂಡಿದ ಕಮಿಟಿಯು ಕೆಲಸ ತೀರಿದ್ದರಿಂದ ಎಲ್ಲರೂ ತಮ್ಮ ತಮ್ಮ ಪೂರ್ವಸ್ಥಳಕ್ಕೆ ಬಂದರು.

ಸರ್ಗಂಯೇ ಇಸವಿಯ ಅಧ್ಯಾಪಕರ ಸಮ್ಮೇಲನವು ಮಾರ್ಚ ತಿಂಗಳ ೨೨-೨೩-೨೪ ಈ ಮೂರು ದಿವಸ ನಡೆಯಿತು. ಈ ಸಂಬಂಧದಿಂದ ಈ ಮೊದಲೇ ವಾಚಕರಿಗೆ ತಿಳಿಸಿರುವೆವು. ಇದು ನಾಲ್ಕನೇ ಸಮ್ಮೇಲನವೆಂಬದಾದರೂ ವಾಚಕರಿಗೆ ಗೊತ್ತುಂಟು. ಈ ಸಾರೆಯ ಸಮ್ಮೇಲನಕ್ಕೆ ಬೆಂಡಿಕೆಯಂತೆ ನಾಲ್ಕೂ ಜಿಲ್ಲೆಯ ದೂರ ದೂರ ಗ್ರಾಮಗಳ ಕಾಲಾಧ್ಯಾಪಕರು ಬಂದಿದ್ದರು. ಧಾರವಾಡ

ಹುಬ್ಬಳ್ಳಿ ನಗರಗಳ ಕಾಲಾಧ್ಯಾಪಕರೂ ಅಧ್ಯಾಪಿಕೆಯರೂ. ಬಹುತರವಾಗಿ ಎಲ್ಲರೂ ಸಮ್ಮೇಲನ ಸಮಾರಂಭಕ್ಕೆ ಬಂದಿದ್ದರು. ಪ್ರಿನ್ಸಿಪಾಲರು ವಾಡಿಕೆಯಂತೆ ಎಷ್ಟನೇ ತಾರೀಖಿನ ದಿವಸ ಎಷ್ಟು ಗಂಟೆಗೆ ಸಮಾರಂಭಕಾರ್ಯವನ್ನು ತಮ್ಮ ಅಸ್ಖಲಿತವಾದ ಉಪದೇಶ ಪೂರ್ಣ ಭಾಷೆಯಿಂದ ಪ್ರಾರಂಭ ಮಾಡಿದರು. ಅದರ ಸಂಕ್ಷಿಪ್ತಾಂಶವು—

ಸಭ್ಯರೆ, ಛಾತ್ರವರ್ಗವೆ, ಯಾವದೊಂದು ಕೆಲಸವನ್ನು ಕೈಕೊಳ್ಳುವ ಮೊದಲು ಈಶಸ್ತವನವು ಅತ್ಯವಶ್ಯವು ಯಾಕೆಂದರೆ ಈ ಈಶಸ್ತವನವು ಸಕಲ ವಿಘ್ನಗಳನ್ನು ದೂರಪಡಿಸುವಂಥಾದ್ದಿರುತ್ತದೆ. ಆದ್ದರಿಂದ ಆಸ್ತಿಕ್ಯಬುದ್ಧಿಯುಳ್ಳ ದಾನವತ್ತೂ ಮಾನವ ಪ್ರಾಣಿಗಳು ವಿಶೇಷವಾಗಿ ಭರತ ಖಂಡದೊಳಗಿರುವ ಆರ್ಯರಾದ ನಾವು ಲಗ್ನ, ಮುಂಜಿ, ಇಷ್ಟದೇವತಾಪೂಜಾ, ಬಹಳ ಹೇಳುವದರಿಂದೇನು? ಆಡಿಗೆಯ ಕೆಲಸವನ್ನು ಕೈಕೊಳ್ಳುವ ಮೊದಲು ಸಹ ದೇವರನ್ನು ಸ್ತುತಿಸುತ್ತೇವೆಂಬದನ್ನು ನೀವು ಬಲ್ಲಿರಿ. ಆದ್ದರಿಂದ ವೃದ್ಧಾಚಾರದಂತೆ ನಾವಾದರೂ ಈ ಕಾರ್ಯವನ್ನು ಕೈಕೊಳ್ಳುವ ಮೊದಲು, ಜಗನ್ನಿಯಂತನಾದ ಪರಾತ್ಪರನನ್ನು ಧ್ಯಾನಿಸುವದು ಅವಶ್ಯವೆಂದು ನುಡಿದರು.

ಕೂಡಲೆ ಪ್ರಾಕ್ಟಿಸಿಂಗಸ್ಕೂಲ ವಿದ್ಯಾರ್ಥಿಗಳು ವಾದ್ಯದ ಸುಸ್ವರದೊಂದಿಗೆ ಕೆಲವು ಈಶಸ್ತವನದ ಪದ್ಯಗಳನ್ನು ಹಾಡಿದರು.

ಬಳಿಕ ಅಧ್ಯಕ್ಷರು ಎದ್ದು ನಿಂತು ಎಲ್ಲಿ, ದೇಶೋದ್ಧಾರಕ್ಕೆ ಪ್ರಥಮ ಕಾರ್ಯವೆಂದು ನಿರ್ವಿವಾದವಾಗಿ ಸಿದ್ಧವಾದ ಶಿಕ್ಷಣಕಾರ್ಯವನ್ನು ಕೈಕೊಂಡಂಥ ಅಧ್ಯಾಪಕವೃಂದವೇ, ಇನ್ನು ನಮ್ಮ ಪ್ರಸ್ತುತ ಕಾರ್ಯವನ್ನು ಕುರಿತು ಪ್ರಸ್ತಾಪಿಸುವ. ಇಂದಿನ ಕಾರ್ಯವು ಆವುದೆಂಬಹು ಈಗ ನಾಲ್ಕು ವರ್ಷದಿಂದ ಎಲ್ಲರಿಗೂ ಗೊತ್ತೇ ಇರುವದು. ಆದರೂ ಪ್ರಸ್ತುತದ ವರ್ಷತ್ತು ಕೂಡಿದ ಕಾರಣವೇನು? ಇದರ ಉದ್ದೇಶವೇನು? ಇಂಥ ಸಮ್ಮೇಲನಗಳ ಅವಶ್ಯಕತೆಯೇನು? ಮುಂತಾದ ಸಂಗತಿಗಳನ್ನು ವಿವರಿಸುವದು ಅಪ್ರಸಂಗಿಕವೆ

ನಿಸದು. ಆದ್ದರಿಂದ ಮೊದಲು ಸಮ್ಮೇಲನದ ಅವಶ್ಯಕತೆಯನ್ನು ವಿವರಿಸುವಾ.

ನೋಡಿರಿ, ಮನುಷ್ಯನು ಏಕಾಂತದಲ್ಲಿರುವಾಗ ಅವನ ಮನೋವೃತ್ತಿಗಳು ಅಷ್ಟು ಉದಾತ್ತವಾಗಿರುವದಿಲ್ಲ. ಆದೇ ಮನುಷ್ಯನು ಸಮಾಜದಲ್ಲಿ ಬಂದ ಕೂಡಲೆ ನೆರೆಹೊರೆಯಲ್ಲಿ ಕುಳಿತ ಎಷ್ಟೋ ಉದಾತ್ತವಿಚಾರದ ಜನರನ್ನು ಕಂಡು, ತನ್ನಲ್ಲಿರುವ ಸಂಕುಚಿತ ವಿಚಾರಗಳಿಗೆ ಹಳಿದುಕೊಳ್ಳುತ್ತಿರುವದು ಸ್ವಾಭಾವಿಕವು. ನಿಕೃಷ್ಟಪಕ್ಷಕ್ಕೆ ಆ ಸಮಾಜದಲ್ಲಿರುವವರೆಗಾದರೂ ಅವನಲ್ಲಿ ಉದಾತ್ತವಿಚಾರಗಳ ತರಂಗಗಳು ಉದ್ಭವಿಸುವವು. ಆದ್ದರಿಂದ ನೀವು ತೀರ ಸಣ್ಣ ಸಣ್ಣ ಹಳ್ಳಿಯಲ್ಲಿರುವಿರಿ. ಬಹುತರ ವಿದ್ವಾಂಸರ ಸಂಸರ್ಗವು ನಿಮಗೆ ಕಡಿಮೆ. ವ್ಯವಸಾಯ ಬಂಧುಗಳ ದರ್ಶನವಂತೂ ಅಪರೂಪ. ಇಂಥಲ್ಲಿ ನೀವು ಕೇವಲ ಸ್ವೋದರಭರಣ ಕಾರ್ಯದಲ್ಲಿಯೇ ಮಗ್ನರಾಗಿ ಕೂಪಮಂಡೂಕ ನ್ಯಾಯದಂತೆ ಆಗಿರುತ್ತೀರೆಂದು ಹೇಳಿದರೆ ತಪ್ಪಾಗದು. ಆದ ಕಾರಣ ನಿಮ್ಮಲ್ಲಿ ಉದಾತ್ತವಿಚಾರವನ್ನು ತಕ್ಕಷ್ಟಾದರೂ ಉಂಟು ಮಾಡಬೇಕೆಂದು ವರುಷಕ್ಕೊಮ್ಮೆ ಈ ಸಮ್ಮೇಲವನ್ನು ನೆರಿಸುತ್ತೇವೆ.

ಅಮೇರಿಕೆಯೊಳಗಿನದೊಂದು ಪ್ರಾಂತದಲ್ಲಿ ನೆರೆಯುವ ಸಮ್ಮೇಲನದ ವೃತ್ತವನ್ನು ಇಲ್ಲಿ ಹೇಳಿದರೆ ತಕ್ಕಾಗುವದೆಂದು ನಂಬುತ್ತೇನೆ. ಅರು ಎಕರೆ ವಿಸ್ತಾರವಾದ ಬಂದು ಪ್ರದೇಶದಲ್ಲಿ ಈ ಸಮ್ಮೇಲನವು ಎರಡು ತಿಂಗಳ ವರೆಗೆ ನೆರೆದಿರುವದು. ಬಂದ ಸಭಿಕರೆಲ್ಲ ಡೇರೆಗಳಲ್ಲಿಯೇ ವಾಸ ಮಾಡಿಕೊಂಡಿರುವರು ಇವರಲ್ಲಿ ಯಾವತ್ತು ತರದ ಉದ್ಯೋಗ ಮಾಡುವವರೂ ಇರುವರು. ಇಲ್ಲಿ ಬಂದು ಪ್ರಚಂಡವಾದ ಪುಸ್ತಕಾಲಯವು ಇರುವದು. ಈ ಜನರು ಈ ಅವಧಿಯಲ್ಲಿ ತಮ್ಮ ಪುನೆಮಾರು ಹೆಂಡರು ಮಕ್ಕಳು ಎಂಬ ವ್ಯಾಮೋಹದಲ್ಲಿ ಸಿಲುಕದೆ ಜಗತ್ತಿನ ಸುಧಾರಣೆಗಾಗಿಯೂ ಮಾನವನ ಮು

ಷಿಕ್ಷಣವೃತ್ತಿಗಳ ಉನ್ನತಿಗಾಗಿಯೂ ಆಕ್ರಾಂತ ಕ್ರಮ ಮಾಡುತ್ತಾರೆ.

ಇನ್ನೊಂದು ಬಗೆಯಿಂದ ವಿಚಾರ ಮಾಡಿದರೂ ಸಮ್ಮೇಲನವು ಅತ್ಯವಶ್ಯವೆಂಬದು ವ್ಯಕ್ತವಾಗುವದು. ಮನುಷ್ಯನ ಮನಸ್ಸು ಒಂದು ದ್ರವ್ಯವೆಂದು ತಿಳಿಯಿರಿ. ಇಂಥಾ ಅನೇಕ ಜನರ ಮನಸ್ಸುಗಳು ಏಕತ್ರವಾಗಲಾಗಿ ಅನೇಕ ದ್ರವ್ಯಗಳ ಸಂಯೋಗದಿಂದ ಬೇರೊಂದು ಹೊಸ ಪದಾರ್ಥವು ಉತ್ಪನ್ನವಾಗುವಂತೆ ಈ ಮನಸ್ಸುಗಳ ಏಕೀಕರಣದಿಂದ ಕೆಲವೊಂದು ಉದಾತ್ತ ತತ್ವವು ಪ್ರಕಟವಾಗಬೇಕೆಂಬದು ಸಹಜವು. ಸಮಾಜದ ಬಲದಿಂದ ಹೇಡಿಯು ಸಹ ಎದೆಗಾರನಾಗುವನೆಂಬದು ದಂಡಿನಿಂದ ವ್ಯಕ್ತವಾಗುವದು. ಅದೇ ಮೇರೆಗೆ ನೀಚಪ್ರವೃತ್ತಿಯ ಮನುಷ್ಯನು ಕೂಡಾ ಉದಾತ್ತವಿಚಾರದವರ ಸಂಸರ್ಗದಿಂದ ಸುಧಾರಿಸಬಹುದೆಂಬದು ಸಿದ್ಧವಾಗುವದು.

ಪೂರ್ವಕಾಲದಲ್ಲಿ ಈ ಮಾದರಿಯ ಸಮ್ಮೇಲನಗಳು ಕಾಲಕಾಲಕ್ಕೆ ನೆರೆಯುತ್ತಿದ್ದವೆಂದು ಇತಿಹಾಸದಿಂದ ಗೊತ್ತಾಗುವದು. ನೋಡಿರಿ! ಅಶೋಕನು ನೆರಿಸಿದ ಧರ್ಮಸಭೆಗಳ ಉದ್ದೇಶವೇನಿರಬಹುದು? ಅದರ ಕಾರಣವಾದರೂ ಇದೇ, ಅದರೆ ಆ ಸಮ್ಮೇಲನವು ಕೇವಲ ಧಾರ್ಮಿಕ ವಿಷಯವನ್ನೇ ಉತ್ತಮ ಸ್ಥಿತಿಗೆ ಒಯ್ಯುವ ಹವಣಿಕೆಯನ್ನು ಮಾಡುತ್ತಿತ್ತು ಆದರೆ ನಾವಾದರೂ ಅದೇ ಉದ್ದೇಶದಿಂದ ಶಿಕ್ಷಣ ವಿಷಯವನ್ನೇ ಉತ್ಕರ್ಷಗೆ ತರಲೋಸುಗ ಕೇವಲ ಶಿಕ್ಷಕ ಜನರ ಸಮ್ಮೇಲನವನ್ನೇ ಕೂಡಿಸುತ್ತಿರುತ್ತೇವೆ

ಬೇರೆ ಜನರನ್ನು ಈ ನಮ್ಮ ಸಮ್ಮೇಲನದಲ್ಲಿ ತಕ್ಕೊಳ್ಳದಿರುವದಕ್ಕೆ ಇನ್ನೊಂದು ಕಾರಣವುಂಟು ಈಶ ಸೃಷ್ಟಿಯಲ್ಲಿ ಎರಡು ವ್ಯಕ್ತಿಗಳ ಮನ, ಧ್ವನಿ, ರೂಪ ಮೊದಲಾದವುಗಳು ಎಂದಿಗೂ ಒಂದೇಯಾಗಿರವು. ಇದೇ ತತ್ವವೇ ಯಾವ ಹೂ ಸೂಜಿಪದಾರ್ಥಗಳಿಗುಂಟು. ಹೊಲದೊಳಗಿನ ಕಾಳುಗಳು ಸಹ ತಮಗೆ ದೊರೆಯುವ ಗೊಬ್ಬರ, ನೀರು, ಮ,

ಕ್ಷೇತ್ರ ವೊದಲಾದವುಗಳಿಗೆನುಗುಣವಾಗಿ ಇರುವದು ಅನುಭವಸಿದ್ಧವಾದ ಸಂಗತಿಯು.

ಇಬ್ಬರು ಒಂದೇ ವ್ಯವಸಾಯದವರು ಒತ್ತಟ್ಟಿಗೆ ಕೂಡಿದರೆ ಅವರು ತಮ್ಮ ತಮ್ಮ ವ್ಯವಸಾಯದ ಮಾತುಗಳನ್ನೇ ಆಡುವರು. ಇದನ್ನಾದರೂ ಎಲ್ಲರೂ ಬಲ್ಲಿರಿ. ಆದರೆ ಈ ಉದ್ಯೋಗಗಳೆಲ್ಲ ಸೃಷ್ಟಪದಾರ್ಥಗಳಿಗೆ ಸಂಬಂಧವಾಗಿರತಕ್ಕವುಗಳು. ಆದರೆ ಶಿಕ್ಷಕನ ವ್ಯವಸಾಯವು ಅದೃಷ್ಟ ಅಥವಾ ಕಲ್ಪಿತ ವಸ್ತುವಿಗೆ ಸಂಬಂಧವಾದದ್ದು. ಇದು ಕೂಡಾ ಸ್ಥಳಭೇದದಿಂದಲೂ, ಪರಿಸ್ಥಿತಿಯ ಭೇದದಿಂದಲೂ ಬೇರೆ ಬೇರೆ ಸ್ವರೂಪವನ್ನು ಪಡೆಯುವದು. ನೋಡಿರಿ! ಒಬ್ಬ ಶಿಕ್ಷಕನು ಕೇವಲ ಅಶಿಕ್ಷಿತರಿರುವ ಗ್ರಾಮದಲ್ಲಿ ದುಡಿಯುತ್ತಾನೆ, ಮತ್ತೊಬ್ಬನು ಗೃಹಶಿಕ್ಷಣದಿಂದ ಸಂಸ್ಕೃತರಾದ ಜನರಿರುವಲ್ಲಿ ಕೆಲಸ ಮಾಡುತ್ತಾನೆ. ಇವರಿಬ್ಬರಿಗೂ ಶಿಕ್ಷಣಕಾರ್ಯದಲ್ಲಿ ಒದಗುವ ತೊಂದರೆಗಳು ಬೇರೆಬೇರೆಯಾಗಿರುವದು ಸ್ವಾಭಾವಿಕವು. ಇಂಥವರು ತಾವು ಆಯಾ ಸ್ಥಳದಲ್ಲಿ ಕೆಲಸ ಮಾಡಿ ಕೀರ್ತಿ ಪಡೆದ ಕಾರಣಗಳನ್ನು ತಮ್ಮ ವ್ಯವಸಾಯ ಬಂಧುಗಳಿಗೆ ತಿಳಿಸುವದು ಒಳಿತಲ್ಲವೋ! ಅದಕ್ಕಾಗಿಯೇ ಈ ಸಮ್ಮೇಲನವನ್ನು ನೆರೆಸುತ್ತಿರುತ್ತೇವೆ.

ಶಿಕ್ಷಕನು ಈ ಕೆಳಗಿನ ಐದು ಮಾತುಗಳನ್ನು ಮುಖ್ಯವಾಗಿ ಮನದಲ್ಲಿಟ್ಟುಕೊಂಡು ಕೆಲಸ ಸಾಗಿಸಿದರೆ ನಿಜವಾಗಿಯಶ ಪಡೆಯುವನೆಂಬದಕ್ಕೆ ಸಂದೇಹವಿಲ್ಲ. ಅವು—(೧) ವಿಷಯದ ಪೂರ್ಣಜ್ಞಾನವು, (೨) ಕಲಿಸಬೇಕೆಂಬ ಸದಿಚ್ಛೆಯು, (೩) ಮನೋರಂಜಕವಾದ ಪದ್ಧತಿಯು, (೪) ಸತತ ದುಡಿಯುವ ಹವಣಿಕೆಯು, (೫) ನೈತಿಕ ಪ್ರವೃತ್ತಿಗಳನ್ನು ಪ್ರಗಲ್ಭದೆಶೆಗೆ ಮುಟ್ಟಿಸುವ ಯೋಗ್ಯತೆಯು

ಪ್ರಸ್ತುತದಲ್ಲಿ ನಡೆಯುವ ಶಿಕ್ಷಣದ ಪದ್ಧತಿಯು ಕೆಲವು ದಿವಸಗಳಲ್ಲಿ ಬದಲಾಗಬಹುದು. ಇದಕ್ಕೆ ಒಮ್ಮೆ ಭೂಮಂಡಲದಲ್ಲಿ ಹೆಸರು ಹೊಂದಿ ಲಯವಾದ ಪದ್ಧತಿಗಳೇ ಬಲವಾದ ಸಾಕ್ಷಿಗಳಾಗಿವೆ. ಮೊದಲಿನ ನೂಲುವ, ನೇಯುವ, ಬರೆಯುವ ಪದ್ಧತಿಗಳಲ್ಲಿ ಅನೇಕ ಸುಧಾರಣೆಗಳಾಗಿರುವ

ದು ನಿಮ್ಮ ಕಣ್ಣಿಗೆ ಬಿಡೆದು ಕಾಣುತ್ತಿದೆಯೇ! ಆದೇ ಮೇ
ರೆಗೆ ಶಿಕ್ಷಣಕಾರ್ಯವು ಕೂಡಾ ಕಾಲಕಾಲಕ್ಕೆ ಸುಧಾರಣೆ
ಯನ್ನಪೇಕ್ಷಿಸುವದು ಅರಿದಲ್ಲ, ಯಾವ ಕಲೆಯಾದರೂ
ಎಂದೂ ಪೂರ್ಣದೆಶೆಯನ್ನು ಹೊಂದಲಾರದೆಂಬದು ಸ್ಪಷ್ಟ
ವಿದೆ. ಆದ್ದರಿಂದ ನೀವೆಲ್ಲರು ನೀವು ಕೈಕೊಂಡ ಕಲೆಯಲ್ಲಿ
ಇರುವ ಕುಂದುಕೊರತೆಗಳನ್ನು ದೂರವಾಡಲಿಕ್ಕೆ ಯತ್ನಿಸಿ
ಶಿಕ್ಷಣಕಲೆಯ ಏಳ್ಗೆಯನ್ನು ಹೆಚ್ಚಿಸಬೇಕೆಂದು ಅಪೇಕ್ಷಿಸು
ತ್ತೇವೆ.

ಎಷ್ಟು ದುಡಿದರೇನು ನಮಗೆ ಫಲಪ್ರಾಪ್ತಿಯಾಗುವದಿಲ್ಲ
ವೆಂದು ಔದಾಸೀನ್ಯವನ್ನು ತಾಳಿ ಸೊರಗುವಂಥವರೆಷ್ಟೋ
ಜನರುಂಟು. ಆದರೆ ಸಂಬಳವು ಶಿಕ್ಷಕನ ಪ್ರತಿಫಲವೆಂಬ
ದು ನಿಮಗೆ ಗೊತ್ತುಂಟು. ಆದ್ದರಿಂದ ಅದನ್ನು ವಿಶದವಾಗಿ
ವಿವರಿಸುವ ಕಾರಣವಿಲ್ಲ.

ಶಿಕ್ಷಣಶಾಸ್ತ್ರಕ್ಕೆ ನ್ಯಾಯಶಾಸ್ತ್ರವೂ ಮಾನಸಶಾಸ್ತ್ರವೂ ಅತಿ
ನಿಕಟಸಂಬಂಧವಾಗಿರುವವೆಂದು ನಿರ್ವಿವಾದವಾಗಿ ಹೇಳಬ
ಹುದು ಆದ್ದರಿಂದ ಇವೆರಡು ಶಾಸ್ತ್ರಗಳನ್ನು ಶಿಕ್ಷಕರು
ಕೈಲಾದ ಮಟ್ಟಿಗೆ ಕಲಿತುಕೊಳ್ಳಬೇಕು ಕಾಲೇಜಪಲ್ಲಿ
ಮಾನಸಶಾಸ್ತ್ರವು ಕಲಿಸಲ್ಪಡುವದು. ನ್ಯಾಯಶಾಸ್ತ್ರದ ಅ
ಭ್ಯಾಸಕ್ಕೂ ಅವಕಾಶ ಕೊಡಬೇಕೆಂದು ವಿನಂತಿಸುತ್ತೇವೆ.

ಇರಲಿ, ನಮ್ಮ ಪ್ರಸ್ತುತದ ಕಾರ್ಯವು ನಡೆಯಬೇಕಾಗಿ
ದೆ. ಕಾರಣ ನಮ್ಮಾಭಾಷಣವನ್ನು ಇಷ್ಟಕ್ಕೇ ಮುಗಿಸು
ತ್ತೇವೆ. ಇನ್ನು ವೈಸಪ್ರಿನ್ಸಿಪಾಲರಾದ ರಾಮಚಂದ್ರರಾಯ
ರು ಭೂಗೋಲವಿಷಯವನ್ನು ಕಲಿಸುವ ಮೆಟ್ಟುಗಳನ್ನೂ
ಮಾರ್ಗವನ್ನೂ ಕುರಿತು ಉಪನ್ಯಾಸ ಮಾಡುವರು.

ಇಷ್ಟು ಮಾತಾಡಿದ ಬಳಿಕ ಪ್ರಿನ್ಸಿಪಾಲರು ಕುಳಿತುಕೊ
ಡರು. ತರುವಾಯ ವೈಸಪ್ರಿನ್ಸಿಪಾಲರು ಭೂಗೋಲವಿಷ
ಯವನ್ನು ಕುರಿತು ಉಪನ್ಯಾಸ ಮಾಡಿದರು. ಈ ಭಾಷಣ
ವು ಅತಿ ಗೌರವದ್ಯಾದ ಕಾರಣ ಸಮಗ್ರವಾಗಿ ಬೇರೆ ಕಡೆಯ
ಲ್ಲಿ ಬರೆಯುತ್ತೇವೆ. ಇವರ ಉಪನ್ಯಾಸವು ನಡೆದಿರುವಾ
ಗದಗ ತಾಲೂಕಿನ ಮಣ್ಣಿನಿಂದ ಮಾಡಿದ ಪ್ರತಿಮೆಯ

ತೋರಿಸಲ್ಪಟ್ಟಿತು. ಇವನ್ನು ಕಾಲೇಜಿನ ಪ್ರಿನ್ಸಿಪಾಲರಾದ ಮಿ. ಪಶುಪತಿಯವರು ರಚಿಸಿದ್ದರು. ಈ ಸಂಬಂಧದಿಂದ ತುಸು ವಿಚ್ಛೇದವಾದ ಬಳಿಕ ಅಂದಿನ ಕಾರ್ಯವು ಸಮಾಪ್ತವಾಯಿತು.

KANARESE LANGUAGE.

ಕನ್ನಡ ನುಡಿ.

(ಒಂದೇ ಪಟದಿಂದ ಎರಡು ಸಲಿಸಿದ್ದು.)

(೧) ಭಾಷೆಯ ಮುಖ್ಯ ಭೇದಗಳು.

ಬ್ರಾಹ್ಮಣ ಜೈನ ಲಕ್ಷಣ ಗ್ರಂಥಕರ್ತರುಗಳಲ್ಲಿ ಕೆಲವರು ಭಾಷೆ ಎಂಬ ಪದವನ್ನು ಸಂಸ್ಕೃತವನ್ನುಳಿದ ದೇಶಭಾಷೆಗಳಿಗೆ ಮಾತ್ರ ಉಪಯೋಗಿಸಿರುವರು. ಇಲ್ಲಿ ಭಾಷೆಯೆಂದರೆ ವ್ಯವಹಾರೋಪಯೋಗಕರವಾದ ಸಂಸ್ಕೃತಕನ್ನಡಾದಿ ಸಮುದಾಯ (ಭರತಖಂಡದ) ಭಾಷೆಗಳೆಂದು ತಿಳಿಯಬೇಕು.

ದರ್ಶನ ಸಮಾಧಿ ಗುಹ್ಯ ಎಂದು ತ್ರಿವಿಧದ ಭಾಷೆಗಳೆಂದು ಭಾಗವತದಿಂದ ಸೂಚಿತವಾಗುತ್ತದೆ. ಇದು ದೇವ, ಮನುಷ್ಯ, ಪಿಶಾಚ ರೆಂಬ ತ್ರಿಪ್ರಕಾರದ ವ್ಯವಹರ್ತೃಗಳ ವ್ಯವಹಾರ ಭೇದದಿಂದ ಹೇಳಿಂಬಹುದೆಂದು ತೋರುತ್ತದೆ.

ಇತರ ಸಂಸ್ಕೃತ ಭಾಷಾಭಿಜ್ಞರು ಪಂಜಿಗೌಡ (ಒಂಗಳಿ, ಬುಧ, ಸೈಂಧವ, ಪಂಜಾಬಿ, ಹಿಂದಿಯ) ; ಪಂಚದ್ರಾವಿಡ (ಕನ್ನಡ, ತೆಲುಗು, ತಮಿಳು, ಮರಾಟಿ ಗುಜರಾತಿ) ಸಂಸ್ಕೃತ ಎಂಬವೇ ಮೊದಲಾದ ವರ್ಗಗಳನ್ನು ಮಾಡಿರುವರು;

ಇಲ್ಲಿ ದ್ರಾವಿಡ ವಂದರೆ ತೆಲುಗು ಮೊದಲಾದ (ವ್ಯಾಕೃತ) ಭಾಷೆಗಳಿಗೆ ಮೂಲವಾದ, ಸಂಸ್ಕೃತಜನ್ಯವಲ್ಲದ ಅದರಿಂದ ಪೋಷಿತವಾದ ಕನ್ನಡ ಮೊದಲಾದುವು ಯಾವಾಗ ಹುಟ್ಟಿ ಭಾಷೆಯಾಗಿತ್ತೋ, ಅವರ ಪೂರ್ವಜರು ಆಡುತ್ತಿದ್ದ ಭಾಷೆಯೆಂದು ತೀರ್ಮಾನಿಸಬೇಕು.

ಕನ್ನಡ ಲಕ್ಷಣ ಗ್ರಂಥಕರ್ತರುಗಳಲ್ಲಿ ನಾಗವರ್ಮನು

ಭರತಖಂಡದಲ್ಲಿ ಪ್ರಸಿದ್ಧವಾದ ೫೬ ದೇಶದ ಭಾಷೆಗಳನ್ನು ಸಂಸ್ಕೃತ, ಪ್ರಾಕೃತ, ಅಪಭ್ರಂಶ, ಪೈಶಾಚ ಎಂಬ ೪ ವರ್ಗಗಳಾಗಿ ವಿಂಗಡಿಸಬಹುದೆಂದು ಭಾಂಡೋಂಬುಧಿಯಲ್ಲಿ ಹೇಳಿರುವನು. ಗ್ರಂಥಗಳಿಲ್ಲದೆ ಕೇವಲ ವ್ಯವಹಾರದಲ್ಲಿರುವದು ಅರ್ಧ ಭಾಷೆಯೆಂದು ತಿಳಿದು ಪೈಶಾಚಿಕ (ಪ್ರಾದ್ರ ಕಾಡು ಜನರ) ಭಾಷೆಯನ್ನು ಅರ್ಧ ಭಾಷೆಯೆಂದು ಹೇಳಿರಬಹುದು. ಪಂಚದ್ರಾವಿಡರ ಪ್ರಾಕೃತವೆಂದೂ ಪಂಚಗೌಡ ರ ಅಪಭ್ರಂಶವೆಂದೂ ಈತನ ತಾತ್ಪರ್ಯವಿರಬಹುದು. ಭಟ್ಟಾಕಳಂಕನು ಶಬ್ದಾನುಶಾಸನದ ಮಂಗಳಶ್ಲೋಕ ವ್ಯಾಖ್ಯಾನಾವಸರದಲ್ಲಿ ಭಾಷಾಸ್ವರೂಪಣೆ ಮಾಡಿ ಅದರಲ್ಲಿ ಪ್ರವಚನ ಪ್ರಸಿದ್ಧಗಳಾದ ೧೪ ಮಹಾಭಾಷೆಗಳು (ಲಕ್ಷಣ ಗ್ರಂಥ ಮೊದಲಾದವು ಉಳ್ಳದ್ದು) ೭೦೦ ಕ್ಷುಲ್ಲಕ (ಗ್ರಂಥವಿಲ್ಲದೆ ಕೇವಲ ವ್ಯವಹಾರದಲ್ಲಿರುವುದು) ಭಾಷೆಗಳು ಎಂದು ದೊಡ್ಡ ವಿಭಾಗವನ್ನು ಹೇಳಿರುವನು (ವಿವರವನ್ನು ಹೇಳಿಲ್ಲ) ಇವನ ವಿಭಾಗ ಕ್ರಮವು ಈಗಿನ ಪಂಡಿತರ ಅಭಿಪ್ರಾಯಕ್ಕೆ ಸರಿಯಾಗಬಹುದೆಂದು ತೋರುತ್ತದೆ. ಭಾಷಾಸ್ವರೂಪವನ್ನು ತಕ್ಕಷ್ಟೇ ಪರಿಶೀಲಿಸಿದ ಆಧುನಿಕ ಪಂಡಿತರ ಅಭಿಪ್ರಾಯದಂತೆ ಮರಾಟಿ ಗುಜರಾತಿಗಳಲ್ಲಿರುವ ಸಂಸ್ಕೃತ ಮತ್ತು ಶಬ್ದಭವ ಶಬ್ದಗಳನ್ನು ಬಿಟ್ಟಲ್ಲಿ ಅವು ವ್ಯವಹಾರೋಪಯೋಗಕರವಾಗಲಾರವಾದುದರಿಂದಲೂ ಸಂಸ್ಕೃತ ಜನ್ಯಗಳಾದುದರಿಂದಲೂ ಇವನ್ನು ದ್ರಾವಿಡ ವರ್ಗದಿಂದ ಬಿಟ್ಟು ಮರಿಯಾಳಿ ಮೊದಲಾದವನ್ನು ದ್ರಾವಿಡ ವರ್ಗದಲ್ಲಿ ಸೇರಿಸಿ ವಿಭಾಗಿಸಿದರೆ—೧ ಸಂಸ್ಕೃತ, ೨ ಗೌಡವರ್ಗ (ಹಿಂದು, ಬಂಗಳಾ, ಮರಾಟಿ, ಪಂಜಾಬಿ, ಗುಜರಾತಿ, ಓಡ್ರಿ ಸೈಂಧವಿ, ಕ್ಷುಲ್ಲಕ ಭಾಷೆಗಳು) ಎಂದು ೩ ಮುಖ್ಯ ವರ್ಗಗಳು ಅವುಗಳಲ್ಲಿರುವ ಮುಖ್ಯ ಭಾಗಗಳು ಮೇಲೆ ಬರೆದಂತೆ ಆಗುತ್ತವೆ.

ಭಾಷೆಯಲ್ಲಿ ಅನೇಕ ಭೇದಗಳಾಗಲು ಕಾರಣ—

ಮನೋಭಿಪ್ರಾಯವನ್ನು ವ್ಯಕ್ತವಾಗಿ ತಿಳಿಸುವ ನುಡಿಯೇ ವಾಕ್ಯ (ಭಾಷೆ) ಎಂದು ಹಿಂದೆ ಹೇಳಿದೆ. ಆದರಲ್ಲಿ

ಎರಡು ಅಥವಾ ಅನೇಕ ಶಬ್ದಗಳಿರುವವು. ಪ್ರತಿ ಶಬ್ದವೂ ಒಂದೊಂದು ಅರ್ಥವನ್ನು ಬೋಧಿಸುವದು. ಅರ್ಥವೆಂದರೆ ವಸ್ತು ಅಥವಾ ಅದರ ಗುಣಕ್ರಿಯಾದಿಗಳು. ವಸ್ತ್ವಾದಿಗಳು ಸನ್ನಿಹಿತವಾಗಿದ್ದರೆ ಸಂಜ್ಞಾದಿಗಳಿಂದ ಅರ್ಥವನ್ನು ನಿರ್ದೇಶಿಸಬಹುದು. ಆದರೆ ಅವು ಪರೋಕ್ಷದಲ್ಲಿದ್ದಾಗ ತತ್ಸಂಬಂಧ ಜ್ಞಾನವಾಗಲು ಯಾವದಾದರೊಂದು ತೆರದ ಸಂಕೇತವು ಬೇಕು. ಇಂತಹ ಸಂಕೇತಗಳು ಒಂದೇ ಪ್ರಕಾರದವುಗಳಾಗಿರಬೇಕೆಂಬ ನಿಯಮವೇನೂ ಇಲ್ಲ. ಆದ್ದರಿಂದ ವಸ್ತ್ವಾದಿಗಳನ್ನು ಬೋಧಿಸಲು ಕಲ್ಪಿತಗಳಾದ ಸಂಕೇತಗಳು ಅನೇಕ ಪ್ರಕಾರವಾಗಿವೆ. ಉದಾಹರಣಾರ್ಥವಾಗಿ ಕುದುರೆ ಎಂಬೊಂದು ವಸ್ತುಜ್ಞಾನಕ್ಕಾಗಿ ಸಂ (ಘೋಟ) ಹಿಂ (ಘೋಡ) ತೆ (ಗುರ್ರಂ) ಗೋಳಿ ಮೊದಲಾದ ಅನೇಕ ಸಂಕೇತಗಳಿವೆ. ಇಲ್ಲಿ ಶಬ್ದಸ್ವರೂಪೋಚ್ಚಾರಗಳು ಭಿನ್ನವಾಗಿದ್ದರೂ ಎಲ್ಲ ಶಬ್ದಗಳಿಂದಲೂ ಕುದುರೆ ಎಂಬೊಂದೇ ಅರ್ಥವು ಈ ಆಯಾ ಸಂಕೇತವನ್ನು ಬಲ್ಲವರಿಗೆ ಜ್ಞಾತವಾಗುತ್ತದೆ. ಇಂತು ಸಂಕೇತಭೇದವು ಎಲ್ಲರೂ ಒಂದೇ ಸ್ಥಲದಲ್ಲಿದ್ದರೆ ಪ್ರಾಯಶಃ ಸಂಭವಿಸದು. ಅಂದರೆ ಬೇರೆ ಬೇರೆ ಪ್ರದೇಶಗಳಿರಬೇಕು. ಆಗ ದೇಶಭೇದದಿಂದ ಭಾವಮುಲ್ಲಿ ಅನೇಕ ಭೇದಗಳಾಯಿತೆಂದು ಹೇಳಬಹುದು. ಇದರಂತೆ ಕಾಲಭೇದದಿಂದಲೂ ಸರ್ವ ಪದಾರ್ಥಗಳೂ ಸರ್ವ ದೇಶದಲ್ಲಿಯೂ ದೊರೆಯದುದರಿಂದಲೂ ಮನುಷ್ಯನ ಬುದ್ಧಿವೈಕಲ್ಯ ಮೊದಲಾದವುಗಳಿಂದಲೂ ಭಾಷಾಭೇದವಾಯ್ತೆಂದು ಸ್ಥಾಪಿಸಬಹುದು. ವಿಸ್ತಾರಭಯದಿಂದ ವಿರಮಿಸಿದೆನು. ಈ ವಿಷಯದಲ್ಲಿ ಭಟ್ಟಾಕಳಂಕನು ಶಬ್ದಾನುಶಾಸನದ ನವಮಶ್ಲೋಕ ಇತ್ಯಾದಿ ಮಂಗಳಶ್ಲೋಕ ವ್ಯಾಖ್ಯಾನಾವಸರದಲ್ಲಿ ದೇವರ ಮುಖದಿಂದ ಮೊದಲು ಹೊರಟ ಭಾಷೆಯು ಒಂದೆ. (ಸ್ವರಭಾಷಾಮಯಿ ಭಾಷಾಯನ್ನೋಖಾತ್ಪವೃತ್ತಾ ಸರ್ವಭಾಷಾಸರೂಪಳಾದ ಸರಸ್ವತಿಯು ಯಾವ ಪರಮಾತ್ಮನ ಮುಖದಿಂದ ಹುಟ್ಟಿತೊ) ಅದು. ದೇವಮನುಷ್ಯಾದಿ ಭೇದಗಳುಳ್ಳ ಭಗವದ್ಸೃಷ್ಟಿಯನ್ನು, ಕೇಳುತ್ತಿದ್ದ ಕ್ರೋತೃಗ

ಶ್ರವಣೇಂದ್ರಿಯದ ಆಕಾರರೂಪ ಉಪಾಧಿಭೇದದಿಂದ
ನೇಕ ಪ್ರಕಾರವಾಯಿತು. (ಅಂದರೆ ದೇವರ ಮುಖದಿಂದ
ಹೊರಟ ಭಾಷೆಯು ಒಂದೇ ಪ್ರಕಾರವಾಗಿದ್ದರೂ ಅದನ್ನು
ಕೇಳುತ್ತಿದ್ದವರ ಕಿವಿಗಳ ದೋಷ ಮುಂತಾದ್ದರಿಂದ ಅವರಿಗೆ
ನಾನಾಪ್ರಕಾರವಾಗಿ ಕೇಳಬಂದುದರಿಂದ ಅನೇಕ ಭೇದಗ
ಳಾದವೆಂದು ತಾತ್ಪರ್ಯ.) ಸೂರ್ಯನು ಸ್ವಾತಿ ನಕ್ಷತ್ರದ
ಲ್ಲಿರುವಾಗ ಬಿಳುಪಾದ ಮೋಡದಿಂದ ಬೀಳುವ ಮಳೆಯ
ನೀರು ಒಂದೇ ರೀತಿಯಾಗಿದ್ದರೂ ಊಪರಾ (ಚೌಳು) ದಿ
ಕ್ಷೇತ್ರಗಳಲ್ಲಿ ಬೀಳುವದರಿಂದ ಉಪ್ಪುನೀರು ಮೊದಲಾದ
ರೂಪಾಂತರವನ್ನು ಹೊಂದುವಂತೆಯೂ ಮುತ್ತಿನಿಂಪು ಏಳಿ
ತ ಬಾಳೆ ಮೊದಲಾದವುಗಳ ಮೇಲೆ ಬೀಳುವದರಿಂದ
ಮುತ್ತು ಪಚ್ಚ್ಕರ್ಪೂರ ಮೊದಲಾದ ರೂಪಾಂತರವನ್ನು
ಹೊಂದುವಂತೆಯೂ ಬೇವು ಹುಣಿಸೆ ಮೊದಲಾದ ಒಂದೇ
ಸ್ಥಳದಲ್ಲಿರುವ ಗಿಡಗಳ ಬೇರುಗಳಿಂದ ಹೀರಲ್ಪಟ್ಟಾಗ ಹಿ
ಹುಳಿ ಮೊದಲಾದ ರಸದ ರೂಪಾಂತರವನ್ನು ಹೊಂದುವಂ
ತೆಯೂ ಭಾಷೆಯು ಶ್ರೋತೃಭೇದದಿಂದ ಅನೇಕವಾಯಿತು
ಎಂದು ಹೇಳಿರುವನು.

AGRICULTURE.

ಕೃಷಿಶಾಸ್ತ್ರವು.

(ಟೀಸೇ ಪತ್ರದಿಂದ ಮುಂದೆ ಸಾಗಿದ್ದು)

ಪ್ರತಿವರುಷ ಬರುವ ರಾಯು (Rye)
ಧಾನ್ಯದ ಹುಲ್ಲು ... ... ೧೫ ಪೌಂಡ
ಇಟಲಿ ದೇಶದ ರಾಯು (Rye) ಧಾನ್ಯದ
ಹುಲ್ಲು .... ೫ ,,
ಕಾಕ್ಸಫೂಟ (Cocks foot) ... ೫ ,,
ಟಿಮೋಥಿ (Timothy) ... ... ೪ ,,
ಸವಿಯಾದ ವಸಂತಕಾಲದ ಹುಲ್ಲು ... ೧ ,,
ಮೆಡೊಫಾಕ್ಸಟೇಲ (Meadow fox tail) ೦ ,,

ಹುರುಬರುಕಾದ ದೇಟುಗಳುಳ್ಳ ಹುಲ್ಲು	...	...	೦ ,,
ಪ್ರತಿವರುಷ ಬರುವ ಕೆಂಪು ಕ್ಲೊಹ್ವರ (Clever) ಹುಲ್ಲು	...	...	೫ ,,
ಡಚ್ಚ	...	...	೫ ,,
ಅಲ್ಲಸೈಕಿಕ ಕ್ಲೊಹ್ವರ (Alsike clever)	...	...	೦ ,,
ಯಾರೋ (Yarrow)	...	...	೧½ ,,

೪೦½ ಪ್ರತಿ
ಒಂದು ಯಕರೆ ಭೂಮಿಗೆ—

೪ ಮೇವಿನ ಬೆಳೆಗಳು:— ಇವು ವಾಡಿಕೆಯಾಗಿ ಭೂಮಿಯಲ್ಲಿ ತುಸು ದಿವಸ ಇರುತ್ತವೆ ಮತ್ತು ಕೆಲಕೆಲವು ವೇಳೆ ಎರಡು ನೇಮಿತವಾದ ಬೆಳೆಗಳ ಮಧ್ಯದಲ್ಲಿ ಇವುಗಳನ್ನು ತೆಗೆದುಕೊಳ್ಳುತ್ತಾರೆ. ಹೀಗಾಗಿ ಎರಡು ವರುಷಗಳಲ್ಲಿ ಎರಡು ಬೆಳೆಗಳ ಬದಲಾಗಿ ಮೂರುನಾಲ್ಕು ಬೆಳೆಗಳನ್ನು ತೆಗೆದುಕೊಳ್ಳಬಹು. ಹೆಚ್ಚಿನ ಬೆಳೆಗೆ ಕ್ಯಾಚಕ್ರಾಪ (Catch-crop) ಎಂತಲೂ ಈ ಪದ್ಧತಿಗೆ ಕ್ಯಾಚಕ್ರಾಪಿಂಗ ಎಂತಲೂ ಅನ್ನುತ್ತಾರೆ.

ಮೇವಿನ ಬೆಳೆಗಳಲ್ಲಿ, ಸಾನಿವಿ, ಗೋಂಜೋಳ, ಲ್ಯೂಸರ್ನ ಎಂಬ ವಿಲಾಯತಿ ಹುಲ್ಲು, ರೇಪ (Rape) ರಾಯ (Rye) ಎಂಬ ಧಾನ್ಯ ಟ್ರೈಫೋಲಿಯಮ್ಮ (Trifolium) ಹ್ವೆಚಿಸ್ (Vetches) ಸೇನಫಾಯಿನ್ (Sainfoin), ಗಾರ್ಸ (Gorse) ಇವೇ ಮುಖ್ಯ ಬೆಳೆಗಳಾಗಿರುತ್ತವೆ. ಇಂಗ್ಲಂಡದ ದಕ್ಷಿಣದಲ್ಲಿ ಚಳಿಗಾಲದ ಜವೆಗೋಧಿ ಚಳಿಗಾಲದ ಓಟ್ಸ (Oates) ಎಂಬ ಧಾನ್ಯ. ರಾಯ (Rye) ಧಾನ್ಯ ಇವೇ ಮೇವಿಗಾಗಿ ಉಪಯೋಗಿಸಲ್ಪಡುವ ಖಾದ್ಯ ಧಾನ್ಯಗಳಾಗಿರುತ್ತವೆ. ಈ ಮೂರು ಧಾನ್ಯಗಳಿಗೂ ಭೂಮಿಯಲ್ಲಿ ಮೊದಲು ರಂಟೆ ಮತ್ತು ಕುಂಟೆಯನ್ನು ಹೊಡೆದು ಒಂದು ಯಕರೆ ಭೂಮಿಗೆ ೬½ ಬುಕೆಲ್ಲ ಬೀಜಗಳನ್ನು ಬಿತ್ತುತ್ತಾರೆ. ಈ ಮೂರು ಧಾನ್ಯಗಳನ್ನು ಸಾಧಾರಣವಾಗಿ ಅಗಲಾಗಿ ಒಂದ

ಕೊಂದು ಸವಿಯಾಗಿ ಬಿತ್ತುತ್ತಾರೆ. ಇವುಗಳಲ್ಲಿ ರಾಯೆ (Rye) ಎಂಬ ಧಾನ್ಯವು ಎಲ್ಲಕ್ಕೂ ಮೊದಲು ಬರುತ್ತದೆ. ಆ ಮೇಲೆ ಜವೆ ಗೋಧಿ ಎಲ್ಲಕ್ಕೂ ಕಡಿಗೆ ಓಟ್ಸ (Oates) ಎಂಬ ಧಾನ್ಯವು ತಯಾರಾಗುತ್ತದೆ.

ಹ್ಯೆಚಿಸ್ಸ (Vetches)—ಇದು ಬಹಳ ಉಪಯುಕ್ತವಾದ ಬೆಳೆಯಾಗಿರುತ್ತದೆ. ಇದು ಸಾಧಾರಣವಾಗಿ ಮೇ ತಿಂಗಳಿಂದ ಸಪಟೆಂಬರ ತಿಂಗಳ ವರಿಗೆ ಬರುತ್ತದೆ. ಗೋಧಿಯ ಕೊಯಿಲನ್ನು ಚನಾಗಿ ತೆಗೆದು ಹುಕಿ ಬಂದು ಎಕರೆ ಭೂಮಿಗೆ ೧೨ ಬರೆ ಸಗಣಿಯನ್ನು ಹಾಕಿ ನಾಲ್ಕು ಇಂಚು ನೇಗಿಲಿನಿಂದ ಸಾಗು ಮಾಡುವದು. ಆ ಮೇಲೆ ಚಲೋ ಬೆಳೆ ಬರುವಂತೆ ಕೆಲವು ಸಾರಿ ಕುಂಟೆ ಹೊಡೆಯಬೇಕು. ಚಳಿಗಾಲದಲ್ಲೆಲ್ಲ ಬೇರೆ ಬೇರೆ ಸಾರೆ ಬಂದು ಯಕರೆಕ್ಕೆ ೬೪ ಬುಶೆಲ್ಲ ಬೀಜಗಳನ್ನು ಬಿತ್ತಬೇಕು.

ರೇಪ (Rape) ಇದಕ್ಕಾದರೂ (ಸ್ವೀಡ್ಸ) (Swedes) ಎಂಬ ಬೆಳೆಗೆ ತಯಾರು ಮಾಡುವಂತೆ ಭೂಮಿಯನ್ನು ತಯಾರು ಮಾಡಬೇಕು. ರೇಪ್ಸ (Rape) ದ ಸಾಲಿನ ಮೇಲೆ ಹ್ಯೆಚಿಸ (Vetches) ದ ಬೀಜಗಳನ್ನು ಕೈಯಿಂದ ಚಲ್ಲಬಹುದು. ಇವೆರಡು ಕೂಡಿ ಉತ್ತಮ ಮೇವಿನ ಬೆಳೆಯಾಗುತ್ತವೆ, ಇದನ್ನು ಜೂನ ತಿಂಗಳಲ್ಲಾಗಲೀ ಜುಲೈ ತಿಂಗಳಲ್ಲಾಗಲೀ ಬಿತ್ತುತ್ತಾರೆ.

ಸೈನಫಾಯಿನ್ (Sainfoin) ಜವೆಗೋಧಿಯಾಗಲೀ ಓಟ್ಸ (Oates) ಧಾನ್ಯವಾಗಲೀ ಬೆಳೆದ ಚಲೋ ಭೂಮಿಯಲ್ಲಿ ಇದನ್ನು ಬಿತ್ತಿದರೆ ಚಲೋ ಬೆಳೆ ಬರುತ್ತದೆ. ಇದರ ಹುಲ್ಲನ್ನು ತೆಗೆದುಕೊಳ್ಳಬೇಕಾದರೆ ಇದು ಹೂವು ಬಿಟ್ಟಾಗ್ಗೆ ಇಪ್ಪನ್ನು ಕೊಯ್ಯಬೇಕು.

ಲ್ಯೂಸರ್ನ (Luccurne) ಎಂಬ ವಿಲಾಯತಿಯ ಹುಲ್ಲು ಇದನ್ನು ತಯಾರ ಮಾಡಿದ ಮತ್ತು ಗೊಬ್ಬರ ಹಾಕಿದ ಬೀಜಗಳ ಮಡಿಗಳಲ್ಲಿ ೯ ಇಂಚು ದೂರಿದ್ದ ಸಾಲುಗಳಲ್ಲಿ ಸಾಧಾರಣವಾಗಿ ಎಪ್ರೀಲ ತಿಂಗಳಲ್ಲಿ ಬಿತ್ತುತ್ತಾರೆ. ವಸಂತ ಕಾಲದಲ್ಲಿ ತುಸು ಗುದ್ದಲಿಯು ಉಪಯೋಗ ಬೀಳುತ್ತವೆ.

ಸಾಸಿವೆ— ಕಿರಿದಾದ ನೇಗಿಲು ಸಾಲಿನಲ್ಲಿ ಕುಂಟೆ ಹೊಡೆದು ಕೈಯಿಂದ ಚಲ್ಲುವ ಯಂತ್ರದಿಂದ ಇದನ್ನು ಬಿತ್ತುತ್ತಾರೆ. ಇದನ್ನು ತಿನ್ನಲಿಕ್ಕೆ ಕುರಿಗಳನ್ನು ಹಚ್ಚಬಹುದು. ಇಲ್ಲವೆ ಹಸರು ಬೆಳೆಗಳ ಗೊಬ್ಬರಕ್ಕೆ ಇದನ್ನು ಉಪಯೋಗಿಸಬಹುದು, ಸಾಗುವಳಿಯ ಪದ್ಧತಿಗಳನ್ನು ಭೂತುಗಳ ಮತ್ತು ಹವೆ ವಾಸದ ಸ್ಥಿತಿಗತಿಗಳಿಗೆ ಯೋಗ್ಯವಾಗುವಂತೆ ಮಾಡುವದು.

ಹವೆ ಮಾನದ ಸ್ಥಿತಿಯು ಯಾವ ಕಾಲಕ್ಕೆ ಹೇಗೆ ಆಗುತ್ತದೆಂಬುವದು ಮೊದಲೇ ನಮಗೆ ಗೊತ್ತಾಗುವದಿಲ್ಲ. ಹಾಗಿದ್ದರೆ ಅವುಗಳಿಗೆ ಅನುಸರಿಸಿಯೇ ಬೆಳೆಗಳನ್ನು ತೆಗೆದುಕೊಳ್ಳಲಿಕ್ಕೆ ನಮಗೆ ಬರುತ್ತಿತ್ತು. ಸಾಧಾರಣವಾಗಿ ಬೇರುಗಳ ಬೆಳೆಗೆ ಮಳೆಗಾಲವೇ ಯೋಗ್ಯವಾಗಿರುತ್ತದೆ. ಆದರೆ ಬಟಾಟೆಗೆ ಮಾತ್ರ ಮೊದಲು ಆರ್ದ್ರ ಹವೆಯೂ ಆ ಮೇಲೆ ಉಷ್ಣತೆಯುಳ್ಳ ಹವೆಯೂ ಬೇಕಾಗುತ್ತದೆ. ಮಳೆಗಾಲದಿಂದ ಹುಲ್ಲು ಬನ್ನಿಯ ಭೂಮಿಗೂ ಮೇಲಿಂದ ಮೇಲೆ ತಕ್ಕೊಳ್ಳುವ ಬೆಳೆಗಳಿಗೂ ಕೆಲವಂಶ ಓಟ್ಸ (Oates) ಧಾನ್ಯಗಳಿಗೂ ಉಪಯೋಗವಾಗುತ್ತದೆ. ಗೋಧಿ, ಜವೆಗೋಧಿ, ವ್ಯಾಂಜೆಲ್ಸ ಇವುಗಳ ಬೆಳೆಗೆ ಬೇಸಿಗೆ ಕಾಲವೇ ತಕ್ಕದ್ದಾಗಿರುತ್ತದೆ.

ಆಗ್ನೆಯ ದಿಕ್ಕಿನ ಪರಗಣೆಯಲ್ಲಿ ಮಳೆಯು ಬಹಳ ತುಸು ಇದ್ದಾಗ್ಯೂ ಉತ್ತಮ ಗೋಧಿಯ ಬೆಳೆ ಬರುತ್ತದೆ. ಆದರೆ ವಾಯವ್ಯ ಪರಗಣೆಗಳಲ್ಲಿ ಉತ್ತಮ ಹುಲ್ಲಬನ್ನಿ ಮತ್ತು ಬೇರುಗಳ ಬೆಳೆ ಇರುವದರಿಂದ ಎಷ್ಟೋ ದನಗಳ ಉಪಜೀವನ ಸಾಗುತ್ತದೆ. ದಕ್ಷಿಣದಲ್ಲಿ ನಾಜೂಕಾದ ಬಿಳೇ ಗೋಧಿಯು ಬೆಳೆಯುತ್ತದೆ. ಆದರೆ ಉತ್ತರದಲ್ಲಿ ಕಡಿಮೆ ಪ್ರತಿಯುದಿದ್ದಾಗ್ಯೂ ಘಟ್ಟಯಾದ ಕೆಂಪು ಗೋಧಿಯು ಬೆಳೆಯುತ್ತದೆ. ಬೇಸಿಗೆ ಕಾಲದಲ್ಲಿ ಬಾಧ್ಯ ಧಾನ್ಯಗಳ ಹುಲ್ಲು ಕಿರಿದಾಗಿಯೂ ಪೆಡಸಾಗಿಯೂ ಕಡಿಮೆ ಪೋಷಕದ್ರವ್ಯವಾಗಿಯೂ ಇರುತ್ತದೆ. ಯಾಂದರೆ ಈ ಕಾಲದಲ್ಲಿ ಕಾಳುಗಳು ಚನ್ನಾಗಿ ಬೆಳೆಯುತ್ತವೆ. ಥಂಡಿ ಹವೆ ಇದ್ದಾಗ್ಗೆ ಕಾಳುಗಳು ಅಷ್ಟು

ಸೊಕ್ಕಿನಿಂದ ಬೆಳೆಯುವದಿಲ್ಲ. ಆದ್ದರಿಂದ ಅವುಗಳ ಹುಲ್ಲು
ಹೆಚ್ಚು ಎತ್ತರವಾದದ್ದೂ ಹೆಚ್ಚು ರುಚಿಕರವಾದದ್ದೂ ಕಡಿ
ದಾಯಕವಾಗಿಯೂ ಇರುತ್ತದೆ. ಆದರೆ ಆದಕ್ಕೆ ರೋಗ
ಕಾಗದಂತೆ ಅದನ್ನು ಚನ್ನಾಗಿ ಜೋಕೆ ಮಾಡಿದರಲಿಕ್ಕೆ ಬೇಕು.
ಸರಾಸರಿ ಮಾನದಿಂದ ನೋಡಿದರೆ ಪೂರ್ವದ ಪರಗಣೆಗಳು
ಕಾಳುಗಳನ್ನು ಬೆಳೆಯಲಿಕ್ಕೆ ಉತ್ತಮವಾದ ಪ್ರದೇಶಗಳಾಗಿ
ಯೂ ಪಶ್ಚಿಮದ ಪರಗಣೆಗಳು ಹುಲ್ಲಿಗೂ ಬೇರುಗಳಿಗೂ
ತಕ್ಕ ಪ್ರದೇಶಗಳಾಗಿಯೂ ಇರುತ್ತವೆ. ಉತ್ತರದಲ್ಲಿ ಸ್ವೀ
ಡ್ಸ (Swedes) ಇವು ಚನ್ನಾಗಿ ಬೆಳೆಯುತ್ತವೆ. ಮತ್ತು ದ
ಪ್ಪಣದಲ್ಲಿ (ಮ್ಯಾಂಜೆಲ್ಸ) ಮತ್ತು ಬಿಳಿ ಮೂಲಂಗಿಯಂತ ಬೇ
ನಿಪ್ಪ ಎಂಬ ಪಲ್ಲೆಯೂ ಬೆಳೆಯುತ್ತವೆ.

(ಸಶೇಷ.)

MEMORY.

ಸ್ಮರಣಶಕ್ತಿ.

ಈ ವಿಷಯವು ಬಹು ಶ್ರೇಷ್ಠವಾದದ್ದೂ ಪರಮ ಗಹನ
ವಾದದ್ದೂ ಆಗಿರುತ್ತದೆ. ಇದನ್ನು ಶಾಸ್ತ್ರೀಯ ರೀತಿಯಿಂ
ವಿಚಾರಿಸಲಿಕ್ಕೆ ಬರುವಂತಿದ್ದರೂ ನಾನು ಅದರ ಗೊಡವೆ
ಹೋಗದೆ ತಿಳಿದಷ್ಟು ಮಟ್ಟಿಗೆ ಇದರಲ್ಲಿ ವಿವೇಚಿಸಿರುವೆನು
ಸ್ಮಸಣಶಕ್ತಿಯು ಪ್ರಯೋಜನವು ಪ್ರತಿಯೊಬ್ಬ ಮನುಷ
ನಿಗೆ ಇದ್ದೇ ಇರುವದು. ಅವನು ಜ್ಞಾನಿಯೇ ಇರಲಿ, ಅಜ್ಞಾ
ನಿಯೇ ಇರಲಿ; ಪಾಶ್ಚಾತ್ಯ ವಿದ್ಯಾವಿಭೂಷಿತನೇ ಇರಲಿ, ಪ
ರಸ್ತ್ಯ ವಿದ್ಯಾಪರಾಯಣನೇ ಇರಲಿ; ದರಿದ್ರನಿರಲಿ, ಶ್ರೀಮ
ತನಿರಲಿ; ದುರ್ಧಾರಕನಿರಲಿ, ಸುಧಾರಕನಿರಲಿ; ಒಟ್ಟಿ
ಯಾವನೇ ಇರಲಿ, ಅವನಿಗೆ ಸ್ಮರಣ ಸಾಮರ್ಥ್ಯದ ಅವ
ಶ್ಯತೆಯು ಇದ್ದೇ ಇರುವದು. ವಾದವಿವಾದದ ಸಭೆಯು
ಇಲ್ಲವೆ ಅದರಂತಹ ಎಷ್ಟೋ ಪ್ರಸಂಗಗಳಲ್ಲಂತೂ ಇದ
ಉಪಯೋಗವು ಅನಿತಿನಿತೆಂದು ಹೇಳಲಾಸಲ್ಲ. ಮನೆವ
ರಿನ ಕಲಸದಲ್ಲಿ ಸಹ ಇದರ ಉಪಯೋಗ ಉಂಟೇ ಉಂಟ

ಸಾಸಿವೆ— ಕಿರಿದಾದ ನೇಗಿಲು ಸಾಲಿನಲ್ಲಿ ಕುಂಟೆ ಹೊಡೆದು ಕೈಯಿಂದ ಚಲ್ಲುವ ಯಂತ್ರದಿಂದ ಇದನ್ನು ಬಿತ್ತುತ್ತಾರೆ. ಇದನ್ನು ತಿನ್ನಲಿಕ್ಕೆ ಕುರಿಗಳನ್ನು ಹಚ್ಚಬಹುದು. ಇಲ್ಲವೆ ಹಸರು ಬೆಳೆಗಳ ಗೊಬ್ಬರಕ್ಕೆ ಇದನ್ನು ಉಪಯೋಗಿಸಬಹುದು, ಸಾಗುವಳಿಯ ಪದ್ಧತಿಗಳನ್ನು ಋತುಗಳ ಮತ್ತು ಹವೆ ಮಾನದ ಸ್ಥಿತಿಗತಿಗಳಿಗೆ ಯೋಗ್ಯವಾಗುವಂತೆ ಮಾಡುವದು.

ಹವೆ ಮಾನದ ಸ್ಥಿತಿಯು ಯಾವ ಕಾಲಕ್ಕೆ ಹೇಗೆ ಆಗುತ್ತದೆಂಬುವದು ಮೊದಲೇ ನಮಗೆ ಗೊತ್ತಾಗುವದಿಲ್ಲ. ಹಾಗಿದ್ದರೆ ಅವುಗಳಿಗೆ ಅನುಸರಿಸಿಯೇ ಬೆಳೆಗಳನ್ನು ತೆಗೆಯಕೊಳ್ಳಲಿಕ್ಕೆ ನಮಗೆ ಬರುತ್ತಿತ್ತು. ಸಾಧಾರಣವಾಗಿ ಬೇರುಗಳ ಬೆಳೆಗೆ ಮಳೆಗಾಲವೇ ಯೋಗ್ಯವಾಗಿರುತ್ತದೆ. ಆದರೆ ಬಟಾಟೆಗೆ ಮಾತ್ರ ಮೊದಲು ಆರ್ದ್ರ ಹವೆಯೂ ಆಮೇಲೆ ಉಷ್ಣತೆಯುಳ್ಳ ಹವೆಯೂ ಬೇಕಾಗುತ್ತದೆ. ಮಳೆಗಾಲದಿಂದ ಹುಲ್ಲು ಬನ್ನಿಯ ಭೂಮಿಗೂ ಮೇಲಿಂದ ಮೇಲೆ ತಕ್ಕೊಳ್ಳುವ ಬೆಳೆಗಳಿಗೂ ಕೆಲವಂಶ ಓಟ್ಸ (Oates) ಧಾನ್ಯಗಳಿಗೂ ಉಪಯೋಗವಾಗುತ್ತದೆ. ಗೋಧಿ, ಜವೆಗೋಧಿ, ಮ್ಯಾಂಜೆಲ್ಸ ಇವುಗಳ ಬೆಳೆಗೆ ಬೇಸಿಗೆ ಕಾಲವೇ ತಕ್ಕದ್ದಾಗಿರುತ್ತದೆ.

ಆಗ್ನೆಯ ದಿಕ್ಕಿನ ಪರಗಣೆಯಲ್ಲಿ ಮಳೆಯು ಬಹಳ ತುಸು ಇದ್ದಾಗ್ಯೂ ಉತ್ತಮ ಗೋಧಿಯ ಬೆಳೆ ಬರುತ್ತದೆ. ಆದರೆ ವಾಯವ್ಯ ಪರಗಣೆಗಳಲ್ಲಿ ಉತ್ತಮ ಹುಲ್ಲಬನ್ನಿ ಮತ್ತು ಬೇರುಗಳ ಬೆಳೆ ಇರುವದರಿಂದ ಎಷ್ಟೋ ದನಗಳ ಉಪಜೀವನ ಸಾಗುತ್ತದೆ. ದಕ್ಷಿಣದಲ್ಲಿ ನಾಜೂಕಾದ ಬಿಳೀ ಗೋಧಿಯು ಬೆಳೆಯುತ್ತದೆ. ಆದರೆ ಉತ್ತರದಲ್ಲಿ ಕಡಿಮೆ ಪ್ರತಿಯದಿದ್ದಾಗ್ಯೂ ಘಟ್ಟಯಾದ ಕೆಂಪು ಗೋಧಿಯು ಬೆಳೆಯುತ್ತದೆ. ಬೇಸಿಗೆ ಕಾಲದಲ್ಲಿ ಬಾಧ್ಯ ಧಾನ್ಯಗಳ ಹುಲ್ಲು ಕಿರಿದಾಗಿಯೂ ಪೆಡಸಾಗಿಯೂ ಕಡಿಮೆ ಪೋಷಕದ್ರವ್ಯವಾಗಿಯೂ ಇರುತ್ತದೆ. ಯಾಂದರೆ ಈ ಕಾಲದಲ್ಲಿ ಕಾಳುಗಳು ಚನ್ನಾಗಿ ಬೆಳೆಯುತ್ತವೆ. ಥಂಡಿ ಹವೆ ಇದ್ದಾಗ್ಗೆ ಕಾಳುಗಳು ಅಪ್ಪು

ಸೊಕ್ಕಿನಿಂದ ಬೆಳೆಯುವದಿಲ್ಲ. ಆದ್ದರಿಂದ ಅವುಗಳ ಹುಲ್ಲು ಹೆಚ್ಚು ಎತ್ತರವಾದದ್ದೂ ಹೆಚ್ಚು ರುಚಿಕರವಾದದ್ದೂ ಕಕ್ತಿದಾಯಕವಾಗಿಯೂ ಇರುತ್ತದೆ. ಆದರೆ ಆದಕ್ಕೆ ರೋಗ ಆಗದಂತೆ ಅದನ್ನು ಚನ್ನಾಗಿ ಜೋಕೆ ಮಾಡಿದಲಿಕ್ಕೆ ಬೇಳು. ಸರಾಸರಿ ಮಾನದಿಂದ ನೋಡಿದರೆ ಪೂರ್ವದ ಪರಗಣೆಗಳು ಕಾಳ್ಗುಗಳನ್ನು ಬೆಳೆಯಲಿಕ್ಕೆ ಉತ್ತಮವಾದ ಪ್ರದೇಶಗಳಾಗಿಯೂ ಪಶಿಮದ ಪರಗಣೆಗಳು ಹುಲ್ಲಿಗೂ ಬೇರುಗಳಿಗೂ ತಕ್ಕ ಪ್ರದೇಶಗಳಾಗಿಯೂ ಇರುತ್ತವ. ಉತ್ತರದಲ್ಲಿ ಸ್ವೀಡ್ಸ (Swedes) ಇವು ಚನ್ನಾಗಿ ಬೆಳೆಯುತ್ತವೆ. ಮತ್ತು ದಕ್ಷಿಣದಲ್ಲಿ (ಮ್ಯಾಂಜೆಲ್ಸ) ಮತ್ತು ಬಿಳಿ ಮೂಲಂಗಿಯಂತ ಟರ್ನಿಪ್ಪ ಎಂಬ ಪಲ್ಲೆಯೂ ಬೆಳೆಯುತ್ತವೆ.

(ಸಶೇಷ.)

MEMORY.

ಸ್ಮರಣಶಕ್ತಿ.

ಈ ವಿಷಯವು ಬಹು ಕ್ಲೇಪ್ಯವಾದದ್ದೂ ಪರಮ ಗಹನವಾದದ್ದೂ ಇರುತ್ತದೆ. ಇದನ್ನು ಶಾಸ್ತ್ರೀಯ ರೀತಿಯಿಂದ ವಿಚಾರಿಸಲಿಕ್ಕೆ ಬರುವಂತಿದ್ದರೂ ನಾನು ಅದರ ಗೊಡವೆಗೆ ಹೋಗದೆ ತಿಳಿದಷ್ಟು ಮಟ್ಟಗೆ ಇದರಲ್ಲಿ ವಿವೇಚಿಸಿರುವೆನು. ಸ್ಮರಣಶಕ್ತಿಯು ಪ್ರಯೋಜನವು ಪ್ರತಿಯೊಬ್ಬ ಮನುಷ್ಯನಿಗೆ ಇದ್ದೇ ಇರುವದು. ಅವನು ಜ್ಞಾನಿಯೇ ಇರಲಿ, ಅಜ್ಞಾನಿಯೇ ಇರಲಿ; ಪಾಶ್ಚಾತ್ಯ ವಿದ್ಯಾವಿಭೂಷಿತನೇ ಇರಲಿ, ಪೌರಸ್ತ್ಯ ವಿದ್ಯಾಪರಾಯಣನೇ ಇರಲಿ; ದರಿದ್ರನಿರಲಿ, ಶ್ರೀಮಂತನಿರಲಿ; ದುರ್ಧರಕನಿರಲಿ, ಸುಧಾರಕನಿರಲಿ; ಒಟ್ಟಿಗೆ ಯಾವನೇ ಇರಲಿ, ಅವನಿಗೆ ಸ್ಮರಣ ಸಾಮರ್ಥ್ಯದ ಅವಶ್ಯಕತೆಯು ಇದ್ದೇ ಇರುವದು. ವಾದವಿವಾದದ ಸಭೆಯಲ್ಲಿ ಇಲ್ಲವೆ ಅದರಂತಹ ಎಷ್ಟೋ ಪ್ರಸಂಗಗಳಲ್ಲಂತೂ ಇದರ ಉಪಯೋಗವು ಅನಿತಿನಿತೆಂದು ಹೇಳಲಾಸಲ್ಲ. ಮನೆಮಾರಿನ ಕಲಸದಲ್ಲಿ ಸಹ ಇದರ ಉಪಯೋಗ ಉಂಟೇ ಉಂಟು.

ಒಮ್ಮೆ ಸಂಘಟಿಸಿದ ಸಂಗತಿಯನ್ನು ಸಾಧ್ಯಂತವಾಗಿ ನೆನ್ನೆ ತಾಯ್ತಂದೆಗಳಿಗೆ, ಅಣ್ಣತಮ್ಮಂದಿರಿಗೆ, ಆಪ್ತೇಷ್ಟರಿಗೆ ಎಲ್ಲ ಬಗೆಯಿಂದಲೂ ತಿಳಿಯುವಂತೆ ಹೇಳಲು ಸ್ಮರಣದ ಅವಶ್ಯಕತೆಯು ಎಷ್ಟಿರುತ್ತದೆಂಬದು ತಿಳಿದ ಮಾತೇ ಇರುವದು.

ಸ್ಮರಣಶಕ್ತಿಯ ಮಹತ್ವವು.

ಸ್ಮರಣಶಕ್ತಿಯೆಂದರೇನು? ಪ್ರಚಾರದಲ್ಲಿ ಆ ಶಬ್ದದ ಅರ್ಥವು ಹೇಗೆ ಉಪಯೋಗಿಸಲ್ಪಡುತ್ತದೆ? ಈ ಬಗ್ಗೆ ಸ್ವಲ್ಪ ವಿವೇಚಿಸಿ ಮೂಲ ವಿಷಯದ ಕಡೆಗೆ ಸಾಗುವಾ. ಸ್ಮರಣಶಕ್ತಿಯೆಂದರೆ—ಮೊದಲೊಮ್ಮೆ ಮನಸ್ಸಿನಲ್ಲಿ ಬಂದ ವಿಚಾರಗಳನ್ನು ಪುನಃ ಪ್ರಚಾರಣ ಮಾಡತಕ್ಕ ಶಕ್ತಿಯು ಕೆಲವೆಡೆಯಲ್ಲಿ ಸ್ಮರಣಶಕ್ತಿಗೇ ಧಾರಣಾಸಾಮರ್ಥ್ಯವೆಂತಲೂ, ನಿದಿಧ್ಯಾಸವೆಂತಲೂ ಉಪಯೋಗಿಸುವದುಂಟು. ವಿಚಾರ ಮಾಡಿ ನೋಡಲು, ಇವೆರಡರಲ್ಲಿ ಸ್ಥೂಲವಾನದಿಂದ ಬಹಳ ಭೇದವಿದ್ದ ಹಾಗೆ ಕಾಣದಿದ್ದರೂ ಸೂಕ್ಷ್ಮವಿಚಾರದಿಂದ ಮಹದಂತರವುಂಟೆಂದು ತೋರದಿರದು. 'ಧಾರಣಾ' ಅಂದರೆ ಇಂದ್ರಿಯಜನ್ಯ ಜ್ಞಾನದಿಂದಾಗಲಿ, ಇಲ್ಲವೆ ಮಾನಸ ವ್ಯಾಪಾರಾನುಚಿಂತನದಿಂದಾಗಲಿ ಉತ್ಪನ್ನವಾದ ಒಂದು ಬಗೆಯ ಜ್ಞಾನವನ್ನು ರಕ್ಷಿಸುವದು. ಈ ರಕ್ಷಣೆಯು ಇಚ್ಛೆಗೆಯಿಂದ ತೋರುವುದು.

ಒಮ್ಮೆ ಪ್ರಾಪ್ತವಾದ ಜ್ಞಾನವನ್ನು ಮುಂದೆ ಕೆಲ ಕಾಲದ ನಂತರ ನಮ್ಮ ಕಣ್ಣೆದುರಿಗೆ ತರುವದು, ಇಲ್ಲವೆ ತನ್ನಿಂದ ತಾನೆ ನಮ್ಮ ಮನಸ್ಸಿನಲ್ಲಿ ಅದು ಕಟಿಬುತ್ತಲಿರುವದು 'ನಿದಿಧ್ಯಾಸ' ಎಂಬ ಸಂಜ್ಞೆಯಲ್ಲಿ ಬರುವದು ಉದಾಹರಣಾರ್ಥವಾಗಿ ನಾವು ಒಂದು ನಾಟಕವನ್ನು ಅದು ಮುಗಿಯುವವರೆಗೆ ಪೂರ್ಣ ಲಕ್ಷ್ಯಗೊಟ್ಟು ಅವಲೋಕಿಸಿದ ಬಳಿಕ ಆ ರಂಗಸ್ಥಳದೊಳಗಿನ ಪ್ರಕಾಸನೀಯ ಪಾತ್ರೆಗಳ ಹಾವ ಭಾವ, ಗಾನಬಜಾನೆ ಮುಂತಾದವುಗಳು ನಮ್ಮ ಕಣ್ಣೆದುರಿಗೆ ನಡೆದಿರುವಂತೆ ಭಾಸವಾಗುತ್ತಿರುತ್ತವೆ. ಇದೇ ನಿದಿಧ್ಯಾಸವು. ಒಮ್ಮೆ ನೋಡಿದ ಸಂಗತಿಯೇ ಯಾವಾಗಲೂ

ನಮ್ಮ ಮನಸ್ಸಿನಲ್ಲಿ ಹುಟಯುತ್ತ ಇದ್ದರೆ ಅದಕ್ಕೆ 'ನಿದಿಧ್ಯಾಸ ಎಂಬ ಹೆಸರು ಬರುವದು. ಇದನ್ನು ಸ್ಮರಣಶಕ್ತಿಯಲ್ಲಿ ಎಣಿಸಲಾಗದು. ಹೀಗೆಂತಲೇ ಸ್ಮರಣಶಕ್ತಿಗೆ ನಿದಿಧ್ಯಾಸವೆಂದೆನ್ನುವದು ಸೂಕ್ಷ್ಮ ದೃಷ್ಟಿಯಿಂದ ತಪ್ಪೇ ಸರಿ. ಆದರೆ ಇದು ಧಾರಣಾ ಸಾಮರ್ಥ್ಯದ ಒಂದು ಪ್ರಕಾರವೆಂದು ಮಾತ್ರ ಹೇಳಬಹುದು.

ಧಾರಣಾಸಾಮರ್ಥ್ಯದ ಇನ್ನೊಂದು ಬಗೆಯೇ ಸ್ಮರಣಶಕ್ತಿಯು. 'ಒಮ್ಮೆ ನಮ್ಮ ಮನಸ್ಸಿನಲ್ಲಿ ಬಂದ ವಿಚಾರವು ಯಾವದೊಂದು ಕಾರಣದಿಂದ ತೀರ ಇಲ್ಲದಂತಾಗಿ ಪ್ರಸಂಗ ಬಂದಾಗ ಆ ಮೊದಲಿನ ವಿಚಾರವೇ ಪೂರ್ಣವಾಗಿ ಇಲ್ಲವೆ ಕೆಲವಂಶದಿಂದಾದರೂ ನಮ್ಮ ಮನಸ್ಸಿನಲ್ಲಿ ಬರುವದು. ಇದಕ್ಕೇ ಸ್ಮರಣಶಕ್ತಿ ಅನ್ನುತ್ತಾರೆ; ನಾವು ಒಂದು ನಾಟಕವನ್ನು ನೋಡ ಹೋಗಿ ಪೂರ್ಣ ಅವಧಾನ ಕೊಟ್ಟು ಅದನ್ನು ಕೊನೆಯವರೆಗೆ ನೋಡಿದೆವೆಂದು ತಿಳಿಯುವಾ. ನಾಟಕವು ಮುಗಿದ ಬಳಿಕ ಯಾವದೊಂದು ಕಾರಣದಿಂದ ಮನಸ್ಸು ಬೇರೆ ವಿಚಾರದಲ್ಲಿ ತೊಡಗಿದರೆ ನಾಟಕದ ಸಂಬಂಧದ ಮೊದಲಿನ ವಿಚಾರವು ಲುಪ್ತವಾಗುವದು. ಮುಂದೆ ಎಷ್ಟೋ ಕಾಲದ ಮೇಲೆ ಯಾವನೊಬ್ಬನು ಆ ನಾಟಕಸಂಬಂಧದ ಉದ್ಗಾರವನ್ನು ತೆಗೆದ ಕೂಡಲೇ ಮೊದಲು ನೋಡಿದ ಸಂಗತಿಗಳೆಲ್ಲ ಮೂರ್ತಿಮತ್ತಾಗಿ ನಮ್ಮೆದುರಿಗೆ ಬಂದು ನಿಲ್ಲುತ್ತವೆ. ಇದೇ ಸ್ಮರಣಶಕ್ತಿಯು. ಸ್ಮರಣಶಕ್ತಿಗೆ ನಮ್ಮಿಂದ ಸಂಪಾದಿಸಲ್ಪಟ್ಟ ಜ್ಞಾನದ ಕೊಟ್ಟಡಿಯ ಸಾಮ್ಯವನ್ನು ಕೊಡಲಿಕ್ಕೆ ಏನೂ ಪ್ರತ್ಯವಾಯವಿಲ್ಲ. ವ್ಯವಹಾರದಲ್ಲಿ ಸಂಪಾದಿಸಿದ ಒಡವೆಯನ್ನು ಹೇಗೆ ಕೊಟ್ಟಡಿಯಲ್ಲಿ ತಂದು ಇಡುವೆವೋ ಹಾಗೆಯೇ ನೋಡಿದ ಇಲ್ಲವೆ ಕೇಳಿದ ಸಂಗತಿಗಳ ಜ್ಞಾನವನ್ನು ಸ್ಮರಣದಲ್ಲಿರಿಸಲು ಅಡ್ಡಿ ಇಲ್ಲ. ಈ ಶಕ್ತಿಯು ಮಿದುಳಿನಲ್ಲಿರುವದು ಮಿದುಳಿನಲ್ಲಿ ಗ್ರಹಣಶಕ್ತಿ, ಸ್ಮರಣಶಕ್ತಿ, ವಿಚಾರಣಶಕ್ತಿ ಇತ್ಯಾದ್ಯ

ನೇಕ ಪ್ರಕಾರಗಳಿದ್ದಾಗ್ಯೂ ಅವುಗಳಿಗೆಲ್ಲ ಮನಸ್ಸೆಂಬ ಸಂ
ಜ್ಞೆಯೇ ಕೊಡಲ್ಪಡುವದು. ಮನೋವ್ಯಾಪಾರಗಳೆಲ್ಲ
ಮಿದುಳಿನ ವಿಕಾರಗಳೇ ಮಿದುಳಿನಲ್ಲಿ ಆಯಾ ಶಕ್ತಿಗಳಿಗೆ
ನೇರೆ ಬೇರೆ ಸ್ಥಳಗಳು ದೊರತಿರುವವೆಂದು ತಜ್ಞ್ಞಾ
ನ ಸಾನುಭವದಿಂದ ಗೊತ್ತು ಹಚ್ಚಿದ್ದಾರೆ. ಆದರಿಂದಲೇ
ಮಿದುಳಿನ ಪ ತಿಯೊಂದು ಭಾ ಗದ (ಗ್ರಹಣಾದಿ ಶಕ್ತಿಗಳ)
ನ್ನು ಬೇಕಾದನಿತು ಬೆಳಿಸಲಿಕ್ಕೂ ಕಡಿಮೆ ಮಾಡಲಿಕ್ಕೂ
ಬರುತ್ತದೆ. ಸ್ಮೃತಿಸಂಬಂಧದ ಮಿದುಳಿನ ಭಾಗವನ್ನು ಬೆ
ಳೆಸಿದರೆ, ಇಲ್ಲವೆ ಕಡಿಮೆ ಮಾಡಿದರೆ, ಮನಸ್ಸಿನ ಉಳಿದ
ಅಂಗಗಳು ಸಾಧಾರಣವಾಗಿ ಮೊದಲಿದ್ದಂತೆಯೇ ಇದ್ದು ಸ್ಮ
ರಣಶಕ್ತಿಯು ಮಾತ್ರ ಬೆಳೆದ ಹಾಗೆ ಇಲ್ಲವೆ ಕಡಿವೆ ಯಾದ
ಹಾಗೆ ಆಗುತ್ತದೆ. ಅಂದರೆ ವ್ಯಾಯಾಮದಿಂದ ಶರೀರದ
ಯಾವದೊಂದು ಅವಯವವನ್ನು ಬಲಪಡಿಸಲಿಕ್ಕೆ ಬರುವಂ
ತೆ ಮಿದುಳಿನ ಯಾವದೊಂದು ಭಾಗವನ್ನು ಮಾನಸಿಕ ವ್ಯಾ
ಯಾಮದಿಂದ ಬಲಪಡಿಸಬಹುದು.

ಸ್ಮರಣಶಕ್ತಿಗೆ ಕೊಟ್ಟಡಿಯ ಸಾಮ್ಯವನ್ನು ಮೇಲೆ ಕೊ
ಟ್ಟಿರುವರಷ್ಟೇ! ಅದು ಯೋಗ್ಯವೋ? ಕೋಣೆಯಲ್ಲಿ ನಿಪ್ಪು
ಳ ವಸ್ತುಗಳನ್ನು ಸಂಗ್ರಹಿಸಿಟ್ಟಕೆ ಅವು ಒಮ್ಮೆಲೇ ನಮ್ಮ
ಧ್ಯಾನದಲ್ಲಿ ಬರಲಾರವು. ಹೊಸದಾಗಿ ಇಟ್ಟ ಒಡವೆಯು
ಮಾತ್ರ ಮನಸ್ಸಿನಲ್ಲಿ ಬರುವದು ಇಲ್ಲವೆ ಕೋಣೆಯಲ್ಲಿ
ಹೊಕ್ಕಕೂಡಲೆ, ಸಾಧಾರಣವಾಗಿ ಎದುರಿರುವ ಒಡವೆಗಳು
ಮಾತ್ರ ಕಾಣುವವು. ಆದರೆ ಒಮ್ಮೆ ಇಟ್ಟು ಎಷ್ಟೋ ದಿವ
ಸಗಳ ವರೆಗೆ ಅವನ್ನು ನೋಡದಿದ್ದರೆ, ಅವು ನಮ್ಮ ಜ್ಞಾ
ನಾಂಕದಲ್ಲಿ ಉಳಿಯುವದೇ ಅಶಕ್ಯವು. ಸ್ಮರಣದ್ವಾರವೂ
ಇದೇ ಹಾಡು. ನೂತನವಾಗಿ ಸಂಪಾದಿಸಿದ ಜ್ಞಾನವನ್ನು
ಹೊರಗೆಡಹುವ ಶಕ್ತಿಯು ಮನಸ್ಸಿನಲ್ಲಿದ್ದಂತೆ ಬಹುಕಾಲದ
ಹಿಂದೆ ಗಳಿಸಿದ ಜ್ಞಾನವನ್ನು ಪ್ರಕಟಗೊಳಿಸುವ ಸಾಮರ್ಥ್ಯ
ವು ಬಹುತರವಾಗಿ ಅದರಲ್ಲಿ ಕಡಿಮೆ ಹೀಗೆಂತಲೇ ಸಂಪಾ
ದಿತ ಜ್ಞಾನಭಾಂಡಾರವನ್ನು ಮೇಲೆ ಮೇಲೆ ತೆರೆದು,-ನೋ

ಹುತ್ತರಬೇಕಾಗುವದು. ಮೇಲೆ ಮೇಲೆ ನೋಡುವರಿಂದ ಸಮಯ ಸಂಭವಿಸಿದಾಗ ಅದರ ಯೋಗ್ಯವಾದ ಉಪಯೋಗವನ್ನು ಮಾಡಿಕೊಳ್ಳಲಿಕ್ಕೆ ಸಮರ್ಥರಾಗುತ್ತೇವೆ. ಸಾರಾಂಶ ಸ್ಮರಣಶಕ್ತಿಗೆ ಜ್ಞಾನರೂಪೀ ವಸ್ತುಗಳನ್ನು ಸಂಗ್ರಹಿಸಿಡುವ ಒಂದು ಭಾಂಡಾರವೆಂದು ಹೆಸರಿಡಬಹುದು.

ಸ್ಮರಣಶಕ್ತಿಯ ಅಭಾವದಿಂದಾಗುವ ಹಾನಿಗಳೂ ಅದು ಉಂಟಾಗುವದರಿಂದ ಆಗುವ ಉಳಿತಾಯಗಳೂ ಬಹಳ ದೊಡ್ಡವಿರುತ್ತವೆ ಸ್ಮೃತಿಯ ಅಭಾವದಿಂದುಂಟಾಗುವ ಎಲ್ಲ ಹಾನಿಗಳಲ್ಲಿ ಮನುಷ್ಯತ್ವದ ಹಾನಿಯೇ ಮಹತ್ವವಾದದ್ದು. ಜ್ಞಾನದಿಂದ ಮನುಷ್ಯತ್ವವು ರಕ್ಷಿಸಲ್ಪಡುತ್ತದೆ. ನಮಗೆ ಮನುಷ್ಯರೆಂಬ ಅಭಿದಾನವು ಜ್ಞಾನಸಂಗ್ರಹದಿಂದಲೇ ಪ್ರಾಪ್ತವಾದದ್ದುಂಟು.

आहारनिद्रा भय मैथुनञ्च ।
सामान्य मेतत्पशुभिर्नराणाम् ॥

ಮನುಷ್ಯನು ಆಹಾರ ತಿನ್ನುವನು. ನಿದ್ರೆಯನ್ನು ಮಾಡುವನು ಭಯಕ್ಕೆ ಬೆದರುವನು. ಮೈಥುನಾದಿ ವಿಲಾಸಗಳನ್ನು ಮಾಡುವನು. ಇವನಂತೆಯೇ ಪಶುಪಕ್ಷಿಗಳೂ ಕೂಡ ಮಾಡುವವು. ಹೀಗಿದ್ದಮೇಲೆ ಮನುಷ್ಯರಿಗೂ ಪಶುಪಕ್ಷಿಗಳಿಗೂ ಭೇದವೇನು ?

ज्ञानं हि तेषामाधिको विशेषो.

ಮನುಷ್ಯನಲ್ಲಿ ಜ್ಞಾನವನ್ನು ಸಂಗ್ರಹಿಸುವ ಶಕ್ತಿಯು ಇರುತ್ತದೆ. ಪಶುಗಳಲ್ಲಿ ಇದನ್ನು ಕಾಣಲಾಗದು. ಅದರಿಂದ ಮನುಷ್ಯ ಪ್ರಾಣಿಯೇ ಶ್ರೇಷ್ಠವಾದದ್ದು. ಇದರಿಂದ,-

(ಸಶೇಷ.)

ವಸ್ತು ಪಾಠ—ಸುಣ್ಣದ ಹರಳು.

ಒನೇ ಇಯತ್ತ್ರಿ.—ವೇಳೆ ೩೦ ಮಿನ್ಯೂಟು.

ಉದ್ದೇಶ—ಸುಣ್ಣದ ಸಾಧಾರಣ ಮತ್ತು ವಿಶೇಷ ಧರ್ಮ, ಲಕ್ಷಣ, ಉಪಯೋಗ, ಸ್ಥಾನಿಕ ಉತ್ಪತ್ತಿಗಳನ್ನು ತಿಳಿಸುವದು.

ಉಪಕರಣ—ಹಸೀಸುಣ್ಣ, ಪಣಗಿದ ಸುಣ್ಣ, ಖಡು, ರಂಗೋಲಿ ಹರಳು, ಸುಣ್ಣದ ಹರಳು, ಸಂಪು, ಶಂಖ, ಕವಡಿ, ಹವಳ ಮುಂತಾದವುಗಳು, ನೀರು, ಕೆಂಪು ದಾಸಾಳದ ಹೂವು, ಅರಿಸಿಣ.

ಉಪೋದ್ಘಾತ—ಹಸೀ ಸುಣ್ಣವನ್ನು ತೋರಿಸಿ ಪಾಠವನ್ನು ಆರಂಭಿಸುವದು.

ವಸ್ತುದರ್ಶನ.	ಫಲಿತ.
೧ ಸುಣ್ಣದ ಬಣ್ಣವನ್ನು ಹೇಳಲಿ.	೧ ಸುಣ್ಣವು ಬಿಳಿಗೆ ಅದೆ.
೨ ನಾಲಿಗೆಗೆ ಸುಣ್ಣವು ಹಿಚ್ಚು ಹತ್ತಿದರೆ ಏನಾಗುವದು?	೨ ನಾಲಿಗೆಯು ಸುಡುವದು.
೩ ಗ್ಲಾಸದಲ್ಲಿ ನೀರು ಹಾಕಿ ಅದರಲ್ಲಿ ಸ್ವಲ್ಪ ಸುಣ್ಣವನ್ನು ಹಾಕಿ ನೋಡಲಿ.	೩ ಸುಣ್ಣವು ನೀರಲ್ಲಿ ಕರಗುತ್ತದೆ.

(ಟೀಪು—ಸುಣ್ಣ ಕರಗಿದೆ ನೀರಿಗೆ ಸುಣ್ಣದ ತಿಳಿ ಅನ್ನುವರೆಂದು ಹೇಳುವದು.) ಸುಣ್ಣವನ್ನು ನೀರು ಮಾಡಿ ಮನೆಯ ಗೋಡೆಗಳನ್ನು ಸಾರಿಸುತ್ತಾರೆಂದು ಹೇಳುವದು.

ಳ ಕೆಂಪು ದಾಸವಾಳದ ಹೂವಿನ ರಸದಲ್ಲಿ ಸ್ವಲ್ಪ ಸುಣ್ಣ ಹಾಕಿ ನೋಡಲಿ.

ಱ ಅರಿಸಿಣದ ನೀರಲ್ಲಿ ಸ್ವಲ್ಪ ಸುಣ್ಣ ಹಾಕಲಿ.

ಱ ಒಣ ಸುಣ್ಣವನ್ನು ನೀರಿಗೆ ಹಾಕಿ ಕಲಿಸಿ (ನೀರು ಅರಿದ ಸುಣ್ಣ)

ಲ ಈ ಒಣ ಸುಣ್ಣ ನೀರಲ್ಲಿ ಕಲ್ಲಿ ನೋಡಲಿ.

ಳ ಕೆಂಪು ದಾಸವಾಳದ ರಸದಲ್ಲಿ ಒಣ ಸುಣ್ಣ ಹಾಕಲಿ.

ಳ ಅರಿಸಿಣ + ಒಣ ಸುಣ್ಣದ ನೀರು ಕೂಡಿಸು.

ಳ ಹಸರು ಬಣ್ಣ ಆಯಿತು.

ಱ ಕೆಂಪು ಬಣ್ಣ ಆಯಿತು.

ಱ ನಾಲಗೆಗೆ ಕಾರ ಹತ್ತುವದಿಲ್ಲ. (ಒಣ ಸುಣ್ಣ ಕಾರವಿರುವದಿಲ್ಲ.)

ಲ ಈ ನೀರಲ್ಲಿ ಕರಗುವದಿಲ್ಲ.

ಳ ಹಸರಾಗಲಿಲ್ಲ.

ಳ ಕೆಂಪಾಗಲಿಲ್ಲ.

(ಟೀಪು — ಸುಣ್ಣವನ್ನು ಹವೆಯಲ್ಲಿಟ್ಟರೆ ಅದರ ಖಾರ ಹೋಗುವದು. ಹಸೀ ಸುಣ್ಣದ ಗುಣಗಳು ಇದರಲ್ಲಿ ಇಲ್ಲ.) ಇವೇ ಬಿಡು; ಈ ಬಗ್ಗೆ ಬಿಸುವಿನ ಪ್ರಯೋಗ ಮಾಡಿ ತೋರಿಸಬೇಕು.

ಲ ಹಸೀ ಸುಣ್ಣವಲ್ಲ ಬೆಲ್ಲ ಕೂಡಿಸಿ ತಿಕ್ಕಿ ನೋಡಲಿ (ಉಸುಬು, ಸುಣ್ಣ, ಬೆಲ್ಲ ಇವುಗಳಿಂದ ಗಾರ ಮಾಡುವರು. ಗೋಡೆಗೆ ಗಿಲಾಯು ಮಾಡುವರು. ಗೋಡೆ ಕಟ್ಟುವದೆಂದು ತಿಳಿಸುವದು.)

ಳ ಒಣ ಸುಣ್ಣದ ತುಂಡು ಸುಟ್ಟು ನೋಡಲಿ.

ಲ ಬಿಗಟು ಆಗುವದು. ಗಟ್ಟಿ ಆಗುವದು

ಹಗುರಾಯಿತು.

(ಇದರ ಮೇಲೆ ನೀರು ಹಾಕಿದರೆ ಕುದಿದು ಮೊದಲಿನಂತೆ ತಿಸ್ಸವ ಸುಣ್ಣವಾಗುವದು. ಎಂದು ತಿಳಿಸುವದು.)
ಇದರಂತೆ ಖಡು ಸುಟ್ಟರೆ ಸುಣ್ಣವಾಗುವದು.

೧೦ ಒಣ ಸುಣ್ಣದ ಮೇಲೂ, ಖಡುಪಿನ ಮೇಲೂ ಹುಳಿ ಹೀಡಿ ಸೋಡಲಿ. | ೧೦ ಬುರುಗು ಬರುತ್ತ೦.

(ಟೀಪು—ಇವುಗಳಂತೆ ರಂಗೋಲಿ ಹರಳು, ಸುಣ್ಣದ ಹರಳು, ಸಿಂಪು, ಶಂಖ, ಮುಂತಾದವುಗಳ ಮೇಲೂ ಹುಳಿ ಹಾಕಿ ತೋರಿಸುವದು. ಇವೂ ಸುಣ್ಣದ ವರ್ಗದವೇ ಎಂಬದನ್ನು ತಿಳಿಸಿ ಕೊಡುವದು. ನಮ್ಮ ಪ್ರಾಂತದಲ್ಲಿ ಸುಣ್ಣದ ಹಳಳು ಸುಟ್ಟು ಸುಣ್ಣವನ್ನು ಮಾಡುವರು. ಸುಣ್ಣದ ಹರಳುಗಳು ಕೆಂಪು ನೆಲದಲ್ಲಿ ಹೆಚ್ಚಾಗಿ ದೊರೆಯುವವು ಸುಣ್ಣದ ಹರಳಿನ ಹೊರ್ತು ಬೇರೆ ಕಲ್ಲುಗಳನ್ನು ಸುಟ್ಟರೆ ಸುಣ್ಣವಾಗುವದಿಲ್ಲ ಎಂಬದನ್ನು ಪ್ರಯೋಗ ಮಾಡಿ ತೋರಿಸುವದು. ಸುಣ್ಣ ತಯಾರ ಮಾಡುವವರಿಗೆ ಸುಣ್ಣಗಾರರೆನ್ನುವರು. (ಬಾರಳೇರರು ಮಾಡುವರು.)

ಉಪಸಂಹಾರ.

೧ ಹಸಿ ಸುಣ್ಣ ಒಣ ಸುಣ್ಣಗಳ ಭೇದವೇನು?
೨ ಸುಣ್ಣದ ಹಸಿಯಾರಿದರೆ ಏನಾಗುವದು?
೩ ಒಣ ಸುಣ್ಣದಂಥ ತಿನ್ನೊಂದು ಪದಾರ್ಥ ಹೇಳು.
೪ ಸುಣ್ಣದ ಉಪಯೋಗವೇನು?

ಶಾಲಾ ಪತ್ರಿಕೆ

ಪದ್ಯ.

ಶ್ರೀಹುವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಕೋತ್ಕರ್ಷಮಾ
ಚಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ।
ಸಹಯದಿಂದಿತ್ತವೆತ್ತೋದುವರ್ಗಸುಗುಣಂ ತೋರರ್ಕ್ಕೈಕೊಂಮುದೈ।
ದಯದಿಂದೋಪಸತಿದ್ದ ವೇಳ್ವುದುಮುರ್ವೀಜ್ಞಾನಭಿವೃದ್ಧಿಪ್ರಿಯರಿಂ

ಪುಸ್ತಕ ೪೧] ಮೇ ೧೯೦೪. [ಸಂಚಿಕೆ ೫.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಇಷ್ಟದ ಮೇಲೆ ಇಲ್ಲಿಯ ವ್ಹಾ. ಪ್ರಿನ್ಸಿಪಾಲನಾದ ರಾಮಚಂದ್ರರಾಯರು, ಕಿಂಡರಗಾರ್ಟನ್ ಶಿಕ್ಷಣದ ಉದ್ದೇಶವನ್ನೂ ಅದರಿಂದಾಗುವ ಲಾಭಗಳನ್ನೂ ವ್ಯಾಖ್ಯಾನರೂಪದಿಂದ ಹೇಳಿದರು. ಅವರ ಅಭಿಪ್ರಾಯವು ಕೆಳಗೆ ಕೊಟ್ಟಂತೆ—

ಬಾಲೋದ್ಯಾನ ಶಿಕ್ಷಣ ಕ್ರಮದ ಪ್ರತಿಯೊಂದು ಇನಾಮಿನಲ್ಲಿ ಆಟ ಇಲ್ಲವೆ ಹಸ್ತ ಶಿಕ್ಷಣಗಳನ್ನು ಇಟ್ಟಿರುವ ಉದ್ದೇಶವು ಬಹಳ ವ್ಯಾಪಕವಾಗಿರುತ್ತದೆ. ಹುಡುಗರು ಚಿಕ್ಕಂದಿನಿಂದ ಒಬ್ಬರಿಗೊಬ್ಬರು ಕೂಡಿ ಆಡುವದರಿಂದ ಇಲ್ಲವೆ ಕಿಲಸ ಮಾಡುವದರಿಂದ ಪರಸ್ಪರರಲ್ಲಿ ಪ್ರೇಮವು ಬೆಳೆಯುವದು. ಈ ಪ್ರೇಮದ ಬಳಿಕವು ಮುಂದೆ ದೊಡ್ಡವರಾದ ಮೇಲೆ ಇವರನ್ನು ಒಂದೇ ಜನಾಂಗದವರನ್ನು ಮಾಡಲಿಕ್ಕೆ ಸಹಾಯಕರವಾಗುವದು, ಮತ್ತು ಈ ಪ್ರೀತಿಯೊಡನೆ ಹುಟ್ಟುವ ವಿನಯ, ವಿಶ್ವಾಸ, ಪರಸ್ಪರರಿಗೆ ಸಹಾಯ ಮಾಡಬೇಕೆಂಬುವ ಲವಲವಿಕೆ ಮುಂತಾದ ಗುಣಗಳು ಜನಾಂಗವೆಂಬ ಹೊರೆಯನ್ನು ಕಟ್ಟಲಿಕ್ಕೆ ಹಗ್ಗಗಳಾಗಿರುತ್ತವೆ. ಅವಿಶ್ವಾಸದ ಮೂಲಕವಾಗಿಯೇ ಜನಾಂಗವು ಬಿಚ್ಚಿ ಪಲ್ಲಟವಾಗುತ್ತದೆಂದು ಒಡೆದು ಹೇಳುವ ಕಾರಣ

ವಿಲ್ಲ. ಆಡುವಾಗ್ಯೆ ಮನೋಹರವಾದ ವಾದ್ಯಗಳನ್ನು ಬಾರಿಸುವದು, ತಾಳದಂತೆ ಹೆಜ್ಜೆಯನ್ನು ಚಲ್ಲುವದು, ಅಂಗ ವಿಕ್ಷೇಪವಾಡುವದು, ಹಾಡುವದು ಇವೆಲ್ಲ ಆರೋಗ್ಯವನ್ನು ಬಲಪಡಿಸಿ, ಆನಂದವೃತ್ತಿಯನ್ನು ಸದಾ ಜಾಗ್ರತಾವಸ್ಥೆಯಲ್ಲಿ ಇಡಲು ಕಾರಣವಾಗಿವೆ. ಈ ಆನಂದವೃತ್ತಿಯು ಸಜೀವ ರಾಷ್ಟ್ರವನ್ನುಂಟು ಮಾಡುತ್ತದೆಂಬದು ತಿಳಿದ ಮಾತೇ ಸರಿ. ಚಿಕ್ಕಂದಿನಲ್ಲಿ ಹುಡುಗರ ಶರೀರದ ಬೆಳವಣಿಗೆಯು ಭರದಿಂದ ಸಾಗುವಂತೆ, ಬುದ್ಧಿಯು ಬೆಳವಣಿಗೆಯು ಸಾಗುವದಿಲ್ಲ; ಅದು ಕಡಿಮೆ ಪ್ರಮಾಣದಲ್ಲಿರುವದು. ಹುಡುಗರ ಅವಯವಗಳ ಬೆಳಿವಣಿಗೆಗೆ ಉತ್ತೇಜನ ಕೊಡಲಿಕ್ಕೂ ಬುದ್ಧಿಶಕ್ತಿಗೆ ಛೂರ ಬೀಳದಂತೆ ವಿಚಾರಗಳನ್ನು ಹಾಕಲಿಕ್ಕೂ ಆಟಗಳೇ ತಕ್ಕ ಸಾಧನಗಳಾಗಿವೆ. ಈ ಉದ್ದೇಶಗಳು ಕೊನೆಗಾಣುವಂತೆ, ಶಿಕ್ಷಕರು, ಯೋಗ್ಯ ಆಟಗಳನ್ನಾಗಲಿ ಕೆಲಸಗಳನ್ನಾಗಲಿ ರಚಿಸಿ, ಆನಂದದಿಂದ ಬಾಲಕರಿಗೆ ಕಲಿಸುತ್ತಿರಬೇಕು; ಅಂದರೆ ವಿದ್ಯಾರ್ಥಿಗಳ ಮನಸಿನ ಮೇಲೆ ಬಯಸಿದಂತೆ ಪರಿಣಾಮವಾಗುವದು.

ಈ ಎಲ್ಲ ಉದ್ದೇಶಗಳು ನೇರವೇರುವಂತೆ ರಚಿಸಿದ ೧೫ನೆಯ ಇನಾಮಿನ ಎರಡನೇ ಆಟವು, ಸಮ್ಮೇಲನದಲ್ಲಿ, ಇಲ್ಲಿಯ ಪ್ರಾಕ್ಟಿಸಿಂಗಸ್ಕೂಲ ಹೆಡ್ ಮಾಸ್ತರರಾದ ಮು. ರಾ. ರಾ. ಗೋವಿಂದರಾವ ದೇಶಪಾಂಡೆ ಇವರಿಂದ ಮಾಡರಿಗಾಗಿ ತೋರಿಸಲ್ಪಟ್ಟಿತು. ಅದರ ಟಿಪ್ಪಣಿಯನ್ನು ಇದರ ಡಿಯಲ್ಲಿ ಕೊಟ್ಟಿರುತ್ತೇವೆ.

ಟಿಪ್ಪಣಿಯು

ಉಪಕರಣಗಳು—ಬೇರೆ ಬೇರೆ ಬಣ್ಣದ ಚಂಡುಗಳಿಂದ ತುಂಬಿದ ಬುಟ್ಟಿ.

ವ್ಯವಸ್ಥೆ—(೧) ಬಾಲೋದ್ಯಾನ ಮಂದಿರದಲ್ಲಿ, ಆಡತಕ್ಕ ಹುಡುಗರು ಶಿಕ್ಷಕರೊಡನೆ ಮಾರು ಮಾರು ಅಂತರದಿಂದ ನಿಲ್ಲುವದಕ್ಕೆ ತಕ್ಕಷ್ಟೇ ದೊಡ್ಡ ವರ್ತುಲವನ್ನು ತೆಗೆದು, ಅದರಲ್ಲಿ ಮನೆಗಳನ್ನು ಹಾಕತಕ್ಕದ್ದು.

(೮) ಹುಡುಗರನ್ನು ವರ್ಗದ ಕೋಣೆಯಿಂದ ಬಾಲೋದ್ಯಾನ ಮಂದಿರಕ್ಕೆ, ತಮ್ಮಲ್ಲಿದ್ದ ವಾದ್ಯದೊಡನೆ ತಾಳದೊಂದಿಗೆ ಹೆಜ್ಜೆಯನ್ನು ಹಾಕಿಸುತ್ತ ಕರಕೊಂಡು ಹೋಗಬೇಕು.

(೯) ವರ್ತುಲದೊಳಗೆ ಹುಡುಗರು ಅರ್ಧ ಚಂದ್ರಾಕೃತಿಯಾಗಿ ನಿಂತ ಬಳಿಕ ಚಂಡಿನ ಬುಟ್ಟಿಯನ್ನು ತೋರಿಸಿ, ಅವರಲ್ಲಿ ಆಟ ಆಡುವ ಕುತೂಹಲವನ್ನು ಜಾಗ್ರತ ಪಡಿಸಿ ಚಂಡುಗಳನ್ನು ತೆಗೆದುಕೊಳ್ಳಲಿಕ್ಕೆ ಹೇಳಬೇಕು. ಮೊದಲನೇ ನಂಬರದ ವಿದ್ಯಾರ್ಥಿಯು ಚಂಡನ್ನು ತೆಗೆದುಕೊಂಡು ಎನೇ ನಂಬರದವನ ಕೈಯಲ್ಲಿಯೂ, ಎನೆಯವನು ಎನೇಯವನ ಕೈಯಲ್ಲಿಯೂ ಚಂಡುಗಳನ್ನು ಕೊಡುತ್ತ, ಎಲ್ಲರೂ ಕೈಯಲ್ಲಿ ಚಂಡುಗಳನ್ನು ತಗೆದುಕೊಳ್ಳಲಿ. ಹೀಗೆ ಚಂಡುಗಳನ್ನು ತೆಗೆದು ಕೊಳ್ಳುವದರಿಂದ ಪರಸ್ಪರರಲ್ಲಿ ಕೂಡಿ ಆಡುವ ಗುಣವೂ, ಪ್ರೇಮಭಾವವೂ ಬೆಳೆಯುವವು,

ಶಿಕ್ಷಣ—ಹಿಂದೆ ಕಲಿತ ಆಟದ ವಿಷಯವಾಗಿಯೂ, ಖಣ್ಣಿಗಳ ವಿಷಯವಾಗಿಯೂ ಪ್ರಶ್ನೆಗಳನ್ನು ಮಾಡುತ್ತ ಎಡಬಲಗಳ ಜ್ಞಾನವನ್ನು ಮಾಡಿಕೂಡಬೇಕು ಆಮೇಲೆ ಮೊದಲನೆಯ ಆಟದಲ್ಲಿ ಬೇರೆ ಬೇರೆಯಾಗಿ ಆಡಿದ್ದನ್ನು ಸ್ಮರಣಕ್ಕೆ ತಂದು ಕೊಟ್ಟು, ಈಗ ಎಲ್ಲರೂ ಕೂಡಿ ಆಡಬೇಕೆಂದು ಸೂಚಿಸಿ, ಅವರಲ್ಲಿ ಉಕ್ಕಟ್ಟಿನ ಬೀಜಾರೋಪಣವನ್ನು ಮಾಡಬೇಕು; ಹ್ಯಾಗಂದರೆ ಪ್ರತಿಯೊಬ್ಬನು ತನ್ನ ಎಡಬಲದ ಹುಡುಗರನ್ನು ಗೆಳೆಯರನ್ನು ಮಾಡಿಕೊಳ್ಳುವಂತೆ, ತನ್ನ ಎಡಗೈಯಿಂದ ಮಿತ್ರನ ಎಲಗೈದುನ್ನು ಹಿಡಿಯಬೇಕು ಆಮೇಲೆ ಪ್ರತಿಯೊಬ್ಬರಿಗೆ ಇಬ್ಬರು ಗೆಳೆಯರಿರುತ್ತಾರೆಂತಲೂ, ಮೊದಲಿನ ಹಾಗೂ ಕಡೆಯ ಇಬ್ಬರಿಗೆ ಮಾತ್ರ ಒಬ್ಬೊಬ್ಬರೇ ಮಿತ್ರರಿರುತ್ತಾರೆಂತಲೂ ಹೇಳಿ, ಕಡೆಯ ಹುಡುಗನು ಮೊದಲನೇ ನಂಬರದವನನ್ನು ಗೆಳೆಯನನ್ನು ಮಾಡಿಕೊಂಡರೆ, ಎಲ್ಲರಿಗೂ ಇಬ್ಬರು ಗೆಳೆಯರಾಗುತ್ತಾರೆಂದು ಹೊರಡಿಸಬೇಕು. ಬಳಿಕ ಮೊದಲನೇ ನಂಬರದ

ವಿದ್ಯಾರ್ಥಿಯನ್ನು ಬಿಟ್ಟು ಎಲ್ಲರೂ ಹೆಜ್ಜೆಯನ್ನು ಹಾಕುತ್ತ ವರ್ತುಲವಲ್ಲಿ ಹಾಕಿದ ಮನೆಗಳೊಳಗೆ ಒಂದೊಂದರಲ್ಲಿ ಒಬ್ಬೊಬ್ಬನು ನಿಲ್ಲುವಂತೆ ಸರಿಯಬೇಕು. ಶಿಕ್ಷಕನು— ಈಗ ನಾವೆಲ್ಲರೂ ಮಿತ್ರರಾದೆವು; ಇನ್ನು ಆಟವನ್ನು ಪ್ರಾರಂಭ ಮಾಡೋಣ, ಕೈಗಳನ್ನು ಕೆಳಗೆ ಬಿಟ್ಟು ಸರಿಯಾಗಿ ನಿಲ್ಲಿರಿ ಎಂದು ಹೇಳಬೇಕು ತರುವಾಯ ಶಿಕ್ಷಕನು "ಒಂದು" "ಎರಡು" ಮುಂತಾದ ಸಂಜ್ಞೆಗಳಿಂದ ಕೆಳಗೆ ಹೇಳಿದ ಪ್ರಕಾರ ಆಟವನ್ನು ಕಲಿಸುತ್ತ ಹೋಗಬೇಕು.

ಒಂದು — ಎಲ್ಲರೂ ಒಮ್ಮೆಲೆ ಕೈಗಳನ್ನು ಮೇಲಕ್ಕೆತ್ತಬೇಕು.

ಎರಡು— ಬಲಗೈಯೊಳಗಿನ ಚೆಂಡನ್ನು ಎಡಗೈಯೊಳಗೆ ಮೇಲೆಯೇ ತೆಗದುಕೊಳ್ಳಬೇಕು.

ಮೂರು— ಕೈಗಳನ್ನು ಚಾಚಿ ಎಡಗೈಯೊಳಗಿನ ಚೆಂಡನ್ನು ಗೆಳೆಯನ ಬಲಗೈಯಲ್ಲಿ ಕೊಟ್ಟು, ಮತ್ತೊಬ್ಬ ಗೆಳೆಯನ ಎಡಗೈಯೊಳಗಿನ ಚೆಂಡನ್ನು ತನ್ನ ಬಲಗೈಯಲ್ಲಿ ತೆಗೆದುಕೊಳ್ಳಬೇಕು.

ನಾಲ್ಕು—ಎಲ್ಲರೂ ಕೈಗಳನ್ನು ಕೆಳಗೆ ಬಿಟ್ಟು ಸರಿಯಾಗಿ ನಿಲ್ಲಬೇಕು.

ಹೀಗೆ ಮೂರು ನಾಲ್ಕು ಸಾರೆ ರೂಢಿ ಮಾಡಿಸಿದ ಮೇಲೆ ಕೆಳಗಿನ ಪದವನ್ನು ಅನ್ನುತ್ತ, ಶಬ್ದದಂತೆ ಕೃತಿಯನ್ನು ಮಾಡುತ್ತ ಆಡ ತೊಡಗಬೇಕು.

ಬಲಗೈಯಿಂದಂ ಎಡಗೈಗೆ । ಎಡಗೈಯಿಂದಂ ಗೆಳೆಯನಿಗೆ॥
ಬಲವಿಂ ಚೆಂಡನು ಕೊಡುತಿಹೆವೈ । ಸಡಗರದಿಂ ನಾವ್
ನಿಂತಿಹೆವೈ ॥ ೧ ॥

ಹೀಗೆ ನಿಂತ ಸ್ಥಳದಲ್ಲಿಯೇ ಮೂರು ನಾಲ್ಕು ಸಾರೆ ಆಟವಾಡಿದ ಬಳಿಕ, ವರ್ತುಳವಲ್ಲಿ ಸರಿಯುತ್ತ ಕೆಳಗಿನ ಪದದಲ್ಲಿ ಹೇಳಿದ ಕೃತಿಯಂತೆ ಮೂರು ನಾಲ್ಕು ಸಾರೆ ತಿರುಗಬೇಕು.

ಬಲಗ್ಯೆಯಿಂದಂ ಎಡಗ್ಯೆಗೆ। ಎಡಗ್ಯೆಯಿಂದಂ ಗೆಳೆಯರಿಗೆ ॥
ಒಲವಿಂ ಚಂಡನು ಕೊಡುತಿಹೆವ್ಯೆ । ಸಡಗರದಿಂ ನಾವ್
ನಡೆದಿಹೆವ್ಯೆ ॥ ೨ ॥

ಸಮಾಪ್ತಿ— ಎಲ್ಲರೂ ಚೆಂಡುಗಳನ್ನು ಮಾಸ್ತರರ ಕೈ ಯಲ್ಲಿರುವ ಬುಟ್ಟಿಯಲ್ಲಿ ಹಾಕುವದಕ್ಕೋಸ್ಕರ ಅನುಕ್ರ ಮದಿಂದ ಗನೇ ನಂಬರದವನ ಕಡಿಗೆ ಚೆಂಡನ್ನು ಮುಟ್ಟಿಸು ತ್ತ ಗೆಳೆಯರಿಗೆ ನಮಸ್ಕರಿಸುತ್ತ ಹೋಗಬೇಕು. ತದುವಾ ಯ ಆಟವನ್ನು ಕಲಿಸಿದ ಗುರುವಿಗೆ ಅಭಿವಂದಿಸಿ, ದೇವರ ಸ್ಮರಣೆಯನ್ನು ಮಾಡಿ, ಮಾಸ್ತರೊಡನೆ ತಾಳಕ್ಕನುಸಾರ ವಾಗಿ ತಮ್ಮ ಸ್ಥಳಗಳಿಗೆ ಹೋಗಬೇಕು.

AGRICULTURE.

ಕೃಷಿಶಾಸ್ತ್ರವು.

(೮೯ ನೇ ಪುಟದಿಂದ ಮುಂದೆ ಸಾಗಿದ್ದು)

ಭೂಮಿಗಳಲ್ಲಿ ಸರಾಸರಿ ಮಾನದಿಂದ ಜಡವಾದ ಭೂಮಿ ಹಗುರು ಭೂಮಿ ಈ ಪ್ರಕಾರ ಎರಡು ವಿಭಾಗಗಳನ್ನು ಮಾಡಬಹುದು. ಈ ಭೂಮಿಗಳ ಬಿತ್ತುವಿಕೆಯಾದರೂ ಅವಶ್ಯವಾಗಿ ಬೇರೆ ಬೇರೆ ತತ್ವಗಳಿಂದ ಸಾಗುತ್ತದೆ.

ಜಡವಾದ ಭೂಮಿಗಳಿಗೆ ಅವುಗಳನ್ನು ಹಗುರು ಮಾಡು ವ ಕ್ರಮವು ಅವಶ್ಯವಾಗಿ ಬೇಕು. ಇವು ಮಾಡಿಕೆಯಾಗಿ ಗೋಧಿ, ಕ್ಯಾಬೀಜು. ಮ್ಯಾಂಜೆಲ್ಸ (Mangels) ಮತ್ತು ಇವೇ ಪ್ರಕಾರದ ಬೆಳೆಗಳ ಬೆಳುವಣಿಗೆಗೆ ತಕ್ಕದ್ದಾಗಿರುತ್ತ ವೆ ವಸಂತ ಕಾಲದಲ್ಲಿ ಬಹಳ ವ್ಯವಸಾಯ ಮಾಡಲಿಕ್ಕೆ ಇವು ಬಹಳ ತಕ್ಕ ಸ್ಥಿತಿಯಲ್ಲಿರುವದಿಲ್ಲವಾದ್ದರಿಂದ ಕರತ್ಯಾಲ ದ ವ್ಯವಸಾಯಕ್ಕೆ ಇವು ವಿಶೇಷವಾಗಿ ತಕ್ಕವುಗಳಾಗಿರುತ್ತ ವೆ. ಇದಲ್ಲದೆ ಚಳಿಗಾಲದ ಹಿಮದಿಂದ ಇವು ಪುಡಿಪುಡಿ ಯಾಗುತ್ತವೆ. ಉಪ್ಪವಾದ ಹುಲ್ಲುಗಳ ಮತ್ತು ಪೃಥಕ್ಕರಣ

ವನ್ನು ಹೊಂದದಂಥ ಸ್ಥಿತಿಯಲ್ಲಿದ್ದ ಗೊಬ್ಬರವನ್ನು ಇವಕ್ಕೆ ಹಾಕಬೇಕು. ಹಸನು ಮಾಡುವ ಕ್ರಮದನಂತರ ಶರತ್ಕಾಲದಲ್ಲಿ ಈ ಭೂಮಿಗಳಲ್ಲಿ ರೆಂಟೆಯನ್ನು ಹೊಡಿಯುತ್ತಾರೆ. ಇದರಿಂದ ಭೂಮಿಯಲ್ಲಿ ಪೊಳ್ಳು ಸ್ಥಳಗಳು ಉಳಿದು ಪೃಥಕ್ಕರಣ ಹೊಂದಿ ಭೂಮಿಯು ಸುಧಾರಿಸುವಂತೆ ಯಾಂತ್ರಿಕ ವ್ಯಾಪಾರವು ಸಂಗತ್ತದೆ. ಜೆಗಟು ಮಣ್ಣಿನ ಭೂಮಿಗಳು ಈ ಸಾಧನದಿಂದ ಬಹಳೇ ಹಗುರಾಗುತ್ತವೆ. ಒದ್ದೆಯಿದ್ದಾಗ ಈ ಭೂಮಿಗಳಲ್ಲಿ ಎಂದೂ ವ್ಯವಸಾಯ ಮಾಡಬಾರದು ಯಾಕಂದರೆ ಒಣಗಿದ ಮೇಲೆ ಇವು ಗಟ್ಟಿಯಾದ ಮತ್ತು ಒಡಿಯಲಿಕ್ಕೆ ಬರದಂಥ ಮಣ್ಣಿನ ಸಂಚಯಗಳಾಗುತ್ತವೆ. ಜಡವಾದ ಭೂಮಿಗಳಲ್ಲಿ ವ್ಯವಸಾಯ ಮಾಡಲಿಕ್ಕೆ ಬರುವ ದಿವಸಗಳ ಸಂಖ್ಯೆಯು ಪ್ರೊಫೆಸರ ವ್ಯಾಲೇಸನ ಮತದ ಪ್ರಕಾರ ವರುಷದಲ್ಲಿ ೨೬೦ ಇರುತ್ತದೆ. ಆದರೆ ರಾಯಿಟಸನ್ನನ ಮತದ ಪ್ರಕಾರ ಈ ಸಂಖ್ಯೆಯು ೨೪೦ ಅಥವಾ ೨೫೦ ಇರುತ್ತದೆ. ಹಗುರು ಭೂಮಿಗಳಲ್ಲಿ ವ್ಯಾಲೇಸನ ಅಭಿಪ್ರಾಯದ ಪ್ರಕಾರ ವರ್ಷದಲ್ಲಿ ೨೮೦ ದಿವಸ ವ್ಯವಸಾಯ ಮಾಡಲಿಕ್ಕೆ ಬರುತ್ತದೆ. ಆದರೆ ರಾಯಟಸನ್ನನ ಅಭಿಪ್ರಾಯದ ಪ್ರಕಾರ ವರ್ಷದಲ್ಲಿ ೩೦೦ ದಿವಸ ವ್ಯವಸಾಯ ಮಾಡಲಿಕ್ಕೆ ಬರುತ್ತದೆ ವರ್ಷದಲ್ಲಿ ವ್ಯವಸಾಯ ಮಾಡಲಿಕ್ಕೆ ಬರುವ ದಿವಸಗಳ ಸಂಖ್ಯೆಯು ಎಷ್ಟೋ ಅಂಶದಿಂದ ಮಳೆಯನ್ನೂ ನೀರು ಹರಿದು ಹೋಗುನಿಳೆಯನ್ನೂ ಅವಲಂಬಿಸಿರುತ್ತದೆ. ಆದ್ದರಿಂದ ಉಗಿಯ ಸಹಾಯದಿಂದ ನಡಿಯುವ ವ್ಯವಸಾಯ ಪದ್ಧತಿಯನ್ನು ಜಾಣತನದಿಂದ ಉಪಯೋಗಿಸಿದರೆ ಅದು ಜೆಗಟು ಮಣ್ಣಿನ ಭೂಮಿಗೆ ಬಹಳ ಬೆಲೆಯುಳ್ಳ ಸಹಾಯಕಾರಿಯಾಗುತ್ತದೆ ಇಷ್ಟಲ್ಲದೆ ಅನುಕೂಲವಾದ ವೇಳೆಯಲ್ಲಿ ವ್ಯವಸಾಯ ಕ್ರಮವನ್ನು ಜೋರಿನಿಂದ ಸಾಗಿಸಲಿಕ್ಕೆ ಬರುತ್ತದೆ.

ಇದಲ್ಲದೆ ಈಗ್ಗೆ ಬರೇ ಪಡ ಪದ್ಧತಿಯನ್ನು ಎಲ್ಲಿಯಾದರೂ ಉಪಯೋಗಿಸುವದಾದರೆ ಅದನ್ನು ಬರೇ ಜಡ ಭೂ

ಮಿಯಲ್ಲೇ ಮಾಡಲಿಕ್ಕೆ ಬರುವಂತಿರುತ್ತದೆ. ಪಡ ಪದ್ಧತಿಯ ಟರ್ನಿಪ್ಸದಂಥ ಸಾಧಾರಣ ಬೆಳೆಗಳು ಹೊಲದಲ್ಲಿಯೇ ತಿನ್ನಲ್ಪಡುವದಿಲ್ಲ. ಮತ್ತು ಕುರಿಗಳ ತುಳಿದಾಟದಿಂದಲೂ ಹುಟ್ಟುವಳಿಯನ್ನು ಬಂಡಿ ತುಂಬಿ ಬೇರೆ ಕಡಿಗೆ ಕಳುಹಿಸುವದರಿಂದಲೂ ಭೂಮಿಗೆ ಬಹಳೇ ಲುಕ್ಸಾನವಾಗುತ್ತದೆ. ಆದ್ದರಿಂದ ಗಟ್ಟಿ ಭೂಮಿಗಳಲ್ಲಿ ಪಡಪದ್ಧತಿಯು ಬೆಳೆಗಳಿಂದ ಆಗತಕ್ಕ ಎಲ್ಲ ಲಾಭಗಳು ಆಗುವದಿಲ್ಲ.

ತಾಜಾ ಸಿತಿಯಲ್ಲಿದ ಹೊಲದಂಗಳದ ಹೊರ್ತು, ಬೂದಿಗಳನ್ನೂ ಕಹರ ಗೊಬ್ಬರವನ್ನೂ ಎಲ್ಲ ತರದ ವನಸ್ಪತಿಗಳ ಕೇಪಗಳನ್ನೂ ಕೊಯಿಲುಗಳನ್ನೂ ಜಿಗಟು ಮಣ್ಣಿನ ಭೂಮಿಗೆ ಗೊಬ್ಬರದಂತೆ ಉಪಯೋಗ ಮಾಡಬಹುದು. ಯಾಕಂದರೆ ಮಣ್ಣಿನ ಕಣಗಳನ್ನು ಬೇರೆ ಮಾಡಿ ಭೂಮಿಯನ್ನು ತೆಳೆದಿಡುವಂಥ ಯಾಂತ್ರಿಕ ವ್ಯಾಪಾರವು ಇದರಿಂದ ಸಾಗುತ್ತದೆ.

ಜಿಗಟು ಮಣ್ಣಿನ ಭೂಮಿಯಲ್ಲಿ ಟರ್ನಿಪ್ಸದಂಥ ಸಾಧಾರಣ ಬೆಳೆಗಳಿಲ್ಲದೆ, ರೇಪ, ಕ್ಯಾಬೀಜ, ಬಿಳೇ ಟರ್ನಿಪ್ಸದ ಮೊದಲನೇ ಬೆಳೆ ಸ್ವೀಡ್ಸ, ಮ್ಯಾಂಜೆಲ್ಸ, ಕೇಲ ಮುಂತಾದ ಬೆಳೆಗಳೂ ಬೆಳೆಯುತ್ತವೆ ಮತ್ತು ಬೆಳೆಯು ಮುಂದೆ ಬೇಸಿಗೆ ಕಾಲದಲ್ಲಿ ಬಂಡಿ ತುಂಬಿ ಬೇರೆ ಕಡಿಗೆ ಕಳುಹಿಸಲ್ಪಡಬಹುದು ಅಥವಾ ತಿನ್ನಲ್ಪಡಬಹುದು. ಈ ಸಾಧನಗಳಿಂದ ಚಳಿಗಾಲದಲ್ಲಿ ಹೊಲದಲ್ಲಿ ದನಗಳಾಗಲೀ ಬಂಡಿಯಾಗಲೀ ಇರುವದರಿಂದ ಭೂಮಿಗೆ ಲುಕ್ಸಾನು ಆಗುವದಿಲ್ಲ. ಇದಲ್ಲದೆ ಹ್ವೆಚಿಸ್ಸ (Vetches) ಬೆಳೆಯನ್ನು ಇಂಥ ಭೂಮಿಗಳಲ್ಲಿ ತಕ್ಕೊಳ್ಳಬಹುದು. ಅಥವಾ ಬೇಸಿಗೆಯಲ್ಲಿ ಕುರಿಗಳು ತಿನ್ನುವದಕ್ಕೋಸ್ಕರ ಬೇರೆ ಕೆಲವು ಮೇವಿನ ಬೆಳೆಯನ್ನು ತಕ್ಕೊಳ್ಳಬಹುದು. ಆದರೆ ಮೇವಿನ ಬೆಳೆಗಳಿಂದ ಬಹಳ ಎಲೆಗಳು ಆಗುವದರಿಂದ ಭೂಮಿಯು ಚನ್ನಾಗಿ ಹಸ ಆಗೋವದಿಲ್ಲ

ಹಗುರು ಭೂಮಿಗಳನ್ನು ಸಾಗು ಮಾಡುವದು:— ಹಗು

ರು ಭೂಮಿಗಳಲ್ಲಿ ಅವುಗಳನ್ನು ಗಟ್ಟಿ ಮಾಡುವದೇ ಮುಖ್ಯ ಕ್ರಮವಾಗಿರುತ್ತದೆ. ಈ ಪ್ರಕಾರ ಭೂಮಿಯಲ್ಲಿ ಚಳಿಗಾಲದಲ್ಲಿ ಕುರಿಗಳ ದಡ್ಡಿಯನ್ನು ಹಾಕುವದು ಉರುಳಿಸುವ ಪದ್ಧತಿಯು, ಮತ್ತು ಚನ್ನಾಗಿ ಕೊಳೆತ ಹೊಲದ ಗೊಬ್ಬರವನ್ನು ಹಾಕುವದು ಇವೆಲ್ಲ ಭೂಮಿಯನ್ನು ಗಟ್ಟಿ ಮಾಡುವ ಉದ್ದೇಶದಿಂದಲೇ ಸಾಗುತ್ತವೆ. ಹಗುರು ಭೂಮಿಗಳು ಬೇರುಗಳ ಬೆಳವಣಿಗೆಗೂ ಹಾಗೂ ಕುರಿಗಳು ಅವನ್ನು ಆಮೇಲೆ ಅಲ್ಲಿಯೇ ತಿನ್ನಲಿಕ್ಕೂ ವಿಶೇಷ ತಕ್ಕವುಗಳಾಗಿರುತ್ತವೆ. ಹಗುರು ಭೂಮಿಗಳಲ್ಲಿ ಬರ್ನಿಪ್ಪದ ಬೆಳೆಯಿಂದ ಉಂಟಾಗುವ ಲಾಭಗಳು ಮುಂದೆ ಬರೆದಂತೆ:—

೧. ಸಚೇತನ ದ್ರವ್ಯವುಳ್ಳ ವನಸ್ಪತಿಗಳ ಆಹಾರ, ತಳ ಭೂಮಿಯಿಂದ ಹವೆಯಿಂದ ದೊರೆಯತಕ್ಕ ಆಹಾರ ಇವೆಲ್ಲ ಭೂಮಿಗೆ ಶಿಗುತ್ತವೆ.

೨. ಭೂಮಿಯು ಚನ್ನಾಗಿ ಹಸನಾಗುತ್ತದೆ,

೩. ಕುರಿಗಳ ತುಳಿದಾಟದಿಂದ ಭೂಮಿಯು ಮೈಕಟ್ಟು ಸುಧಾರಿಸುತ್ತದೆ

೪ ಬರೇ ಪಡ ಪದ್ಧತಿಯಿಂದ ಆಗುವ ವೆಚ್ಚಕ್ಕಿಂತ ಕಡಿಮೆ ವೆಚ್ಚ.

ಗೋಧಿಯನ್ನು ಬಿತ್ತುವ ಮೊದಲು ಹಗುರು ಭೂಮಿಗಳಲ್ಲಿ ಮುಳಿಯ ದಾರಿಯನ್ನು ನೋಡುವದು ಯೋಗ್ಯವಿರುತ್ತದೆ. ಯಾಕಂದರೆ ಅದಕ್ಕೆ ಭೂಮಿಯು ಫಟ್ಟಿಯಾಗಿಯೂ ಬಹಳೇ ಬಿಗಿಗದೆ ಇದ್ದದ್ದೂ ಇರಬೇಕಾಗುತ್ತದೆ. ಭೂಮಿಯನ್ನು ಚನ್ನಾಗಿ ಉರುಳಿಸಬೇಕು. ಮತ್ತು ಕೆಲವು ಪ್ರಸಂಗಗಳಲ್ಲಿ ಹಸೇ ಕಾಳುಗಳ ಮೇಲೆ ಕುರಿಗಳನ್ನು ಹಾಯಿಸುವ ಪದ್ಧತಿಯನ್ನಾದರೂ ಉಪಯೋಗಿಸುತ್ತಾರೆ. ಆದರೆ ಈ ಪ್ರಾಣಿಗಳು ಕೇವಲ ಈ ಕೆಲಸಕ್ಕೆ ಉಪಯೋಗಿಸಲಿಕ್ಕೆ ಬಾರದಷ್ಟು ಬೆಲೆಯುಳ್ಳವುಗಳಿರುತ್ತವೆ ತಾಜಾ ಸ್ಥಿತಿಯುಲ್ಲಿಯು ಹೊಲದ ಗೊಬ್ಬರವನ್ನು ಹಗುರು ಭೂಮಿಗಳಿಗೆ ಹಾಕಬಾರದು. ಯಾಕಂದರೆ ಇಲಿ ಭೂಮಿಯು ಹೆಚ್ಚು ತೆರ

ದಿಡಲ್ಪಟ್ಟದ್ದು ಆಗಬಾರದು ಮತ್ತು ಶರತ್ಕಾಲದಲ್ಲಿ ಹಗುರು ಭೂಮಿಗಳಿಗೆ ಇದನ್ನು ಹಾಕಿದರೆ ಇದರ ಎಷ್ಟೋ ಭಾಗವು ಕಾಲಿವೆಗಳಲ್ಲಿ ಹರಿದು ಹೋಗುತ್ತದೆ. ಪೃಥಕ್ಕರಣದ ಮೇಳೆಯಲ್ಲಿ ಅಂಗಾರಾಮ್ಲ ವಾಯುವು ಹೊರಟು ಹೋಗುವದರಿಂದಲೇ ಸಗಣಿಯಿಂದ ಹಗುರು ಮಾಡುವ ಕೆಲಸವು ಕೆಲವಂಶದಿಂದ ಸಾಗುತ್ತದೆ. ಶರತ್ಕಾಲದ ಬಿತ್ತುವಿಕೆಯು ಜಡ ಭೂಮಿಗೆ ಬೇಕಾದಷ್ಟು ಹಗುರು ಭೂಮಿಗೆ ಬೇಕಾಗುವದಿಲ್ಲ.

ಕೊಯ್ಯುವದು ಮತ್ತು ಸುಡುವದು ಇವುಗಳ ಸಂಬಂಧದಿಂದ ಬರೆದ ಅಧ್ಯಾಯದಲ್ಲಿ ತೋರಿಸಿದಂತೆ ರ್ಯಾಪ್ಟರಿಂಗ ಅಥವಾ ಅರ್ಧ ರೆಂಟೆ ಹೊಡಿಯುವ ಪದ್ಧತಿಯು ಚಲೋದು ಇರುತ್ತದೆ. ಇದಾದ ಮೇಲೆ ವಸಂತಕಾಲದ ಪ್ರಾರಂಭದ ಮೊದಲನೇ ಒಣ ಹವೆಯು ನಮಗೆ ರೆಂಟೆ ಹೊಡೆಯುವ ಉರುಳಿಸುವ ತೋಡುವ ಸಂದರ್ಭವನ್ನು ಒದಗಿಸಿಕೊಡುವವರಿಗೆ ಭೂಮಿಯನ್ನು ಹಾಗೇ ಬಿಟ್ಟು ಬಿಡಬೇಕು. ಬಹಳ ಸಾರಿ ಮೇಲಿಂದ ಮೇಲೆ ವ್ಯವಸಾಯ ಮಾಡುವದರಿಂದ ಹಗುರು ಭೂಮಿಗಳು ಬಹಳೇ ಒಣಗಿ ಅವುಗಳಿಗೆ ಹಾನಿಯಾಗುತ್ತದೆ. ಇಂಥ ಭೂಮಿಯು ಹಸನಾಗಿದ್ದರೆ ಅದರಲ್ಲಿ ವ್ಯವಸಾಯವನ್ನು ಕಡಿಮೆ ಮಾಡಿದಷ್ಟು ಅದಕ್ಕೆ ಹಿತವಾಗುತ್ತದೆ. ಕಳೆಗಳು ಇಲ್ಲದಿದ್ದರೆ ಅದರಲ್ಲಿ ಕುಸು ವ್ಯವಸಾಯ ಮಾಡಿದರೂ ಸಾಗುತ್ತದೆ. ಸ್ಥಳಗಳು ಅನುಕೂಲವಿದ್ದಲ್ಲಿ ಬೇರುಗಳಿಗಿಂತ ಮುಂಚೆ ರಾಯು ಅಥವಾ ಹೈಚಿಸ ಎಂಬ ಹುಲ್ಲಿನ ಬೆಳಿಗಳನ್ನು ತೆಗೆದುಕೊಳ್ಳುವದು ಇಷ್ಟವಾದದ್ದು; ಇಂಗ್ಲಂಡದ ದಕ್ಷಿಣದಲ್ಲಿ ಇದನ್ನು ಮಾಡುವದು ಬಹಳ ಸುಲಭವಿರುತ್ತದೆ. ಈರಿಗಳು ಈ ಬೆಳೆಯನ್ನು ತಿಂದ ಮೇಲೆ ಮಿಂದು ಸಾರೆ ರೆಂಟೆ ಹೊಡಿಯಬೇಕು. ಮತ್ತು ಚನ್ನಾಗಿ ಪ್ರಡಿ ಪ್ರಡಿಯಾದ ಬೀಜಗಳ ಮಡಿಯು ಆಗಲಿಕ್ಕೆ ಬೇಕಾಗುವಷ್ಟು ತೋಡುವದನ್ನೂ ಉರುಳಿಸುವದನ್ನೂ ಮಾಡಬೇಕು. ಉತ್ತರದ ಪ್ರದೇಶಗಳಂತೆ ಇಲ್ಲಿ ಮೇವಿನ ಬೆಳೆಯನ್ನು ತೆಗೆದುಕೊಳ್ಳಲಿಕ್ಕೆ ಬಾರದಂತೆ ಇದ್ದರೆ ಕೊಯಿಲು ಭೂಮಿಯಲ್ಲಿ

ರೆಂಟೆಯನ್ನು ಹೊಡೆದು, ಟರ್ನಿಪ್ಪ ಬೆಳೆಯನ್ನು ಹಾಗುವ ವರಿಗೆ ಭೂಮಿಯನ್ನು ಹಾಗೇ ಬಿಟ್ಟುಬಿಡಬೇಕು. ಆ ಮೇಲೆ ರೆಂಟೆ ಮತ್ತು ಕುಂಟೆಯನ್ನು ಹೊಡೆದು, ರೆಂಟೆಯಿಂದ ಸಣ್ಣ ಸಣ್ಣ ದಿನ್ನಿಗಳನ್ನು ಮಾಡಬೇಕು. ದಿನ್ನಿಗಳ ನಡುವೆ ಸಗಣಿಯನ್ನು ಹರವಿ ಆ ಮೇಲೆ ಅವುಗಳನ್ನು ಗೊಬ್ಬರದ ಮೇಲೆ ಹರವಿ ದಿನ್ನಿಗಳ ತಲೆಗುಂಟ ಬೀಜಗಳನ್ನು ಬಿತ್ತುತ್ತಾರೆ. ತುದಿಗಳ ದಂಡೆಗುಂಟ ಬಿತ್ತಲ್ಪಡುತ್ತವೆ.

ಹಗುರು ಭೂಮಿಗಳನ್ನು ಸಾಗು ಮಾಡಲಿಕ್ಕೆ ಗ್ರುಬರ (Grubber) ಎಂಬ ಹೆಸರಿನ ಒಂದು ಉತ್ತಮವಾದ ಕೃಷಿ ಕರ್ಮದ ಆಯುಧವಿರುತ್ತದೆ. ಅದರಿಂದ ವಕ್ರಾಕಾರವಾಗಿ ಹೊಡೆಯುವುದಕ್ಕೆ ಮುಂದೆ ಹಾದಂಥ ಹಲ್ಲುಳ್ಳ ಒಂದು ಪ್ರಕಾರದ ಚೌಕಟ್ಟೇ ಈ ಆಯುಧವಾಗಿರುತ್ತದೆ. ಕೆಳಗಿನ ಹರಗಳನ್ನು ಮೇಲಕ್ಕೆ ತರದಂತೇ ಭೂಮಿಯನ್ನು ಪುಡಿ ಪುಡಿ ಮಾಡುವ ಶಕ್ತಿಯು ಇದರಲ್ಲಿರುತ್ತದೆ. ಈ ಪ್ರಕಾರ ಭೂಮಿಯೊಳಗಿನ ಆರ್ದ್ರತ್ವದ ಎಷ್ಟೋ ಅಂಶವು ಅಲ್ಲಿಯೇ ಉಳಿಯುತ್ತದೆ. ಇದಲ್ಲದೆ ಕಾವ್ರಚ ಮುಂತಾದ ಬಹಳ ಉದ್ದ ಬೇರುಳ್ಳ ಕಳೆಗಳನ್ನು ಮುರಿಯುದಲೇ ಇಹು ಅವುಗಳನ್ನು ಮೇಲಕ್ಕೆ ತರುತ್ತದೆ.

ಹಗುರು ಭೂಮಿಯಲ್ಲಿ ಬೆಳೆಯನ್ನು ಬಿತ್ತುವ ಕಾಲಕ್ರಮವು ಈ ಪ್ರಕಾರ ಇರುತ್ತದೆ. ಮೊದಲು ಬೇರುಗಳು ಆ ಮೇಲೆ ಜವೆಗೋಧಿ, ಆನಂತರ ಕ್ಲೋವ್ವರ ಎಂಬ ಹುಲ್ಲು ಎಲ್ಲಕ್ಕೂ ಕಡಿಗೆ ಗೋಧಿ.

೧. ಇಂಥ ಭೂಮಿಗಳಿಗೆ ಬೇರುಗಳ ಬೆಳೆಯು ಬಹಳ ತಕ್ಕದ್ದಾಗಿರುತ್ತದೆ. ನೆಲಪೊಳಗಿನ ಬೇರುಗಳನ್ನು ಕುರಿಗಳಿಂದ ತಿನ್ನಿಸುವದರಿಂದಾಗುವ ಲಾಭಗಳನ್ನು ಹಿಂದೆ ಹೇಳಿದ್ದೇವೆ. ಟರ್ನಿಪ್ಪ ಬೆಳೆಗಳ ಹೊಲದಲ್ಲಿ ಕುರಿಗಳ ದಡ್ಡಿಯನ್ನು ಹಾಕುವದರಿಂದ ಅವುಗಳಿಗೆ ಅನೇಕಾವರ್ತಿ ಸಿಗುವ ಹಿಂಡಿ ಕಾಳು ಅಥವಾ ಹುಲ್ಲು ಈ ಆಹಾರಗಳು ಏಕೀಕರಣವಾಗುವದರಿಂದ ಉಂಟಾಗುವ ಗೊಬ್ಬರದಿಂದ

ಭೂಮಿಯು ಬಹಳೀ ಫಲಭರಿತವಾಗುತ್ತದೆ. ಬೇರುಗಳು ತಳಭೂಮಿಯಿಂದ ವನಸ್ಪತಿಯು ಆಹಾರವನ್ನು ತೆಗೆದುಕೊಂಡು ಭೂಮಿಯೊಳಗಿನ ಮೇಲಿನ ಥರಗಳಿಗೆ ಕಸುವನ್ನು ಕೊಡುತ್ತವೆ. ಇದಲ್ಲದೆ ಹೊಲದೊಳಗಿನ ಗೊಬ್ಬರ, ಟನಿಪ್ಪ ಎಲೆಗಳು ಮುಂತಾದವುಗಳ ರೂಪದಿಂದ ಇದ್ದ ಕೊಳೆತ ಸಸಿ ಮಣ್ಣಿನ ಸಹಾಯದಿಂದ ಭೂಮಿಯು ಯಾಂತ್ರಿಕ ಮೈಕಟ್ಟುದರೂ ಸುಧಾರಿಸುತ್ತದೆ. ಇದರಿಂದ ಭೂಮಿಯಲ್ಲಿ ಹವೆಯೊಳಗಿಂದ ಹೆಚ್ಚು ಆರ್ದ್ರತ್ವವನ್ನು ತೆಗೆದುಕೊಳ್ಳುವ ಶಕ್ತಿ ಬರುತ್ತದೆ.

೨. ಬೇರುಗಳನಂತರ ಭೂಮಿಯು ಜವೆಗೋಧಿಯ ಬೆಳೆಗೆ ತಕ್ಕದ್ದಾಗಿರುತ್ತದೆ. ಜವೆಗೋಧಿಯು ಅವಶ್ಯವಾಗಿ ಹಗುರು ಭೂಮಿಯ ಬೆಳೆಯಾಗಿರುತ್ತದೆ. ಇದು ಗಿಡ್ಡ ಗಿಡ್ಡ ಬೇರುಗಳುಳ್ಳದ್ದಾಗಿ ಭೂಮಿಯ ಮೇಲಿನ ಥರಗಳಲ್ಲಿ ಆಹಾರವನ್ನು ತೆಗೆದುಕೊಂಡು ಉಪಜೀವಿಸುತ್ತವೆ.

೩. ಕ್ಲವ್ಹರ ಮತ್ತು ಬೇರೆ ದ್ವಿದಳ ಕೈರುಗಳನಂತರ ಭೂಮಿಯು ಗೋಧಿಯ ಬೆಳೆಗೆ ತಕ್ಕದ್ದಾಗುತ್ತದೆ. ಯಾಕಂದರೆ ಹವೆಯಿಂದ ದೊರೆತಂಥ ಅಥವಾ ಬೇರೆ ವನಸ್ಪತಿಗಳಿಗೆ ಬೇಡಾದಂಥ ಭೂಮಿಯೊಳಗಿನ ಸಚೇತನ ಮಿಶ್ರಣಗಳಿಂದ ದೊರೆತಂಥ ನಿರ್ಗಂಧವಾಯುವಿನ ದ್ರವ್ಯದ ಪುರವಣೆಯು ಇವುಗಳಿಂದ ಭೂಮಿಯೊಳಗಿನ ಮೇಲಿನ ಥರಗಳಿಗಾಗುತ್ತದೆ. ಗೋಧಿಗಾದರೂ ಒಂದು ಗಟ್ಟಿಯಾದ ಬೀಜಗಳ ಮಡಿಯು ದೊರಿಯುತ್ತದೆ.

೪ ಕ್ಲವ್ಹರ ಎಂಬ ದ್ವಿದಳ ಕೈರಿನಂತರ ಗೋಧಿಯು ಚೆನ್ನಾಗಿ ಫಲಿಸುತ್ತದೆ. ಯಾಕಂದರೆ ಈ ಕಾಳುಕ್ಕೆ ಭೂಮಿಯಲ್ಲಿ ನಿರ್ಗಂಧ ವಾಯುವಿನ ದ್ರವ್ಯದ ಪುರವಣೆಯು ಬಹಳ ಇರುತ್ತದೆ.

ತೀನೇಭಾಗ ಗೊಬ್ಬರಗಳು

ವಾಖ್ಯೆಯೂ ವರ್ಗೀಕರಣವೂ.

ಸಾಭಾವಿಕವಾಗಿ ದೊರೆಯುವ ವನಸ್ಪತಿಗಳ ಆಹಾರದ

ಪುರವಣೆಯನ್ನು ಹೆಚ್ಚಿಸುವದಕ್ಕಾಗಿ ಭೂಮಿಯಲ್ಲಿ ಹಾಕಿದ ದ್ರವ್ಯಕ್ಕೆ ಗೊಬ್ಬರವೆನ್ನುತ್ತಾರೆ. ಗೊಬ್ಬರದಲ್ಲಿ ಅವಶ್ಯವಾಗಿ ಇರಬೇಕೆಂದು ಎಣಿಸಲ್ಪಟ್ಟ ವನಸ್ಪತಿಗಳ ಆಹಾರದ ಘಟಕಾವಯವಗಳು ಬಹಳ ಸ್ವಲ್ಪ ಇರುತ್ತವೆ. ಅವುಗಳಲ್ಲಿ ಮುಖ್ಯವಾದವುಗಳು ಯಾವವೆಂದರೆ ನಿರ್ಗಂಧವಾಯು, ಫಾಸಫೊರಿಕ್ಕ ಆಸಿಡ್ಡು ಮತ್ತು ಪೊಟ್ಯಾಶಂ ಸುಣ್ಣ, ಗಂಧಕ, ಹೆಪ್ಪಳಖಾರ, ಕ್ಲೊರಾಯಿನ್ನ, ಮಾಗ್ನೇಸಿಯಾ ಮುಂತಾದವುಗಳನ್ನು ಸಾಧಾರಣವಾಗಿ ಬೇರೆ ಗೊಬ್ಬರಗಳಲ್ಲಿ ಕೆಲಕೆಲವು ಪ್ರಸಂಗಗಳಲ್ಲಿ ಉಪಯೋಗಿಸುತ್ತಾರೆ. ಕೆಲವಂಶದಿಂದ ಯಾಂತ್ರಿಕ ಪರಿಣಾಮದ ಸಲುವಾಗಿಯೂ ಕೆಲವೊಂದು ರಸಾಯನ ಪರಿಣಾಮದ ಸಲುವಾಗಿಯೂ ಗೊಬ್ಬರವನ್ನು ಹಾಕುತ್ತಾರೆ.

MEMORY.

ಸ್ಮರಣಶಕ್ತಿ.

(೯೫ನೇ ಪುಟದಿಂದ ಮುಂದೆ ಸಾಗಿದ್ದು.)

ज्ञानेनहीनाः पशुभिः समानाः ॥ १ ॥

ಜ್ಞಾನವಿರಹಿತ ಪ್ರಾಣಿಗಳು ಪಶುಗಳಲ್ಲಿಯೇ ಎಣಿಸಲ್ಪಡುವವು. ಹೀಗಿದ್ದ ಮೇಲೆ ಮನುಷ್ಯನಲ್ಲಿ ಮನುಷ್ಯತ್ವವು ಪ್ರಾಪ್ತವಾಗಬೇಕಾದರೆ ಜ್ಞಾನಾವಶ್ಯಕತೆಯು ಉಂಟೇ ಉಂಟೆಂದು ಫಲಿತವಾಗುತ್ತದೆ. ಕಾರಣ ಮನುಷ್ಯನು ಅದನ್ನು ಸಂಗ್ರಹಿಸಲೇ ಬೇಕು. ಅದಿದ್ದರೆ ಮಾತ್ರ ಮನುಷ್ಯತ್ವವನ್ನು ಕಳೆದುಕೊಳ್ಳದೆ, ಮಾನವೀ ಪ್ರಾಣಿಗಳಲ್ಲಿ ಎಣಿಸಲಿಕ್ಕೆ ಪಾತ್ರನಾಗುತ್ತಾನೆ. ಇದು ಸಾಮಾನ್ಯ ಲಾಭವೋ ? ಮನುಷ್ಯನು ಆಯಾಸ ಪಟ್ಟು, ಶರೀರವನ್ನು ದಂಡಿಸಿ, ಹಣವನ್ನು ವೆಚ್ಚಮಾಡಿ, ಆಯುಷ್ಯವನ್ನು ವ್ಯಯಗೊಳಿಸಿ, ಮನುಷ್ಯತ್ವದ ರಕ್ಷಣಾರ್ಥವಾಗಿಯೇ ಈ ಜ್ಞಾನವನ್ನು ಸಂಪಾದಿಸುವನಲ್ಲವೇ !! ಆದರೆ ಅಂತಹ ಜ್ಞಾನವನ್ನು ಬದುಕಿರು

ಮಟ್ಟಿಗೂ ಕಾಯ್ದುಗೊಳ್ಳುವ ತ್ರಾಣವು (ಶಕ್ತಿಯು) ಆವ ನಲ್ಲಿಲ್ಲದಿದ್ದರೆ, ಅದನ್ನು ಗಳಿಸಿಯೂ ಗಳಿಸದಂತಯೇ ಸರಿ. ಅವನು ಮಾಡಿದ್ದೆಲ್ಲ 'ನೀರಲ್ಲಿ ಹೋಮ ಮಾಡಿದಂತೆ' ವ್ಯರ್ಥವಾಗುತ್ತದೆ. ಅಂದರೆ ಅವನು ಪುನಃ ಪಶುಗಳಲ್ಲಿಯೇ ಎಣಿಸಲಿಕ್ಕೆ ತಕ್ಕವನಾಗುವನು.

ಕಲಿತನದಿಂದ ಕಾದಿ ಬಂದು ನಾಡಿನ ಅರಸೊತ್ತಿಗೆಯನ್ನು ಪಡೆದು ರಾಜನೆಂಬ ಪದವಿಯನ್ನು ಹೊಂದಿ, ತಕ್ಕ ಬಗೆಯಿಂದ ಆ ನಾಡನ್ನು ಕಾಪಾಡದಿದ್ದರೆ ಇನ್ನೊಬ್ಬನು ಅವನ್ನು ಹಿಡಿದುಕೊಳ್ಳುವನು ಆಗ ಮೊದಲಿನವನು ತನ್ನ ಅರಸನೆಂಬ ಬಹುಮಾನದ ಪಾಪ್ಯಪದವಿಯಿಂದ ಚ್ಯುತನಾಗಿ, ಪೂರ್ವಪದತ್ವಕ್ಕೆ (ಸಾಮಾನ್ಯ ಜನರ ಸಮುದಾಯದಲ್ಲಿ) ಬರುವನು. ಮನುಷ್ಯತ್ವವು ಬರಬೇಕೆಂದು ಜ್ಞಾನವನ್ನು ಸಂಪಾದಿಸಿ, ಮನುಷ್ಯನೆಂಬ ಪದವಿಯನ್ನು ಪಡೆದರೂ, ಅದು ಸ್ಥಿರವಾಗಿ ಉಳಿಯುವಂತೆ ಏನೂ ಪ್ರಯತ್ನ ಮಾಡದಿದ್ದರೆ ಸಂಪಾದಿತ ಜ್ಞಾನದಿಂದ ನಮಗೇನೂ ಲಾಭವಾಗಲರಿಯದು ಯಾವ ಜ್ಞಾನ ಬಲದಿಂದ ಭೂವಾಸಿತ ಸಕಲಪ್ರಾಣಿಕೋಟಿಯಲ್ಲಿ ಅತ್ಯುಚ್ಚ ಪದವಿಯನ್ನು ಪಡೆದಿರುವೆವೋ ಆ ಜ್ಞಾನವು ನಮ್ಮಿಂದ ರಕ್ಷಿಸಲ್ಪಡದಿದ್ದರೆ, ಕೀಳ್ತರವಾದ ಪಶುಕೋಟಿಯಲ್ಲಿ ಎಣಿಸಲ್ಪಡುವೆವೆಂಬುದರಲ್ಲಿ ಆಶ್ಚರ್ಯವೇನು? ಹೀಗಾಗಬಾರದೆಂತಲೇ ಅವಶ್ಯವಾದ ಅಂತಹ ಜ್ಞಾನ ಸಂರಕ್ಷಣೆಯನ್ನು ಮಾಡತಕ್ಕ ಅವಶ್ಯವು ಅಷ್ಟಾಷ್ಟೆಂದು ಹೇಳಲಾಸಲ್ಲ. ಈ ಬಗೆಯ ಒಂದು ಶಕ್ತಿಯು ಸ್ಮರಣವೆಂಬ ಹೆಸರುಳ್ಳದ್ದಾಗಿ ಮಿದುಳಿನ ಒಂದು ಅಂಗವಾಗಿರುತ್ತದೆ. ಅದಿಲ್ಲದಿದ್ದರೆ, ನಮ್ಮ ಅನುಮಾನ, ತರ್ಕ, ಅನುಭವಾದಿ ಸರ್ವಸಂಗತಿಗಳು ನಿರುಪಯೋಗವಾಗಿ ಈ ಜಗತ್ತಿನಲ್ಲಿರುವದಕ್ಕೆ ಅಯೋಗ್ಯರಾಗುತ್ತಿದ್ದೆವು. ಸಾರಾಂಶ ಸ್ಮರಣವಿಲ್ಲದ ನರನು ಮನುಷ್ಯತ್ವವನ್ನು ಕಳೆದುಕೊಳ್ಳುವನು.

ಜಾಗ್ರತ ಸ್ಮರಣಶಕ್ತಿಯೇ ಮನುಷ್ಯನಿಗೆ ಉಪಯುಕ್ತವಾದದ್ದು

ಜನ್ಮಸಿದಂದಿನಿಂದ ಮನುಷ್ಯರಲ್ಲಿ ಸ್ಮರಣ ಶಕ್ತಿಯು ಇರುತ್ತದೆ. ಆದರೆ ಆಗ ಅದು ತೀರ ಅಜಾಗ್ರತೆಯ ಸ್ಥಿತಿಯಲ್ಲಿ ಇರುವದು. ಅಂದರೆ ಬಾಲ್ಯಾವಸ್ಥೆಯಲ್ಲಿ ಇರುವದು. ಅದನ್ನು ಪರಿಪಕ್ವ ಸ್ಥಿತಿಯಲ್ಲಿ ತರುವದು ನಮ್ಮ ಕೈಯಲ್ಲಿರುತ್ತದೆ. ಮನುಷ್ಯನಿಗೆ ಜಾಗ್ರತೆಯ ಸ್ಮರಣದ ಶಕ್ತಿಯೇ ಉಪಯೋಗಕ್ಕೆ ಬರುವದು.

ಅಲೇಕ್ಸಾಂಡರನು ಲಿನಸೇಪ್ಟೀಸ ಶಿಬಾಯಿಯ ಮೇಲೆ ಒಳಸಂಚು ಮಾಡಿದ ಆರೋಪವನ್ನಿಟ್ಟು, ಅವನನ್ನು ಸರೆಯಲ್ಲಿರಿಸಿದಾಗ ಅವನ ಸ್ಮರಣ ಶಕ್ತಿಯು ಪರಿಪಕ್ವ ಸ್ಥಿತಿಯಲ್ಲಿದ್ದರೆ, ಅವನಿಗೆ ಎಂದೂ ದೇಹಾಂತ ಶಾಸನವಾಗುತ್ತಿದ್ದಿಲ್ಲ. " ಹೀಗೆ ಇತಿಹಾಸಕಾರರ ಅಭಿಪ್ರಾಯ ಉಂಟು. " ಸೆರೆಯಲ್ಲಿಟ್ಟಾಗ ತನ್ನ ಅಭಿಪ್ರಾಯಗಳನ್ನು ವ್ಯಕ್ತ ಮಾಡಿಕೊಳ್ಳಲು, ತಕ್ಕನಿತು ವ್ಯವವಧಾನವು ಅವನಿಗೆ ಕೊಡಲ್ಪಟ್ಟಿತ್ತು. ಲಿನಸೇಸ್ಟೀಸನಾದರೂ ತಾನು ಬಾದಶಹನ ಮುಂದೆ ಹೇಳತಕ್ಕದ್ದನ್ನೆಲ್ಲ ಮುಂಚಿತವಾಗಿಯೇ ಸಿದ್ಧಗೊಳಿಸಿಟ್ಟಿದ್ದನು. ಆದರೆ ಮಾಡುವದೇನು? ಪ್ರತ್ಯಕ್ಷ ಬಾದಶಹನ ಎದುರಿಗೆ ಅವನನ್ನು ಕರೆದೊಯ್ದಾಗ ತನ್ನ ಬಿಡುಗಡೆಯ ಕಾರಣಗಳ ಬಗ್ಗೆ ಒಂದು ಚಕಾರಶಬ್ದಗಳನ್ನಾದರೂ ತೆಗೆಯಲಿಲ್ಲ. ಅದರಿಂದ ಇವನು ನಿಜವಾಗಿ ತಪ್ಪುಗಾರನೆಂದು ಬಾದಶಹನಿಗೆ ಮನವರಿಕೆಯಾಗಿ ದೇಹಾಂತ ಪ್ರಾಯುಶ್ಚಿತ್ತವನ್ನು ವಿಧಿಸಬೇಕಾಯಿತು. " ಸಾರಾಂಶ ಸ್ಮರಣ ಸಾಮರ್ಥ್ಯವು ಹುಟ್ಟಾ ಇರುತ್ತಿದ್ದರೂ ಅದನ್ನು ಬೆಳೆಸದಿದ್ದರೆ ಸಮಯಾನುಸಾರವಾಗಿ ಮನುಷ್ಯನಿಗೆ ಅದರ ಉಪಯೋಗವಾಗದೆ ಅನರ್ಥಕ್ಕೆ ಗುರಿಯಾಗುವ ಹೊತ್ತು ಬರಬಹುದೆಂದು ಮೇಲಿನ ಐತಿಹ್ಯದಿಂದ ಸ್ಪಷ್ಟವಾಗುತ್ತದೆ.

ಸ್ಮರಣಶಕ್ತಿಯನ್ನು ಬೆಳಿಸುವ ಕೆಲವು ಉಪಯುಕ್ತ ಸಾಧನೆಗಳು.

ಮೊದಲನೆಯ ಸಾಧನವು— ಬಾಯಿಪಾಠ ಮಾಡುವದು. ಸ್ಮರಣಶಕ್ತಿಯ ಬೆಳವಣಿಗೆಗೆ ಬಾಯಿಪಾಠ ಮಾಡುವದು ಅತ್ಯವಶ್ಯವಾದ ಸಾಧನವಾಗಿದೆ. ಸಂಪಾದಿಸಿದ ಜ್ಞಾನವು ಬಾಯಿಪಾಠ ಮಾಡುವದರಿಂದ ಸ್ಮರಣದಲ್ಲಿ ಬಹುದಿವಸ ನಿಂತ ಹಾಗೆ ಬೇರೆ ಆವ ಸಾಧನದಿಂದಲೂ ಅಷ್ಟು ನಿಶ್ಚಯಗೊಳ್ಳ ಲಾರದು. ಅದರಿಂದ ಸ್ಮರಣಶಕ್ತಿಯನ್ನು ಸಾಧ್ಯವಾಡಿಕೊ ಳ್ಳುವ ಹಲವು ಉಪಾಯಗಳಲ್ಲಿ ಮುಖ್ಯೋದ್ದೇಶವಾಗಿ ಅನ್ನ ಲಿಕ್ಕೆ ಕಲಿಯುವ (ಬಾಯಿಪಾಠ ಮಾಡುವ) ಸಾಧನವು ಸು ಲಭವಾದದ್ದೂ ಶ್ರೇಷ್ಠವಾದದ್ದೂ ಎನ್ನಲಿಕ್ಕೆ ಏನೂ ಅಡ್ಡಿ ಇಲ್ಲ

ಪಾಠಮಾಡುವ ರೂಢಿಯು ಚಿಕ್ಕಂದಿನಿಂದಲೇ ಇರತಕ್ಕ ದ್ದು. ಅದರಿಂದಲೇ ಮುಂದೆ ಹೆಚ್ಚು ಲಾಭವಾಗುವ ಸಂಭ ವವಿರುತ್ತದೆ. ನಮಗೆ ಚನ್ನಾಗಿ ಬರೆಯಲಿಕ್ಕೆ ಇಲ್ಲವೆ ಈಸಲಿಕ್ಕೆ ಬರಬೇಕಾದರೆ, ಎಷ್ಟೋ ದಿವಸಗಳ ವರೆಗೆ ಅವುಗಳ ರೂಢೀ ಮಾಡಬೇಕಾಗುವದು. ಆರಿಯದವನಿಗೆ ಮೊದಲಿಗೆ ಈಸಲಿಕ್ಕೆ ಕಲಿಯಬೇಕಾದರೆ, ಮೊದಲು ಕು ಸು ತುಸು ಕಲಿಯಬೇಕಾಗುವದು. ಕೊನೆಗೆ ಅದರಲ್ಲಿ ನ ಪುಣ್ಯವನ್ನಾದರೂ ಹೊಂದಬಹುದು. ಅದರಂತೆಯೇ ರೂಢಿಯು ಇಲ್ಲದಿದ್ದರೆ, ಸ್ಮರಣಶಕ್ತಿಯು ದೃಢವಾಗಲಾರ ದು. ನಾವು ನೋಡುತ್ತಿರುವ ಅಷ್ಟಾವಧಾನಿ ಶತಾವ ಧಾನಿಗಳಾದರೂ ವಿಶ್ವಪ್ರಯತ್ನಮಾಡಿ ಸ್ಮರಣ ಸಾಮರ್ಥ್ಯ ವನ್ನು ಪರಿಪಕ್ವಸ್ಥಿತಿ (ಪೂರ್ಣಜಾಗೃತಾವಸ್ಥೆ)ಗೆ ತಂದವರೇ ಸರಿ ಈಶ್ವರದತ್ತವಾದ ಇಲ್ಲವೆ ನೈಸರ್ಗಿಕವಾದ ಸ್ಮರ ಣಶಕ್ತಿಯು ಮನುಷ್ಯನಲ್ಲಿ ಇಲ್ಲದಿದ್ದರೆ ಇಂಥ ಅವಧಾನಿ ಗಳಾಗುವದು ಬಹುತರವಾಗಿ ಅಸಂಭವನೀಯವೇ ಸರಿ. ಆದರೂ 'ರೂಢಿಯು ಪ್ರತಿಸೃಷ್ಟಿಯು' ಎಂಬ ಗಾದೆಯಂ ತೆ ರೂಢಿಯಿಂದ ಸಹ ನಾವು ಅವರ ಯೋಗ್ಯತೆಗೇರದಿದ

ಗೂ ಅವರಿಗೆ ಸರಿಯಾಗುವಷ್ಟು ಯೋಗ್ಯತೆಯನ್ನು ಪಡೆಯುವೆವೆಂಬುದಕ್ಕೆ ಏನೂ ಸಂದೇಹವಿಲ್ಲ. ಪ್ರಾಚೀನಸ್ಥಿತಿಯ ಸಿಂಹಾವಲೋಕನವನ್ನು ಮಾಡಿದರೆ ಈ ಮಾತಿನ ನಿಜತ್ವವು ತೋರಿಬರುವದು. ಲೇಖನಕಲೆಯೂ ಮುದ್ರಣಕಲೆಯೂ ಅಸ್ತಿತ್ವದಲ್ಲಿ ಬರುವ ಮೊದಲು ಶ್ರುತಿ, ಸ್ಮೃತಿ ಮುಂತಾದ ದೊಡ್ಡ ದೊಡ್ಡ ಗ್ರಂಥಗಳನ್ನು ಮುಖೋದ್ಗತವಾಗಿ ಅನ್ನುತ್ತಿದ್ದರು. ಶ್ರುತಿಯೊಳಗಿನ ಯಾವದಾದರೊಂದು ಶುಚಿಯು ಅಗತ್ಯವಿದ್ದಾಗ ಅದನ್ನು ಮುಖಪಾಠ ಮಾಡಲಿಕ್ಕೇ ಬೇಕಾಗುತ್ತಿತ್ತು. ಪ್ರಾಚೀನಕಾಲದಲ್ಲಿ ಹೋಮರನ ಇಲಿಯಡ, ಮುಂತಾದ ಗ್ರಂಥಗಳ ಪ್ರೀತಿಯು ಗ್ರೀಕರಿಗೆ ಅತಿಶಯವಾಗಿತ್ತು. ಅದರಿಂದ ಅವರು ಅವುಗಳನ್ನೆಲ್ಲ ಬಾಯಪಾಠ ಮಾಡೇ ಮಾಡುತ್ತಿದ್ದರು. ಎರಡನೆಯವರಿಗೆ ಆ ಗ್ರಂಥದ ಪ್ರತಿಯು ಸಿಕ್ಕಬೇಕಾದರೆ ಪರದ ಜಿಹ್ವಾಗ್ರದ ಮೇಲಿಂದಲೇ ದೊರಕಿಸಬೇಕಾಗುತ್ತಿತ್ತು. ಆ ಗ್ರಂಥದೊಳಗಿನ ಮನೋಹರವಾದ ಭಾಗಗಳನ್ನು ಅಂದು ತೋರಿಸಿ, ಮನರಂಜಿಸುವ ರಸಿಕ ಶಿಖಾಮಣಿಗಳು ಆ ಕಾಲಕ್ಕೆ ಉದಯಕ್ಕೆ ಬಂದಿದ್ದರು. ಸಮ್ಮ ದೇಶದೊಳಗಿನ ಭಟ್ಟಂಗಿ, ಗೊಂದಲಿಗ, ಹೆಳವರೇ ಮೊದಲಾದ ಸ್ತುತಿಪಾಠಕರಂತೆ ಆ ಕಾಲದಲ್ಲಿ ಅವರು ಮನೆಮನೆಗೆ ಕವನಗಳನ್ನು ಹೇಳುತ್ತ ತಿರುಗುತ್ತಿದ್ದರು. ಆದರೆ ಇತ್ತಕಡಿಗೆ ಮುದ್ರಣಕಲೆಯು ಅಸ್ತಿತ್ವದೊಳಗೆ ಬಂದಂದಿನಿಂದ ಮುಖಪಾಠ ಮಾಡುವ ನಡುವಳಿಗೆಗೆ ಪ್ರತಿಬಂಧವು ಒದಗಿತು ಬಂದು ದೃಷ್ಟಿಯಿಂದ ಇದು ಹಾನಿಕಾರಕವಾಗಿ ತೋರಿದರೂ ಲಾಭದ ಕಡೆಗೆ ಲಕ್ಷಗೊಟ್ಟು ತೂಡಿದರೆ, ವಿಶೇಷವಾಗಿ ಹಳಹಳಿಸುವ ಕಾರಣ ತೋರುವದಿಲ್ಲ. ಆದ ಆ ಹಾನಿಯನ್ನು ಪ್ರಯತ್ನದಿಂದ ತುಂಬಿಕೊಳ್ಳಲು ಬರುವಂತಿದೆ. ಮುದ್ರಿಸುವ ಯುಕ್ತಿಯು ಹೊರಡುವ ಮೊದಲು ಯಾವನಾದರೊಬ್ಬ ವಿದ್ಯಾಂಸನ ಜಾಣ್ಮೆಯನ್ನು ತಿಳಿದುಕೊಳ್ಳಬೇಕಾದರೆ, ಪ್ರತ್ಯಕ್ಷವಾಗಿ ಅವನ ಭೆಟ್ಟಯೇ ಆಗಬೇಕಾಗುತ್ತಿತ್ತು. ಆದ

ರೆ ಮುದ್ರಣ ಕಲೆಯು ಸಹಾಯ್ಯದಿಂದ ಬೇಕಾದ ಮನುಷ್ಯನ ಪಾಂಡಿತ್ಯವನ್ನು ಬೇಕಾದ ಸ್ಥಳದಲ್ಲಿ ಬೇಕಾದಾಗ ತಿಳಿಯುಲಿಕ್ಕೆ ಬರುತ್ತದೆ.

(ಸಶೇಷ.)

GEOGRAPHY.

ಭೂಗೋಲ ಶಿಕ್ಷಣವು.

ಪ್ರಕೃತದಲ್ಲಿ ನಮ್ಮ ಪ್ರಾಥಮಿಕ ಶಾಲೆಗಳ ಅಭ್ಯಾಸ ಕ್ರಮದಲ್ಲಿ ಇದೊಂದು ವಿಷಯವಾಗಿರುವದು. ಆದರೆ ಈ ವಿಷಯವನ್ನು ಕಲಿಯುವವರು ಬೇಸರಗೊಳ್ಳುತ್ತಾರೆ. ಅದು ಅವರಿಗೆ ಅಪ್ರಯೋಜಕವಾಗಿ ಕಂಡು ಬರುತ್ತದೆ. ಪರೀಕ್ಷೆಕರು ಕೇಳುತ್ತಾರೆಂಬ ಭಯದಿಂದಲೇ ವಿದ್ಯಾರ್ಥಿಗಳು ಈ ವಿಷಯದ ಪುಸ್ತಕದೊಳಗಿನ, ಪಟ್ಟಣ, ನದಿ, ಭೂಶಿರ ಮುಂತಾದವುಗಳ ಪಟ್ಟಿಯನ್ನು ನಾಮಾವಳಿಗಳಂತೆ ಪಾಠ ಮಾಡಿ, ಪರೀಕ್ಷೆ ಮುಗಿದ ಕೂಡಲೇ ಮರೆತು ಬಿಡುವರು. ಈ ಮಾತು ಪರೀಕ್ಷೆ ಕೊಟ್ಟ ಪ್ರತಿಯೊಬ್ಬನ ಅನುಭವಕ್ಕೆ ಬಂದ ಸಂಗತಿಯಾಗಿದೆ. ನಾವು ಪರೀಕ್ಷೆಗಾಗಿ ಕಲಿತ ಸಿದ್ಧಾಂತ, ಮುಂತಾದ ಬೇರೆ ವಿಷಯವನ್ನಾದರೂ ಮರೆಯಬಹುದು. ಆದರೆ ಆ ವಿಷಯದ ಅಭ್ಯಾಸದಿಂದ ನಮ್ಮ ಬುದ್ಧಿಗೆ ಆದ ಸಂಸ್ಕಾರವು ಮಾತ್ರ ಹೋಗದು. ಕೆಲವರು ಈಗಿನ ವಿದ್ಯಾಭ್ಯಾಸ ಕ್ರಮದೊಳಗಿಂದ ಭೂಗೋಲವನ್ನು ತೆಗೆದು ಹಾಕುವದು ಉಚಿತವೆಂದೂ ಇದೇ ತಿಳುವಳಿಕೆಯಿಂದ ಉಚ್ಚ ಪ್ರತಿಯ ಶಾಲೆಯ ಅಭ್ಯಾಸ ಕ್ರಮದಲ್ಲಿ ಈ ವಿಷಯವನ್ನು ಸೇರಿಸಿಲ್ಲವೆಂದೂ ಗುಣುಗುಟ್ಟುತ್ತಾರೆ. ಆದರೆ ಇದು ಸರಿಯಲ್ಲ. ಈ ಪ್ರಕಾರ ತಪ್ಪು ತಿಳುವಳಿಕೆಯಾಗುವದಕ್ಕೆ ಎರಡು ಕಾರಣಗಳುಂಟು. (೧) ಈ ವಿಷಯದ ಪುಸ್ತಕಗಳಲ್ಲಿ ಸರಿಯಾದ ವಿಷಯವನ್ನು ಸಂಗ್ರಹಿಸದೆ ಇರುವದು. (೨) ಈ ವಿಷಯವನ್ನು ತಕ್ಕ ಪದ್ಧತಿಯಿಂದ ಕಲಿಸದಿರುವದು.

ಇನ್ನು ಈ ವಿಷಯದ ಪುಸ್ತಕಗಳಲ್ಲಿ ಬೋವ್ಯಾವ ಸಂಗತಿಗಳು ಬರತಕ್ಕವೆಂಬದನ್ನು ಕುರಿತು ಆಲೋಚಿಸುವಾ. ಭೂಗೋಲವೆಂದರೆ ಬರೇ ಭೂಪೃಷ್ಠ ಭಾಗದ ಮೇಲಿನ ನದಿ, ಸರೋವರ, ಪರ್ವತ, ಊರು ಮುಂತಾದವುಗಳ ವ್ಯಾಖ್ಯೆಗಳೂ, ಹೆಸರುಗಳೂ, ಇಷ್ಟೇ ಅಲ್ಲ. ಆದರೆ ಈ ಪ್ರಕಾರ ಭೂಮಿಯ ಪೃಷ್ಠಭಾಗದ ಸ್ವರೂಪದಲ್ಲಿ ವೈಚಿತ್ರ್ಯವಾಗಲಿಕ್ಕೆ ಕಾರಣಗಳೇನೆಂಬದನ್ನೂ ಈ ವೈಚಿತ್ರ್ಯಕ್ಕೂ ಭೂಮಿಯ ಮೇಲಿನ ಮಳೆ ಬೆಳೆ, ಮನಿಜ ಪ್ರಾಣಿಗಳ ಉತ್ಪತ್ತಿಗ ಸಂಬಂಧವೇನೆಂಬದನ್ನೂ ಮತ್ತು ಈ ಎಲ್ಲ ಸಂಗತಿಗಳಿಗೂ, ಭೂಮಿಯ ಮೇಲಿರುವ ಮನುಷ್ಯವಸ್ತಿ ಬೆಳವಣಿಗೆ, ಆಚಾರ ವಿಚಾರಗಳಿಗೆ ಸಂಬಂಧವೇನೆಂಬದನ್ನೂ ತಿಳುಕೊಳ್ಳುವದು, ಈ ವಿಷಯದ ವ್ಯಾಪಕ ವಿಚಾರವಾಗಿದೆ. ಉದಾಹರಣಾರ್ಥ, ಕರ್ನಾಟಕ ಜಿಲ್ಲೆಗಳ ಭೂಮಿಯು ಯಾಕೆ ಫಲದ್ರೂಪವಾಗಿದೆ? ಅಲ್ಲಿಯ ಜನರು ಬಂಧು ಪ್ರೀತಿಯುಳ್ಳವರಾಗಿರುವದೇಕೆ? ಅವರು ಸೋವಾರಿಗಳೂ, ವಿಶೇಷ ಪ್ರಕ್ಕರೂ, ಯಾಕೆ ಇರುವರು? ಈ ಮುಂತಾದ ಸಂಗತಿಗಳ ಕಾರಣಗಳನ್ನು ಭೂಗೋಲದ ಸರಿಯಾದ ವಿಚಾರದಿಂದ ತಿಳುಕೊಳ್ಳಬಹುದು.

ಭೂಗೋಲದ ನಿಜವಾದ ವ್ಯಾಖ್ಯೆ.

ಮೇಲೆ ಹೇಳಿದ ರೀತಿಯಿಂದ ಭೂಗೋಲ ಸಂಬಂಧವಾಗಿ ವಿಸ್ತೃತ ವಿಚಾರ ಮಾಡುವದರಿಂದ, ವಿದ್ಯಾರ್ಥಿಗಳ ಬುದ್ಧಿಗೆ ತಕ್ಕ ಸಂಸ್ಕಾರವಾಗುವದಲ್ಲದೆ, ಅವರು ತಮ್ಮ ಸುತ್ತಮುತ್ತಲಿನ ಪ್ರತಿಯೊಂದು ಸಂಗತಿಗೂ, ತಮಗೂ, ಇರುವ ಸಂಬಂಧವನ್ನು ಕುರಿತು, ವಿಚಾರ ಮಾಡತೊಡಗುವರು ಮತ್ತು ತಮ್ಮ ಸ್ಥಿತಿಯನ್ನು ತಿದ್ದಲಿಕ್ಕೆ ಯತ್ನಿಸುವರು.

ಈ ರೀತಿಯಾಗಿ ಈ ವಿಷಯವನ್ನು ಕಲಿಸುವದಾದರೆ, ಮಾಸ್ತರನಿಗೆ ಹೆಚ್ಚು ಶ್ರಮವಾಗುವದೆಂಬದು ನಿಜ. ಆದರೆ ಈ ಶ್ರಮದಿಂದ ವಿದ್ಯಾರ್ಥಿಗಳಿಗೆ ಯೋಗ್ಯ ಪ್ರಯೋಜನವಾಗುವದರಿಂದ, ಕಲಿಸುವವರು ಬೇಸರಿಯುವದಿಲ್ಲ. ಇ

ದಲ್ಲದೆ ಈ ವಿಷಯವು ವಿದ್ಯಾರ್ಥಿಗಳಿಗೆ ಸರಿಯಾಗಿಯೂ ಸುಲಭವಾಗಿಯೂ ತಿಳಿಯಬೇಕೆಂಬ ಉದ್ದೇಶದಿಂದ ಹಲವು ಸಾಧನಗಳನ್ನೂ ಸುಲಭವಾದ ಪದ್ಧತಿಗಳನ್ನೂ ಗೊತ್ತು ಹಚ್ಚಿರುವರು ಅವುಗಳನ್ನು ಕುರಿತು ಈ ಪ್ರಸಂಗದಲ್ಲಿ ಸಂಕ್ಷೇಪವಾಗಿ ವಿವರಿಸುವೆವು.

ಮೊದಲನೇ ಕ್ರಮದಿಂದ ಸಾಗುವದರಿಂದ ಗೊತ್ತಿದ್ದದರಿಂದ ಗೊತ್ತಿಲ್ಲದಕ್ಕೆ ಹೋಗುವದು ಎಂಬ ಶಿಕ್ಷಣದ ತತ್ವವನ್ನು, ಅನುಸರಿಸಿದಂತೆ ಆಗುವದು. ಮತ್ತು ಎರಡನೇ ಕ್ರಮವನ್ನು ಹಿಡಿಯುವದರಿಂದ ಸ್ಥೂಲದಿಂದ ಸೂಕ್ಷ್ಮಕ್ಕೆ ಹೋಗತಕ್ಕದ್ದೆಂಬ ತತ್ವವನ್ನು ಹಿಂಬಾಲಿಸಿದಂತೆ ಆಗುತ್ತದೆ. ಆದರೆ ಎರಡನೇ ತತ್ವವನ್ನು ಅನುಸರಿಸುವದರಿಂದ ತಿಳಿಸತಕ್ಕ ಭೂಗೋಲದ ಸಂಗತಿಗಳೆಲ್ಲ ಕಲ್ಪನೆಯಿಂದಲೇ ತಿಳುಕೊಳ್ಳಬೇಕಾಗಿರುತ್ತವೆ ಆದರೆ ಇಂಥ ಕಲ್ಪನೆಗಳನ್ನು ಮಾಡಬೇಕಾದರೆ ಆ ಜಾತಿಯ ಕೆಲವು ಸಂಗತಿಗಳನ್ನಾದರೂ ಪ್ರತ್ಯಕ್ಷ ಮಾಡಬೇಕಾಗುವದು ಅವಶ್ಯವದೆ. ಆದ್ದರಿಂದ ಈ ವಿಷಯವನ್ನು ಕಲಿಸುವಾಗ ಮೊದಲು ವಿಕೀಕರಣದಿಂದ ಸಾಗಿ, ಮುಂದೆ (೪ನೇ ಇಯತ್ತೆಯಲ್ಲಿ) ಕಲ್ಪನೆಗೆ ಆಧಾರವಾದ ಸಂಗತಿಗಳನ್ನು ತಿಳುಕೊಂಡ ಮೇಲೆ ಪೃಥಕ್ಕರಣದಿಂದ ಸಾಗಬೇಕೆಂದು ಗೊತ್ತು ಮಾಡಿದ್ದಾರೆ. ಈ ಮಿಶ್ರ ಪದ್ಧತಿಯಿಂದಲೇ ಈ ವಿಷಯದ ಶಿಕ್ಷಣವನ್ನು ಸಾಗಿಸತಕ್ಕದ್ದು.

ಈ ಮಿಶ್ರ ಪದ್ಧತಿಯಲ್ಲಿ ಮೊದಲು ಭೂಪೃಷ್ಠಭಾಗ, ಹಳ್ಳ, ನದಿ, ಗುಡ್ಡ, ತಗ್ಗು, ಹೊಲ, ಬೈಲು ಮುಂತಾದವುಗಳ ಜ್ಞಾನ ಮಾಡಿಕೊಡುವದಕ್ಕೂ, ಭೂಮಿಯ ಜ್ಞಾನವನ್ನು ಮಾಡಿಕೊಡುವದಕ್ಕೂ ಆರಂಭ ಮಾಡುವಾಗ ಮೊದಲು ತಾನಿದ್ದ ಊರಿಂದ ಆರಂಭ ಮಾಡಿ ವಿಕೀಕರಣ ಮಾಡುತ್ತ ಭೂಗೋಳಕ್ಕೆ ಹೋಗಬೇಕೋ ಅಥವಾ ಇಡೀ ಭೂಗೋಲವನ್ನು ತಕ್ಕೊಂಡು ಪೃಥಕ್ಕರಣದಿಂದ ಅದರ ಬೇರೆ ಬೇರೆ ಭಾಗಗಳಿಗೆ ಹೋಗಬೇಕೋ ಎಂಬ ಪ್ರಶ್ನೆ ಹೊರಡುವದು. ಅವುಗಳ ಸುಲಭವಾದ ಕಾರ್ಯಗಳ (ಪ್ರಯೋಜನವೂ)

ಉತ್ಪತ್ತಿ ಮುಂತಾದವುಗಳನ್ನು ಕುರಿತು ವಿಚಾರ ಮಾಡಲಿಕ್ಕೆ ಹಚ್ಚುವದಕ್ಕಾಗಿ ಬಾಲಕರನ್ನು (ಎನೇ ಇದುತ್ತೆಯು ವರನ್ನು) ಊರ ಸುತ್ತಲೂ ಅಡ್ಡಾಡಿಸಿಕೊಂಡು ಬರಬೇಕಾಗುತ್ತದೆ. ಮತ್ತು ತಿರುಗಿ ಬಂದ ಮೇಲೆ ವರ್ಗದಲ್ಲಿ ಆಯಾ ಸಂಗತಿಗಳ ಕಾರಣಗಳನ್ನು ತಿಳಿಸುವದಕ್ಕೋಸ್ಕರ ಸಮುವಾದ ಶಾಸ್ತ್ರೀಯ ಪ್ರಯೋಗಗಳನ್ನು ಮಾಡಿ ತೋರಿಸಬೇಕು. ಮತ್ತು ಅವರು ನೋಡಿದ ಭೂಸ್ವರೂಪದ ಜ್ಞಾನವನ್ನು ಸ್ಥಿರಗೊಳಿಸುವದಕ್ಕೋಸ್ಕರ ಮಾಡೆಲ (ಮಣ್ಣಿನ ಪ್ರತಿಮೆ) ಗಳನ್ನು ಮಾಡಿಸಬೇಕು ಹಾಗು ನಕಾಶವನ್ನು ತೆಗಿಸಬೇಕು. ಆದರೆ ನಕಾಶ ತೆಗೆಯುವಿಕ್ಕೆ ಬೇಕಾಗುವ ಅಂತರ ಪ್ರಮಾಣ, ರೇಖೆ ಮುಂತಾದವುಗಳ ಸಂಬಂಧವಾಗಿ ಪಾಠಗಳನ್ನು ಅದಕ್ಕೂ ಮೊದಲೇ ಹೇಳಿರಬೇಕು. ನಂತರ ವಿದ್ಯಾರ್ಥಿಗಳು ಊರ ಸುತ್ತಲೂ ನೋಡಿದ ಹೊಲ ಮುಂತಾದಕ್ಕೂ ಊರೊಳಗಿನ ಜನರ ಉದ್ಯೋಗ ಧಂದೆಗಳಿಗೂ ಇದ್ದ ಸಂಬಂಧವನ್ನು ಅವರಿಂದ ತಕ್ಕ ಪ್ರಶ್ನೆ ಮಾಡಿ ಹೊರಡಿಸಬೇಕು. ಇಷ್ಟಾದ ಮೇಲೆ ಹುಡುಗರು ತಿರುಗಾಡಿ ನಿರೀಕ್ಷಣ ಮಾಡಲಿಕ್ಕೆ ಅಸಾಧ್ಯವಾದ ತಮ್ಮೂರ ಸುತ್ತಲಿನ ದೊಡ್ಡ ಪ್ರದೇಶವನ್ನು ಕುರಿತು ವಿಚಾರ ಮಾಡಲಿಕ್ಕೆ ಹಚ್ಚಬೇಕಾಗಿರುವದು. ಮತ್ತು ಅವರು ನೋಡದಂಥ ಭೂಮಿಯ ಮೇಲೆ ಇರುವ ನದಿ, ಪರ್ವತ, ಸರೋವರ, ಸಮುದ್ರ, ಮುಂತಾದವುಗಳ ಬಗ್ಗೆ ಜ್ಞಾನವನ್ನು ಮಾಡಿಕೊಡಬೇಕಾಗಿರುವದು. ಈ ಜ್ಞಾನವನ್ನು ಮಾಡಿಕೊಡಲಿಕ್ಕೆ ಕಲ್ಪನಾಶಕ್ತಿಯು ಸಹಾಯವು ಅವಶ್ಯವಾಗಿ ಬೇಕು. ಇದನ್ನು ಪ್ರತ್ಯಕ್ಷ ತೋರಿಸುವದಕ್ಕೆ ಸಾಧ್ಯವಿದ್ದರೆ ವಿದ್ಯಾರ್ಥಿಗಳು ಮೊದಲಿನ ಮೆಟ್ಟಿನಲ್ಲಿ ನೋಡಿದ ಸಂಗತಿಗಳ ಜ್ಞಾನವು ಎಷ್ಟು ಯಥಾರ್ಥವಾದದ್ದೂ, ನಿಚ್ಚಳವಾದದ್ದೂ, ಇರುವದೋ ಅದೇ ಮಾನದಿಂದ ಅವರ ಕಲ್ಪನೆಯಿಂದ ತಿಳಿಕೊಳ್ಳುವ ಮುಂದಿನವುಗಳ ಜ್ಞಾನವು ಯಥಾರ್ಥವಾದದ್ದೂ, ನಿಚ್ಚಳವಾದದ್ದೂ ಆಗುವದು. ಆದದರಿಂದ ಶಿಕ್ಷಕರು ವಿದ್ಯಾರ್ಥಿಗಳ ಚಿಕ್ಕ ಪ್ರಯಾಣಗಳ ವಿಷಯವಾಗಿ ಅನಾ

ದರವನ್ನು ತೋರಿಸದೆ, ಆವುಗಳನ್ನು ಆಸ್ಥೆಯಿಂದ ಸಾಗಿಸ ಬೇಕು.

(ಸಶೇಷ.)

CORRESPONDENCE.

ಪತ್ರವ್ಯವಹಾರ.

ಗುರುವರ್ಯರಾವ ಸಾ. ಸಂಪಾದಕ ಕರ್ನಾಟ ಶಾಲಾ ಪತ್ರಿಕ ಧಾರವಾಡ ಇವರ ಸಂನಿಧಿಗೆ —

ಶಿರಸಾ. ನ. ವಿ.

ಕೆಳಗೆ ಬರೆದ ನಾಲ್ಕು ಸಾಲುಗಳಿಗೆ ತಮ್ಮ ಸರ್ವಪಾನ್ಯ ಪತ್ರಿಕದಲ್ಲಿ ಇಂಬೀವಿರೆಂದು ತುಂಬಾ ನಂಬಿದ್ದೇವೆ ಕಳೆದ ತಿಂಗಳಲ್ಲಿ ನೆರದ ಶಿಕ್ಷಕ ಸಂಮೇಲನದಲ್ಲಿ ಕಾಲೇಜದ ಕನ್ನಡ ಗುರುಗಳಾದ ವೆ. ಕಟ್ಟಿ ಮೂರ್ತ್ಯಾಚಾರ್ಯರವರು. ತಮ್ಮ ಭಾಷಣದಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಕವಿತಾ ವಿಷಯವನ್ನು ಕಲಿಸುವ ಪದ್ಧತಿಯು ಬೇರೆ ಬೇರೆ ಶಾಲೆಗಳಲ್ಲಿ ಬೇರೆ ಬೇರೆ ಬಗೆಯಾಗಿರುತ್ತದೆಂತಲೂ ಆ ಪದ್ಧತಿಗಳಲ್ಲಿ ಹಲಕೆಲವು ದೋಷಗಳಿರುತ ನೆಂತಲೂ ಹೇಳಿ ಕರ್ನಾಟಕದಲ್ಲಿ ಈ ವಿಷಯವನ್ನು ಕಲಿಸುವ ಪದ್ಧತಿಯು ಎಲ್ಲೆಡೆಯಲ್ಲಿ ಬಹುತರವಾಗಿ ಒಂದೇ ಬಗೆಯಾಗಿರುವದು ಶಿಕ್ಷಣದ ಪದ್ಧತಿಗೆ ಅವಶ್ಯವೆಂದು ಊಹಿಸಿ ಆ ಪದ್ಧತಿಯು ವಿಷಯವಾಗಿ ಕೆಲವು ಸೂಚನೆಗಳನ್ನು ಸಂಮೇಲನದ ಮುಂದಿಟ್ಟರು. ಅದು ಕೇವಲ ನಿರ್ದೋಷ ಪದ್ಧತಿಯೆಂದು ಅವರ ಅಭಿಪ್ರಾಯವಿರದಿದ್ದರೂ ಆ ಪದ್ಧತಿಯಿಂದ ಕಲಿಸಿದರೆ ಮೇಲ್ತರದ ತರಗತಿಯವರಿಗೆ ಈ ವಿಷಯದಲ್ಲಿ ಬಹುಳಾಂಶದಿಂದ ಬುದ್ಧಿಸಂಸ್ಕಾರವಾಗದಿರದೆಂದು ತೋರುತ್ತದೆ. ಬೃಹಸ್ಪತಿಯಂತಹ ಅವರ ಭಾಷಣವನ್ನು ಯಥಾತ್ಮಕವಾಗಿ ಅಕ್ಷರಶಃ ವಾಚಕರ ಮುಂದಿಡುವದು. ನನ್ನಿಂದಾಗಲಿಲ್ಲದ್ದರೂ ಅದರ ಸಾರವನ್ನಾದರೂ ತಮ್ಮ ಎದುರಿಗಿ

ಡುವದು ಸ್ತುತ್ಯವೆಂದು ತೋರಿ ಅದರಂತೆ ಮಾಡಿದ್ದೇನೆ.

" ಶಾಸ್ತ್ರವೆಂದರೆ ಅನುಭವ ಸಂಗತಿಗಳ ಭಾಂಡಾರವು " ಎಂದು ಮು. ರಾ. ರಾ ಹುನಗುಂದ ಬಿ ಎ. ಇವರು ಹೇಳಿದ ಮಾತು ಈ ಭಾಷಾಶಾಸ್ತ್ರಕ್ಕೂ ಹತ್ತುವದು ಎಲ್ಲ ಶಾಸ್ತ್ರಗಳ ಅಭ್ಯಾಸಕ್ಕಿಂತ ಈ ಶಾಸ್ತ್ರದ ಅಧ್ಯಯನವು ಮೊದಲು ಮಾಡತಕ್ಕದ್ದಾಗಿದೆ. ಸಮಸ್ತ ಶಾಸ್ತ್ರಗಳಿಗೆ ಆಧಾರಭೂತವಾದ ಭಾಷಾಶಾಸ್ತ್ರಕ್ಕೆ ಸ್ವಲ್ಪ ಗಮನ ಕೊಡುವದು ಅತ್ಯವಶ್ಯವಾದ ಸಂಗತಿಗಳಲ್ಲೊಂದಾಗಿದೆ ಇನ್ನು ಕಾವ್ಯವೆಂದರೇನು? ಅದರಲ್ಲೆಷ್ಟು ಭಾಗಗಳು? ಕಾವ್ಯಪ್ರಯೋಜನವೇನು? ಮುಂತಾದವುಗಳ ಬಗ್ಗೆ ಸ್ವಲ್ಪ ವಿವೇಚಿಸಿ ಮುಂದೆ ಸಾಗುವಾ.

" ಇರೆ ಶಬ್ದಾರ್ಥಂಗಳ್‌ತೆ । ತ್ವರೆತೆ ಎನದುಕಾವ್ಯಂ ॥ ನಾ. ಕಾ. ಸೂ. ೯೭ ॥ ಎಂದು ನಾಗವರ್ಮನು ಕಾವ್ಯವೆಂಬುದರ ವ್ಯಾಖ್ಯೆಯನ್ನು ಹೇಳಿರುವದರಿಂದ ಚಮತ್ಕಾರವಾದ ಶಬ್ದಾರ್ಥಗಳುಳ್ಳದ್ದೇ ಕಾವ್ಯವೆಂದ ಹಾಗಾಯಿತು. ಸಂಸ್ಕೃತ ಶಾಸ್ತ್ರಾಭಿಜ್ಞರಾದರೂ ಹೀಗೆಯೇ ಹೇಳಿರುವರು. ಕಾವ್ಯದಲ್ಲಿ ಗದ್ಯಾತ್ಮಕ, ಪದ್ಯಾತ್ಮಕ ಹಾಗು ಮಿಶ್ರ (ಚಂಪು) ಹೀಗೆ ಮೂರು ಭೇದಗಳುಂಟು. ಗದ್ಯಗ್ರಂಥಗಳನ್ನು ಓದಿಕೊಳ್ಳುವದು ಅಷ್ಟು ಕಠಿಣವಲ್ಲ. ಆದರೆ ಪದ್ಯಾತ್ಮಕ ಗ್ರಂಥಗಳನ್ನು ಓದಿಕೊಳ್ಳುವದು ತುಸು ಕ್ಲಮಸಾಧ್ಯವೇ ಸರಿ. ಪದ್ಯದಲ್ಲಿ ಬಹಳ ವಿಷಯವು ಸ್ವಲ್ಪ ಮಾತಿನಲ್ಲಿ ವ್ಯವಸ್ಥಿತವಾಗಿ ಇಡಲ್ಪಟ್ಟಿರುವದರಿಂದ ಅದನ್ನು ಪಾಠ ಮಾಡಿ ಸ್ಮರಣವಲ್ಲಿರಿಸಲಿಕ್ಕೆ ಸುಲಭವಾಗುವದು. ಹೀಗೆಂತಲೇ ನಮ್ಮ ಪೂರ್ವಜರು ರಾಮಾಯಣ ಭಾರತಾದಿ ಎಷ್ಟೋ ಗ್ರಂಥಗಳನ್ನು ಛಂದೋಬದ್ಧವಾಗಿಯೇ ರಚಿಸಿದರು. ಪದ್ಯಗಳಲ್ಲಿ ವಚನಕಾವ್ಯದಂತೆ ಅಖ್ಯೇಯ ಅಖ್ಯಾತ ಮುಂತಾದವುಗಳು ಕ್ರಮದಿಂದ ಇರದೆ ತಮ್ಮ ಛಂದಶ್ಶಾಸ್ತ್ರದಂತೆ ಹಿಂದು ಮುಂದಾಗಿ ಇಡಲ್ಪಟ್ಟಿರುವದರಿಂದಲೂ ಸಂಧಿ ಕಾರ್ಯ— ಸಮಾಸ ಕಾರ್ಯಗಳನ್ನು ಹೆಚ್ಚಾಗಿ ಮಾಡಿ

ಕವಿಗಳಿಂದಲೂ ಕವಿತಾ ಗ್ರಂಥಗಳನ್ನು ತಿಳಿದುಕೊಳ್ಳುವ ದು ಕ್ಲಿಷ್ಟವಾಗುತ್ತದೆ. ಕವಿತಾ ಕರ್ತೃಗಳ ಅಭಿಪ್ರಾಯವ ನ್ನು (ವಾಕ್ಯಾರ್ಥವನ್ನು) ವ್ಯಕ್ತಪಡಿಸುವದೇ ಕವಿತಾ ಪಾಠ ದ ಉದ್ದೇಶವಾಗಿದೆ. ವಾಕ್ಯಾರ್ಥ ಮಾಡಲು ಮೊದಲು ಪ ದಜ್ಞಾನವು ಬೇಕು. ಪದಜ್ಞಾನವಿಲ್ಲದೆ ಪದಗಳ ಪರಸ್ಪರ ಸಂಬಂಧವೂ ಅರ್ಥವೂ ತಿಳಿಯಲಾರದು. ಸಂಬಂಧ ತಿಳಿ ಯದೆ ಪದ್ಯಸ್ವಾರಸ್ಯವು ತಿಳಿಯದು ಸ್ವಾರಸ್ಯತಿಳಿಯದೆ ಓದುವದು— ಗಿಳಿಯೋದು' ಎನಿಸುವದು. ಅದರಿಂದ ಬಾ ಲಕರಿಗೆ ಕವಿತಾಪಾಠವನ್ನು ಆರಂಭದಿಂದಲೇ ಚೆನ್ನಾಗಿ ಕ ಲಿಸುವ ರೂಢಿಯನ್ನಿಡುವದು ತಕ್ಕದ್ದಾಗಿದೆ.

ಪದ್ಯಗಳನ್ನು ಹೇಗೆ ಕಲಿಸಬೇಕು.

ಕವಿತಾ ಪಾಠ ಹೇಳುವಾಗ ಮುಖ್ಯವಾಗಿ ಆರು ಭಾಗಗ ಳನ್ನು ಮಾಡಬಹುದು. ೧. ಪದಚ್ಛೇದ, ೨. ಪದಾರ್ಥೋಕ್ತಿ, ೩. ವಿಗ್ರಹ, ೪. ವಾಕ್ಯಯೋಜನ, ೫. ಆಕ್ಷೇಪ, ೬ ಸಮಾ ಧಾನ

ಪದ್ಯಗಳನ್ನು ಓದುವ ಕ್ರಮವು ಸರಿಯಾಗಿರುವದು ಪ ದ್ಯಾರ್ಥವನ್ನು ಹೇಳುವವರಿಗೂ ಕೇಳುವವರಿಗೂ ಅತ್ಯವ ಶ್ಯವು. ಛಾಟಿಯನ್ನು ಅನುಸರಿಸಿ ಕವಿತೆಯನ್ನು ಅನ್ನಬೇಕ ಲ್ಲದೆ ಕಂಡಕಂಡಂತೆ ಅನ್ನಕೂಡದು. ಮೊಟ್ಟ ಮೊದಲು ಶಾಲೆಗೆ ಬರುವು ಪದ್ಯಗಳ ವಾಚನ ಕ್ರಮವನ್ನು ತನ್ನ ಛಾ ತ್ರವರ್ಗಕ್ಕೆ ನಿರ್ದೋಷವಾಗಿ ಓದಿ ತೋರಿಸಬೇಕು. ಆ ದರೆ ಕೆಳಗಿನ ಮುಖ್ಯವಾದ ನಿಯಮಗಳನ್ನು ಮರಿಯಲಾ ಗದು.

(ಅ) ಅರ್ಥವಾಗುವಂತೆ ಸ್ಪಷ್ಟವಾಗಿ ಓದಬೇಕು.

(ಆ) ಆರಂಭದಿಂದ ಕೊನೆಯವರೆಗೆ ಏಕಸ್ವರವಿರಬಾ ರದು. ಛಾಟಿಗೆ ಅನುಸರಿಸಿ ಸ್ವರದಲ್ಲಿ ಹೆಚ್ಚು ಕಡಿಮೆ ಮಾ ಡಬೇಕು ಇದು ಗಾಯನ ಕಲಾಭಿಜ್ಞರ ಕೆಲಸವೆಂದು ಮೈದೆಗೆಯಬಾರದು. ಸಾಧಾರಣವಾಗಿ ಕಿವಿಗಿಂಪಾಗುವಂ ತೆ ಓದಲಿಕ್ಕಾದರೂ ಬರುವಂತೆ ಕಲಿಸಬೇಕು.

(ಇ) ಯತಿಯು ಕಡಿಗೆ ಅಪ್ಪು ಲಕ್ಷ್ಯಕೊಡದೆ ಅರ್ಥಗ್ರಹಣವು ಜೆನ್ನಾಗಿ ಅಗುವ ಹಾಗೆ ಓದಲಿಕ್ಕೆ ಬರಬೇಕು. ಯಾಕಂದರೆ ಕರ್ನಾಟಕದ ಪ್ರಸಿದ್ಧ ವ್ಯೆಯ್ಯಾಕರಣಿಯಾದ ಕೇಶಿರಾಜನು ತಾನು ರಚಿಸಿದ ಶಬ್ದಮಣಿ ದರ್ಪಣದ ಕೊನೆಯಲ್ಲಿ 'ಯತಿವಿಲಂಘನದಿಂದರಿದಲ್ತೆಕನ್ನಡಂ' ಎಂದುಹೇಳಿರುವನು. ಕರ್ನಾಟಕ ಕವಿಗಳಲ್ಲಿ ಪ್ರಾಚೀನನಾದ ಪಂಪನು ಕೂಡ ಯತಿಯ ನಿಯಮವನ್ನು ಪಾಲಿಸಿಲ್ಲ ಇದರಿಂದ ಕರ್ನಾಟಕ ಕವಿತೆಗಳಲ್ಲಿ ಯತಿಯ ನಿಯಮವನ್ನು ಪಾಲಿಸುವ ಕಾರಣವಿಲ್ಲವೆಂದು ಖಂಡಿತವಾಗಿ ಹೇಳಬಹುದು. ಸಂಸ್ಕೃತ ಅಭಿಮಾನಿಗಳಾದ ಕವಿಗಳು ಯತಿಯನ್ನು ಪಾಲಿಸಲೇ ಬೇಕೆಂದು ಹೇಳಿದರೆ ಪ್ರಾಚೀನ ಗ್ರಂಥಗಳ ಪರಿಶೀಲನದಿಂದ ಅವರ ಅಭಿಪ್ರಾಯದ ನಿರಾಕರಣವು ಆಗದಿರದು. ಆದರೂ ಸಾಧಿಸಿದರೆ ಯತಿಯ ನಿಯಮವನ್ನು ಪಾಲಿಸಬಹುದು ಒಟ್ಟಿಗೆ ಓದುವಾಗ ಅರ್ಥವಾಗುವದರ ಕಡೆಗೆ ಲಕ್ಷ್ಯಪೂರವಿಸುವಷ್ಟು ಯತಿಯ ಕಡೆಗೆ ಪೂರಯಿಸಲಾಗದು.

(ಈ) ಒತ್ತಿಯಾಗಲಿ ಸೈಲಾಗಲಿ, ಉಚ್ಚಾರ ಮಾಡಿದರೆ ಅರ್ಥದಲ್ಲಿ ವ್ಯತ್ಯಾಸವಾಗುವ ಸಂಭವವಿದ್ದಾಗ ಅರ್ಥಭೇದವು ಶ್ರೋತೃಗಳಿಗೆ ಜೇಗ ಗಹಿಕೆಯಾಗುವಂತೆ ಬೇರೆ ಬೇರೆ ರೀತಿಯಿಂದ ಓದಿ ತೋರಿಸಬೇಕು.

(ಊ) ಯಾವದೊಂದು ಆಲೋಚನೆಯು ಪೂರ್ಣವೆಂದು ಕಂಡು ಬಂದ (ಪೂರ್ಣವಾಕ್ಯವೇ ಇರಲಿ) ಪದವಿದ್ದಲ್ಲಿ ನಿಲ್ಲಬೇಕು. ಯಾಕಂದರೆ ಒಂಬೇ ಉಸುರಿಂದ ಕೊನೆಯವರೆಗೆ ಅನ್ನುವದು ಕಷ್ಟವೇ ಸರಿ. ಇತ್ಯಾದಿ ನಿಯಮಗಳಂತೆ ಓದಲಿಕ್ಕೆ ಬಂದ ಬಳಿಕ ಪ್ರಸ್ತುತ ಪದ್ಯವು ಯಾವ ಸಂಬಂಧಿಯೆದು? ಆದರಲ್ಲೇನು ಬಣ್ಣಿಸಲ್ಪಟ್ಟಿದೆ? ಇದನ್ನು ಸ್ವಲ್ಪದರಲ್ಲಿ ಹೇಳುವದು. ಬಳಿಕ ಪದಚ್ಛೇದ ಮುಂತಾದ ವುಗಳನ್ನು ಪ್ರಾರಂಭಿಸತಕ್ಕದು.

(ಸಶೇಷ.

ಶಾಲಾ ಪತ್ರಿಕೆ.

ಪದ್ಯ.

ಶ್ರೀಮದ್ವಿದ್ಯಾಗುರುವರ್ಯರುನ್ನತಿಳೆಯುಂ ಸೃಷ್ಟಿಶೋಕ್ಷರ್ಗಮಾಂ
ಬಯಸಾಶ್ಯಂ ಪ್ರತಿಪಾದನಾದಿಗೊಲವಿಂದೀಪತ್ರಮಾಂ ಪುಟ್ರಿಸಿ ।
ಸಯದಿಂದಿತ್ತೆವೊದುಪಾಸುಗುಣಂ ಕೋರಲ್ಕೆ ಕೈಕೊಂಬುದೈ।
ದಯೆಯಿಂದೋಷವತಿದ್ದ ವೇಳ್ವುದುಮಧರ್ಷಾನಾಳಿವೃದ್ಧಿಪ್ರಿಯರ್ ॥

ಪುಸ್ತಕ ೪೧] ಜೂನ ೧೯೦೫. [ಸಂಚಿಕೆ ೬.

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ತಾ: ೨೪—೩—೧೯೦೫ ನೇ ಇಸವಿ.

ಎರಡನೇ ದಿವಸ ನೇಮದಂತೆ ಪ್ರಾಕ್ಟಿಸಿಂಗಸ್ಕೂಲ ವಿದ್ಯಾರ್ಥಿಗಳು ಸುಸ್ವರದಿಂದ ಶ್ರೀಪರಮೇಶ್ವರನ ಸ್ತುತಿಯನ್ನು ಮಾಡಿದನಂತರ ಕಾಲೇಜದ ೧ನೇ ಅ ಮಾಸ್ತರರಾದ ಮಿ. ಹುನಗುಂದ ಇವರು ಶರೀರ ರಚನೆಯನ್ನು ಕುರಿತು ವಿವೇಚಿಸಿದರು ಅದರ ಸಾರಾಂಶ—

" ಮನುಷ್ಯನು ತನ್ನ ಸುತ್ತಮುತ್ತಲಿರುವ ಪದಾರ್ಥಗಳ ವಿಷಯವಾಗಿ ಜ್ಞಾನ ಮಾಡಿಕೊಳ್ಳುವದಕ್ಕಿಂತ ತನ್ನ ವಿಷಯವಾಗಿಯೇ ಅರಿತುಕೊಳ್ಳುವದು ಅದ್ಯ ಕರ್ತವ್ಯವಾಗಿರುತ್ತದೆ– ಆದರೆ ಈ ವಿಷಯದಲ್ಲಿ ಬಹು ಜನರು ದುರ್ಲಕ್ಷ ಮಾಡುವದು ಬಹಳ. ಆದರೆ ಶರೀರವೆಂದರೇನು? ಅದರ ಮುಖ್ಯಭಾಗಗಳಾವವು? ಅವುಗಳ ಕಾರ್ಯಗಳಾವವು! ಈ ಕಾರ್ಯಗಳು ಸುಸೂತ್ರವಾಗಿ ಸಾಗಬೇಕಾದರೆ ಶರೀರವು ಯಾವ ಬಗೆಯಾಗಿರಬೇಕು. ಎಂಬೀ ಮುಖ್ಯ ಸಂಗತಿಗಳನ್ನು ಅರಿತುಕೊಳ್ಳುವದು ಅತ್ಯವಶ್ಯವಿರುತ್ತದೆಂದು ನಾನು ಈ ಹೊತ್ತು ನನಗೆ ತಿಳಿದಿರುವ ಮಟ್ಟಿಗೆ ತಮ್ಮೆಲ್ಲರಿಗೆ ತಿಳಿಸಿಕೊಡಬೇಕೆಂದು ಮಾಡಿದ್ದೇನೆ–

ಯಾವತ್ತು ಜೀವಜಂತುಗಳಲ್ಲಿ ಮನುಷ್ಯನೇ ಶ್ರೀಷ್ಠನು. ಮನುಷ್ಯನು "ಜ್ಞಾನೆಕಲೆ" ಎಂಬುದೊಂದು ಬೆಲೆಯುಳ್ಳ ಆಭರಣವನ್ನು ಧರಿಸಿಕೊಂಡದ್ದರಿಂದಲೂ, ಶರೀರ ರಚನೆಯು ಪೂರ್ಣತ್ವದಿಂದಲೂ ಪ್ರಾಣಿಕೋಟಿಯಲ್ಲಿ ಪ್ರಮುಖನೆನಿಸಿಕೊಂಡಿರುತ್ತಾನೆ. ಭೂಮಿಯಲ್ಲಿ ಬೇಕಾದಂಥ ಜಂತುವನ್ನು ನೋಡಿದರೂ ಅವುಗಳ ಶರೀರಗಳು ಬಹಳ ಅಪೂರ್ಣರಚನೆಯುಳ್ಳದ್ದೆಂದು ಕಂಡು ಬರುವದು. ಈ ಲೋಕದೊಳಗಿನ ಪ್ರಾಣಿಗಳಲ್ಲಿ ಸಿಂಹವು ಅತಿ ಬಲಶಾಲಿಯಾದದ್ದಿದ್ದಾಗ್ಯೂ ಅದಕ್ಕೆ ಕೈಗಳಿಲ್ಲ. ಅದರ ತಲೆಯೊಳಗಿನ ಮಿದುಳು ಮನುಷ್ಯನ ಮಿದುಳಿನ ಪೃಸಂಗಕ್ಕೆ ಸಹ ಹತ್ತುವ ಹಾಗಿಲ್ಲ. ಇದೇ ಪ್ರಕಾರ ಇನ್ನೂ ಕೆಲವು ಪ್ರಾಣಿಗಳ ಉದಾಹರಣೆಗಳನ್ನು ಕೊಡಬಹುದು. ಈ ಪ್ರಕಾರ ಯಾವತ್ತೂ ಜೀವಜಂತುಗಳ ಶರೀರಗಳನ್ನು ಮನುಷ್ಯಶರೀರಕ್ಕೆ ಹೋಲಿಸಿ ನೋಡಿದರೆ ಒಂದಿಲ್ಲೊಂದು ನ್ಯೂನವು ಕಂಡು ಬರುವದು. ನರದೇಹದ ರಚನೆಯನ್ನು ಚೆನ್ನಾಗಿ ಅರಿತುಕೊಂಡರೆ ಬೇರೆ ಪ್ರಾಣಿಗಳ ದೇಹರಚನೆಯನ್ನು ತಿಳಿದುಕೊಳ್ಳಲು ಬಹಳ ಪ್ರಯಾಸವಾಗುವದಿಲ್ಲ. ನಾವು ಬುದ್ಧಿವಂತರೆನಿಸಿಕೊಂಡು ಆರೋಗ್ಯದಿಂದಿರಬೇಕಾದರೆ ನಮ್ಮ ಶರೀರರಚನೆಯನ್ನು ಅರಿತುಕೊಳ್ಳುವದು ಅತ್ಯವಶ್ಯವು. ಸೃಷ್ಟಿಯಲ್ಲಿ ನಮಗೆ ಕೌತುಕವನ್ನುಂಟು ಮಾಡುವ ಒಡವೆಗಳು ಹಲವುಂಟು ಅವುಗಳಲ್ಲಿ ನಮ್ಮ ಶರೀರವು ಅತ್ಯಾಶ್ಚರ್ಯಕರವಾಗಿರುತ್ತದೆ.

ಮನುಷ್ಯ ಶರೀರದಲ್ಲಿ ಮುಖ್ಯ ಭಾಗಗಳು ಮೂರುಂಟು ೧ ರುಂಡ, ೨ ಮುಂಡ, ೩ ಅವಯವಗಳು. ಇವಾರತುಗಳು ತೊಲೆ, ಕಂಭ, ಮುಂತಾದವುಗಳಂದ ಭದ್ರವಾಗಿರುವಂತೆ ಅಸ್ಥಿಪಂಜರದಿಂದ ಶರೀರವು ಭದ್ರವಾಗಿರುತ್ತದೆ. ಈ ಅಸ್ತಿ ಪಂಜರವು ಸ್ನಾಯು, ಮಾಂಸ, ಚರ್ಮಗಳಿಂದ ಲೇಪಿಸಲ್ಪಟ್ಟದ್ದರಿಂದ ಶರೀರವು ಮನೋಹರವಾಗಿಯೂ ಪುಷ್ಟವಾಗಿಯೂ ಕಾಣುವದು.

ಶರೀರದ ಮೂರು ಭಾಗಗಳಲ್ಲಿ ಶಿರಸ್ಸೇ ಶ್ರೇಷ್ಠಭಾಗವು ಎಂಟು ಎಲುವುಗಳಿಂದ ರಚಿಸಲ್ಪಟ್ಟ ಬಹು ಭದ್ರವಾದ ತಲೆ ಬುರುಡೆಯುಂಟು ಅದರ ಕೆಳಗೆ ಗಲ್ಲಗಳಲ್ಲಿ ಎರಡು ದವಡೆಗಳಲ್ಲಿ ೨, ಮೂಗಿನಲ್ಲಿ ೨, ಇನ್ನೂ ಕೆಲವು ಅಸ್ಥಿಗಳು ಕೂಡಿ ವೋರೆಯುಂಟಾಗಿದೆ. ಈ ತಲೆ ೭೪ ಉಂಗುರಾಕಾರದ ಎಲವುಗಳಿಂದಾದ ಕಶೇರುಕಾಸ್ತಂಭದ ಮೇಲ್ಭಾದಿಗೆ ಕೂಡ್ರಿಸಲ್ಪಟ್ಟಿರುತ್ತದೆ. ಈ ಭದ್ರವಾದ ತಲೆಬುರುಡೆಯೊಳಗೆ ಮಿದುಳು ಅರಸನಂತೆ ಕೂಳಿತುಕೊಂಡಿದ್ದು ಇಡಾವತ್ತು ಅವಯವಗಳ ಕಾರ್ಯಗಳನ್ನು ನಡಿಸುತ್ತದೆ. ಈ ಮಿದುಳಿಗೆ ಯಾವ ಪ್ರಕಾರದಿಂದಾದರೂ ಸ್ವಲ್ಪ ಕೇಡಾದರೆ ಮನುಷ್ಯನ ಪ್ರಾಣಾಂತಸಮಯ ಒದಗುವದು. ಅದರಿಂದ ಶಿರಃಪ್ರಧಾನವೆನಿಸುತ್ತದೆ. ಈ ಮಿದುಳು ಸಜ್ಜಿಗೆಯನ್ನು ಕುಟ್ಟಿ ಕಾವಿಗೆಗಾಗಿ ತಯಾರಿಸಿದ ಕಣಕದಂತೆ (ಉರುಳಿ) ಇರುತ್ತದೆ. ಯಾವತ್ತು ಜ್ಞಾನ ತಂತುಗಳು ಮಿದುಳಿನಿಂದ ಹೊರಟು ಕಶೇರುಕಾ ರಜ್ಜುವಿನೊಳಗೆ ಸೇರಿರುತ್ತವೆ. ಈ ಕಶೇರುಕಾಸ್ತಂಭವು ಶರೀರಕ್ಕೆ ಮುಖ್ಯಾಧಾರವಾಗಿಯೂ ಮಜ್ಜಾತಂತುವಿನ ರಕ್ಷಕವಾಗಿಯೂ ಇರುತ್ತದೆ. ಕಶೇರುಕಾಸ್ತಂಭದ ೭೪ ಮಣಿಗಳಲ್ಲಿ ಏಳು ಮಣಿಗಳು ಕುತ್ತಿಗೆಯೊಳಗೆ ಐದು ಮುಖದೊಳಗೆ ಹನ್ನೆರಡು ಬೆನ್ನೊಳಗೆ ಇರುತ್ತವೆ ಈ ಬೆನ್ನ ಹುರಿಯ ಎರಡನೇ ಮಣಿಯು ತಿರುಗಣಿಯಾಕಾರವಾಗಿ ಕಿನೇದರಲ್ಲಿ ಸೇರಿಕೊಂಡಿರುವದರಿಂದ ತಲೆಯು ಹಿಂದೆ, ಮುಂದೆ, ಕೆಳಗೆ, ಮೇಲೆ ತಿರುಗಿಸಲಿಕ್ಕೆ ಬರುತ್ತದೆ.

ಎದೆಯ ಹುರಿ ಅಥವಾ ಖಡ್ಗಾಕೃತಿ ಎಲುವು ಬೇರೆಯುಂಟು. ಅದು ಕುತ್ತಿಗೆಯಿಂದ ಎದೆಗುಂಡಿಗೆಯ ವರೆಗೆ ಅದೆ. ಬೆನ್ನೊಳಗಿರುವ ಹನ್ನೆರಡು ಮಣಿಗಳಿಗೆ ಸಂಬಂಧವಾಗಿ ಒಂದೊಂದು ಬದಿಯಿಂದ ಹೊರಟು ತೆಳ್ಳಗಾಗಿ ಮಣಿಯುವ ಗುಣವುಳ್ಳ ಪಕ್ಕಲವುಗಳು ಮುಂಭಾಗದಲ್ಲಿರುವ ಎದೆಯ ಹುರಿಗೆ ಬಂದು ಕೂಡಿರುತ್ತವೆ. ೭೪ ಪಕ್ಕೆಲವುಗಳಿಂದ ವಕ್ಷಸ್ಥಲವೆಂಬದೊಂದು ಭದ್ರವಾದ ಪೆಟ್ಟಿಗೆಯಾಗಿರುತ್ತದೆ.

ಈ ವಕ್ಷಸ್ಥಲದೊಳಗೆ ಫುಪ್ಫುಸಗಳೂ ರಕ್ತಾಶಯವೂ ಇರುತ್ತದೆ. ಇವುಗಳನ್ನು ಕುರಿತು ಮಿ ಅವಿೂನಭಾವಿ ಇವರು ಹೇಳುವವರಿರುವದರಿಂದ ವಿಶೇಷ ವಿವೇಚಿಸುವ ಕಾರಣವಿಲ್ಲ. ಸ್ನಾಯುಗಳಿಂದ ಶರೀರಕ್ಕೆ ಪುಷ್ಟಿಯೂ ಸೌಂದರ್ಯವೂ ಉಂಟಾಗಿವೆ. ಚಲನವಲನಾದಿ ಕ್ರಿಯೆಗಳಿಗೆ ೪೪೦ ಸ್ನಾಯುಗಳಿವೆ.

ಕುತ್ತಿಗೆಯಿಂದ ಎದೆಗುಂಡಿಗೇ ವರೆಗೆ ವಕ್ಷಸ್ಥಳ, ಅದರ ಕೆಳಭಾಗಕ್ಕೆ ಉದರ ಪಟಲವೆನ್ನುವರು. ಗಂಟಲದ ಕೆಳಗೆ ಅರ್ಧವರ್ತುಲಾಕಾರವಾದ ಎಲವುಗಳಿವೆ. ಮೂಗಿಗೂ ಬಾಯಿಗೂ ಗಂಟಲಕ್ಕೂ ಸಂಬಂಧವುಂಟು. ಗಂಟಲದಿಂದ ಶ್ವಾಸ ನಳಿಕೆಯೂ ಅನ್ನದ ಕೊಳವೆಯೂ ಜೋಡಿಯಿಂದ ಹೊರಟು ಶ್ವಾಸಕೊಳವೆಯು ವಕ್ಷಸ್ಥಲದ ವರೆಗೆ ಬಂದು ಎರಡು ದ್ವಾರಗಳಿಂದ ಎಡಬಲದ ಫುಪ್ಫುಸಗಳಿಗೆ ಹೋಗಿ ಮುಟ್ಟುವೆ. ಅನ್ನದ ಕೊಳವೆಯು ಅನ್ನಾಶಯಕ್ಕೆ ಹೋಗಿ ಮುಟ್ಟುವದೆ. ಬಲಭಾಗದಲ್ಲಿ ಪಿತ್ತಾಶಯ, ಪಿತ್ತಕೋಶ ಕರಳುಗಳು, ಅನ್ನಾಶಯದ ಕೆಳಭಾಗಕ್ಕೆ ಬೆನ್ನೆಲವುಗಳಿಗೆ ಹತ್ತಿ, ಎಡಬಲಭಾಗಗಳಿಗೆ ಎರಡು ಮೂತ್ರಾಶಯಗಳೂ ಇವುಗಳ ಕೆಳಗೆ ಮೂತ್ರ ಕೋಶವೂ ಉಂಟು. ಅನ್ನಾಶಯದ ಕೆಳಗೆ ಶ್ವೇತರಸಾಶಯ ಉಂಟು. ವಕ್ಷಸ್ಥಲ ಉದರಗಳನ್ನು ಬೇರೆ ಬೇರೆ ಮಾಡುವಂಥಾದೊಂದು ಸ್ನಾಯುಮಯವಾದ ದೊಡ್ಡ ಪಟಲವಿರುತ್ತದೆ. ಅದಕ್ಕೆ ಹೃತ್ಪಟಲವೆನ್ನುವರು. ಈ ಹೃತ್ಪಟಲದ ಕೆಳಗೇ ಅನ್ನಾಶಯವಿರುತ್ತದೆ. ಅದರಲ್ಲಿ ಲಾಲಾಕೋಶಗಳೆಂಬ ಪಾಚಕರಸದ ಜೇಲಗಳುಂಟು. ಅನ್ನಾಶಯದ ಆಕಾರವು ಎಕ್ಕೇ ಕಾಯಿಯಂತೆ ಇದ್ದು ತುದಿ ತುಂಬುಗಳಲ್ಲಿ ದ್ವಾರಗಳಿವೆ. ಮೇಲಿನ ದ್ವಾರಕ್ಕೆ ಅನ್ನದ ಕೊಳವೆ ಕೂಡುತ್ತದೆ. ಎರಡನೇದಕ್ಕೆ ಕರುಳಿನ ಬಾಯಿ ಹೊಂದಿರುತ್ತದೆ.

ಕರುಳು ಇದು ಸ್ನಾಯುಮಯವಾದ ಉದ್ದ ಕೊಳವೆಯುಂಟು. ಇದರ ಒಳಮೈಯಲ್ಲಿ ಮೃದುವಾದ ತ್ವಚೆಯು

ಸರ್ವಕಾಲವೂ ಹಸಿಯಾಗಿರುತ್ತದೆ. ಇದರೊಳಗೂ ಅಸಂಖ್ಯ ಲಾಲಾಕೋಶಗಳುಂಟು. ಈ ಕೊಳಿವೆಯು ಉದ್ದಳತೆಯು ಪ್ರಾಯದವರಲ್ಲಿ ಅವರ ನಿಲುವಿಕೆಯು ಹತ್ತು ಪಾಲು ಇರುತ್ತದೆ. ಆದರೆ ಮಾಂಸಭಕ್ಷಕ ಪ್ರಾಣಿಗಳ ಕರುಳು ಇದಕ್ಕೂ ಸಣ್ಣದು. ಅಂದರೆ ಅವುಗಳ ಉದ್ದಳತೆಯು ಮೂರು ಪಾಲು ಆಗುವದು. ಕೇವಲ ಉದ್ಭಿಜ್ಜಾಹಾರಿಯಾದ ಕುರಿಯ ಕರುಳು ಅದರ ನಿಲುವಿಕೆಯ ೪೦ ಪಾಲಷ್ಟಿರುತ್ತದೆ. ಆಮಾಶಯದಿಂದ ಅಧೋದ್ವಾರದ ವರೆಗೆ ಕರುಳು ವಿಧವಿಧದ ಸುರುಳಿಗಳಿಂದ ಉದರವನ್ನೆಲ್ಲ ಆಕ್ರಮಿಸಿಕೊಂಡಿರುತ್ತದೆ. ಹೊಕ್ಕಳಿನ ಸುತ್ತಮುತ್ತಲಿರುವ ಮೃದುಭಾಗದಲ್ಲೆಲ್ಲ ಕರುಳು ವ್ಯಾಪಿಸಿಕೊಂಡಿರುತ್ತದೆ. ಈ ಕರುಳಿನಲ್ಲಿ ಎರಡು ಭಾಗಗಳುಂಟು. ಆಮಾಶಯದಿಂದ ಮುಕ್ಕಾಲು ಗಿಂತ ಹೆಚ್ಚು ಭಾಗವು ಸಣ್ಣಾಗಿರುತ್ತದೆ. ಇದಕ್ಕೆ ಸಣ್ಣ ಕರುಳೆಂದೆನ್ನುವರು. ಮುಂದಿನ ಭಾಗವು ಹೆಚ್ಚು ಗಡುತರವಾಗಿರುತ್ತದೆ. ಅದಕ್ಕೆ ದೊಡ್ಡ ಕರುಳೆಂದೆನ್ನುವರು. ಅನ್ನಾಶಯದಲ್ಲಿ ಹೋಗಿ ಬೀಳುವ ಅನ್ನವು ಪಚನವಾಗಿ ಸಣ್ಣನೊಡ್ಡ ಕರುಳುಗಳೊಳಗಿಂದ ಹಾದುಹೋಗುವದು.

ರಕ್ತಾಶಯ—ರಕ್ತಾಶಯದ ಕಾರ್ಯವೇನೆಂದರೆ ಮಲಿನ ರಕ್ತವನ್ನು ಸಂಗ್ರಹಿಸಿ ಪುಪ್ಪುಸಕ್ಕೆ ಕಳುಹುತ್ತದೆ. ಅಲ್ಲಿ ಬರುತ್ತಿದ್ದ ಆಕ್ಸಿಜನದ ಸಂಯೋಗದಿಂದ ಶುದ್ಧವಾಗಿ ಪುನಃ ರಕ್ತಾಶಯಕ್ಕೆ ಬಂದು ರಕ್ತವಾಹಿನಿಗಳ ಮಾರ್ಗವಾಗಿ ಯಾವತ್ತು ಅವಯವಗಳಿಗೆ ಮುಟ್ಟಿಸುತ್ತದೆ. ಈ ರಕ್ತಾಶಯವೆಂಬ ಅವಯವವು ಬಹು ಮಹತ್ವದ್ದು. ಈ ಪ್ರಕಾರ ಸೋಜಿಗತರವಾದ ಅವಯವಗಳನ್ನು ಕೊಟ್ಟು ಸಲಹುವ ಪರಮೇಶನನ್ನು ಸ್ಮರಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಈ ಮೇಲೆ ಉಪ್ಪಿನಬೆಟಗೇರಿಯ ಪಾಸ್ತರರಾದ ಮಿ ದೇಕಪ್ಪಂಡೆ ಇವರು ಇತಿಹಾಸವನ್ನು ಕೀರ್ತನರೂಪವಾಗಿ ಕಲಿಸಿದರೆ ಹುಡುಗರ ಸ್ಮರಣದಲ್ಲಿ ಚಿರಸ್ಥಾಯಿಯಾಗಿ ಉಳಿಯುವ

ವೆಂದು ಶ್ರೀಶಿವಭಕ್ತಪತಿಯೆ ಮಗನಾದ ಸಂಭಾಜಿಯ ಚರಿತ್ರದ ಪ್ರಯೋಗವನ್ನು ತಮ್ಮ ವಿದ್ಯಾರ್ಥಿಗಳಿಂದ ಕೀರ್ತನರೂಪದಿಂದ ಮಾಡಿ ತೋರಿಸಿದರು. ಅಷ್ಟಾದ ಮೇಲೆ ವಿಶ್ರಾಂತಿಗಾಗಿ ಸಭಾ ವಿಸರ್ಜನೆಯಾಯಿತು.

ಈಗ ಮೆ॥ ಎ॥ ಇ॥ ಸಾ॥ ಬಿ॥ ರವರು ಬಂದು ನೆರೆದ ಸಭಿಕರನ್ನು ಕಂಡು ಸಂತುಷ್ಟರಾಗಿ ಈಗ ೪-೫ ವರ್ಷಗಳಿಂದ ಸಮ್ಮೇಲನವನ್ನು ನೆರೆಸುತ್ತಿದ್ದರಿಂದ ಇಲ್ಲಿಗೆ ಬಂದಂಥ ಜೂನಿಯರ್ ಮಾಸ್ತರ ಜನರು ಇಲ್ಲಿ ಕಲಿಸುವದನ್ನು ನೋಡಿ ಹೋಗಿ ಅದರ ಉಪಯೋಗವನ್ನು ಸರಿಯಾಗಿ ಮಾಡಿಕೊಂಡಿರುತ್ತಾರೆಂಬದು ನಮ್ಮ ಅನುಭವಕ್ಕೆ ಬಂದಿರುತ್ತದೆ ವಾಸ್ತವಿಕವೆಂದರೆ ವರ್ಷಾನುವರ್ಷ ದುಡಿದು ಈಗ ದೊರದಿರುವ ವಿಶ್ರಾಂತಿಯ ದಿವಸಗಳಲ್ಲಿ ತಮ್ಮ ಹೆಂಡರು ಮಕ್ಕಳು, ಅಪ್ತ ಇಷ್ಟರು ಮುಂತಾದವರೊಡನೆ ಸುಖದಿಂದ ಕಾಲಕಳೆಯಬಹುದೆಂದು ಬಯಸಬಹುದು. ಅಂಥಾದ್ದು ತಾವು ಅತಿ ಮಹತ್ವದ ಲೋಕಸುಧಾರಣೆಯ ಕಾರ್ಯವನ್ನು ಕೈಕೊಂಡದ್ದರಿಂದ ಇದೇ ಹೆಚ್ಚಿನ ಕರ್ತವ್ಯವೆಂದು ತಿಳಿದು ಇಲ್ಲಿಗೆ ಬರುತ್ತೀರಿ ಇದನ್ನು ಕಂಡು ನಮಗೆ ಪರಮಾನಂದವಾಗಿದೆ. ಇಲ್ಲಿ ಕಲಿಸಲ್ಪಡುವ ವಿಷಯ. ಪದ್ಧತಿಗಳನ್ನು ನೋಡಿಕೊಂಡು ಹೋಗಿ ನಿಮ್ಮ ನಿಮ್ಮ ಶಾಲೆಗಳಲ್ಲಿ ಹೆಚ್ಚಿನ ಸುಧಾರಣೆಗಳನ್ನು ಮಾಡಬಹುದೆಂಬ ಆಶಯದ ಭಾಷಣವನ್ನು ಮಾಡಿ ಹೋದರು.

ಪ್ರಾಕ್ಟಿಸಿಂಗಸ್ಕೂಲ ಗನೇ ಅ. ಮಾಸ್ತರರಾಗ ರಾ. ರಾ. ಅವಿನಭಾವಿಯವರ ಭಾಷಣಸ್ಯ:—ಮನುಷ್ಯಾವಯವಗಳಲ್ಲಿ ಮಿದುಳು, ಪುಪ್ಪುಸ, ರಕ್ತಾಶಯಗಳೆಂಬ ಮೂರು ಅವಯವಗಳು ಅತಿಮಹತ್ವದವೆಂದು ಗುರುವರ್ಯರವರು ಹೇಳಿದರಷ್ಟೇ ಅವುಗಳಲ್ಲಿ ನಮ್ಮ ಶರೀರವನ್ನು ಪೋಷಿಸಲವಶ್ಯವಾದ ರಕ್ತಾಶಯವು ವಕ್ಷಸ್ಥಲವೆಂಬ ಭದ್ರವಾದ ಪೆಟ್ಟಿಗೆಯಲ್ಲಿ ಎಡಭಾಗದಲ್ಲಿ ಇರುತ್ತದೆ. ಇದರ ಆಕಾರವು ನೇರಾಫಲವನ್ನು ಹೋಲುವದು ಆ ದಪ್ಪಾದ ಸ್ನಾಯುವು ಹೃತ್ಕೋಶವು ಪ್ರತಿಯೊಬ್ಬನ ಬಲಗೈ ಮುಷ್ಟಿಯಷ್ಟು ಇ

ರುತ್ತದೆ ಇದರೊಳಗಿರುವ ಹೊಳ್ಳು ಪ್ರದೇಶದ ಮಧ್ಯಭಾಗ
ದಲ್ಲಿ ಬಂದು ದಪ್ಪಾದ ಲಂಬ ಪಟಲವಿರುವದರಿಂದ ಎರಡು
ಭಾಗಗಳಾಗಿವೆ. ಎರಡು ಉದ್ದ ಹೋಳುಗಳನ್ನು ಬಂದ
ಕ್ಕೊಂದು ಹೊಂದಿಸಿದಂತ ರಕ್ತಾಶಯದ ಎಡಬಲ ಭಾಗಗ
ಳು ಬಂದಕ್ಕೊಂದು ಹೊಂದಿರುತ್ತವೆ. ಈ ರಕ್ತಾಶಯದೊ
ಳಗಿಂದ ರಕ್ತವಾಹಿನಿಗಳೂ ಅವುಗಳಿಗೆ ಹೊಂದಿ ಜ್ಞಾನವಾ
ಹಿನಿಗಳೂ ಹೋಗಿವೆ. ಲಂಬಪಟಲದಿಂದಾದ ಎರಡು ಭಾ
ಗಗಳಲ್ಲಿ ಬಂದೊಂದು ಭಾಗದೊಳಗೆ ಮಧ್ಯಭಾಗಕ್ಕಿಂತ
ಸ್ವಲ್ಪ ಮೇಲ್ಗಡೆಯಲ್ಲಿ ಪುತ್ತೊಂದು ಅಡ್ಡ ಪಟಲವಿರುತ್ತದೆ.
ಇದರಿಂದ ರಕ್ತಾಶಯದಲ್ಲಿ ನಾಲ್ಕು ಭಾಗಗಳಾಗಿವೆ. ಬಲಗ
ಡೆಯ ಮೇಲಿನ ಭಾಗಕ್ಕೆ ದಕ್ಷಿಣ ಸಂಚಯವೆಂತಲೂ, ಕೆ
ಳಗಿನ ಭಾಗಕ್ಕೆ ದಕ್ಷಿಣವೆಂತಲೂ, ಎಡಗಡೆಯ ಮೇಲಿನ
ಭಾಗಕ್ಕೆ ವಾಮ ಸಂಚಯವೆಂತಲೂ, ಕೆಳಗಿನ ಭಾಗಕ್ಕೆ
ವಾಮ ಕೋಶವೆಂತಲೂ ಅನ್ನುವರು. ಶರೀರದ ಮೇಲ್ಭಾಗ
ದಿಂದೊಂದು, ಕೆಳಭಾಗದಿಂದೊಂದು ಮಲಿನ ರಕ್ತಗಳ ವಾ
ಹಿನಿಗಳು ಬಂದು ದಕ್ಷಿಣ ಸಂಚಯಕ್ಕೆ ಕೂಡಿರುತ್ತವೆ.
ಶುದ್ಧ ರಕ್ತವಾಹಿನಿಗಳು ರಕ್ತಾಶಯದ ಹತ್ತರ ಬಹಳ ಗ
ಡುತ್ತವಾಗಿದ್ದು ಅಲ್ಲಲ್ಲಿಗೆ ಶಾಖೆಗಳಾಗುತ್ತ ಹೋಗಿ ಕಡೆಗೆ
ಕೂದಲಿಗಿಂತ ಸೂಕ್ಷ್ಮವಾಹಿನಿಗಳಾಗುತ್ತವೆ. ಅವುಗಳಿಗೆ
ಕೇಶರೂಪವಾಹಿನಿಗಳೆಂಬ ಹೆಸರು. ಈ ಪ್ರಕಾರ ಸೂ
ಕ್ಷ್ಮ ಕೊಳವೆಗಳು ಶರೀರದ ಎಲ್ಲ ಭಾಗಗಳಲ್ಲಿ ಪಸರಿಸಿರು
ವದರಿಂದ ಎಲ್ಲಿ ಚುಚ್ಚಿದರೂ ಕೊಳವೆಗಳೊಡೆದು ರಕ್ತ
ಸೋರುವದು. ರುಂಡದೊಳಗಿಂದ ಬರುವ ಮಲಿನ ರಕ್ತ
ದ ಪ್ರವಾಹವು ಕೆಳಗಡೆಗೆ, ಬಾಕಿ ಥಂಡದೊಳಗಿಂದ ಬರು
ವ ಮಲಿನ ರಕ್ತದ ಪ್ರವಾಹವು ಮೇಲ್ಗಡೆಗುಂಟು. ಶುದ್ಧ
ರಕ್ತದ ಪ್ರವಾಹವು ಇದರ ವಿರುದ್ಧ ದಿಕ್ಕಿಗುಂಟು. ಮಲಿನ
ರಕ್ತವು ದಕ್ಷಿಣ ಸಂಚಯದಲ್ಲಿಂದ ಕ್ಷಣಕ್ಷಃ ಪುಪ್ಪುಸಕ್ಕೆ
ಹೋಗಿ ಅಲ್ಲಿ ಶ್ವಾಸದಿಂದ ಬರುತ್ತಿರುವ ಅಕ್ಸಿಜನದ ಸಂಬೋ
ಗದಿಂದ ಶುದ್ಧವಾಗಿ ರಕ್ತವಾಹಿನಿಗಳ ಮಾರ್ಗವಾಗಿ ಎಲ್ಲ ಅ

ವಯುವಗಳಿಗೆ ಹೆಂಚಿಲ್ಪಡುತ್ತದೆ. ಇದರಿಂದ ಎಲ್ಲ ಭಾಗಗಳ ರಕ್ಷಣವಾಗುತ್ತದೆ. ಈ ಮಹತ್ವವಾದ ಅವಯುವಕ್ಕೆ ಯಾವ ರೀತಿಯಿಂದಲೂ ಅಪಾಯವಾಗದಂತೆ ಕಾಪಾಡಬೇಕು. ಎದೆಯ ಮೇಲೆ ಏನಾದರೂ ಹೆಚ್ಚಿನ ಭಾರ ಹಾಕುವದರಿಂದಲೂ, ತೀವ್ರವಾಗಿ ಓಡುವದರಿಂದಲೂ ರಕ್ತಾಶಯುಕ್ಕೆ ದಕ್ಕೆ ತಗಲುವದು. ಇದಕ್ಕೆ ದಕ್ಕೆ ಯಾದ ಕೂಡಲೆ ಪ್ರಾಣಹೋಗುವದು, ಇದಕ್ಕೆ ಕಾಳಿಜವೆನ್ನುತ್ತಾರೆಂದೂ ಇದನ್ನು ಯಾವತ್ತರೂ ಬಹು ಜಾಗ್ರತೆಯಿಂದ ಕಾಪಾಡಬೇಕೆಂದೂ ಹೇಳಿ ತಮ್ಮ ಭಾಷಣವನ್ನು ಮುಗಿಸಿದರು.

ಸಂಜೇ ಕಡೆಗೆ ಮೆ॥ ಸಾ. ಬಾ. ಕಲೆಕ್ಟರ ಸಾ. ರವರು ಪತ್ನಿಸಮೇತರಾಗಿ ಈ ಸಮ್ಮೇಲನ ಸಮಾರಂಭವನ್ನು ನೋಡ ಬಂದಿದ್ದರು. ಕಾಲೇಜದವರಿಂದ ಮಾಡಲ್ಪಟ್ಟ ಗದಗ ತಾಲೂಕಿನ ಮಾಡೆಲ್ ನೋಡಿ ಪರಮಾನಂದ ಭರಿತರಾದರು.

ಆ ಮೇಲೆ ಅಧ್ಯಕ್ಷರಾದ ರಾ. ಸಾ. ಪ್ರಿನ್ಸಿಪಾಲ ಸಾ. ರವರು ಈ ಹೊತ್ತು ನೇಮಿಸಿದ ಪ್ರಕಾರ ಆಯಾ ವೇಳೆಗೆ ಆಯಾ ಕಾರ್ಯಗಳು ಜರಗಿದವೆಂದೂ ನಾಳಿನ ದಿವಸ ಇಂಥಿಂದ ಕೆಲಸಗಳಾಗುವವೆಂದೂ ನಿರೂಪಣೆಯನ್ನು ಮಾಡಿ ಸಭಾವಿಸರ್ಜನೆಯನ್ನು ಮಾಡಿದರು.

BLOOD.

ರಕ್ತವು

ರಕ್ತವು ಪ್ರತ್ಯಕ್ಷ ಪ್ರಾಣವಿರುವದೆಂದು ಎಲ್ಲರೂ ಬಲ್ಲರು. ಜೀವ ಜೀವ ಎಂದು ಹೇಳುವರಲ್ಲ! ಆ ಜೀವವು ಯಾರಿಗೂ ಕಂಡಿಲ್ಲ. ಕೇವಲ ಶಾಸ್ತ್ರದ ಮಾತೇ ಸರಿ ಆದರೆ ರಕ್ತವು ಜೀವವೆಂಬದನ್ನು ಮನಗಾಣಿಸಿ ಕೊಡಲಿಕ್ಕೆ ಬಹಳ ಪ್ರಯಾಸವು ಬೇಕಾಗಿಲ್ಲ. ನೋಡಿರಿ, ಅಫು, ಸುಂಬಳಕಾರ ಮುಂತಾದ ವಿಷ ಪದಾರ್ಥಗಳನ್ನು ತಿನ್ನಲು, ಅಥವಾ ಪ್ರಾಣಿಗಳಿಗೆ ಹಾವು ಕಡಿಯಲು, ರಕ್ತಾಭಿಸರಣವು ತತ್ಕಾಲದಲ್ಲಿ ಕಟ್ಟುಗುವದು. ಬಹಳ ಯಾಕೆ? ಯಾವದೊಂದು

ಕಾರಣದಿಂದ ಮನುಷ್ಯನಿಗೆ ಮೂರ್ಛೆ ಬರಲು, ಅವನ ಬಾಹ್ಯ ಇಂದ್ರಿಯಗಳು ಸ್ತಬ್ಧವಾಗುತ್ತವಿಷೇ ಅಲ್ಲ ರುಧಿರಾಭಿಸರಣವು ಕಟ್ಟಾಗುವದು. ಬಾಹ್ಯ ಇಂದ್ರಿಯಗಳಲ್ಲಿ ಒಂದಾಗಲಿ ಹಲವಾಗಲಿ ತಮ್ಮ ವ್ಯಾಪಾರವನ್ನು ನಡಿಸದ ಹಾಗಾಪರೆ ಮನುಷ್ಯನು ಸತ್ತನೆಂದು ಹೇಳಲಾಗದಷ್ಟೇ! ಆದರೆ ರಕ್ತಾಭಿಸರಣವು ಕಟ್ಟಾದ ಕೂಡಲೆ ಅವನಿಗೆ ಮರಣ ವೊದಗಿತೆಂದು ತಿಳಿಯುವರು. ದೊಡ್ಡ ದೊಡ್ಡ ಡಾಕ್ಟರರಾದರೂ ನಾಡಿಯನ್ನು ಹಿಡಿದು ಅಂದರೆ ರಕ್ತಾಭಿಸರಣ ವ್ಯಾಪಾರವನ್ನು ನೋಡಿ ಮರಣವನ್ನು ನಿಶ್ಚಯಿಸುವರು. ಮೃತಿ ನಿಶ್ಚಯಕ್ಕೆ ರುಧಿರಾಭಿಸರಣಕ್ಕೆ ಜೊತೆಯಾಗಿ ಶ್ವಾಸೋಛ್ವಾಸವೂ ಬೇಕಾಗುವದು. ಇರಲಿ, ಮನುಷ್ಯನು ಸಶಕ್ತನೂ ಅಶಕ್ತನೂ ಇರುವನೆಂಬದಕ್ಕೂ ಕಡೆಗೆ ಸತ್ತನೆಂಬದಕ್ಕೂ ರುಧಿರಾಭಿಸರಣದ ಬಲವಾದ ಇಲ್ಲವೆ. ಮಂದವಾದ ಅಥವಾ ಕಟ್ಟಾದ ವ್ಯಾಪಾರವೇ ಪ್ರಧಾನ ಸಾಧನವಾಗಿದೆ.

ಇದಲ್ಲದೆ ಶರೀರಕ್ಕೆ ದೊಡ್ಡದೊಂದು ಗಾಯವಾಗಿ ಅದರೊಳಗಿಂದ ಹೇರಳ ರಕ್ತವು ಸೋರಿ ಹೋಗಲು ಮರಣವು ನಿಶ್ಚಯವಾಗಿ ಬರುವದು. ಇದು ಎಲ್ಲರಿಗೂ ಗೊತ್ತಿದ್ದ ಮಾತೇ ಸರಿ. ಆದ್ದರಿಂದ ಈ ರಕ್ತವನ್ನು ಕುರಿತು ತಕ್ಕಷ್ಟು ಹೆಚ್ಚು ಜ್ಞಾನ ಮಾಡಿಕೊಳ್ಳುವದು ಅವಶ್ಯವದೆ.

ರಕ್ತವು ನೋಟಕ್ಕೆ ಕೆಂಪು ರಾಡಿಯಾಗಿ ಕಾಣುವದು. ಆದರೆ ವಾಸ್ತವಿಕವಾಗಿ ಅದು ಹಾಗಿರುವದಿಲ್ಲ. ನೀರಿನಂಥದೊಂದು ಪ್ರವಾಹಿ ಪದಾರ್ಥದಲ್ಲಿ ಅಸಂಖ್ಯ ಬಿಳಿ, ಕೆಂಪು ಬಣ್ಣದ ಗೋಲಕಗಳು ಕೇಲಾಡುತ್ತಿರುತ್ತವೆ. ಇದನ್ನು ನೀವು ಸೂಕ್ಷ್ಮದರ್ಶಕ ಯಂತ್ರದಿಂದ ಮನಗಾಣಬಹುದು ಆ ಕೆಂಪು ಗೋಲಕಗಳಿಂದಲೇ ಆ ಯಾವತ್ತೂ ಪ್ರವಾಹಿಗೆ ರಕ್ತಿಮ ವರ್ಣವು ಬಂದಿರುವದು. ಬಿಳಿ ಗೋಲಕಗಳು ಕೆಂಪು ಗೋಲಗಳಿಗಿಂತ ಕಡಿಮೆ ಇರುವವು. ಸೂಕ್ಷ್ಮ ದರ್ಶಕ ಯಂತ್ರದಿಂದ ಈ ಗೋಲಕಗಳು ತುಸು ಹಳದೀ ಮೋಡಿಯಿಂದ ದೃಷ್ಟಿಗೋಚರವಾಗುತ್ತವೆ.

ಇವೆರಡು ತರದ ಗೋಲಕಗಳ ಆಕಾರವು ಬಹುಃ ಒಂದೇ ಪ್ರಕಾರವಾಗಿರುತ್ತದೆ. ಅಂದರೆ ಇವು ಹಲಿಯಾಗಿಯೂ ತುದಿಯು ಮಗ್ಗಲು ದಪ್ಪಾಗಿಯೂ ಇರುವವು. ಆದರೆ ಬಿಳೀಗೋಲಕಗಳು ತುಸು ದೊಡ್ಡ ವಿರುವವಲ್ಲದೆ ಅವುಗಳ ಮಧ್ಯದಲ್ಲಿ ಚಿಕ್ಕದೊಂದು ಪೋಷಕ ಬಿಂದುವಿರುವದು. ಇವೆರಡೂ ಗೋಲಕಗಳು ಶರೀರದಲ್ಲಿ ಭಿನ್ನ ಭಿನ್ನ ಕಾರ್ಯಗಳನ್ನು ಮಾಡುವವು.

ಕೆಂಪು ಗುಳಿಗೆಗಳು ಶರೀರದೊಳಗಿನ ಸಂದಿ ಕೊಂಚಿಗಳಲ್ಲಿ ಸಂಚರಿಸುತ್ತ ಯಾವತ್ತೂ ಅವಯವಗಳನ್ನು ಪೋಷಿಸುತ್ತವೆ. ಹಾಗೂ ಆಯಾ ಅವಯವಗಳ ಕಾರ್ಯವು ಅನಿರ್ಬಂಧವಾಗಿಯೂ ಸುಯೆಂತ್ರವಾಗಿಯೂ ಸಾಗಿಸಲಿಕ್ಕೆ ನೆರವಾಗುತ್ತವೆ. ಇದಲ್ಲದೆ ಆ ಅವಯವಗಳಿಗೆ ಜೀಕಾಗುವ ಆಕ್ಸಿಜನ್ನವನ್ನು ಪೂರೈಸುತ್ತ ಆಲ್ಲಿ ಉತ್ಪನ್ನವಾಗುವ ಕರ್ಬಾನಿಕ್ ಆಸಿಡ್ ವಾಯುವನ್ನು ಶರೀರದೊಳಗಿಂದ ಹೊರದೂಡುತ್ತ ಶರೀರ ಯಂತ್ರದ ಭಾಗಗಳನ್ನು ಸಂರಕ್ಷಿಸುತ್ತವೆ ರಕ್ತವು ಮೊದಲು ರಕ್ತಾಶಯದಿಂದ ಹೊರಡುತ್ತದೆಂಬದು ನಿಮಗೆ ಗೊತ್ತುಂಟು. ಆಗ ಅದರ ಬಣ್ಣವು ಅಚ್ಚ ಕೆಂಪಗಿರುವದು ಆದರೆ ಅದು ಶರೀರದೊಳಗೆ ತಿರುಗಾಡಿ ಬಂದಾಗ ಕಪ್ಪಾಗಿರುವದು. ಇದರ ಕಾರಣವಾದರೂ ಇದೇ.

ಬಿಳೀ ಗುಳಿಗೆಗಳ ಕಾರ್ಯವು ಇದಕ್ಕೂ ಮಹತ್ವವಾದದ್ದೂ ಕೌತುಕ ಪಡುವಂಥಾದ್ದೂ ಉಂಟು ಈ ಗೋಲಕಗಳು ಶರೀರವನ್ನು ರೋಗದಿಂದ ಸಂರಕ್ಷಿಸುವ ಕೆಲಸವನ್ನು ಮಾಡುತ್ತವೆ. ಅರ್ವಾಚೀನ ಶೋಧದಿಂದ ಯಾವಕ್ಕೂ ರೋಗಗಳು ಬಹುತರವಾಗಿ ತೀರ ಸೂಕ್ಷ್ಮ ಜಂತುಗಳು ಶರೀರದೊಳಗೆ ಉತ್ಪನ್ನವಾಗುವದರಿಂದ ಉಂಟಾಗುತ್ತವೆಂದು ಗೊತ್ತಾಗಿದೆ. ಆದರೆ ಈ ಸೂಕ್ಷ್ಮ ಜಂತುಗಳು ಮೈಯೊಳಗೇ ಹುಟ್ಟಲಿ ಅಥವಾ ಹೊರಗೆ ಹುಟ್ಟಿ ಶರೀರವನ್ನು ಪ್ರವೇಶಿಸಲಿ ಕೂಡಲೆ ಈ ಗುಳಿಗೆಗಳು ಅವುಗಳ ಮೇಲೆ ಏರಿಹೋಗಿ ಅವುಗಳನ್ನು ನಿಸ್ಸತ್ವಮಾಡಿ ತಮ್ಮೊಳಗೆ ಎ

ಳಕೊಳ್ಳುತ್ತವೆ. ಇದರಿಂದ ರೋಗೋತ್ಪತ್ತಿಯನ್ನು ಮಾಡ ಹವಣಿಸುವ ಆ ಜಂತುಗಳ ಕಾಟವು ನಷ್ಟವಾಗುತ್ತದೆ. ರೋಗ ಜಂತುಗಳು ರಕ್ತವಾಹಿನಿಯಲ್ಲಿ ಶೇರಿಕೊಂಡರಂತೂ ಈ ಶುಭ್ರ ಗೋಲಕಗಳು ಅವುಗಳನ್ನು ಸುಲಭವಾಗಿ ತಿಂದು ಬಿಡುತ್ತವೆ. ರಕ್ತವಾಹಿನಿಗಳಿಗೂ ತ್ವಚೆಗೂ ಮಧ್ಯದಲ್ಲಿ ಸಂಚರಿಸುವಾಗ ಈ ಶುಭ್ರ ಪಿಂಡಗಳು ತಾವೂ ರಕ್ತವಾಹಿನಿಯ ಮಗ್ಗಲದಿಂದ ಹೊರಬರುವವು ಈ ಹೊರಬರುವ ವ್ಯಾಪಾರವು ಬಹು ಸೋಜಿಗವಾಗಿದೆ. ಮೊದಲು ಈ ಪಿಂಡದ ಒಂದು ಎಳೆಯು ಹೊರಬಹುದು. ಬಳಿಕ ಈ ಎಳೆಯು ಕ್ರಮವಾಗಿ ಪಿಂಡದೊಳಗಿನ ರಸವನ್ನು ಹೀರಿಕೊಳ್ಳುವದು ಅದರಿಂದ ಆ ಇಡೀ ಪಿಂಡವು ವಾಹಿನಿಯ ಹೊರಗೆ ಬರುವದು

ಈ ಪಿಂಡದ್ದಿದೊಂದೇ ಚಮತ್ಕಾರವಲ್ಲ. ರೋಗ ಜಂತುವನ್ನು ನಾಶ ಪಡಿಸುವ ಇದರ ಕ್ರಮವು ಇದಕ್ಕೂ ಸೋಜಿಗವಾಗಿರುವದು. ಹ್ಯಾಗಂದರೆ— ರೋಗ ಜಂತುವನ್ನು ಕಂಡಕೂಡಲೆ ಈ ಪಿಂಡದೊಳಗಿನ ಜೊಂಡಿಂಗನ ವಿಶಿಯಾಂಥ ಎರಡು ಅವಯವಗಳು ಹೊರಬರುತ್ತವೆ ಅವು ಕ್ರಮವಾಗಿ ಗುಳ್ಳೀ ಬಸಪ್ಪನೆಂಬ ಹುಳದ ಕೋಡುಗಳಂತೆ ಉದ್ದ ಉದ್ದ ಆಗುತ್ತ ಆ ರೋಗ ಜಂತುವಿನ ತೀರ ಸವಿೂಪಕ್ಕೆ ಬಂದು ಅದನ್ನು ಹಾವಿನಂತೆ ತಮ್ಮ ನ್ಯೆಯಿಂದ ಸುತ್ತು ಹಾಕಿ ಮುಖ್ಯ ಪಿಂಡದೊಳಗೆ ಎಳೆದೊಯ್ಯುತ್ತವೆ ಹೀಗಾಗಲು, ಆ ಜಂತುವಿನಿಂದ ರೋಗೋತ್ಪಾದಕ ಭಯವು ನಿವಾರಣೆ ವಾಗುವದು

ಈ ಶುಭ್ರ ಪಿಂಡಗಳು ರೋಗ ಜಂತುವನ್ನು ಯಾಕೆ ನಾಶಗೊಳಿಸುತ್ತವೆ? ಈ ವೇರೆಗೆ ಮಾನವ ಶರೀರದಲ್ಲಿ ರೋಗ ಜಂತುವನ್ನು ನಾಶಗೊಳಿಸುವ ಗೋಲಕಗಳು ಅಹೋರಾತ್ರಿ ತಮ್ಮ ಕಾರ್ಯವನ್ನು ನಡಿಸುತ್ತಿರಲು ಅನೇಕರು ವಿಧವಿಧದ ರೋಗ ಬಾಧೆಗೆ ಶಿಲುಕಿ ಸಾವಿಗೆಡೆಯಾಗುವ ಕಾರಣವೇನಿರಬಹುದು? ಈ ಮೊದಲಾದ ಸಂಗತಿಗಳನ್ನು ಕುರಿತು

ಇನ್ನೂ ವಿದ್ವಾಂಸರ ನಿರ್ಣಯಗಳು ಗೊತ್ತಾಗಿ ಪ್ರಕಟವಾಗಿಲ್ಲ. ಆದರೂ ಹಲವು ವಿದ್ವಾಂಸರು ಈ ಕಾರ್ಯದಲ್ಲಿ ಬಹು ದಕ್ಷರಾಗಿ ಶೋಧ ನಡಿಸಿದ್ದಾರೆ. ಅವರ ಈ ಶೋಧದಿಂದ ಶರೀರದಲ್ಲಿರುವ ಹೊಸದೊಂದು ದ್ರವ್ಯವು ಗೊತ್ತಾಗಿದೆ. ಈ ದ್ರವ್ಯವು ಮರಣಕ್ಕೆ ಸಂಬಂಧಿಸಿರಬೇಕೆಂದು ಅನುಮಾನ ಮಾಡುವರು

ಈ ದ್ರವ್ಯದ ಹೆಸರು 'ಆಪ್ಸೋನಿನ್' ಎಂಬದು ಈ ಶಬ್ದದ ಅವಯವಾರ್ಥವು ರುಚಿಕರವೆಂದಾಗುವದು. ಈ ದ್ರವ್ಯವು ನಿರೋಗಿ ಮನುಷ್ಯನ ಶರೀರದಲ್ಲಿ ವಿಪುಲವಾಗಿರುವದು. ರೋಗ ಜಂತುಗಳು ಮೈಯಲ್ಲಿ ಸೇರಿದ ಕೂಡಲೆ ಈ ದ್ರವ್ಯವು ಆ ಜಂತುಗಳ ಮೈಗೆಲ್ಲಾ ಮೆತ್ತಿಕೊಳ್ಳುವದು. ಈ ದ್ರವ್ಯವು ಮೆತ್ತಿಕೊಂಡ ಜಂತುಗಳನ್ನು ಮಾತ್ರ ಶುಭ್ರ ಗೋಲಕಗಳು ತಿಂದು ಬಿಡುವವು ಉಳಿದವುಗಳನ್ನು ತಿನ್ನುವದಿಲ್ಲ. ಈ ದ್ರವ್ಯವು ಬೇರೆ ಬೇರೆ ರೋಗ ಜಂತುಗಳಿಗೆ ಬೇರೆ ಬೇರೆ ತರದ್ದಿರುವದು. ಯಾವದೊಂದು ವಿಶೇಷ ಪ್ರಕಾರದ ಈ ರುಚಿಕರ ದ್ರವ್ಯವು ಶರೀರದಲ್ಲಿ ಕಡಿಮೆಯಾಯಿತೆಂದರೆ ಅದಕ್ಕನುಗುಣವಾದ ಈಗ ಜಂತುಗಳು ಶರೀರದಲ್ಲಿ ವೃದ್ಧಿಗೊಳ್ಳುವವು. ಈ ಜಂತುಗಳ ಮೇಲೆ ರುಚಿಕರ ದ್ರವ್ಯದ ಲೇಪ ವಿಲ್ಲದ್ದರಿಂದ ಶುಭ್ರ ಗೋಲಕಗಳು ಅವಿಗಳನ್ನು ಮುಟ್ಟುವದಿಲ್ಲೆಂಬದು ಸ್ಪಷ್ಟವದೆ. ಆದ್ದರಿಂದ ಮನುಷ್ಯನು ರೋಗ ಪೀಡಿತನಾಗುತ್ತಾನೆಂದು ಪಂಡಿತರ ತರ್ಕವದೆ. ಈ ಮಾತಿನ ನಿಜತ್ವಕ್ಕಾಗಿ ಒಂದು ಪ್ರಯೋಗವನ್ನು ಮಾಡಿದರು. ಹ್ಯಾಗಂದರೆ ಕ್ಷಯರೋಗ ಪೀಡಿತನಾದ ಮನುಷ್ಯನ ಶರೀರದೊಳಗಿಂದ ಸ್ವಲ್ಪ ರಕ್ತವನ್ನು ಹೊರಗೆ ತೆಗೆದರು. ಆ ರಕ್ತದೊಳಗಿನ ಶುಭ್ರ ಪಿಂಡಗಳು ಅದರೊಳಗೇ ಇರುವ ಕ್ಷಯರೋಗೋತ್ಪಾದಕ ಜಂತುವನ್ನು ನಾಶಮಾಡಲಿಲ್ಲ. ಬಳಿಕ ಸಶಕ್ತ ಮನುಷ್ಯನ ಶರೀರದಿಂದ ತುಸು ರಕ್ತ ತೆಗೆದು ಈ ರಕ್ತದಲ್ಲಿ ಹಾಕಲು ಈ ಹೊಸ ರಕ್ತದೊಳಗಿನ ಶುಭ್ರ ಪಿಂಡಗಳು ನೋಡು ನೋ

.....ವ್ಯರಲ್ಲಿಯೇ ಆ ಜ್ವರರೋಗೋತ್ಪಾದಕ ಜಂತುಗಳನ್ನು ಬಕ್ಕರಿಸಿಬಿಟ್ಟವು.

MEMORY.

ಸ್ಮರಣಶಕ್ತಿ.

(೧೧೩ನೇ ಪುಟದಿಂದ ಮುಂದೆ ಸಂಪೂರ್ಣ.)

ಮುದ್ರಣ ಕಲೆಯಿಂದಾದ ಈ ಲಾಭವು ಕಿರಿದಲ್ಲ. ಆ ವಿದ್ವನ್ಮಣಿಯು ಸ್ವದೇಶದವನಿರಲಿ, ಪರದ್ವೀಪಸ್ಥನಿರಲಿ, ಕೊನೆಗೆ ಸ್ವರ್ಗವಾಸಿಯೇ ಆಗಿರಲಿ, ಅವನ ವಿಚಾರಗಳನ್ನು ನಾವಿದ್ದ ಸ್ಥಳದಲ್ಲಿಯೇ ತಿಳಿದು ಕೊಳ್ಳಲಿಕ್ಕೆ ಶಕ್ತರಾದದ್ದು ಮುದ್ರಣ ಕಲೆಯಿಂದಲ್ಲವೇ! ಹೀಗೆ ಪ್ರಾಚೀನ ಕಾಲದಲ್ಲಿ ಇದ್ದಿಲ್ಲ. ಮನುಷ್ಯನು ಮೃತಿಯಿಹ್ದಿದನೆಂದರೆ, ಅವನ ವಿಚಾರಗಳೂ ಅವನ ಸಂಗಡಲೇ ನಷ್ಟ ವಾಗುತ್ತಿದ್ದವು. ಇದರಿಂದ ಆ ಕಾಲಕ್ಕೆ ಪಂಡಿತರ ಮುಖದಿಂದ ಹೊರಟ ಉದ್ಗಾರಗಳನ್ನು ಉಳಿದವರು ಪಾಠಮಾಡಬೇಕಾಗುತ್ತಿತ್ತು. ಕಯ್ಪುರಹದ ಗ್ರಂಥಗಳಿಂದ ಈ ಕೆಲಸವು ಕೆಲವಂಶದಿಂದ ಆಗುತ್ತಿದ್ದರೂ ಮುದ್ರಣ ಕಲೆಯಿಂದಾದ ಸೌಲಭ್ಯದ ಮುಂದೆ ಅದು ಸರಿಯಾಗಲರಿಯದು. ಪಾಠ ಮಾಡುವ ವಿಷಯಗಳು ಗದ್ಯಕ್ಕಿಂತ ಪದ್ಯದಲ್ಲಿರುವದು ಹೆಚ್ಚು ಹಿತಕರವು. ಅದರಿಂದ ಸ್ಮರಣ ಶಕ್ತಿಗೆ ಸಹಾಯ್ಯವಾಗುವದಲ್ಲದೆ, ಮನೋರಂಜನವೂ ಆಗುವದು. ಇಷ್ಟಾಗಿಯೂ ಪದ್ಯಾತ್ಮಕ ವಿವರಣೆಯು ಗದ್ಯಾತ್ಮಕ ವಿವರಣೆಗಿಂತ ಬೇಗ ಪಾಠಬರುವದು ಇಲ್ಲವೆ ಸಹಜವಾಗಿ ನಾವು ಅನ್ನುವದನ್ನು ಆನಂದದಿಂದ ಪಾಠಮಾಡಬಹುದು. ಕವಿತೆಯಲ್ಲಿ ಶಬ್ದ ವಿಸ್ತೃತವು ಕಡಿಮೆ ಇದ್ದು ಅರ್ಥ ವಿಸ್ತಾರವು ಹೆಚ್ಚಿರುತ್ತದೆ. ಗದ್ಯದಲ್ಲಿ ಶಾಬ್ದಿಕ ರಗಳೆಯು ಹೆಚ್ಚಿರುವದರಿಂದ ಅದು ಬಹಳ ಹೊತ್ತು ನೆನಪಿರಲಾರದು. ಆದರೆ ಪದ್ಯದ ಮಾತು ಹೀಗಲ್ಲ. ಅರ್ಥದ ಕಡೆಗೆ ಲಕ್ಷ್ಯಕೊಟ್ಟು ಸುವ್ಯವಸ್ಥೆಯಿಂದ ಮುಖಪಾಠಮಾಡಲು, ಬಹುಕಾಲದ ವರೆಗೆ ಅದು ನಮ್ಮ ಸ್ಮರಣದಲ್ಲಿ ಉಳಿ

ಯುವೆದು. ನವ್ಮೊ ಭರತಭೂಮಿಯು ಛಾತ್ರವರ್ಗವು ಪಾ
ಠ ಮಾಡುವ ಈ ಪ್ರಾಚೀನ ಸಾಂಪ್ರದಾಯವನ್ನು ಈಗ
ಮರೆತು ಬಿಟ್ಟದೆ. ಇದು ಶೋಚನೀಯ ಸಂಗತಿಯೇ ಸರಿ.
ಪಾಠ ಮಾಡತಕ್ಕ ಅವತರಣದ ಅರ್ಥವು ತಿಳಿಯದೆ ಸುಮ್ಮ
ನೇ ಘೋಕು ಹಾಕಿದರೆ ಸ್ಮರಣ ಶಕ್ತಿಯು ವಿರುದ್ಧವಾಗಿ ಕೆಲ
ಸ ನಡಿಸಿದಂತಾಗುತ್ತದೆ. ಶಕ್ತಿಯ ವಿಚಾರ ವಿಲ್ಲದೆ ಅತಿ
ದೊಡ್ಡ ಭಾರವನ್ನು ಎತ್ತಹೋದರೆ ಅಪಾಯವಾಗುವಂತೆ
ಅತಿಶಯವಾಗಿ ಪಾಠ ಮಾಡುವದರಿಂದ ಮಿದುಳಿಗೆ ತ್ರಾಸ
ವ ಗಿ, ತದಂಗಭೂತವಾದ ಸ್ಮರಣ ಶಕ್ತಿಯು ಕ್ಷೀಣವಾಗು
ತ್ತದೆ ನೊದಲು ಬಹಳ ಜರುಕು ಎಂದು ತೋರುವ ವಿ
ದ್ಯಾರ್ಥಿಯು ಮುಂದೆ ದಡ್ಡನಾದ ಉದಾಹರಣಗಳು ಹಲ
ವುಂಟು. ಹೀಗಾಗಲು ಇನ್ನೂ ಅನೇಕ ಕಾರಣಗಳಿದ್ದರೂ
ಇವೊಂದು ಪ್ರಬಲ ಕಾರಣವೆಂದೆನಲಿಕ್ಕೆ ಏನೂ ಅಂತರಾ
ಯವಿಲ್ಲ. ಈಗಿನ ಗ್ರಹಶಿಕ್ಷಣವು ತೀರ ಕಡಿಮೆ ಸ್ಥಿತಿಯ
ಲ್ಲಿರುವದು, ಸಾರ್ವಜನಿಕ ಶಿಕ್ಷಣವಾದರೂ ಅಪ್ಪ ಚೆ
ನ್ನಾಗಿಲ್ಲವೆಂದು ಹಲಕೆಲವು ಆಧುನಿಕ ಪಂಡಿತರ ಅಭಿಪ್ರಾ
ಯವುಂಟು. ಇದು ಹೇಗಯೇ ಇರಲಿ. ಸುಧಾರಣಾ ಪ
ದ್ಧತಿಯನ್ನರಿಯದ ಘೋಕೇ ಗುರುವಿಂತ್ರವೆಂದು ತಿಳಿದು
ಕಲಿಸುವ ಶಾಲಾಗುರುಗಳ ಶಿಕ್ಷಣದಿಂದ ಜಿಕ್ಕ ಬಾಲಕರ
ಮಿದುಳಿನ ಮೇಲೆ. ಸಹಿಸಲಾರದಷ್ಟು ಭಾರವು ಬಿದ್ದು ವಿ
ದ್ಯಾರ್ಥಿಯು ನಾಶಕ್ಕೆ ಕಾರಣೀ ಭೂತವಾಗುತ್ತದೆ ಆದು
ದರಿಂದ ಸ್ಮರಣ ಶಕ್ತಿಯನ್ನು ಬೆಳಿಸಬೇಕಾದರೆ ಅವರ ವ
ಯಸ್ಸು ದೇಹದಾರ್ಢ್ಯಗಳ ಕಡಿಗೆ ಲಕ್ಷ್ಯಗೊಟ್ಟು ಮೆಲ್ಲ
ಮೆಲ್ಲಗೆ ಪ್ರಯತ್ನ ಮಾಡಿ ಬೆಳಿಸಬೇಕು. ಹೀಗಾದರೆ ಛಾ
ತ್ರ ಸ್ಮರಣ ಶಕ್ತಿಯು ಬೆಳೆದು ಅದರ ಯೋಗ್ಯ ಉಪಯೋ
ಗವಾದ ಹಾಗೆ ಆಗುತ್ತದೆ ಮುಂದಿನಲ್ಲಿ ಈ ಮುಖಪಾಠದ
ಉಪಯೋಗವು ಅಷ್ಟಿಷ್ಟೆಂದು ಹೇಳಕೂಡದು ವಾರ್ಧಿ
ಕ್ಯದಲ್ಲಿ ಸ್ಮೃಯು ಶಕ್ತಿಯು ಬಲಗುಂದುತ್ತ ಹೋಗುವದರಿಂ
ದ ವಾಚನಕ್ಕೂ ಲೇಖನಕ್ಕೂ ನವೀನ ವಿಚಾರಗಳನ್ನು

ಮಾಡಲಿಕ್ಕೂ ಅವರ ಅವಯವಗಳು (ಮಿದುಳು ಸಹ) ಅಶಕ್ತವಾಗಿರುತ್ತವೆ ಅದರಿಂದ ಸ್ಮರಣ ಶಕ್ತಿಯು ಸಾಧಾರಣವಾಗಿ ಇಲ್ಲದಂತೆಯೇ ಆಗಿರುತ್ತದೆಂದು ಹೇಳಲು ಅಡ್ಡಿಇಲ್ಲ. ಆದರೆ ಬಾಯಿಪಾಠದ ಚಟವಿದ್ದರೆ, ಅದನ್ನು ಅಲ್ಪಾಂಶದಿಂದಾದರೂ ನಮ್ಮ ಸ್ವಾಧೀನಪಡಿಸಿಕೊಂಡಿರಬಹುದು ಉಚ್ಚಾರವಿಲ್ಲದೆ ವಿಚಾರವೂ, ವಿಚಾರವಿಲ್ಲದೆ ಆಚಾರವೂ ಹುಟಿಸಲಾಗದು ಪ್ರತಿಯೊಂದು ವಾಚನದಲ್ಲಿ ಸ್ಫೋಟ್ಯಾಚ್ಚಾರವು ಮಹತ್ವವಾದದ್ದು. ಆ ಕೆಲಸವು ಬಾಯಿಪಾಠ ಮಾಡುವ ಚಟದಿಂದ ಅನಾಯಾಸವಾಗಿಯೇ ನಮ್ಮಲ್ಲಿ ಸೇರುವದು

ಎರಡನೆಯ ಸಾಧನವು—ಸಾವಧಾನ ಚಿತ್ತವು. ಸ್ಮರಣ ಶಕ್ತಿಯು ಬೆಳವಣಿಗೆಗೆ ಸಾವಧಾನ ಚಿತ್ತದ ಅವಶ್ಯಕತೆಯು ಹೆಚ್ಚಂಟು. ಅವದೊಂದು ವಿಷಯವನ್ನು ಲಕ್ಷ್ಯಪೂರ್ವಕವಾಗಿ ಓದದೆ. ಒಂದು ವಿಷಯದಿಂದ ಮತ್ತೊಂದು ವಿಷಯದ ಕಡೆಗೆ ಸುಮ್ಮನೇ ಸಾಗುವದರಿಂದ ಸ್ಮರಣ ಶಕ್ತಿಗೆ ಏಪ್ಪ ಮಾತ್ರವೂ ಸಹಾಯವಾಗದೆ, ತದ್ವಿಪರೀತವಾಗಿ ಬೆಳೆಗುಂದಿಸಲಿಕ್ಕೆ ಕಾರಣವಾಗುತ್ತದೆ. ಲಕ್ಷ್ಯಪೂರ್ವಕವಾಗಿ, ಅವಲೋಕನ ಮಾಡದೆ ಬಾಹ್ಯಾವಲೋಕನದಿಂದ ವಿಷಯವು ಧ್ಯಾನದಲ್ಲಿ ಉಳಿಯುವದು ಅಶಕ್ಯವೇ! ನೋಡತಕ್ಕ ಪುಸ್ತಕವು ಕಣ್ಣೆದುರಿಗೆ ಇದ್ದರೂ ಲಕ್ಷ್ಯವು ಬೇರೆ ಕಡಿಗೆ ತೊಡಗುವದರಿಂದ ಅದರ ವಿಷಯಕ್ಕೆ ನಮಗೇನೂ ತಿಳಿಯುವದಿಲ್ಲ ಕೆಲಹೊತ್ತಿನ ಮೇಲೆ ನಮ್ಮ ಸ್ನೇಹಿತರು ಅದನ್ನು ವರ್ಣಿಸ ಹೇಳಿದರೆ, ಅದನ್ನು ವರ್ಣಿಸ ಸಮರ್ಥರಾಗಲಾರೆವು ಲಕ್ಷ್ಯ ಪೂರ್ವಕವಾಗಿ ಅವಲೋಕನ ಮಾಡದೆ ಇದ್ದದ್ದೇ ಇದರ ಕಾರಣವು. ಅವದೊಂದು ವಿಷಯವನ್ನು ಸಾವಧಾನ ಚಿತ್ತದಿಂದ ನಿರೀಕ್ಷಿಸುತ್ತ ಓದುತ್ತಿದ್ದರೆ, ಸ್ಮರಣದಲ್ಲಿಡತಕ್ಕ ಅದರ ಮಹತ್ವಭಾಗವು ಅವದೆಂಬದು ದೃಗ್ಗೋಚರವಾಗುತ್ತದೆ.

(ಸಶೇಷ.)

GEOGRAPHY.

ಭೂಗೋಲ ಶಿಕ್ಷಣವು.

(೧೧೬ ನೇ ಪುಟದಿಂದ ಮುಂದೆ ಸಾಗಿದ್ದು)

ಇನ್ನು ಈ ಎರಡನೆ ಮೆಟ್ಟಿನ ಸಂಗತಿಗಳ ಕಲ್ಪನೆಯನ್ನು ಸಂಪೂರ್ಣವಾಗಿ ಮನಸ್ಸಿನಿಂದಲೇ ಮಾಡಿಸಿ ಸಾಗಿಸಬಾರದು. ಕೆರೆಯಿಂದ ಸರೋವರ ಸಮುದ್ರಗಳನ್ನು ಹಳ್ಳದಿಂದ, ನದಿ, ಗುಡ್ಡದಿಂದ, ಪರ್ವತ, ೧೦।೨೦ ಮೈಲು ಪ್ರದೇಶದಿಂದ ೧೦೦।೨೦೦ ಮೈಲು ಪ್ರದೇಶ ಈ ಬಗೆಯ ಎಲ್ಲ ಕಲ್ಪನೆಗಳು ಬರೇ ಮನಸಿನಲ್ಲಿ ಮಾಡುವದಕ್ಕಿಂತ ಪ್ರತ್ಯಕ್ಷ ವಸ್ತುಗಳಿಂದ ಮಾಡಿಕೊಡುವದು ಹೆಚ್ಚು ಪ್ರಯೋಜನಕರವೆಂಬದು ಸಹಜ, ಆದರೆ ಈ ಕೆಲಸಕ್ಕಾಗಿ ನಕಾಶಗಳನ್ನು ಉಪಯೋಗ ಮಾಡಿಕೊಳ್ಳುವ ಸಾಮರ್ಥ್ಯವು ಇನ್ನು ವಿದ್ಯಾರ್ಥಿಗಳಿಗೆ ಬಂದಿರುವದಿಲ್ಲ. ಯಾಕಂದರೆ ನಕಾಶದಲ್ಲಿ ಭೂಪೃಷ್ಠದ ತಗ್ಗು ದಿನ್ನೆಗಳು ಸಾಂಕೇತಿಕ ಚಿನ್ನಗಳಿಂದ ಮಾತ್ರ ತೋರಿಸಿರುತ್ತವೆ. ಆದ್ದರಿಂದ ಈ ಎರಡನೇ ಮೆಟ್ಟಿನಲ್ಲಿ ಭೂಪೃಷ್ಟ ಸ್ವರೂಪದ ಮಾದರಿಗಳನ್ನು ವಿದ್ಯಾರ್ಥಿಗಳಿದುರಿಗಿಟ್ಟು, ನಿರೀಕ್ಷಣ ಮಾಡಿಸುವದು ಅವಶ್ಯವು. ಇದರಲ್ಲಿ ವಿದ್ಯಾರ್ಥಿಗಳು ಮೊದಲು ನೀರೀಕ್ಷಿಸಿದ ಹಳ್ಳ ಗುಡ್ಡಗಳು, ಹೊಸದಾಗಿ ತಿಳುಕೊಳ್ಳತಕ್ಕ ನದಿ, ಪರ್ವತಗಳು ಏಕಕಾಲಕ್ಕೆ ಬರುವದರಿಂದ ಅವುಗಳನ್ನು ಬಂದಕ್ಕೊಂದು ಹೋಲಿಸಿ ಹೊಸ ಸಂಗತಿಗಳನ್ನು ತಿಳುಕೊಳ್ಳಲಿಕ್ಕೆ ಅನುಕೂಲವಾಗಿರುತ್ತದೆ. ಈ ಮಾದರಿಗಳನ್ನು ಪ್ರತಿಯೊಬ್ಬ ಮಾಸ್ತರನು ಸ್ವತಃ ಮಾಡಲಿಕ್ಕೆ ಕಲಿಯಬೇಕು. ಸಿದ್ಧವಾದ ಮಾದರಿಗಳಿಂದ ಕೆಲವು ಮಟ್ಟಿಗೆ ಪ್ರಯೋಜನವಾಗಬಹು. ಆದರೆ ಅವುಗಳಿಗಿಂತ ಮಾಸ್ತರನು ಮಾಡಿದ ಮಾದರಿಯು ಹೆಚ್ಚು ಪ್ರಯೋಜನಕರವಾಗುವದೆಂಬದು ಸಹಜ ಇಂಥ ಮಾದರಿಗಳನ್ನು ಮಾಡುವ ರೀತಿಯನ್ನು ಅವುಗಳ ಉಪಯೋಗದ ಬಗೆಯನ್ನು ತೋರಿಸುವದಕ್ಕಾಗಿ ಈ ಪ್ರಸಂಗದಲ್ಲಿ ಗದಗ ತಾಲೂಕಿನ ಮಾದರಿಯನ್ನು ಮಾಡಿಟ್ಟಿದ್ದೇವೆ.

ಈ ಮಾದರಿಯನ್ನು ಹ್ಯಾಗೆ ಮಾಡಬೇಕೆಂಬದು. ಬಹು ಜನರಿಗೆ ಕಷ್ಟಸಾಧ್ಯವಾಗಿರುವದು. ಆದರೂ ಇದರಡಿಯಲ್ಲಿ ಅದರ ಕೃತಿಯನ್ನು ಸವಿಸ್ತಾರವಾಗಿ ಬರೆದಿರುತ್ತೇವೆ. ಅದನ್ನು ಚನ್ನಾಗಿ ಓದಿ ಮನನ ಮಾಡಿಕೊಂಡರೆ ಅದೇ ಮೇರೆಗೆ ಬೇಕಾಷ ಭಾಗದ ಪ್ರತಿಮೆಯನ್ನು ಸುಲಭವಾಗಿ ಮಾಡಿಕೊಳ್ಳಬಹುದು.

ಯಾವದೊಂದು ವಿವಿಕ್ಷಿತ ಭೂಭಾಗದ ಪ್ರತಿಮೆಯನ್ನು ಮಾಡುವದಾದರೆ, ಮೊದಲು ಕೆಟ್ಟಗೆಯ ಬಾಯಿ ಮುಚ್ಚಳಿಕೆಯಂಥ, ಒಳಮೈಯಲ್ಲಿ ತಗಡು ಹೊದಿಸಿದ ಕಟ್ಟಗೆಯ ಪಾತ್ರೆಯನ್ನು (ಟ್ರೇ ಮಾಡಿಕೊಳ್ಳಬೇಕು. ಈ ಪಾತ್ರೆಯು ೩ರಿಂದ ೩' ಫೂಟು ಉದ್ದಾಗಿಯೂ ೭ರಿಂದ ೭॥ ಫೂಟು ಅಗಲಾಗಿಯೂ ಸುಮಾರು ಮೂರು ಇಂಚು ತಗ್ಗಾಗಿಯೂ ಇದ್ದರೆ ಅನುಕೂಲವಾಗುವದು. ಇದರೊಳಗೆ ಕಾಗದ ಕುಟ್ಟಿ ಮಾಡಿದ ಮುದ್ದೆಯಿಂದಾಗಲೀ ಕೆಟ್ಟದಿಂದಾಗಲಿ ಒಂದು ಇಂಚು ದಪ್ಪಾದ ಥರವನ್ನು ಮಾಡಿಕೊಳ್ಳಬೇಕು. ಅದರ ಮೇಲೆ ಕ್ಷೇತ್ರಪ್ರಮಾಣದಿಂದ ಅಕ್ಷಾಂಶ ರೇಖಾಂಶಗಳ ಹುತುರ್ ಮಾಡಿಕೊಂಡು ಪ್ರತಿಮೆಯನ್ನು ಮಾಡತಕ್ಕ ಭೂಭಾಗದ ನಕಾಶೆಯನ್ನು ತೆಗೆಯಬೇಕು. ಮೊದಲು ಮಾಡಿಕೊಂಡ ಸಮುದಾತಳಿಯೇ ನಾವು ಮಾಡತಕ್ಕ ಪ್ರತಿಮೆಯ ಭೂಭಾಗದ ಅತಿ ನೀಚಸ್ಥಾನದ ಪಾತಳಿಯೆಂದು ತಿಳಿದು ಅದರ ಮೇಲೆ ಉಳಿದ ನೀಚೋಚ್ಚ ಪ್ರದೇಶಗಳನ್ನು ರಚಿಸತಕ್ಕದ್ದಿರುವದು, ಕಲಕತ್ತೆಯಲ್ಲಿ ಇಂಡಿಯಾ ಸರ್ವೇ ಆಫೀಸಿನವರು ಮಾಡಿದ "ಟೋಪೋಗ್ರಾಫಿಕಲ್‌ಮ್ಯಾಪ್" ಎಂಬ ನಕಾಶೆಯಲ್ಲಿ ಬೇರೆ ಬೇರೆ ಪ್ರದೇಶಗಳ ಎತ್ತರಗಳು ತಿಳಿಯುವವು. ಅವು ಸಮುದ್ರದ ಸಪಾಟಿಯ ಮೇಲಿನ ಎತ್ತರಗಳಾಗಿರುತ್ತವೆ. ಈ ಎತ್ತರಗಳೊಳಗೆ, ನಾವು ಮಾಡಿಕೊಂಡ ಅತಿನೀಚಸ್ಥಾನದ ಪಾತಳಿಯ ಎತ್ತರವನ್ನು ಕ್ರಮವಾಗಿ ಕಳೆಯಲು ವಜಾಬಾಕಿಗಳು ಥರದ ಮೇಲಿನ ಎತ್ತರಗಳಾಗುವವು. ಈ ನಾವು ಮಾಡತಕ್ಕ ಈ ಪ್ರತಿಮೆಯಲ್ಲಿ ಎತ್ತರದ ಸ್ಕೇಲನ್ನು ಕ್ಷೇತ್ರದ ಸ್ಕೇಲಗಿಂತ ೪ರಿಂದ ೪ ಪಟ್ಟುಗಳ ವರೆಗೆ ಹೆಚ್ಚಾಗಿಡುವದು ಅವಶ್ಯವದೆ. ಇಲ್ಲದಿದ್ದರೆ ಬಾಹುನೀಚ ಸ್ಥಳಗಳು ಒಡೆದು ಕಾಣಲಿಕ್ಕಿಲ್ಲ. ಎತ್ತರದ

ಸ್ಕೇಲಿನ ಪ್ರಮಾಣದಿಂದ ಬೇರೆ ಬೇರೆ ಎತ್ತರದ ಕಡ್ಡಿಗಳನ್ನು ಸಮಪಾತಳಿಯ ಮೇಲೆ ಚುಚ್ಚಬೇಕು. ತರುವಾಯ ಬೆಟ್ಟಗಳು ಹೆಚ್ಚು ಎತ್ತರವಿದ್ದಂತೆ ಹೆಚ್ಚು ಇಳಿಜಾರವಾಗಿಯೂ ಕಡಿಮೆ ಎತ್ತರವಿದ್ದಂತೆ ಹೆಚ್ಚು ಹರವಾಗಿಯೂ ಕಡಿಗಳ ತುದಿ ಬಿಂದುವಿನಿಂದ ಮೊಳೆ ಮೇಲು ಪಾಡಿ ಬಿದ್ದಬೊಗರಿಯ ಆಕಾರವಾಗಿ ಮುದ್ರೆಯಿಂದ ಮಾಡಿಕೊಳ್ಳಬೇಕು. ಬಳಿಕ ಜಲಶ್ಯೀದದ ಮಯರ್ಯಾದೆಯಲ್ಲಿ ಕಡ್ಡಿಗಳು ಹುಗಿಯುವ ವರೆಗೆ ದಪ್ಪವಾಗಿ ಮೆತ್ತಿಕೊಳ್ಳಬೇಕು. ಆ ಮೇಲೆ ಹೊಳೆ ಹಳ್ಳ ಮುಂತಾದವುಗಳನ್ನು ಲಕ್ಷದಲ್ಲಿಟ್ಟು ನಕಾಶೆಯು ಯಾವತ್ತು ಪ್ರದೇಶದಲ್ಲಿ, ಮಯರ್ಯಾದೆಯ ರೇಖೆಯನ್ನು ಕಾಯ್ದುಕೊಂಡು ಮೆತ್ತಬೇಕು. ಈ ಪ್ರಕಾರ ನಕಾಶೆಯು ಯಾವತ್ತು ಭಾಗದಲ್ಲಿ ಮೆತ್ತುವದಾದ ಮೇಲೆ "ಟ್ರೇ"ಯೊಳಗೆ ಮೇರೆಯಲ್ಲಿದ್ದ ಅಲ್ಪಸ್ವಲ್ಪ ಪ್ರದೇಶಗಳನ್ನು ಸಹ ಇದೇ ರೀತಿಯಂತೆ ಮಾಡಿಕೊಳ್ಳಬೇಕು. ಅಂದರೆ ನಮ್ಮ ವಿವಿಕ್ಷಿತ ಭೂಭಾಗದ ಪ್ರತಿಮೆಯಾಗುವದು. ಆದನ್ನು ನೆಳಲಲ್ಲಿ ಸಾವಕಾಶವಾಗಿ ಆರಗೊಟ್ಟು ಒಳಿಕ ಬಣ್ಣ ಹಚ್ಚತಕ್ಕದ್ದು. ಈ ಬಣ್ಣ ಹಚ್ಚುವ ಕ್ರಮವು ಹೇಗಂದರೆ—

ಬೆಟ್ಟಗಳ ಮೇಲೆ ಗಿಡಗಂಟಿಗಳಿರುವದರಿಂ ಅವುಗಳಿಗೆ ಹಸರು ಬಣ್ಣ ಹಚ್ಚಬೇಕು. ಮಸಾರಿಯ ಭೂಮಿಗೆ ಕೆಂಪು ಬಣ್ಣವನ್ನು ಮಳಲು ಭೂಮಿಗೆ ಗುಲಾಬೀ ಬಣ್ಣವನ್ನು ಎರೆಯ ಭೂಮಿಗೆ ಕರೇ ಬಣ್ಣವನ್ನು ಹೊಳೆ ಹಳ್ಳ ಮುಂತಾದ ಜಲಾಶಯಗಳಿಗೆ ನೀಲಿಯ ಬಣ್ಣವನ್ನು, ರಾಜಬೀದಿ, ಲೋಹಮಾರ್ಗ, ಮಯರ್ಯಾದೆಯ ರೇಖೆಗಳಿಗೆ ಒಡೆದು ಕಾಣುವಂಥ ಬಣ್ಣಗಳನ್ನು ಹಚ್ಚಬೇಕು. ಬಣ್ಣವಾದ ಒಳಿಕ ವಾರ್ನಿಸವನ್ನು ಹಚ್ಚಿ ಬಣಗುವ ವರೆಗೆ ಧೂಳಿ ಕೂಡ್ರದಂತೆ ಎಚ್ಚರ ಪಡಬೇಕು.

ತಕ್ಕಪೂರ್ತಿಯ ಗರ್ಜಿಗಾಗಿ— ಅರ್ಲಿನಿಂದ ಮಾಡಿದ ಪ್ರತಿಮೆಯು ಹಸನಾದಿದ್ದು ತೀವ್ರ ಪ್ರಯೋಗದಲ್ಲಿ ಅದನ್ನು ತರಬೇಕಾಗಿದ್ದರೆ ಬೇರೆ ಬೇರೆ ಬಣ್ಣದ ಪುಡಿಗಳನ್ನು ಅದರ ಮೇಲೆ ಗುಲಾಲಿನಂತೆ ಉದರಿಸಬೇಕು.

ಈ ಪ್ರಕಾರ ಮಾಡಿದ ಪ್ರತಿಮೆಯಿಂದ ಪ್ರತ್ಯಕ್ಷಭೂಮಿಯನ್ನು ನೋಡಿದಂತೆ ಭಾಸವಾಗದೆ ಇರಲಾರದು.

CORRESPONDENCE.

ಪತ್ರವ್ಯವಹಾರ.

ಪಸವೆಂದರೇನು? 'ನಾಗವರ್ಮನು ವಿಭಕ್ತ್ಯಂತಂ ಪದಂ;' ಭಟ್ಟಾಕಲಂಕನು 'ಸುಪ್‌ತಿಙ್ಗಂತಂ ಪದಂ;' ಕೇತಿರಾಜನು 'ಎರಡುಮುಮದೊರ್ದವೆಪದಂ' (ಪ್ರಕೃತಿ ಪ್ರತ್ಯಯಂಗಳೆರಡುಂಕೂಡೆ ಪದಕ್ಕು. ಸೂತ್ರ ೫೫ ವೃತ್ತಿ;) ಹೀಗೆ ಪದದ ವ್ಯಾಖ್ಯೆಯನ್ನು ಪ್ರಾಚೀನ ವ್ಯಾಕರಣ ಕಾರರು ಹೇಳಿರುವರು. ಅದನ್ನೇ ಅನುಸರಿಸಲು, ನಾವು ವಿಭಕ್ತಿಯನ್ನಾಗಲಿ ಕ್ರಿಯಾ ವಿಭಕ್ತಿಯನ್ನಾಗಲಿ (ಆಖ್ಯಾತ ಪ್ರತ್ಯಯಗಳನ್ನಾಗಲಿ ಹೊಂದಿದ ಶಬ್ದವು ಪದವೆನಿಸುವದು. ಇದರಿಂದ ನಾಮ, ಸರ್ವನಾಮ, ಕ್ರಿಯಾಪದ, ಅವ್ಯಯಗಳಿದ್ದಲ್ಲಿ ಪದಚ್ಛೇದ ಮಾಡಬೇಕೆಂದು ನಿರ್ಣೀತವಾಗುವದು. ಅವ್ಯಯದಲ್ಲಿ ನ್ಯೂನರೂಪ, ಭಾವರೂಪ, ಕ್ರಿಯಾವಿಶೇಷಾವ್ಯಯ, ರೀತಿವಾಚಕಾವ್ಯಯ, ನಿಪಾತಾವ್ಯಯ, ಸಮುಚ್ಚಯಾವ್ಯಯಗಳು ಸಮಾವೇಶವಾಗುತ್ತವೆಂಬುದನ್ನು ಮರೆಯಗೂಡದು. "ದೊರೆವಡೆದವ್ಯಯಲಿಂಗಂ ಸರಿಸರ್ವವಿಭಕ್ತಿಗಂ.....॥ಸೂತ್ರ೯೦॥'ಎಂದು ದರ್ಪಣಕಾರನು ಹೇಳಿರುವದರಿಂದ ಅವ್ಯಯ ಶಬ್ದಗಳನ್ನೆಲ್ಲ ಪದಸಂಜ್ಞೆಯಲ್ಲಿ ತಂದು ಕೊಳ್ಳಲು ಪ್ರತಿಬಂಧವಿಲ್ಲ ಆದುದರಿಂದ ಅವ್ಯಯ ಬಂದಲ್ಲಿ ಪದಚ್ಛೇದ ಮಾಡಲಿಕ್ಕೆ ದೋಷವಿಲ್ಲ.

ಸಮಾಸದಲ್ಲಿ ಪದಗಳನ್ನು ಬಿಡಿಸಲಾಗದು. ಯಾಕಂದರೆ ಸಮಾಸವಾಗಬೇಕಾದರೆ ಪೂರ್ವಪದದ ವಿಭಕ್ತಿಪ್ರತ್ಯಯಗಳು ಬಹುತರವಾಗಿ ಲುಪ್ತಹೊಂದಿರುವವು. ಇದಕ್ಕೆ ಅಪವಾದ ರೂಪದಿಂದ ಅಲುಕ್ ಸಮಾಸದಲ್ಲಿ ಪೂರ್ವಪದವು ಸವಿಭಕ್ತಿ ರೂಪವಿದ್ದರೂ ಅಲ್ಲಿ ಪದಚ್ಛೇದವೂ ಸಲ್ಲದು. ಆದುದರಿಂದ 'ಮಾವಿನಮರ' ಈ ಶಬ್ದದಲ್ಲಿ 'ಮಾವಿನ, 'ಮರ, ಹೀಗೆ ಬೇರೆ ಬೇರೆಯಾಗಿ ಪದಗಳನ್ನು ನಿಂಗಡಿಸಲಾಗದು.

ತೂಕದ ದೇಶೀ ಕೋಷ್ಟಕಗಳು.

ಎನೇ ಇಯತ್ತೆ.— ವೇಳೆ ೩೦ ನಿಮಿಷ.

ಉದ್ದೇಶ:— ತೂಕದ ದೇಶೀ ಕೊಷ್ಟಕಗಳನ್ನೂ ವ್ಯವಹಾರದಲ್ಲಿ ಅದನ್ನು ಉಪಯೋಗಿಸುವದನ್ನೂ ಕಲಿಸುವದು.

ಉಪಕರಣ:— ಫೂಟು ಕಟ್ಟಗೆ, ಅಳತೆಯ ಮಾಪು, ಒಂದು ಸೇರು ತೂಕದ ಬೆಲ್ಲದ ತುಂಡು, ಅಷ್ಟೇ ಆಕಾರದ ಎರಡು ಕಟ್ಟಗೇ ಹಲಿಗೆಗಳು. ನವಟಾಕಿನಿಂದ ಧಡೆಯುವರಗೆ ತೂಕದ ಕಲ್ಲುಗಳು. ಅಡ್ಡಿಸೇರು, ಬೆಲ್ಲ, ಅರ್ಧರೂಪಾಯಿಗಳಿರಡು ೦೦ ತೊಲೆಗಳ(ರೂಪಾಯಿ)ಕಟ್ಟೆಗಳು ಎರಡು ದೀಡಸೈ ಸಹಿತ ಒಂಭತ್ತಾಣೆಯ ರೊಕ್ಕಗಳು. ತಾಮ್ರದ ಸಣ್ಣ ಸಣ್ಣ ಪಾತ್ರೆಗಳು ಕಬ್ಬಿಣದ ಸಣ್ಣ ಸಣ್ಣ ಸಾಮಾನು.

ಉಪೋದ್ಘಾತ:— ಬೆಲ್ಲವನ್ನು ತೋರಿಸಿ ಎಷ್ಟು ಬೆಲ್ಲ ಉಂಟೆಂಬವನ್ನು ಸಃಮೂಹಿಕವಾಗಿ ಕೇಳಿ ಪಾಠವನ್ನು ಆರಂಭಿಸುವದು.

ಪ್ರಯೋಗ.	ಫಲಿತ.
೧ ಒಡೆದ ಬೆಲ್ಲದ ಕೆಂಟೆಯ ಆಕಾರವನ್ನು ಘಾಟನಿಂದ ಅಳೆದು ನೋಡಲಿ.	೧ ಬೆಲ್ಲದ ಕೆಂಟೆಗೆ ನಿಯಮಿತಾಕಾರವಿಲ್ಲ. ಆದರಿಂದ ಅಳೆದು ನೋಡಲಿಕ್ಕೆ ಬರುವದಿಲ್ಲ.

ಂ ಅದೇ ಚೆಂಟಿಯನ್ನು ಕಾಳಿನ ಮೂಪಿನಲ್ಲಿ ಹಾಕಿ ಅಳೆದು ನೋಡಲಿ.

ಃ ತಕ್ಕಡಿಯ ಒಂದು ಪರಡಿಯಲ್ಲಿ ಒಂದು ಸಾಧಾರಣ ಕಲ್ಲನ್ನೂ ಮತ್ತೊಂದು ಪರಡಿಯಲ್ಲಿ ಕಲ್ಲಿನ ತೂಕದಷ್ಟೇ ಬೆಲ್ಲವನ್ನೂ ಹಾಕಿ ತೂಗಿ ನೋಡಲಿ

೪ ಮೂರು ನಾಲ್ಕು ಕಲ್ಲುಗಳಲ್ಲಿ ಒವೊ್ಮೊವ್ಮೆ ಒಂದೊಂದು ಕಲ್ಲಿನಿಂದ ಸಕ್ಕರೆಯನ್ನು ತೂಗಿ ನೋಡಲಿ.

ಂ ಅದನ್ನು ಸಣ್ಣ ಸಣ್ಣ ಚೂರು ಮಾಡದೆ ಅಳೆದು ನೋಡಲಿಕ್ಕೆ ಬರುವದಿಲ್ಲ.

ಃ ಕಲ್ಲಿನ ತೂಕದಷ್ಟೇ ಬೆಲ್ಲವಿದ್ದರೆ ತಕ್ಕಡಿಯ ದಂಡಿಗೆಯು ಸರಿಯಾಗಿ ನಿಂತು ಮುಳ್ಳು ನೆಟ್ಟಗೆ ನಿಲ್ಲುತ್ತದೆ.

೪ ಬೇರೆ ಬೇರೆ ಕಲ್ಲುಗಳಿಂದ ತೂಗಿದ ಸಕ್ಕರೆಯ ತೂಕಗಳು ಬೇರೆ ಬೇರೆ ಇರುತ್ತವೆ.

ಟೀಪು:—ಆದಕಾರಣ ಯಾವಾಗಲೂ ಒಂದೇ ಕಲ್ಲಿನಿಂದ ತೂಕವನ್ನು ಹೇಳುವದಕ್ಕಾಗಿ ಒಂದು ಕಬ್ಬಿಣದ ಕಲ್ಲು ಮಾಡಿರುತ್ತಾರೆಂದು " ಸೇರುಗಲ್ಲು " ತೋರಿಸಿ ಇದಕ್ಕೆ "ಸೇರುಗಲ್ಲು" ಎಂದೆನ್ನುವರೆಂದು ಹೇಳುವರು.

ಃ ಸೇರು ಗಲ್ಲಿನ ಆಕಾರ ಮುದ್ರಿಕೆಗಳನ್ನು ಹುಡುಗರು ನೋಡಲಿ.

ಃ ದುಂಡಗಾಗಿ ಹಲಪಿಯಂತೆ ಇರುತ್ತದೆ. ಅದರ ಮೇಲೆ ಅಕ್ಷರಗಳನ್ನು ಮುದ್ರಿಸಿದ್ದಾರೆ.

ಟೀಪು:— ಕೆಲವು ಸೇರುಗಲ್ಲು ಚಚೌಕ ಇರುವವೆಂದು ಹೇಳುವದು.

೬ ಒಂದು ಪರಡಿಯಲ್ಲಿ ಒನ್ಮೆ ಇಪ್ಪತ್ತು ತೊಲೆಗಳ ಕಟ್ಟಿಗಳನ್ನೂ ಮತ್ತೊನ್ಮೆ ಒಂಬತ್ತಾನೆ ರೊಕ್ಕಗಳನ್ನೂ ಹಚ್ಚಿ ತೂಗಿ ನೋಡಲಿ.	೬ ಸೇರುಗಲ್ಲಿನ ತೂಕವು ಇಪ್ಪತ್ತು ತೊಲಿ ಆಥವಾ ಒಂಬತ್ತಾನೆ ರೊಕ್ಕದಷ್ಟೆತೂಕದಪ್ಪು ಅದೆ.

ಟೀಪು:—ಸೇರುಗಲ್ಲು ಸರಿಯಾಗಿದೆಯೋ ಇಲ್ಲವೋ ಎಂಬದನ್ನು ನೋಡಬೇಕಾದರೆ ಈ ರೀತಿ ಪರೀಕ್ಷಿಸಬೇಕೆಂತಲೂ ಸೇರುಗಲ್ಲು ಇಲ್ಲದಾಗ್ಗೆ ಇವುಗಳಿಂದ ತೂಕವಾಡಬೇಕೆಂತಲೂ ಹೊರಡಿಸುವದು. ಒಂದು ರೂಪಾಯಿ ತೂಕವೆಂದರೆ ಒಂದು ತೊಲಿಎಂದು ಹೇಳುವದು. ತೊಲೆ ಇಲ್ಲದಿದ್ದರೆ ರೂಪಾಯಿ ಹಾಕಿ ತೂಕ ವಾಡಬಹುದೆಂದು ಹೇಳುವದು.

೭ ಒಂದು ಸೇರು ಸಕ್ಕರೆಯನ್ನು ಎರಡೂ ಪರಡಿಗಳಲ್ಲಿ ಸಮತೋಲವಾಗುವಂತೆ ಎರಡು ಭಾಗವಾಡಿ ನೋಡಲಿ ೮ ಬಳಿಕ ಒಂದು ಪರಡಿಯಲ್ಲಿ ಆ ಸಕ್ಕರೆಯ ಒಂದು ಭಾಗವನ್ನೂ ಮತ್ತೊಂದು ಪರಡಿಯಲ್ಲಿ ಅರ್ಧಸೇರಿನ ಕಲ್ಲನ್ನೂ ಅಥವಾ ೧೦ ತೊಲಿಗಳ ಕಲ್ಲನ್ನೂ ತೂಗಿ ನೋಡಲಿ.	೭ ಒಂದು ಸೇರು ಸಕ್ಕರೆಯಲ್ಲಿ ಸರಿಯಾಗಿ ಎರಡು ಭಾಗಗಳಾದವು. ೮ ಇದು ಅರ್ಧಸೇರು (ಅಚ್ಚೇರು) ಇದರ ತೂಕ ೧೦ ತೊಲಿ ಅದೆ.

ಟೀಪು:—ಅರ್ಧಸೇರಿಗೆ ಅಚ್ಚೇರು, ಅನ್ನುವರೆಂತಲೂ ಎರಡು ಅಚ್ಚೇರು ಅಂದರೆ ೧ ಸೇರು ಎಂತಲೂ ಹುಡುಗರಿಂದ ಹೊರಡಿಸುವದು.

೯ ಅರ್ಧ ಸಕ್ಕರೆಯನ್ನು ಎರಡು ಭಾಗವಾಡಿ ಒಂದೊಂದು ಪರಡಿಯಲ್ಲಿಟ್ಟು ತೂಗಲಿ,

೧೦ ಒಂದು ಪರಡಿಯಲ್ಲಿ ಆ ಸಕ್ಕರೆಯ ಒಂದು ಭಾಗವನ್ನು ಮತ್ತೊಂದು ಪರಡಿಯಲ್ಲಿ ಪಾವುಶೇರು ಅಥವಾ ಕಿತೊಲಿಗಳನ್ನು ಹಾಕಿ ತೂಗಿ ನೋಡಲಿ.

೯ ಅರ್ಧಸೇರು ಸಕ್ಕರೆಯಲ್ಲಿ ಎರಡು ಸಮಭಾಗಗಳಾದವು.

೧೦ ಇದು ಪಾವಸೇರಿನ ಕಲ್ಲು ಇದರ ತೂಕ ಐದು ತೊಲಿ ಅದೆ.

ಟೀಪು: —ಎರಡು ಪಾವು ಸೇರುಗಳೆಂದರೆ ಒಂದು ಅಚ್ಚೇರು, ೪ ಪಾವಸೇರುಗಳೆಂದರೆ ಒಂದು ಸೇರು ಎಂತಲೂ ಹೇಳಿಸುವದು.

೧೧ ಪಾವಶೇರು ಸಕ್ಕರೆಯನ್ನು ಸಮತೂಲಾಗುವಂತೆ ಎರಡು ಭಾಗವಾಡಿ ತೂಗಿ ನೋಡಲಿ, ಬಳಿಕ ಒಂದು ಪರಡಿಯಲ್ಲಿ ನವಟಾಕಿನ ಕಲ್ಲನ್ನೂ ಅಥವಾ ಎರಡುವರೆ ತೊಲಿಯನ್ನೂ ಮತ್ತೊಂದು ಪರಡಿಯಲ್ಲಿ ಆ ಸಕ್ಕರೆಯ ಒಂದು ಭಾಗವನ್ನೂ ತೂಗಿ ನೋಡಲಿ.

೧೧ ಇದು ನವಟಾಕಿನ ಕಲ್ಲು; ಇದರ ತೂಕ ೨ ಎರಡುವರೆ ತೊಲಿ ಅದೆ.

ಟೀಪು: — ಎರಡು ನವಟಾಕು ಅಂದರೆ ಒಂದು ಪಾವಸೇರು, ನಾಲ್ಕು ನವಟಾಕು ಅಂದರೆ ಒಂದು ಅಚ್ಚೇರು, ಎಂಟು ನವಟಾಕು ಅಂದರೆ ಒಂದು ಸೇರು, ಎಂದು ಹೇಳಿಸುವದು.

೧೦ ಒಂದು ಪರಡಿಹುಲ್ಲಿ ಮೂರು ಸೇರು ಸಕ್ಕರೆಯನ್ನೂ ಮತ್ತೊಂದು ಪರಡಿಯಲ್ಲಿ ಅಡೀಸೇರಿನ(೩ಸೇರು)ಕಲ್ಲನ್ನೂ ಹಾಕಿ ತೂಗಿನೋಡಲಿ.	೧೦ ಅಡೀಸೇರಿನ ಕಲ್ಲು ೩ ಸೇರು ಇರುತ್ತದೆ.

ಟೀಪು:— ಮೂರು ಸೇರಿಗೆ ಅಡೀಸೇರು ಅನ್ನುತ್ತಾರೆಂದು ಹೇಳುವದು.

ಸೂಚನೆ:—ಇದರಂತೆ ಪಂಚೇರು, ಧಡೆಗಳಬಗ್ಗೆ ಕಲಿಸುವದು.

೯ ಬೆಲ್ಲ, ಸಕ್ಕರೆ, ತಾಮ್ರದ ಮತ್ತು ಕಬ್ಬಿಣದ ಸಣ್ಣ ಸಣ್ಣ ಪಾತ್ರೆಗಳು ಇತರ ಸಾಮಾನು ಮುಂತಾದವುಗಳನ್ನೂ ಹುಡುಗರಿಂದಲೇ ತೂಗಿಸಿ ಮೇಲಿನ ಕೋಷ್ಟಕಗಳು ಮನಸಿನಲ್ಲಿ ಸ್ಥಿರವಾಗಿ ನಿಲ್ಲುವಂತೆ ರೂಢಿ ದಾಖಿಸಬೇಕು.

ಉಪಸಂಹಾರ.

೧ ನೀವು ಅರಿತ ತೂಕದ ಕಲ್ಲುಗಳು ಯಾವವು?

೨ ಸೇರು ಅಚ್ಚೇರು ಮುಂತಾದ ತೂಕದ ಕಲ್ಲುಗಳನ್ನು ಹ್ಯಾಗೆ ಹೊಂದಿಸಿನೋಡುವಿರಿ.

೩ ಸೇರಿಗೆ ಅಚ್ಚೇರು, ಪಾವಶೇಕು, ನವಟಾಳುಗಳು ಎಷ್ಟು ?

೪ ಒಂದು ಅಡೀಸೇರಿನ ಕಲ್ಲು ಅದೆ. ಅದರಿಂದ ಪಂಚೇರು, ಧಡೆಗಳನ್ನು ಹ್ಯಾಗೆ ತೂಗುವಿರಿ.

ಶಾಲಾ ಪತ್ರಿಕೆ.

ಪದ್ಯಂ.

ಶ್ರೀಮದ್ವಿದ್ಯಾಗುರುವರ್ಯರನ್ನ ತಿಳಿಯಂ ಸಾಕ್ಷಿಕ್ಷಣೋತ್ಕರ್ಷಣಾ
ಭಿಯಸುತ್ತಂ ಪ್ರತಿಪೂಸದಾದಿಗೊಲವಿಂದೀಪತ್ರಮಂ ಮುದ್ರಿಸಿ ।
ಸಯದಿಂದಿತ್ತವೆಲ್ಲೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ;
ಬಯಲಿಂಬೋಪವತಿದ್ದ ವೇಳ್ವುದುಚಿತಜ್ಞಾನಾಭಿವೃದ್ಧಿಪ್ರಯ ೧॥

ಪುಸ್ತಕ ೪೧] ಜೂಲೈ ೧೯೦೫. [ಸಂಚಿಕೆ ೭

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ತಾ॥ ೨೫-೭-೦೫ನೇ ಇಸವಿಯ ಸಮ್ಮೇಲದ ಕಡೆಯ ದಿವಸ.

ನಿತ್ಯಸುಕ್ರಮದಂತೆ ಪ್ರಾಕ್ಟಿಸಿಂಗಸ್ಕೂಲ ಓದಾಳುಗಳು ಸುನಾದದಿಂದ ಶ್ರೀ ರಮಾಕಾಂತನ ಸ್ತವನವನ್ನು ಮಾಡಿದರು. ಆ ಮೇಲೆ ಕಾಲೇಜದ ಮೊದಲನೇ ಅ. ರಾಗಿದ್ದ ಮ. ರಾ. ರಾ. ಹುನಗುಂದ ಮಾಸ್ತರರು ಸೃಷ್ಟಿಪದಾರ್ಥಗಳ ಮೂರು ರೂಪಗಳಲ್ಲಿ ತಿನೇ ರೂಪವಾದ ವಾಯು ರೂಪ ಪದಾರ್ಥಗಳ ಗುಣಧರ್ಮಗಳಬಗ್ಗೆಯೂ ಅವುಗಳಿಂದಾಗುವ ಕಾರ್ಯಗಳಬಗ್ಗೆಯೂ ಉಪಯೋಗದಬಗ್ಗೆಯೂ ಪ್ರಯೋಗಗಳೊಂದಿಗೆ ತಿಳಿಸಿಕೊಟ್ಟು ಪ್ರೇಕ್ಷಕರನ್ನು ಆನಂದಗೊಳಿಸಿದರು. ಆಕ್ಸಿಜನ್, ಹೈಡ್ರೋಜನ್, ಕಾರ್ಬಾನಿಕ ಆಸಿಡ್‌ಗ್ಯಾಸ ಈ ಮೂರು ವಾಯುಗಳ ವಿಷಯದ ಬಗ್ಗೆ ವಿಶೇಷವಾಗಿ ವಿವೇಚಿಸಿದರು

ತರುವಾಯ ಕಾಲೇಜದ ಕನ್ನಡ ಪಂಡಿತರು ಉಪನ್ಯಾಸಮಾಡಿದರು. ಸಾಧಾರಣ ಪ್ರತಿಯ ಶಾಲೆಗಳಲ್ಲಿ ಕವಿತಾ ವಿಷಯವು ಸರಿಯಾಗಿ ಕಲಿಸಲಡುವದಿಲ್ಲ. ಈ ವಿ

ಪಯೋವನ್ನು ಹ್ಯಾಗೆ ಕಲಿಸಬೇಕೆಂಬ ಬಗ್ಗೆ ಅತಿವುನೋಹರವಾಗಿ ಹೇಳಿದರು. ಕೇಳುವವರಿಗೆ ಇವರ ಭಾಷಣವು ಈಗಲೇ ಯಾಕೆ ಮುಗಿದಿದ್ದೀತೆಂದು ವಿಷಾದವಾಯಿತು ಇವರ ಉಪನ್ಯಾಸದ ವಿವರಣೆಯನ್ನು ಬೇರೆಕಡೆಯಲ್ಲಿ ಕೊಟ್ಟಿದ್ದರಿಂದ ಇಲ್ಲಿ ವಿಶೇಷ ವಿವೇಚಿಸುವ ಕಾರಣವಿಲ್ಲ.

ನಂತರ ಕೃಷಿಕರ್ಮ ಶಿಕ್ಷಕರಾದ ಮಿ. ರೀನಡೆ ಅವರ ಸಂಭಾಷಣೆಯಾಯಿತು. ಇವರು ನಮ್ಮಲ್ಲಿಯ ಒಕ್ಕಲತನದ ಸ್ಥಿತಿಯನ್ನು ಸುಧಾರಿಸುವಬಗ್ಗೆ ವಿವೇಚಿಸಿದರು ಎಂಥ ಭೂಮಿಗಳಿಗೆ ಯಾವ ಪ್ರಕಾರದ ಗೊಬ್ಬರವನ್ನು ಹಾಕಬೇಕು. ಎಂಥ ಭೂಮಿಯಲ್ಲಿ ಯಾವ ಧಾನ್ಯಗಳನ್ನು ಬಿತ್ತಬೇಕು. ನಮ್ಮ ದೇಶದಲ್ಲಿಯ ಕುಂಟೆ ರಂಟಿಗಳು ಯಾವ ಪ್ರಕಾರದವಿರುತ್ತವೆ ಅವುಗಳಲ್ಲಿ ಯಾವ ಯಾವ ಸುಧಾರಣೆಗಳನ್ನು ಮಾಡಬೇಕು ಈ ವರ್ಷ ಭೂಮಿಯಲ್ಲಿ ಯಾವ ಪದಾರ್ಥ ಬೆಳೆದರೆ ಮರುವರುಷ ಯಾವದನ್ನು ಬಿತ್ತಬೇಕು ಮುಂತಾದ್ದರ ಬಗ್ಗೆ ವಿವೇಚಿಸಿದರು.

ಇವರ ಭಾಷಣದ ತರುವಾಯ ರಾ. ಸಾ. ಪ್ರಿನ್ಸಿಪಾಲ ಸಾಹೇಬರು ಮುಂದಾಗತಕ್ಕ ಕಾರ್ಯನಿರೂಪಣೆಯನ್ನು ಮಾಡಿ ಫಲಾಹಾರಕ್ಕೋಸುಗ ಸಮ್ಮೇಲವನ್ನು ವಿಸರ್ಜನೆ ಮಾಡಿದರು.

ಉಪಾಹಾರವಾದ ನಂತರ ವ್ಹಾಯಿಸ್ ಪ್ರಿನ್ಸಿಪಾಲರಾದ ಎಲ್, ಸಿ. ಈ ರಾಮರಾಯರು ಚಿಕ್ಕ ಮಕ್ಕಳಿಗೆ ಶಾಲೆಯು ಬೇಸರಾಗದಂತೆ ಅವರ ಬುದ್ಧಿಯನ್ನು ಬೆಳಿಸಲಿಕ್ಕೆ ಮುಖ್ಯೋಪಾಯವಾದ ಕಿಂಡರ್ ಗಾರ್ಟನ್ ಪದ್ಧತಿಯ ಉಪಯೋಗವನ್ನು ಹೇಳಿದರು. ಹುಡುಗರಿಗೆ ಬೇಸರ ಬರದೆ ಅವರ ಆರೋಗ್ಯಾಭಿವೃದ್ಧಿಯಾಗುವಂತೆಯೂ ವಿಷಯಜ್ಞಾನವಾಗುವಂತೆಯೂ ಕಿಂಡರಗಾರ್ಡನ್ ಆಟಗಳನ್ನು ಆಡಿಸತಕ್ಕ ಬಗೆಯನ್ನು ಹೇಳಿದರು. ಆ ಪ್ರಕಾರ ಪ್ರಾಕ್ಟಿಸಿಂಗಸ್ಕೂಲ ಹೆಡ್ ಮಾಸ್ತರರಾದ ಮಿ. ದೇಶಪಾಂಡೆ ಇವರು ಹುಡುಗರಿಗೆ ಚಂಡಿನಾಟದಿಂದ ಹುಡುಗರ ವಾಮನವಾಗುವಂತೆ ಗಾಯನದೊಂದಿಗೆ ಆಡಿಸಿದ್ದನ್ನು ಹೊಗ

ದ ಸಂಚಿಕೆಯಲ್ಲಿಯೇ ಕೊಟ್ಟಿರುತ್ತೇವೆ. ಆ ಮೇಲೆ ರಾ. ಸಾ. ಪ್ರಿನ್ಸಿಪಾಲ ಸಾ. ರು ಬರುವ ವರ್ಷದವರೆಗೆ ಶಿಕ್ಷಕ ಸಮ್ಮೇಲನವನ್ನು ತಹಕೂಪ ಇಡೋಣವೆಂದು ಹೇಳಿ ಸಭಾ ವಿಸರ್ಜನೆಯನ್ನು ಮಾಡಿದರು.

ಆ ರಾತ್ರಿ ಎಲ್ಲ ಅಧ್ಯಾಪಕರು ಸುಗ್ರಾಸ ಭೋಜನ ಮಾಡಿ ಗಾಯನವಾದನಗಳಿಂದ ಸಂತುಷ್ಟರಾದಮೇಳಿಕ ಕೆಲವರು ಸಮ್ಮೇಲದಿಂದ ತಮಗಾದ ಪ್ರಯೋಜನದ ಸಲುವಾಗಿ ರಾ ಸಾ. ರನ್ನು ಅವರ ನೆರವಿಗರನ್ನು ಕೃತಜ್ಞಾಪೂರ್ವಕವಾಗಿ ಅಭಿನಂದಿಸಿದರು. ಅದಕ್ಕೆ ಪ್ರತ್ಯುತ್ತರವಾಗಿ ಪ್ರಿನ್ಸಿಪಾಲರು ತಮ್ಮ ಕರ್ತವ್ಯವೇ ಇದು ಆದರೆ ಇದರಿಂದ ಲೋಕಶಿಕ್ಷಣದಲ್ಲಿ ಸುಧಾರಣೆಯಾದರೆ ನಮ್ಮ ಉದ್ದೇಶವು ಸಫಲವಾಯಿತೆಂದು, ಬಗೆಯುವೆವು ಎಂಬ ಆಶಯದ ಭಾಷಣವನ್ನು ಮಾಡಿದರು.

ಈ ಮೇರೆಗೆ ಈ ಸಾರಿಯ ಸಮ್ಮೇಲನವು ಸಾಂಗವಾಯಿತೆಂದು ಬರೆದುಲಿಕ್ಕೆ ನಮಗೆ ತುಂಬಾ ಸಮಾಧಾನವೆನಿಸುತ್ತದೆ.

AGRICULTURE.

ಕೃಷಿತಾಸ್ತ್ರವು.

ಗೊಬ್ಬರಗಳು.

ವ್ಯಾಖ್ಯೆಯೂ ವರ್ಗೀಕರಣವೂ.

ಸ್ವಾಭಾವಿಕವಾಗಿ ದೊರಿಯುವ ವನಸ್ಪತ್ಯಾಹಾರದ ಸಂಗ್ರಹವನ್ನು ಹೆಚ್ಚಿಸುವದಕ್ಕಾಗಿ ಭೂಮಿಯಲ್ಲಿ ಹಾಕಿದ ದ್ರವ್ಯಕ್ಕೆ ಗೊಬ್ಬರವೆನ್ನುತ್ತಾರೆ. ಗೊಬ್ಬರದಲ್ಲಿ ಅವಶ್ಯವಾಗಿ ಹಾಕಬೇಕೆಂದು ಎಣಿಸಲ್ಪಡುವ ವನಸ್ಪತ್ಯಾಹಾರದ ಘಟಕಾವಯವಗಳು ಮರ್ಯಾದಿತವಾಗಿರುತ್ತವೆ. ಇವುಗಳಲ್ಲಿ ನೈತ್ರೋಜನ್ನ, ಫಾಸಫೊರಿಕ ಆಸಿಡ್ಡ, ಪೊಟ್ಯಾಶ ಇವೇ ಮುಖ್ಯವಾದವುಗಳು.

ಸುಣ್ಣ, ಗೊಧಕ, ಹಪ್ಪಳಖಾರ, ಮಾಗ್ನೇಸಿಯಾ, ಆಕ್ಸ್ಲೋರಿಯಿನ್ ಇವುಗಳನ್ನು ಸಾಧಾರಣವಾಗಿ ಉಳಿದ ಗೊಬ್ಬರಗಳಲ್ಲಿ ಕೆಲ ಕೆಲವು ಪ್ರಸಂಗಗಳಲ್ಲಿ ಉಪಯೋಗಿಸುತ್ತಾರೆ. ಗೊಬ್ಬರವನ್ನು ವಿಶೇಷವಾಗಿ ಅದರ ರಸಾಯನ ವ್ಯಾಪಾರಕ್ಕಾಗಿ ಹಾಕುತ್ತಾರೆ. ಯಾಂತ್ರಿಕ ವ್ಯಾಪಾರಕ್ಕಾಗಿಯೂ ಅದನ್ನು ಕೆಲವುಮಟ್ಟಿಗೆ ಉಪಯೋಗಿಸುವದುಂಟು.

'ಲಾಯಬಿಗ್ಗನ ಪರಮಾಣು ಸಂಬಂಧದ ನಿಯಮವು.

ಪ್ರತಿ ಒಂದು ಹೊಲದಲ್ಲಿ ಒಂದಾಗಲೀ ಹಲವಾಗಲೀ ಪೋಷಕ ದ್ರವ್ಯಗಳ ಪರಮಾವಧಿಯು ಮತ್ತು ಬೇರೆ ಕೆಲವು ದ್ರವ್ಯಗಳ ಕನಿಷ್ಠಪ್ರಮಾಣವು ಇರುವದುಂಟು. ಪೋಷಕ ದ್ರವ್ಯವು ಸುಣ್ಣ, ಪೊಟ್ಯಾಶ, ನೈತ್ರೋಜನ, ಫಾಸಫೊರಿಕ್ ಆಸಿಡ್ಡ, ಮ್ಯಾಗ್ನೇಶಿಯಾ ಅಥವಾ ಬೇರೆ ಯಾವದೇ ಖನಿಜ ದ್ರವ್ಯವಾಗಲೀ ಅದರ ಪರಮಾಣುನಿನ ನಿಯಮವನ್ನು ವಲಂಭಿಸಿ ಬೆಳೆಗಳು ಬೆಳೆಯುತ್ತವೆ ಆದ್ದರಿಂದ ನಾವು ಗೊಬ್ಬರದಿಂದ ಹೊಲದ ಫಲಕರತ್ವವನ್ನು ಹೆಚ್ಚಿಸಬೇಕಾದರೆ ಕಡಿಮೆ ಇದ್ದ ಪೋಷಕ ದ್ರವ್ಯಗಳ ಘಟಕಾವಯವಗಳನ್ನೇ ಹೆಚ್ಚಿಸಬೇಕೇ ಹೊರ್ತು ಕಡಿಮೆ ಪೊಟ್ಯಾಶ ಇದ್ದ ಹೊಲದಲ್ಲಿ ಪೊಟ್ಯಾಶದ ಗೊಬ್ಬರವನ್ನು ಕಡಿಮೆ ನೈತ್ರೋಜನ್ ಇದ್ದ ಹೊಲದಲ್ಲಿ ನೈತ್ರೋಜನ್ ಗೊಬ್ಬರವನ್ನು ಹಾಕಬೇಕು. ನೈತ್ರೋಜನವೇ ಇಲ್ಲದ ಹೊಲದಲ್ಲಿ ಪೊಟ್ಯಾಶದ ಗೊಬ್ಬರವನ್ನು ಹಾಕುವದರಲ್ಲಿ ಏನು ಪ್ರಯೋಜನವಿಲ್ಲ. ಭೂಮಿಯಲ್ಲಿ ಯಾವದಾದರೊಂದು ಅವಶ್ಯವಾದ ಘಟಕಾವಯವವು ಎಲ್ಲಿಯವರೆಗೆ ಕಡಿಮೆ ಇರುತ್ತದೆಯೋ ಅಲ್ಲಿಯವರಿಗೆ ಆ ಕಡಿಮೆ ಇದ್ದ ಘಟಕಾಯವನ್ನು ಹಾಕುವದರಿಂದ ಹೊಲಕ್ಕೆ ಉಪಯೋಗವಾಗುತ್ತದೆ. ಗೊಬ್ಬರಗಳಲ್ಲಿ ಅನೇಕ ವರ್ಗಗಳನ್ನು ಮಾಡಬಹುದು. ೧ ಸಾಧಾರಣ ಗೊಬ್ಬರವು ಮತ್ತು ವಿಶೇಷ ಪ್ರಕಾರದ ಗೊಬ್ಬರವು. ೨ ಸ್ವಭಾವಿಕವಾದ ಗೊಬ್ಬರವು, ಕೃತ್ರಿಮ ಗೊಬ್ಬರವು. ೩ ಪ್ರಾಣಿಕೋಟಿ ಸಂಬಂಧದ, ವನಸ್ಪತಿ ಸಂಬಂಧದ ಖನಿಜಪದಾರ್ಥಕ ಸಂಬಂ

ಥದ ಹಾಗೂ ಪೊಟ್ಯಾಶಿಕ ಗೊಬ್ಬರವು. ವಾಡಿಕೆಯಾಗಿ ಗೊಬ್ಬರಗಳಲ್ಲಿ ಸಾಧಾರಣ ಗೊಬ್ಬರವೆಂತಲೂ ವಿಶೇಷ ಪ್ರಕಾರದವೆಂತಲೂ ಹೀಗೆ ಎರಡು ಪ್ರಕಾರದ ವರ್ಗಗಳನ್ನು ಮಾಡುತ್ತಾರೆ.

ಸಾಧಾರಣ ಗೊಬ್ಬರಗಳು:—ಬೆಳೆಗಳು ಯಥಾ ಯೋಗ್ಯವಾಗಿ ಬೆಳೆಯುವದಕ್ಕೆ ಅವಶ್ಯವಾದ ಎಲ್ಲ ಘಟಕಾವಯವಗಳು ಸೇರಿಕೆಪ್ಪು ಇದ್ದು ಗೊಬ್ಬರಕ್ಕೆ ಸಾಧಾರಣ ಗೊಬ್ಬರವೆಂದು ಕರಿಯಬಹುದು. ಸಾಧಾರಣದ ಗೊಬ್ಬರದ ಉದಾಹರಣೆಗಳು ಕಿಟ್ಟದ ಗೊಬ್ಬರವೂ ಗ್ರಾಮಸಾರವೂ ಮನುಷ್ಯರ ಮಲವೂ ಮನುಷ್ಯರ ಗೊಬ್ಬರವೂ ರಕ್ತವೂ ಮಾಂಸವೂ ಹಸರು ಬೆಳೆಗಳ ಗೊಬ್ಬರವು ಕಟಿಕರ ಮನೆಯಲ್ಲಿ ದೊರಿಯುವ ಅವಶಿಷ್ಟ ದ್ರವ್ಯದಿಂದಾಗುವ ಗೊಬ್ಬರವೂ ತೊಗಲು ಹದಮಾಡುವ, ಉಣ್ಣೆಯ, ತೊಗಲಿನ, ವಿಾನದ ಕಾರಖಾನೆಗಳಲ್ಲಿ ದೊರಿಯುವ ಅವಶಿಷ್ಟದಿಂದಾಗುವ ಗೊಬ್ಬರವು, ಸಮುದ್ರ ಕೋಳಿಗಳ ಮಲದಿಂದ ಸಮುದ್ರ ದಂಡೆಯ ಮೇಲಿನ ಗಿಡಗಳಿಂದಾಗುವ ಗೊಬ್ಬರವು ಮತ್ತು ಬೆರಿಕೆ ಗೊಬ್ಬರವು.

ವಿಶೇಷ ಪ್ರಕಾರದ ಗೊಬ್ಬರಗಳು:—ವನಸ್ಪತ್ಯಾಹಾರಕ್ಕೆ ಅವಶ್ಯವಾದ ಘಟಕಾಯವಗಳಲ್ಲಿ ಒಂದಾಗಲೀ ಎರಡಾಗಲೀ ಇರುವ ಗೊಬ್ಬರಕ್ಕೆ ವಿಶೇಷ ಪ್ರಕಾರವೆನ್ನುತ್ತಾರೆ. ಈ ಗೊಬ್ಬರದಿಂದಲೇ ಯಾವದಾದರೊಂದು ಬೆಳೆಗೆ ಸಾಕಷ್ಟು ಪೋಷಣೆಯು ದೊರಿಯುವದಿಲ್ಲ. ಉದಾಹರಣೆಗಳು, ಸುಪರ ಫೋಸ್ಫೇಟ ಆಫ ಲಾಯಮ್ಮ, ಸೋಡಾ ನೈತ್ರೇತವು. ಕುದಿಸಿದ ಸುಣ್ಣ ಸಲ್ಫೇಟ ಆಫ ಪೊಟ್ಯಾಶ, ಉಪ್ಪು, ಸಲ್ಫೇಟ ಆಫ ಆಯರ್ನ, ಅಮೋನಿಯಾ ಸಲ್ಫೇಟ, ನೀರಲ್ಲಿ ಕರಗಿದ ಎಲಬುಗಳು.

ಕಿಟ್ಟದ ಗೊಬ್ಬರವು:—ಇದು ಮುಖ್ಯವಾದ ಸಾಧಾರಣ ಗೊಬ್ಬರವು ಎಲ್ಲ ಭೂಮಿಗಳಲ್ಲಿಯೂ ಸ್ಥಿತಿಗತಿಗಳಲ್ಲಿಯೂ ಇದನ್ನು ಉಪಯೋಗಿಸುತ್ತಾರೆ. ಇದು ವಾಡಿಕೆಯಾಗಿ (ಕುರಿಯ ಗೊಬ್ಬರವನ್ನು ಬಿಟ್ಟು) ಹೊಲದಲ್ಲಿಯೇ ಮೇಯುವ

ಪ್ರಾಣಿಗಳ ಮಲಮೂತ್ರದ ಮಿಶ್ರಣವಿರುತ್ತದೆ. ಸಾಧಾರಣವಾಗಿ ಹುಲ್ಲು ಆಗಿರುವ ಕಸರೂಪದಲ್ಲಿರುವ ಹೀರಿಕೊಳ್ಳುವ ದ್ರವ್ಯದಿಂದ ಇದು ಮಿಶ್ರಿತವಾಗಿರುತ್ತದೆ.

ಉತ್ಪತ್ತಿಯು:—ಇದನ್ನು ಹುಟ್ಟಿಸುವ ಪ್ರಾಣಿಗಳು ಇರುವ ಸ್ಥಳದೊಳಗಿಂದ ಈ ಗೊಬ್ಬರವನ್ನು ತಕ್ಕೊಂಡು ಇದನ್ನು ಒಂದು ಆರಿಸಿಟ್ಟ ಸ್ಥಳದಲ್ಲಿ ಹರವುತ್ತಾರೆ. ಈ ಸ್ಥಳದ ಬುಡದಲ್ಲಿ ಪ್ರವಾಹಿ ರೂಪಿಯಾಪ ಗೊಬ್ಬರದ ಸಂಜಡು ಕ್ಕೋಸ್ಕರ ಒಂದು ಕೆರೆಯು ಬಹಳವಾಡಿ ಇರುತ್ತದೆ. ಕೆಲವು ಪ್ರಸಂಗಗಳಲ್ಲಿ ಮಾತ್ರ ಇರಲಿಕ್ಕಿಲ್ಲ ಮಲದ ಗೊಬ್ಬರವು ಪಚನ ಆಗದೆ ಇದ್ದ ಪ್ರಾಣಿಗಳ ಆಹಾರದ ಭಾಗವು ಮತ್ತು ಅನ್ನದೊಳಗೆ ಸಂಚಯವಾಗಿದ್ದ ದ್ರವ್ಯವು ಕೂಡಿ ಆಗಿರುತ್ತದೆ ಮೂತ್ರದ ಗೊಬ್ಬರವು ಬಹಳ ಅಂಶದಲ್ಲಿ ಕರೀರದೊಳಗಿನ ಅವಶಿಷ್ಟ ದ್ರವ್ಯವನ್ನು ಕೂಡಿ ಆಗಿರುತ್ತದೆ. ಈ ಅವಶಿಷ್ಟ ದ್ರವ್ಯಗಳನ್ನು ರಕ್ತವು ಶರೀರ ರಚನಾವಯವಗಳೊಳಗಿಂದ ತೆಗೆದುಕೊಳ್ಳುತ್ತದೆ. ಮತ್ತು ಮೂತ್ರಾಶಯಗಳು ಇವುಗಳನ್ನು ಮೂತ್ರ ರೂಪದಿಂದ ಬಿಡುವದರಿಂದ ಇವು ರಕ್ತದಿಂದ ಬೇರೆ ಆಗುತ್ತವೆ. ಕೊಳತ ಸಸಿ, ಮಣ್ಣು, ಕಟಗಿಯ ಪುಡಿ ಇವುಗಳನ್ನು ಕೆಲವು ಪ್ರಸಂಗಗಳಲ್ಲಿ ಉಪಯೋಗಿಸಿದಾಗ್ಯೂ ಕಸವು ಸಾಧಾರಣವಾಗಿ ಹುಲ್ಲೇಲಿಗಿರುತ್ತದೆ.

ಇದು ಸಚೇತನ ದ್ರವ್ಯಗಳಿಂದಾಗುವ ವ್ಯಾಪಾರವು. ಈ ವ್ಯಾಪಾರವು ನಡಿಯುವ ಕಾಲಕ್ಕೆ ಕಾರ್ಬಾನಿಕ್ ಆಸಿಡ್ ಗ್ಯಾಸ, ಕಾರಬೊನಾಕ್ಸಾಯಿಡ್, ಕಾರ್ಬೂರೆಟೇಡ್ ಹೈಡ್ರೋಜನ್ ಮತ್ತು ತುಸು ಅಮೋನಿಯಾ ಇವು ಹೊರಟು ಹೋಗುತ್ತವೆ. ಹೀಗಾಗಿ ಆ ದ್ರವ್ಯದ ತೂಕವು ಕಡಿಮೆಯಾಗುತ್ತದೆ. ಮತ್ತು ಅದು ಬಿಸಿಯಾಗುತ್ತದೆ. ಸಾಧಾರಣವಾಗಿ ಆ ದ್ರವ್ಯದ ೫ದಿಂದ ೫ದ ವರಿಗೆ ತೂಕವು ಕಡಿಮೆಯಾಗುತ್ತದೆ ಕಸದ ಕಾರ್ಬೋನಿಯಸ ದ್ರವ್ಯವೇ ಮುಖ್ಯವಾಗಿ ಕಡಿಮೆಯಾಗುತ್ತದೆ ದ್ರವ್ಯ ಸ್ಥಿತಿಯಲ್ಲಿರುವ ಬೆಲೆಯುಳ್ಳ ದ್ರವ್ಯಗಳ ಪ್ರಮಾಣವು ಹೆಚ್ಚಾಗುತ್ತದೆ. ಅದರಂತೆ ನೈತ್ರೋ

ಜನ್ನ ಮತ್ತು ಬೇರೆ ಮಹತ್ವವಾದ ಘಟಕಾವಯವಗಳ ಪ್ರಮಾಣವು ಹೆಚ್ಚಾಗುತ್ತದೆ. ಚೆನ್ನಾಗಿ ಕೊಳೆತ ಮಲದಲ್ಲಿರುವ ನೀರಿನ ಪ್ರಮಾಣವು ತಾಜಾ ಹೊಲದಲ್ಲಿರುವ ಗೊಬ್ಬರದಲ್ಲಿಯ ನೀರಿನ ಪ್ರಮಾಣಕ್ಕಿಂತ ಹೆಚ್ಚಿರುತ್ತದೆ. ಕೊಳೆಯುವ ವ್ಯಾಪಾರದಲ್ಲಿ ಸೇಂದ್ರಿಯ ಆಮ್ಲಗಳು ಹುಟ್ಟುತವೆಂದು ಕೆಲಸವಾಸಿಯಾದ ಡಾಕ್ಟರ ಹ್ಯಾಲ್ಸ್ಟಾರನೆಂಬವನು ಗೊತ್ತು ಹಿಡಿದನು. ಇದಲ್ಲದೆ ಈ ಆಸಿಡ್‌ಗಳು ಅಮೋನಿಯಾ, ಪೊಟ್ಯಾಶ, ಸೋಡಾ ಇವುಗಳನ್ನು ಕೂಡಿಕೊಂಡು ದ್ರವ್ಯವಾದ ಮತ್ತು ಮಹತ್ವವಾದ ಮಿಶ್ರಣಗಳಾಗುತ್ತವೆಂತಲೂ (ಆದರಿಂದಲೇ ಸಗಣಿಗಳ ತಿಪ್ಪೆಗಳಿಂದ ಹರಿದು ಬಂದ ದ್ರವ್ಯಗಳ ಬಣ್ಣವು ಕಪ್ಪಾಗಿರುತ್ತದೆ.) ಗಂಧಕ ಘಾಸಫರಸದ ಕೆಲವಂಕವು ಸಲ್ಫೂರೇಟೆಡ್ ಹೈಡ್ರೋಜನ್ನ ಫೊಸಫೊರಿಕ್ಕಟ್ರ್ ಹೈಡ್ರೋಜನ್ನ ರೂಪದಿಂದ ಹೊರಟು ಹೋಗುತ್ತದೆಂತಲೂ ಇವನು ಗೊತ್ತು ಹಿಡಿದನು. ಅಮೋನಿಯದ ಹಾರಿಹೋಗುವ ದ್ರವ್ಯಗಳು ಮಿಶ್ರಣಗಳು ಆ ದ್ರವ್ಯದಿಂದ ಹೊರಟು ಹೋಗುತ್ತವೆ.

ಕಾರ್ಬೊಸೇಕನ್ನ ಸೇಂದ್ರಿಯ ದ್ರವ್ಯವು ಕಾರ್ಬನಿಕ್ಕ ಆಸಿಡ್‌ಗ್ಯಾಸ, ಕಾರ್ಬನಾಕ್ಸಾಯಿಡ್ ಮತ್ತು ಹಗುರಾದ ಕಾರ್ಬುರೇಟೆಡ್ ಹೈಡ್ರೋಜನ್ನ ಇವುಗಳ ರೂಪದಿಂದ ಹೊರಟು ಹೋಗುತ್ತದೆ.

(ಸಶೇಷ.)

MEMORY.
ಸ್ಮರಣಶಕ್ತಿ.

ಅದನ್ನು ವರ್ಗೀಕರಿಸಿ, ನೆನಪಿನಲ್ಲಿಡಲಿಕ್ಕೆ ಮಾರ್ಗವಾಗುತ್ತದೆ. ಲಕ್ಷ್ಯಪೂರ್ವಕವಾಗಿ ನಿರೀಕ್ಷಿಸಿದ ವಸ್ತುವು ಮೇಲೆ ಮೇಲೆ ಮಾತ್ರನೋಡಿದ ವಸ್ತುಗಿಂತ ಹೆಚ್ಚು ಸ್ಮರಣದಲ್ಲಿ ಉಳಿಯುವದು ಇದು ಪ್ರತಿಯೊಬ್ಬರ ಅನುಭವಕ್ಕೆ ಬಂದದ್ದೇ ಇರುವದು. ಆದರೂ ಅದರ ಪ್ರತ್ಯಕ್ಷವಾದ ಚಿತ್ರವನ್ನು ಜನರ ಮುಂದೆ ಮೊದಲಿದ್ದಂತೆಯೇ ಇರಿ

ಸುವದು ಬಹುಕಠಿಣವಾದ ಸಂಗತಿಯಾದೆ. ಆದರೆ ಅದೇ ವಸ್ತುವನ್ನು ಒಮ್ಮೆ ಅವಧಾನಕೊಟ್ಟು ಕಣ್ಣಾರೆದು ನೋಡಿ ಅಂತಃಕರಣ (ಒಳ ಇಂದ್ರಿಯ=ಸ್ಮರಣ) ದಲ್ಲಿ. ಅದರ ಪೂರ್ಣಚಿತ್ರವವನ್ನು ಇರಿಸುವ ಪ್ರಯತ್ನಮಾಡಿದರೆ ಮಾತ್ರ ಆ ಒಡಿನೆಯು ನಮ್ಮ ಸ್ಮರಣದಲ್ಲಿ ಬಹುಕಾಲನಿಂತು ಮೊದಲಿದ್ದಂತೆಯೇ ಅದನ್ನು ಮುಂದಿಯ ಮುಂದಿಡಲಿಕ್ಕೆ ಸಮರ್ಥರಾಗಬಹುದು. ಜ್ಞಾನ ಸಂಬಂಧದ ವಿಷಯುಕ್ಕಾದರೂ ಇದನ್ನೇ ಅನುಸರಿಸತಕ್ಕದ್ದು. ಲಕ್ಷ್ಯಪೂರ್ವಕವಾಗಿ ಅವಲೋಕನ ಮಾಡಿದ ಸಂಗತಿಯನ್ನು ಮನನ ಮಾಡಿಕೊಂಡರೆ ಮಾತ್ರ ಅದು ಚಿತ್ತದಲ್ಲಿ ಜನ್ಮಾಗಿ ಚಿರಸ್ಥಾಯಿಯಾಗುವದು.

'ವಿಚಾರದಿಂದ ಸ್ಮರಣಶಕ್ತಿಯು ಕಡಿಮೆಯಾಗುತ್ತದೆ'; ಈ ಸಾಮಾನ್ಯ ಸಿದ್ಧಾಂತವು ಸರ್ವರಿಗೂ ಮಾನ್ಯವಿಗಲಿಕ್ಕೆ ಬೇಕು. ಸ್ಮರಣ ಶಕ್ತಿಯು ಹೆಚ್ಚಿಗಿದ್ದವರಿಗೆ ವಿಚಾರ ಶಕ್ತಿಯು ಕಡಿಮೆ. ಅನುಭವದಿಂದ ನೋಡಿದರೆ, ಗಣಿತ ವಿಷಯವನ್ನು ಜನ್ಮಾಗಿಮಾಡಬಲ್ಲ ವಿದ್ಯಾರ್ಥಿಯು ಇತಿಹಾಸ ಮುಂತಾದ ಬಾಯುಪಾಠದ ವಿಷಯುಗಳಲ್ಲಿ ಅಷ್ಟು ಬಲ್ಲಿದ ನಿರಲಾರನು ಯಾಕಂದರೆ, ವಿಚಾರಶಕ್ತಿಯು ಹೆಚ್ಚಿಗಿದ್ದಂತೆ ಸ್ಮರಣಶಕ್ತಿಯು ಪಡಿಮೆಯಾಗುತ್ತದೆ. ಒಮ್ಮೆ ಅವಲೋಕನ ಮಾಡಿದ ವಿಷಯವನ್ನು ಪುನಃ ಪುನಃ ಸ್ಮರಣಶಕ್ತಿಯ ಮುಂದೆ ತರುವದೆಂದರೆ, ತತ್ಸಂಬಂಧೀಯವಾಗಿ ನಾವು ವಿಚಾರಮಾಡಿದ ಹಾಗಾಯಿತೆಂದು ಕೆಲವರು ಆಕ್ಷೇಪಿಸಬಹುದು ಆದರೆ ಸೂಕ್ಷ್ಮದೃಷ್ಟಿಯಿಂದ ವಿಚಾರಿಸಿನೋಡಿದರೆ, ಅದು ಸುಟಿಯಿಂದು ಆಗಲೇ ತಿಳಿಯುವದು. ಕಾರಣವೇನೆಂದರೆ, ಒಮ್ಮೆ ಅಧ್ಯಯನ ಮಾಡಿದ ವಿಷಯವು ನಮ್ಮ ಸ್ಮರಣದಿಂದ ಲುಪ್ತವಾಗಬಾರದೆಂದು ಅದನ್ನು ಮೇಲೆ ಮೇಲೆ ಅಧ್ಯಯನ ಮಾಡುತ್ತೇವೆ. (ಆ ವಿಷಯವನ್ನು ಕಣ್ಣಾದುರಿಗೆ ತರುತ್ತೇವೆ). ಹೀಗೆಮಾಡದೆ ಎರಡನೆಯ ವಿಷಯದ ಜ್ಞಾನಮಾಡಿಕೊಳ್ಳುವ ಫರಕ್ಕೆಬಿದ್ದರೆ, ಮೊದಲಿನ ವಿಷಯುವ ಜ್ಞಾನವು ಕೆಲವಂಶದಿಂದಾದರೂ ನ

ಷ್ಟವಾಗಲಿಕ್ಕೆಬೇಕು. ಹೀಗಾಗುವದು ಸಂಭವನೀಯವೇ! ಒಂದೇ ವಿಷಯದ ಅಭ್ಯಾಸವನ್ನು ಮೇಲೆ ಮೇಲೆ ಮಾಡುವದರಿಂದ ಒಂದೇ ವಿಷಯವು ಧ್ಯಾನದಲ್ಲಿ ಉಳಿಯುವದು. ಕೆಲಹೊತ್ತು ಬಿಟ್ಟು ಮುಂದೆ ಬೇರೆ ವಿಷಯವನ್ನು ಕಯ್ಕೊಳ್ಳಲು, ಮೊದಲನೆಯ ವಿಷಯದ ಅನೇಕ ಸಂಗತಿಗಳು ಮರೆದು ಹೋಗುತ್ತವೆಂಬದಾದರೂ ಅನುಭವಸಿದ್ಧವಾಗಿಯೇ ಅದೆ.

ಸಣ್ಣ ಹುಡುಗರ ಸ್ಮರಣಶಕ್ತಿಯು ಒಳ್ಳೇ ಚುರುಕಾಗಿರುವ ಕಾರಣವೇನು? ಇದಕ್ಕೆ ಉತ್ತರವಿಷ್ಟೇ!:— ಚಿಕ್ಕಂದಿನಲ್ಲಿ ಅವರ ಮಿದುಳಿನ ಮೇಲೆ ಅನೇಕ ವಿಷಯಗಳ ವಿಚಾರದ ಹೊರೆಯು ಬಿದ್ದಿರುವದಿಲ್ಲ. ಆದರೆ ಮುಂದೆ ಅವರೇ ವಿದ್ಯಾಭ್ಯಾಸ ಮಾಡತೊಡಗಿ, ಫೋಕಂಪಟ್ಟಿಯು—ಯುಂತ್ರದಲ್ಲಿ ಸೇರಲು, ಅವರ ಸ್ಮರಣಶಕ್ತಿಯು ಕಸುವು ಕುಗ್ಗುತ್ತದೆ ನಮ್ಮ ಈ ದೇಶದ ಸ್ತ್ರೀಯರಿಗೆ ಶಿಕ್ಷಣ ಸಂಬಂಧದಿಂದ ಅವಬಗೆಯು ಊಹಾಪೋಹವನ್ನು ಮಾಡಲು, ಸ್ವಾತಂತ್ರ್ಯವಿಲ್ಲದರಿಂದ ಅವರ ವಿಚಾರಶಕ್ತಿಯುಮೇಲೆ ಏನೂ ಹೊರೆಯು ಬೀಳುವದಿಲ್ಲ. ಇದರಿಂದಲೇ ಅವರ ಸ್ಮರಣಶಕ್ತಿಯು ಒಳ್ಳೇ ಚುರುಕಾಗಿರುತ್ತದೆ. ಲಗ್ನಾದಿ ಶುಭ ಕಾರ್ಯಗಳಲ್ಲಿ ಅನ್ನತಕ್ಕ ಹಾಡುಗಳೂ ಒಗಟುಗಳೂ, ಅವರು ಮೇಲೆ ಮೇಲೆ ಅಂದು ರೂಢೀ ಮಾಡಿರದಿದ್ದರೂ ಸಹ ಏನೂ ತಪ್ಪದಂತೆ ಅಂದುಬಿಡುವರು. ಇದಲ್ಲದೆ ಮನೆವಾರ್ತೆಯ ಎಷ್ಟೋ ಕೆಲಸಗಳಲ್ಲಿ ಸಹ ಅವರ ಸ್ಮರಣಶಕ್ತಿಯು ವರ್ಣಿಸತಕ್ಕಂತಹದಿರುತ್ತದೆಂಬ ಸಂಗತಿಯು ಪ್ರತಿಯೊಬ್ಬ ಚಾಣಾಕ್ಷ ಗೃಹಸ್ಥನಿಗೆ ಮನವರಿಕೆಯಾದ ಸಂಗತಿಯಾಗಿದೆ. ಕಾರುಡರ ಸ್ಮರಣಶಕ್ತಿಯಾದರೂ ಇದೇ ಕಾರಣದಿಂದ ಬಲವತ್ತರವಾಗಿರುತ್ತದೆ. ಸಾರಾಂಶ ವಿಚಾರದಿಂದ ಸ್ಮರಣಶಕ್ತಿಯು ಮಂದವಾಗುತ್ತದೆ.

ಮೂರನೆಯ ಸಾಧನವು—ವಾಚನವು. ಪುಸ್ತಕವು ಒಂದು ಬಗೆಯ ಸ್ನೇಹಿತನೇಸರಿ. ಗ್ರಂಥಗಳನ್ನೋದುವದರಿಂದ ಅದನ್ನು ಬರೆದ ಮಹನೀಯರ ಪರಿಚಯವು ನಮಗಾಗು

ವದಿಪ್ಪೇ ಅಲ್ಲ. ಅದರಿಂದ ಐಹಿಕ, ಪಾರಲೌಕಿಕ ಸಂಬಂಧದ ಎಷ್ಟೋ ಸಾಧನಗಳನ್ನು ಪಡೆಯಲಿಕ್ಕೆ ಮಾರ್ಗವಾಗುತ್ತದೆ. ಪ್ರತಿಯೊಂದು ಗ್ರಂಥವೂ ಅದನ್ನು ಬರೆದವರ ಭಾವಪಠ (ಫೋಟೋ) ವಿರುತ್ತದೆಯೆನ್ನಲಿಕ್ಕೆ ಅಡ್ಡಿ ಇಲ್ಲ. ಅದರಲ್ಲಿ ಅವರ ವಿಚಾರಗಳ ಜ್ಞಾನಚಿತ್ರವು ಯಥಾರ್ಥವಾಗಿ ಮೂಡಿರುತ್ತದೆ. ಇದರಿಂದ ನಮ್ಮ ಜ್ಞಾನವು ಹೆಚ್ಚಾಗುವದು. ವಾಚನದಿಂದ ಸ್ಮರಣಶಕ್ತಿಗೆ ನೆರವಾಗುವದೆಂದು ಹೆಲವರು ಹೇಳುವದು ಅದರ ಸೂಕ್ಷ್ಮದೃಷ್ಟಿಯಿಂವ ಅದಯನ್ನು ನೋಡಿದರೆ, ಅದು ಸತ್ಯವೆಂದು ಸಪಸ್ಟವಾಗಿ ಅನ್ನಲಾಗದು. ವಾಚನದಿಂದ ವಿಚಾರ ಸಾಮರ್ಥ್ಯವು ಮಾತ್ರ ಬರುವದು. ಅಸರೆ 'ವಿಚಾರಶಕ್ತಿಯು ಬೆಳಿಗೆಯು ಕುಂದುತ್ತದೆಂ'ದು ಮೇಲಿನ ಸಿದ್ಧಾಂತದಿಂದ ನಿರ್ಣೀತವಾಗಿದೆ ಒಟ್ಟಿಗೆ ವಾಚನದಿಂದ ಸ್ಮರಣಶಕ್ತಿಯು ಬೆಳೆಯುವದು ಕಡಿಮೆ. ಹೀಗಿದ್ದರೂ, ಬಂದು ವಿಷಯದ ಸಂಬಂಧದಿಂದ ಒಮ್ಮೆನಮಗಾದ ಜ್ಞಾನವು ಓದುವಾಗ ಪುನಃ ಪುನಃ ನಮ್ಮೆದುರು ಬರುವದರಿಂದ ಕೆಲವು ಅಂಶದಿಂದಾದರೂ ಸ್ಮರಣಶಕ್ತಿಗೆ ನೆರವಾಗುವದು 'ಇದರಿಂದಲೇ ವಾಚನವು ಸ್ಮರಣಶಕ್ತಿಗೆ ಸಹಾಯ್ಯವಾಗುತ್ತದೆ' ಎಂದು ಗೊತ್ತು ಮಾಡಬಹುದು. ಶ್ರವಣದಿಂದಾದರೂ ಈ ಕೆಲಸವಾಗುವದು.

ನಾಲ್ಕನೆಯ ಸಾಧನವು—ಲೇಖನವು: ಲೇಖನ ಕಲೆಯ ಸಹಾಯದಿಂದಾದರೂ ಸಂಪಾದಿತಜ್ಞಾನವನ್ನು ಸ್ಥಿರವಾಗಿ ಇಡಲಿಕ್ಕೆ ಬರುವದು. ಬರಿಯವಿಚಾರದಿಂದ ಮನಸ್ಸೋವ್ಯಾಪಾರದಲ್ಲಿ ಗೊಂದಲವಾಗಿ ವಿಷಯವು ಸ್ಮರಣದಲ್ಲಿ ಉಳಿಯದಂತಾಗುವದು. ಆದರೆ ಅದನ್ನೇ ಬರೆದಿಡಬೇಕಾದರೆ ನಮ್ಮ ವಿಚಾರಕ್ಕೆ ವ್ಯವಸ್ಥಿತ ಸ್ವರೂಪವನ್ನು ಕೊಡಬೇಕಾಗುವದು. ಓದಿದ ಸಂಗತಿಯನ್ನು ಬರೆದಿಟ್ಟರೆ ಅದು ನಮ್ಮ ಸ್ಮರಣದಲ್ಲಿ ನಿಂತಪ್ಪು ಬರಿಯವಾಚನದಿಂದ ನಿಲ್ಲಲಾರದು. ಆದುದರಿಂದ 'ಪ್ರತಿಯೊಬ್ಬನು ತಾನು ಓದಿದ ವಿಷಯವನ್ನು ತನ್ನ ಭಾಷೆಯಿಂದ ಒರೆದಿಡಬೇಕು: ಇದ

ರಿಂದ ಜ್ಞಾನಾಭಿವೃದ್ಧಿಯಾಗುವದಲ್ಲದೆ, ಸಣ್ಣ ಪುಟ್ಟ ಸಂಗತಿಗಳನ್ನು ಸಹ ಸ್ಮರಣದಲ್ಲಿ ಇರಿಸಲಿಕ್ಕೆ ಮಾರ್ಗವಾಗುತ್ತದೆ ಇದಲ್ಲದೆ ಅದನ್ನು ತನ್ನ ಭಾವೆಯಿಂದಲೇ ಬರೆಯುತ್ತಿರುವದರಿಂದ ಭಾಷಾಜ್ಞಾನವೂ ಬೆಳೆಯುತ್ತದೆ. ಬರೆಯುತಕ್ಕ ಶೈಲಿಯೂ ಬರುತ್ತದೆ. ಹೆರವರ ವಿಚಾರಗಳನ್ನು ನಮ್ಮಸ್ವತ್ತಾಗಿ ಮಾಡಿಕೊಳ್ಳತಕ್ಕ ಸಾಮರ್ಥ್ಯವೂ ಬರುತ್ತದೆ. ವಾಚನದಿಂದ ಕಿರಕುಳ ಸಂಗತಿಗಳು ನಮ್ಮ ಸ್ಮರಣದಲ್ಲಿ ಎಷ್ಟುಮಾತ್ರವೂ ತಕ್ಕಂತೆ ನಿಲ್ಲುವದಿಲ್ಲ. ಆದುದರಿಂದ ಅಪೂರ್ವ ಟಿಪ್ಪಣಿಗಳನ್ನು ಕ್ರಮಗೊಳಿಸಿ ಬರೆದು. ಮೇಲಿಂದ ಮೇಲೆ ಕಣ್ಣುಂದಿ ತಂದುಕೊಳ್ಳಬೇಕಾಗುತ್ತದೆ. ಇದು ಪ್ರತಿಯೊಬ್ಬ ವ್ಯಾಖ್ಯಾನಕಾರನ ಅನುಭವದ ಸಂಗತಿಯಾಗಿದೆ. ಒಬ್ಬ ಪೌರ್ವಾತ್ಯ ಪಂಡಿತನು ಒಂದೆಡೆಯಲ್ಲಿ ಬರೆದಿಟ್ಟಿರುವ ದೇನಂದರೆ,—

" ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಟಿಪ್ಪಣಿ ವಹಿಯನ್ನು ಮಾಡಿಟ್ಟುಕೊಳ್ಳಬೇಕು. ಅದರಲ್ಲಿ ಅನೇಕ ಪ್ರಕಾರದ ವಿಷಯಗಳ ಬಗ್ಗೆ ಭಾಗಗಳನ್ನು ಮಾಡಿರಬೇಕು. ದಿನಾಲೂ ಅದರಲ್ಲಿ ತಮಗೊದಗಿದ ಸಂಗತಿಗಳನ್ನು ಬರೆದಿಡಬೇಕು ಅಂದರೆ ಮಿದುಳಿಗೆ ಏನೂ ತ್ರಾಸ ಬೀಳದೆ, ಎಷ್ಟೋ ವಿಷಯಗಳನ್ನು ಅಲಪ್ಪ ಯಾಸದಿಂದ ಸ್ಮರಣದಲ್ಲಿಡತಕ್ಕ ಶಕ್ತಿಯು ಬರುತ್ತದೆ,

ಅಯನೆಯ ಸಾಧನವು—ಸಂಭಾಷಣವು: ಒಬ್ಬನು ಇನ್ನೊಬ್ಬನೆ ಕೂಡ ಮಾತನಾಡುವದೇ ಸಂಭಾಷಣವು ಭಾಷಣದಲ್ಲಿ ಅನೇಕ ಪ್ರಕಾರಗಳುಂಟು. ಮನೆಯ ಜನರ ಕೂಡ ಮಾತಾಡತಕ್ಕ ಭಾಷಣವು ಹೆರವರ ಸಂಗಡ ಮಾತಾಡುವ ಭಾಷಣಕ್ಕಿಂತ ಬೇರೆ ಬಣತಿಯದಿರುವುದು. ಅದೇ ಭಾಷಣವು ವಿದ್ವಾಂಸರ ಸಭೆಯಲ್ಲಿ ಬೇರೆ ತೆರನಾಗುವದು. ಇಂತು ಭಾಷಣಗಳನ್ನು ಮೂರು ಬಗೆಯಾಗಿ ವಿಂಗಡಿಸಬಹುದು.

(ಸಕೇಷ.)

NATIVE CALENDER.

ಪಂಚಾಂಗ.

ಕೃತ್ತಿಕಾಗಣಲೋ ರಾಜಾಜಗತೀಮ್ ವಶಮಾನಯೇತ್।
ಅಹಮ್ ಪಂಚಾಂಗಬಲವಾನ್ ಆಕಾಶಮ್ ವಶಮಾನಯೇ॥

ಅನೆ, ಕುದುರೆ, ತೇರು, ಕಾಲಾಳುಗಳೆಂಬ ಚತುರಂಗ ಸೇನೆಯು ಸಹಾಯದಿಂದ ಅರಸನು ಭೂಮಿಯನ್ನು ವಶ ಮಾಡಿಕೊಳ್ಳುವನು ಆದರೆ ನಾನು ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳೆಂಬ ಪಂಚಾಂಗ ಬಲದಿಂದ ಆಕಾಶವನ್ನು ವಶಮಾಡಿಕೊಳ್ಳುತ್ತೇನೆ. ಎಂದು ಒಬ್ಬ ಜ್ಯೋತಿಷಿಯು ವಾಕ್ಯವುಂಟು

ಧರ್ಮ ಶಾಸ್ತ್ರ ವ್ಯವಹಾರ, ಜಿಜ್ಞಾಸೆ ಮುಂತಾದ ಅನೇಕ ಶಾಸ್ತ್ರಗಳ ದೃಷ್ಟಿಯಿಂದ ವಿಚಾರಮಾಡಿದರೂ ಮನುಷ್ಯನಿಗೆ ತಕ್ಕಷ್ಟಾದರೂ ಪಂಚಾಂಗದ ಜ್ಞಾನವಿರುವದು ಅವಶ್ಯವದೆ. ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳೇ ಪಂಚಾಂಗಗಳು.

ಸೂರ್ಯ ಚಂದ್ರರು ಒಂದೇ ಸ್ಥಳದಲ್ಲಿರುವ ಕಾಲವೇ ಅಮಾವಾಸ್ಯೆಯಿಂದು ಹೇಳಲ್ಪಡುವದು 'ಅಮಾ, ಎಂಬ ಅವ್ಯಯಾರ್ಥವು ಒಂದೇ ಸ್ಥಳದಲ್ಲಿ ಎಂತಲೂ 'ವಸ, ಎಂದರೆ ಇರೋಣವೆಂತಲೂ ಅರ್ಥವುಂಟು ಅಮಾವಾಸ್ಯೆಯು ದಿವಸ ಚಂದ್ರನು ಕಾಣುವದಿಲ್ಲ. ಪರಂತು ಗಣಿತದಿಂದ ಸೂರ್ಯ ಚಂದ್ರರ ಪೂರ್ವ-ಪಶ್ಚಿಮ ಅಂತರವು ಶೂನ್ಯವಾಗುವದೋ ಆಗ ಅಮಾವಾಸ್ಯೆಯ ತಿಥಿಯು ಮುಗಿಯುವದೆಂದು ತಿಳಿಯುವದು. ಈಗ ಇವರಿಬ್ಬರ ದಕ್ಷಿಣೋತ್ತರ ಅಂತರವು ಶೂನ್ಯವಾಗಿ ಇರಲಿ, ಯಾ ಇರದೆ ಇರಲಿ ಅದನ್ನೇನು ಜಮೆಯಲ್ಲಿ ಹಿಡಿಯುವ ಅವಶ್ಯಕತೆಯಿಲ್ಲ. ಆದರೆ ಈ ಚಂದ್ರ ಸೂರ್ಯರ ದಕ್ಷಿಣೋತ್ತರ ಅಂತರವು ಕೂಡ ಅಮಾವಾಸ್ಯೆಯ ದಿವಸ ಶೂನ್ಯವಾಗಲು ಸೂರ್ಯ ಗ್ರಹಣವಾಗುವದು. ಸೂರ್ಯನಗಿಂತ ಚಂದ್ರನು ಬೇಗ ನಡಿಯುವನು. ಆದ್ದರಿಂದ ಅವನು ಸೂರ್ಯನ ಹತ್ತರ ಬರಲು

ಕೂಡಲೆ ಅವರಿಬ್ಬರೂ ಒಂದೇ ಸ್ಥಳದಲ್ಲಿ ಕೂಡಿರುವದಿಲ್ಲ. ಚಂದ್ರನು ಬೇಗನೆ ಪೂರ್ವಕ್ಕೆ ಸಾಗತೊಡಗುವನು. ಆಗ ಪ್ರತಿಪದೆಯ ತಿಥಿಯು ಪ್ರಾರಂಭವಾಯಿತೆಂದು ತಿಳಿಯುವರು. ಇವರಿಬ್ಬರಲ್ಲಿ ಉಭಯರ ಗತಿಯ ವ್ಯೋಗದಿಂದ ಕೆಲ ಕಾಲದಲ್ಲಿ ಹನ್ನೆರಡು ಅಂಶ ಅಂತರ ಬೀಳುವದು. ಆಗ ಪ್ರತಿಪದೆಯ ತಿಥಿಯು ಮುಗಿಯಿತೆನ್ನುವರು. ಸಾರಾಂಶ ಸೂರ್ಯ ಚಂದ್ರರ ನಡುವೆ ಹನ್ನೆರಡು ಅಂಶ ಅಂತರ ಬೀಳುವಷ್ಟು ಕಾಲಕ್ಕೆ ತಿಥಿಸಂಜ್ಞೆಯುಂಟೆಂದು ತಿಳಿಯಬೇಕು ಇಷ್ಟು ಅಂತರವು ಉಂಟಾಗಲಿಕ್ಕೆ ಸುಮಾರು ೫೯ ಘಳಿಗೆಗಳೂ ೩ ಪಳಗಳೂ ಹತ್ತುವವು. ಈ ಪ್ರಕಾರೆಗೆ ಚಂದ್ರ ಸೂರ್ಯರು ಸಂಗಮವಾಗದಿನಿಂದ ಪುನಃ ಸಂಗಮವಾಗುವ ವರೆಗೆ ಮೂವತ್ತು ತಿಥಿಗಳು ಆಗುವವು. ಈ ಮೂವತ್ತು ತಿಥಿಗಳಿಗೆ ೨೯॥ ದಿವಸಗಳು ಹತ್ತುವವು. ಇದೇ ಚಾಂದ್ರಮಾನದ ತಿಂಗಳವು. ಚಾಂದ್ರಮಾನದ ಹನ್ನೆರಡು ತಿಂಗಳುಗಳಿಗೆ ೩೫೪ ದಿವಸಗಳಾಗುವವು. ಆದರೆ ಅಷ್ಟೇ ಕಾಲದಲ್ಲಿ ೩೬೦ ತಿಥಿಗಳಾಗುವವು. ತಿಥಿಗಳು ಕ್ಷಯ ವೃದ್ಧಿಗಳನ್ನು ಹೊಂದುವದರಿಂದ ಆರುದಿವಸ ಕಡಿಮೆಯಾಗುವವು. ಚಂದ್ರನ ಗತಿಯು ಕೆಲವು ಕಾಲ ಶೀಘ್ರವಾಗಿಯೂ, ಕೆಲವು ಕಾಲ ಮಂದವಾಗತಿಯೂ ಇರುವದು. ಇದರಿಂದ ಕೆಲವು ತಿಥಿಗಳು ೬೬ ಘಳಿಗೆಯನ್ನು ಭೋಗಿಸುವವು. ಆದರೆ ಕೆಲವು ೫೦ ಘಳಿಗೆಯನ್ನೇ ಭೋಗಿಸುತ್ತವೆ. ನಮ್ಮ ಹಳೆ ಪಂಚಾಂಗದಲ್ಲಿ ೫೪ ಘಳಿಗೆಗಿಂತ ಕಡಿಮೆ ಯಾವ ತಿಥಿಯೂ ಇರುವದಿಲ್ಲ ಒಂದು ಉದಾಹರಣೆಯಿಂದ ತಿಥಿಯ ಕ್ಷಯ ವೃದ್ಧಿಗಳನ್ನು ವಿವರಿಸುವೆವು. ರವಿವಾರ ದಿವಸ ಪ್ರತಿಪದೆಯು ೫೪ ಘಳಿಗೆ ೦೦ ಪಳ ಎಂದು ಪಂಚಾಂಗದಲ್ಲಿ ಉಲ್ಲೇಖಿಸಿದ್ದರೆ ಅದರ ಅರ್ಥವು ರವಿವಾರದ ದಿವಸ ಮೇಲೆ ಉಲ್ಲೇಖಿಸಿದಷ್ಟು ಕಾಲದ ಅಂತ್ಯಕ್ಕೆ ಪ್ರತಿಪದೆಯ ತಿಥಿಯು ಮುಗಿಯಿತೆಂಬದು. ಅಂದರೆ ಆ ಕಾಲಕ್ಕೆ ಸೂರ್ಯ ಚಂದ್ರರ ಅಂತರವು ಅಂದರೆ ಸೂರ್ಯನ ಮುಂದೆ ಚಂದ್ರನು ೧೨ ಅಂಶ ಹೋಗಿರುವನೆಂಬ ಅರ್ಥವು, ಸೋಮವಾರ ೫೪

ಗಳಿಗೆಯ ವರೆಗೆ ಬಿದಿಗೆಯುಂಟೆಂದು ತಿಳಿಯೀರಿ. ಮುಂದೆ ಹನ್ನೆರಡು ಅಂಶ ಅಂತರ ಬೀಳಲಿಕ್ಕೆ ೬೫ ಗಳಿಗೆಗಳು ಬೇಕು ಇದರಿಂದ ಸೋಮವಾರದ ಬೆಳಗಿನಿಂದ ೫೮ ಗಳಿಗೆಯ ಮುಂದಿನ ಎರಡು ಗಳಿಗೆಗಳೂ ಮಂಗಳವಾರದ ಸಮಗ್ರ ೬೦ ಗಳಿಗೆಗಳೂ ಬುಧವಾರದ ಸೂರ್ಯೋದಯವನ್ನಂತರ ೩ ಗಳಿಗೆಗಳೂ ಹೀಗೆ ೬೫ ಗಳಿಗೆಗಳು ಸಂದ ಮೇಲೆ ತೃತೀಯೆಯ ತಿಥಿಯು ಮುಗಿಯುವದು. ಇದೇ ತಿಥಿಯ ವೃದ್ಧಿಯು. ಸೂರ್ಯೋದಯ ಕಾಲಕ್ಕೆ ಇದ್ದ ತಿಥಿಯನ್ನು ಪಂಚಾಂಗದಲ್ಲಿ ಬರೆಯುವ ಪರಿಪಾಠವುಂಟು. ಈ ಪರಿಪಾಠಕ್ಕೆ ಅನುಸರವಾಗಿ ಸೋಮವಾರದ ದಿವಸ ದ್ವಿತೀಯಾ ತಿಥಿಯನ್ನು ಬರಿಯಲು, ಮಂಗಳವಾರ, ಬುಧವಾರ ಈ ಎರಡೂ ದಿವಸ ತೃತೀಯಾ ತಿಥಿಯನ್ನು ಬರಿಯಬೇಕೆಂಬದು ಸ್ಪಷ್ಟವದೆ. ಈ ವೃದ್ಧಿ ಹೊಂದಿದ ತಿಥಿಯು ಮೂರುವಾರ ಗಳಿಗೆ ಸ್ಪರ್ಶವಾಡುವದರಿಂದ ತ್ರಿಸ್ಪೃಶವೆನಿಸುವದು. ತಿಥಿಯು ಮಾನವು ೬೦ ಗಳಿಗೆಗಳಿಗಿಂತ ಕಡಿಮೆ ಇದ್ದರೆ ತಿಥಿಯು ಕ್ಷಯವಾಗುವದು. ಆದಿತ್ಯವಾರದ ದಿವಸ ಸೂರ್ಯೋದಯದ ನಂತರ ಎರಡು ಗಳಿಗೆಗೆ ದಶಮಿಯು ತಿಥಿಯು ಪೂರ್ಣವಾಗುವದೆಂತಲೂ ಮುಂದೆ ಏಕಾದಶಿಯು ಮಾನವು ೫೮ ಗಳಿಗೆಯುಂಟೆಂತಲೂ ತಿಳಿಯುರಿ ಇದರಿಂದ ಅಂದು ಸೂರ್ಯೋದಯದಿಂದ ೫೭ ಗಳಿಗೆಗೆ ಏಕಾದಶಿಯು ಮುಗಿಯಿತೆಂಬದು ಸ್ಪಷ್ಟವಾಗುವದು. ಮುಂದೆ ದ್ವಾದಶಿಗೆ ಪ್ರಾರಂಭವಾಗುವದು. ಅಂದ ಬಳಿಕ ಸೂರ್ಯೋದಯ ಕಾಲಕ್ಕೆ ಏಕಾದಶಿಯು ಲೋಪ ಹೇಳಿಸಿದಂತೆ ಆಯಿತು. ಆದ್ದರಿಂದ ಏಕಾದಶಿಯು ಕ್ಷಯ ಹೊಂದಿತೆಂದು ತಿಳಿಯುವರು. ಇದರಿಂದ ಏಕಾದಶಿಯೇ ಲೋಪವಾಯಿತೆಂದು ತಿಳಿಯಲಾಗದು. ಆ ತಿಥಿಯು ಯಾವದಿವಸವೂ ಸೂರ್ಯೋದಯ ಕಾಲಕ್ಕೆ ಇರುವದಿಲ್ಲೆಂಬದಿಷ್ಟೇ ಇದೇ ಕಾರಣದಿಂದ ಈ ಮಾದರಿಯ ಏಕಾದಶಿಯ ತಿಥಿಯ ಉಪೋಷಣದ ಬಗ್ಗೆ ಹೆಸ್ಸ ಮತಗಳುಂಟು. ಸ್ಮಾರ್ತರು ಆದಿತ್ಯವಾರ ಏಕಾದಶಿಯ ಉಪೋಷಣವನ್ನು ಮಾಡುವದು. ವೈಷ್ಣವರು ಸೋಮವಾರ ಮಾಡು

ವರು. ಈ ವೈಷ್ಣವರ ಏಕಾದಶಿಯು ಉಪೋಷಣದ ನೇಮ
ನೇನಂದರೆ ಪ್ರಾತಃಕಾಲದಲ್ಲಿ ದಶಮಿಯು ಸ್ವಲ್ಪ ಹೇಳಿ ಇ
ದ್ದರೂ ಅಥವಾ ಸೂರ್ಯೋದಯದ ಪೂರ್ವದಲ್ಲಿ ಆರು ಗಳಿ
ಗೆಯ ವರೆಗ ದಶಮಿಯ ತಿಥಿ ಇದ್ದರೂ ಅವರು ಉಪವಾಸ
ಮಾಡುವದಿಲ್ಲ. ಇಂಥ ಏಕಾದಶಿಗೆ ದಶಮಿಯಾವಿದ್ಧ ಏಕಾದಶಿ
ಯೆಂದು ಅವರು ಎಣಿಸುವರು.

ಮುವತ್ತು ತಿಥಿಗಳಲ್ಲಿ ಶುಕ್ಲ ಕೃಷ್ಣಗಳೆಂಬ ಎರಡು ಪಕ್ಷ
ಗಳನ್ನು ಮಾಡಿರುವರು ನರ್ಮದೆಯ ಉತ್ತರದಲ್ಲಿ ಪೂ
ರ್ಣಮಾಂತಮಾನವೂ ಈ ನಮ್ಮ ದೇಶದಲ್ಲಿ ಅಮಾಂತಮಾ
ನವೂ ನಡೆಯುತ್ತದೆಂಬದು ಎಲ್ಲರಿಗೂ ಗೊತ್ತುಂಟು. ಆದ
ರೂ ಶುಕ್ಲ ಕೃಷ್ಣ ಪಕ್ಷಗಳ ಭೇದವಿಲ್ಲೆಂಬದನ್ನು ಮರೆಯು
ಲಾಗದು.

ಶುಕ್ಲಪಕ್ಷದಲ್ಲಿ ಸೂರ್ಯಾಸ್ತ ಸಮಯದಲ್ಲಿಯೂ ಕೃಷ್ಣ
ಪಕ್ಷದೊಳಗೆ ಸೂರ್ಯೋದಯ ಕಾಲದಲ್ಲಿಯೂ ಆಕಾಶದ
ಲ್ಲಿ ಚಂದ್ರನಿರುವ ಸ್ಥಲವನ್ನು ನೋಡಿ ಸ್ಥೂಲಮಾನದಿಂದ ಅಂ
ದಿನ ತಿಥಿಯನ್ನು ಗೊತ್ತುಮಾಡಬಹುದು ಕ್ಷಿತಿಜದಿಂದ ಖ
ಸ್ವಸ್ತಿಕದ ವರೆಗೆ ೯೦ ಅಂಶಗಳೆಂಬದನ್ನು ನೀವು ಬಲ್ಲಿರಿ.
ಸೂರ್ಯನು ಅಸ್ತಕ್ಕಿದ ಕೂಡಲೆ ಚಂದ್ರನು ಖಸ್ವಸ್ತಿಕದಲ್ಲಿ
ಅಥವಾ ಯಾಮ್ಯೋತ್ತರದ ಮೇಲೆ ಎಲ್ಲಾಡರೂ ದೃಷ್ಟಿಗೋ
ಚರನಾದರೆ ಅವನು ಸೂರ್ಯನಿಂದ ೯೦ ಅಂಶದ ಮೇಲಿರು
ವನೆಂದು ತಿಳಿದು ಆ ಅಂಶಗಳಿಗೆ (೧೫ ಅಂಶಗಳಿಗೆ ಒಂದು
ತಿಥಿಯಾಗುವದರಿಂದ) ೧೫ರಿಂದ ಭಾಗಿಸಲು ೬ ತಿಥಿಗಳು
ಮುಗಿದು ೭ನೇ ತಿಥಿಯು ಅಂದರೆ ಅಷ್ಟಮಿಯು ಪ್ರಾರಂಭ
ವಾಗಿದೆಯೆಂದು ನಿಶ್ಚಯಿಸಬಹುದು ಅಂದ ಮೇಲೆ ಖಸ್ವಸ್ತಿ
ಕದ ಪೂರ್ವಕ್ಕೆ ಅರ್ಧ ಆಕಾಶದಲ್ಲಿ ಚಂದ್ರನಿದ್ದರೆ ಅವನು
ಸೂರ್ಯನಿಂದ (೯೦+$\frac{೬}{೨}$)=೧೩೫ ಅಂಶದ ಮೇಲಿರುವನೆಂ
ದು ತಿಳಿದು ಅಂದು ದ್ವಾದಶಿದು ತಿಥಿಯುಂಟೆಂದು ನಿರ್ಣಯಿ
ಸಬೇಕು. ಕೃಷ್ಣಪಕ್ಷದಲ್ಲಿ ಸೂರ್ಯೋದಯ ಕಾಲಕ್ಕೆ
ಚಂದ್ರನು ಪಶ್ಚಿಮಕ್ಕೆ ಕ್ಷಿತಿಜ ಮೇಲೆ ೪೫ ಅಂಶದಲ್ಲಿರಲು
ಅವನು ಅರ್ಧ ಆಕಾಶವನ್ನು ಅಂದರೆ ೧೮೦ ಅಂಶವನ್ನು

ಕ್ರಮಿಸಿ ಮತ್ತೆ ಶುಕ್ಲ ಅಂಕ ಬಂದಿರುವನೆಂದು ತಿಳಿದು ಆ ದಿನ ಕೃಷ್ಣ ಚತುರ್ದಿಯುಂಟೆಂದು ಗ್ರಹಿಸಬೇಕು. ಯಾಕಂದರೆ ಒಟ್ಟಿಗೆ ಎಂಟು ಅಂಶದಷ್ಟು ಉಭಯತರ ಅಂತರವಾಯಿತು. ಇಷ್ಟು ಅಂತರಕ್ಕೆ ೧೪ ತಿಥಿಗಳು ಮುಗಿದು ಹೋಗಿರುವವೆಂಬದು ಗಣಿತದಿಂದ ಸಿದ್ಧವಾಗುವದು. ಚಂದ್ರನು ನಿತ್ಯ ಎರಡುಗಳಿಗೆ ತಡವಾಗಿ ಉದಯ ಹೊಂದುತ್ತಾನೆಂಬದಾದರೂ ನಿಮಗೆ ಗೊತ್ತುಂಟು. ಈ ಗಣನೆಯಾದರೂ ಸ್ಥೂಲವಾನದ್ದೇ ಉಂಟು.

DEPARTMENTAL NOTICE.

ನೋಟೀಸುಗಳು.

PUBLIC SERVICE EXAMINATION.

ಮುಲಕೀ ಪರೀಕ್ಷೆಯು.

ಈ ನೋಟೀಸಿನಿಂದ ಪ್ರಸಿದ್ಧಿಪಡಿಸಲ್ಪಡುವದೇನಂದರೆ, ಸರ್ಕಾರಿನೀ ಜುಲೈ ೧೬ನೇ ತಾರೀಖಿನ ದಿವಸ ಥಾಪಿಸಲ್ಪಟ್ಟ ಮುಂಬಯಿ ಗವ್ಹರ್ನಮೆಂಟ ಗ್ಯಾಝೀಟಿನ ೧ನೇ ಭಾಗದಲ್ಲಿ ಪ್ರಸಿದ್ಧಿಪಡಿಸಲ್ಪಟ್ಟ ಹೊಸ ನಿಯಮಗಳ ೧ನೇ ಪರಿಶಿಷ್ಟದ ಸಿಡ್ಯೂಲಗಳಿಗೆ ಸರಿಯಾಗಿ ಸರ್ಕಾರಿಂಕಿ--ಸರ್ಕಾರಿನೇ ಇಸವಿಯ ಪಬ್ಲಿಕ್ ಸರ್ವೀಸ ಸರ್ಟಿಫಿಕೇಟು ಪರೀಕ್ಷೆಗಳು ಸಪ್ಟಂಬರ ೪ನೇ ತಾರೀಖು ಸೋಮವಾರ ಮತ್ತು ತದುತ್ತರ ದಿವಸಗಳಲ್ಲಿ ಧಾರವಾಡದಲ್ಲಿ ತೆಗೆದುಕೊಳ್ಳಲ್ಪಡುವದು. ೨ ಮರಾಠಿ ಭಾಷೆಯಲ್ಲಿ ಪರೀಕ್ಷಿಸಲಪೇಕ್ಷಿಸುವ ಉಮೇದವಾರರು ಬೆಳಗಾವಿ ಅಥವಾ ಧಾರವಾಡ ಸೆಂಟರಿನಲ್ಲಿ ಆಗುವ ಪರೀಕ್ಷೆಗೆ ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರವರ ಅಪ್ಪಣೆಯನ್ನು ಪಡಕೊಂಡು ಕೂಡ್ರಬಹುದು.

೩. ಪರೀಕ್ಷೆಗೆ ಕೂಡ್ರತಕ್ಕವರು ತಮ್ಮ ಅರ್ಜಿಗಳನ್ನು ತಾರೀಖು ಒಂದನೇ ಅಗಪ್ಟ ೧೯೦೪ನೇ ಇಸವಿ ದಿವಸ ಅಥವಾ ತತ್ಪೂರ್ವದಲ್ಲಿ ತಲಪುವಂತೆ ಪರೀಕ್ಷಾ ಕಮಿಟಿಯ

ಪೆ;ಸಿಡೆಂಟರಾದ ಧಾರವಾಡ ಹಯಸ್ಕೂಲ ಹೆಡ್ಡ್ ಮಾಸ್ತರರ ಕಡಿಗೆ ಕಳಿಸಬೇಕು ಪ್ರತಿ ಒಂದು ಅರ್ಜಿಯಲ್ಲಿ ವಿದ್ಯಾರ್ಥಿಯ ಪೂರ್ಣ ಹೆಸರು ಅವನು ಯಾವದೊಂದು ಸಾಲೆಯಲ್ಲಿ ಕಲೆಯುತ್ತಿದ್ದರೆ, ಆ ಸಾಲೆಯ ಹೆಸರೂ ಇರತಕ್ಕದ್ದು ಮತ್ತು ವಿದ್ಯಾರ್ಥಿಯು ತಾನು ಕೂಡ್ರಲಿಚ್ಛಿಸುವ ಪರೀಕ್ಷೆಯ ತರಗತಿಯನ್ನು (ಗ್ರೇಡು) ಅದರಲ್ಲಿ ತೋರಿಸಬೇಕು.

೪ ಪ್ರತಿಯೊಬ್ಬ ವಿದ್ಯಾರ್ಥಿಯು ತಾನು ಇರುವ ಜಿಲ್ಲೆಯಲ್ಲಿ ಆಗುವ ಪರೀಕ್ಷೆಗೆ ಕೂಡ್ರಬೇಕು; ಮತ್ತು ತಾನು ಕಳೆದ ಆರು ತಿಂಗಳಿಂದ ಆ ಜಿಲ್ಲೆಯಲ್ಲಿದ್ದನೆಂಬ ಬಗ್ಗೆ ತಾನು ಇರುವ ಊರ ಪಾಟೀಲನದಾಗಲಿ, ಸಾಲೆಯ ಮಾಸ್ತರನದಾಗಲಿ, ಸರಟಿಫಿಕೇಟನ್ನು ಹಾಜರ ಪಡಿಸಬೇಕು.

೫. ವಿದ್ಯಾರ್ಥಿಗಳ ವಯಸ್ಸು ಪರೀಕ್ಷೆಯ ಫೀ ಪರೀಕ್ಷೆಯ ವಿಷಯ ಮುಂತಾದ ಮಾಹಿತಿಯು ಸನ್ ೧೯೦೪ನೇ ಇಸವಿಯ ನವೆಂಬರ ೨೦ನೇ ತಾರೀಖಿಗೆ ಛಾಪಿಸಲ್ಪಟ್ಟ ಮುಂಬಯಿ ಗವ್ಹರ್ನಮೆಂಟ ಗ್ಯಾಝೀಟಿನ ೧೬೫೪ರಿಂದ ಛಾಪಿಸಲ್ಪಟ್ಟಿದೆ.

೬ ಈ ವರ್ಷದಲ್ಲಿ ಆಗುವ ಪರೀಕ್ಷೆಗಳಿಗಾಗಿ ನೇಮಿಸಿದ ಪುಸ್ತಕಗಳು ಸನ್ ೧೯೦೪ನೇ ಇಸವಿಯ ನವಂಬರ ೪ನೇ ತಾರೀಖಿನ ಗ್ಯಾಝೀಟಿನ ಎರಡನೇ ಭಾಗದ ೧೬೫೪ನೇ ಪುಟದಲ್ಲಿ ಪ್ರಸಿದ್ಧಿಸಲ್ಪಟ್ಟಿವೆ.

ಧಾರವಾಡ
೨೪ ಮೇ ೧೯೦೫. } McNEIL,
ಕಲೆಕ್ಟರ ಧಾರವಾಡ

H. S. SCHOLARSHIP EXAMINATION.

ಹೈಸ್ಕೂಲ ಸ್ಕಾಲರಸಿಪ್ಪ ಪರೀಕ್ಷೆಯು.

೨೦ನೇ ಮೇ ೧೯೦೪ನೇ ಇಸವಿಯ ಸರಕಾರಿ ಗ್ಯಾಝೀಟಿನ ೬೪೧-೪೨ನೇ ಪಾನಿನಲ್ಲಿ ಪ್ರಸಿದ್ಧವಾದಂತೆ ಮೂರು ಹೈಸ್ಕೂಲ ಸ್ಕಾಲರ ಸಿಪ್ಪುಗಳ ಸಂಬಂಧದ ಪರೀಕ್ಷೆಯು ಸೋಮವಾರ ದಿವಸ ೨೩ನೇ ಸಪ್ತಂಬರ ೧೯೦೫ನೇ ಇಸವಿಯ ದಿವಸ ಮತ್ತು ತದುತ್ತರ ದಿವಸಗಳಲ್ಲಿ ಮದ್ರಾಸ ಕಾ

ಲವಾನದ ೧೧ ಗಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿ ಒಂದು ಸೆಂಟರನಲ್ಲಿ ಪ್ರಾರಂಭವಾಗುವದು ಸೆಂಟರುಗಳು ಯಾವವಂದರೆ

ಧಾರವಾಡ ಹೈಸ್ಕೂಲ
ಬೆಳಗಾವಿ ಹೈಸ್ಕೂಲ
ವಿಜಾಪೂರ ಹೈಸ್ಕೂಲ
ಕಾರವಾರ ಜ್ಯಸ್ಕೂಲ
ಅಲೀಬಾಗ ಜಾನ್ ಎಲ್‌ಫಿನಸ್ಟನ್ ಮಿಶನ್ ಹಾಯಸ್ಕೂಲ

ಈ ಮೂರು ಸ್ಕೂಲರಸಿಪ್ಪುಗಳಲ್ಲಿ ಒಂದು ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಸಿಗುವದು. ಒಂದು ಇಂಗ್ಲೀಷ ಅಭ್ಯಾಸದಲ್ಲಿ ಹಿಂದೆ ಉಳಿದ ಬೇನಿ ಇಸ್ರಾಯಲ್ ಕುಣಬಿ ಕೂಲಿಕಾರ ಮುಂತಾದ ಜಾತಿಯವರಿಗಾಗಿ ಕಾದಿಟ್ಟದ್ದು ಅವರಲ್ಲಿ ಉತ್ಕೃತನಾದವನಿಗೆ ದೊರೆಯುವದು. ಮೂರನೇದು ಮುಸಲ್ಮಾನ ಜಾತಿಯವರಿಗೆಂದು ಕಾದಿಟ್ಟಿದೆ. ಆ ಜಾತಿಯ ವಿದ್ಯಾರ್ಥಿಗಳಲ್ಲಿ ಉತ್ಕೃಷ್ಟನಾದವನಿಗೆ ದೊರೆಯುವದು.

ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠೀ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಧಾರವಾಡ, ವಿಜಾಪೂರ ಮತ್ತು ಕಾರವಾರ ಸೆಂಟರುಗಳಲ್ಲಿ ಕನ್ನಡ ಭಾಷೆಯ ಮುಖಾಂತರವಾಗಿ ಅಲೀಬಾಗ ಸೆಂಟರಿನಲ್ಲಿ ಮರಾಠಿ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು

ಟೀಪು:—ಇದೇ ಮೇರೆಗೆ ವಿಜಾಪೂರ, ಬೆಳಗಾವ, ಕಾರವಾರ ಜಿಲ್ಲೆಗಳ ಕಲೆಕ್ಟರರಾದರೂ ನೋಟೀಸುಗಳನ್ನು ಪ್ರಸಿದ್ಧಿಸಿರುವರು. ಎಲ್ಲ ಕಡೆಯಲ್ಲಿ ಆಗುವ ಪರೀಕ್ಷೆಗಳ ತಾರೀಖು ಒಂದೇ ಎಂಬದು ಎಲ್ಲರಿಗೂ ಗೊತ್ತೇ ಇರುವದು ಈ ಸಾರಿ ಮುಂತೆ ಪರೀಕ್ಷೆಯನ್ನು ಕೊಡಲಿಚ್ಛಿಸುವ ಉಮೇದವಾರರು ಬೇರೆ ಜಿಲ್ಲೆಗಳಿಗೆ ಹೋಗುವ ಕಾರಣವಿಲ್ಲ. ಆಯಾ ಜಿಲ್ಲೆಗಳಲ್ಲಿಯೇ ಅವರನ್ನು ಪರೀಕ್ಷಿಸುವ ವ್ಯವಸ್ಥೆಯನ್ನು ಸರಕಾರದವರು ಮಾಡಿರುವರು.

ಪ್ರತಿ ಒಂದು ಸೆಂಟರಿನಲ್ಲಿಪರೀಕ್ಷೆಯು ಕವಿಾಟಿಯು ಮು ಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಅಲೀಬಾಗ ಪರೀ ಕ್ಷೆ ಕವಿಾಟಿಯ ಅಧ್ಯಕ್ಷರು ಅಲ್ಲಿಯ ಡೆಪೂಟಿ ಎಜ್ಯುಕೇಶ ನಲ್ ಇನಸ್ಪೆಕ್ಟರರು ಉಳಿದ ಕಡೆಯಲ್ಲೆಲ್ಲ ಅಲ್ಲಲ್ಲಿಯ ಹಾ ಯಸ್ಕೂಲಿನ ಹೆಡ್ಡಮಾಸ್ತರರು ಪರೀಕ್ಷಾ ಕವಿಾಟಿಯ ಅಧ್ಯ ಕ್ಷರಿರುವರು. ಈ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಿಗೆಯ ನ್ನು ಕುರಿತು ಮಾಡುವ ಅರ್ಜಿಗಳೆಲ್ಲ ಛಾಪಿ ನಮೂನೆಗಳ ಮೇಲೆ ಮಾಡತಕ್ಕದ್ದು. ಅರ್ಜಿಯ ನಮೂನೆಗಳು ಪರೀ ಕ್ಷಾ ಕವಿಾಟಿಯ ಅಧ್ಯಕ್ಷರ ಕಡಿಗಾಗಲಿ ನಮ್ಮ ಕಡಿಗಾಗ ಲಿ ಸಿಗುವವು. ಅದಕ್ಕೆ ಕ್ರಯ ಬೀಳಲಿಕ್ಕಿಲ್ಲ. ಉಮೇದವಾ ರರು ಅರ್ಜಿಗಳನ್ನು ಇಷ್ಟೇ ಅಗಷ್ಟದ ಒಳಗಾಗಿ ತಲಪು ವಂತೆ ತಮ್ಮ ತಮ್ಮ ಜಿಲ್ಲೆಯ ಕವಿಾಟಿಯ ಅಧ್ಯಕ್ಷರ ಕಡಿ ಗೆ ಕಳಿಸಿಕೊಡಬೇಕು. ಆ ತಾರೀಖಿನಂತರ ಬಂದ ಅರ್ಜಿ ಗಳು ಹಿಡಿಯಲ್ಪಡಲಿಕ್ಕಿಲ್ಲ

ಉಮೇದವಾರರ ವಯಸ್ಸು ಪರೀಕ್ಷಾ ವಿಷಯುಗಳ ಸಂ ಲರಸಿಪ್ಪಿನ ರಕಮು ಮತ್ತು ಆಷಧಿ ಪರೀಕ್ಷೆಯ ಫೀ ಮುಂ ತಾದ ಸಂಗತಿಗಳ ಸಂಬಂಧದ ಹೆಚ್ಚಿನ ಮಾಹಿತಿಯು ನಮ್ಮ ಕಡಿಗಾಗಲಿ ಪರೀಕ್ಷಾ ಕವಿಾಟಿಯ ಅಧ್ಯಕ್ಷರ ಕಡಿಗಾಗಲಿ ಅರ್ಜಿ ಮಾಡಿದರೆ ಹೆಣದ ವೆಚ್ಚವಿಲ್ಲದೆ ಶಿಗುವವು.

ಧಾರವಾಡ, ತಾ.೨೪ ಜುಲಾಯಿ ೧೯೦೬. } B. R. SAHASRABUDHE,
ಎ. ಇ. ದಕ್ಷಿಣ ಭಾಗ.

MIDDLE SCHOOL SCHOLAR SHIP EXAMINATION.

ಮಿಡಲ್ ಸ್ಕೂಲ ಸ್ಕಾಲರಶಿಪ್ಪು ಪರೀಕ್ಷೆಯು.

ಇನ್ನೇ ಮೇ ೧೯೦೭ನೇ ಇಸವಿಯ ಮುಂಬಯಿ ಗವ್ಹ ನಮೆಂಟ ಗ್ಯಾಝಿಟೀಯರನ ಒಂದನೇ ಭಾಗದ ೬೪೩-೪೪ನೇ ಪಾನಿಸಲ್ಲಿ ಛಾಪಿಸಿದಂತೆ ಆರು ಮಿಡಲ್ ಸ್ಕೂಲ ಸ್ಕಾಲರಶಿ ಪ್ಪುಗಳ ಸಂಬಂಧದ ಪರೀಕ್ಷೆಯು ಬುಧವಾರ ೩೦ನೇ ಸಪ್ಟಂ ಬರ ೧೯೦೭ನೇ ಇಸವಿಯ ದಿವಸ ಮತ್ತು ತದುತ್ತರ ದಿವಸ ಗಳಲ್ಲಿ ಮದ್ರಾಸ ಕಾಲಮಾನದ ೧೧ ಗಂಟಗೆ ಸರಿಯಾಗಿ ಕೆ

ಳಗೆ ನಮೂದಿಸಿದ ಪ್ರತಿ ಒಂದು ಸೆಂಟರಿನಲ್ಲಿ ಪ್ರಾರಂಭವಾಗುವದು ಸೆಂಟರುಗಳು ಯಾವವೆಂದರೆ.

ಧಾರವಾಡ ಹೈಸ್ಕೂಲ
ಬೆಳಗಾವ ಹೈಸ್ಕೂಲ
ವಿಜಾಪೂರ ಹೈಸ್ಕೂಲ
ಕಾರವಾರ ಹೈಸ್ಕೂಲ

ಅಲೀಬಾಗ ಜಾನ್ ಎಲ್‌ಫಿನ್‌ಸ್ಟನ್ ಮಿಶನ್ ಹೈಸ್ಕೂಲ

ಈ ಆರು ಸ್ಕಾರಶಿಪ್ಪುಗಳಲ್ಲಿ ಎರಡು ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಸಿಗುವವು. ಎರಡು ಇಂಗ್ಲೀಷ ಅಭ್ಯಾಸದಲ್ಲಿ ಹಿಂದುಳಿದ ಜೀನಿ ಇಸ್ರಾಯಲ್ ಕುಣಬಿ ಕೂಲಿಕಾರ ಮುಂತಾದ ಜಾತಿಯವರಿಗಾಗಿ ಕಾದಿಟ್ಟಂಥವು ಆ ಜಾತಿಯಲ್ಲಿ ಉತ್ಕೃತರಾದ ವಿದ್ಯಾರ್ಥಿಗಳಿಗೆ ಸಿಗುವವು.

ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠಿ ಭಾಷೆಯು ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು ಧಾರವಾಡ ವಿಜಾಪೂರ ಮತ್ತು ಕಾರವಾರ ಸೆಂಟರುಗಳಲ್ಲಿ ಕನ್ನಡ ಭಾಷೆಯು ಮುಖಾಂತರವಾಗಿ ಅಲಿಬಾಗ ಸೆಂಟರಿನಲ್ಲಿ ಮರಾಠಿ ಭಾಷೆಯು ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು.

ಪ್ರತಿ ಒಂದು ಸೆಂಟರಿನಲ್ಲಿ ಪರೀಕ್ಷೆಯು ಕವಿಾಟಿಯು ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಅಲೀಬಾಗ ಪರೀಕ್ಷಾ ಕವಿಾಟಿಯು ಅಧ್ಯಕ್ಷರು ಅಲ್ಲಿಯ ಡೆಪೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರು ಉಳಿದ ಕಡೆಯುಲ್ಲೆಲ್ಲ ಅಲ್ಲಲ್ಲಿಯ ಹೈಸ್ಕೂಲಿನ ಹೆಡ್ ಮಾಸ್ತರರು ಪರೀಕ್ಷಾ ಕವಿಾಟಿಯ ಅಧ್ಯಕ್ಷರಿರುವರು ಈ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಗಿಯನ್ನು ಕುರಿತು ಮಾಡುವ ಅರ್ಜಿಗಳನ್ನೆಲ್ಲ ಛಾಪಿಸಿದ ನಮೂನೆಗಳ ಮೇಲೆ ಮಾಡತಕ್ಕದ್ದು ಅರ್ಜಿಯು ನಮೂನೆಗಳು ಪರೀಕ್ಷಾ ಕವಿಾಟಿಯ ಅಧ್ಯಕ್ಷರ ಕಡೆಗಾಗಲಿ ನಮ್ಮ ಕಡೆಗಾಗಲಿ ಸಿಗುವವು. ಅವಕ್ಕೆ ಕ್ರಯ ಬೀಳುವದಿಲ್ಲ. ಉಮೇದವಾರರು ಅರ್ಜಿಗಳನ್ನು ಇನೇ ಆಗಷ್ಟ ರ್ಯಂತನೇ ಇಸವಿಯ ಒಳಗ

ಗಾಗಿ ತಮ್ಮ ತಮ್ಮ ಜಿಲ್ಲೆಯ ಅಧ್ಯಕ್ಷರಿಗೆ ತಲಪುವಂತೆ ಕಳಿಸಿಕೊಡಬೇಕು. ಆ ತಾರೀಖಿನ ನಂತರ ಬಂದ ಅರ್ಜಿಗಳು ಹಿಡಿಯಲಿಕ್ಕಿಲ್ಲ.

೫. ಉಮೇದವಾರರ ವಯಸ್ಸು ಪರೀಕ್ಷಾ ವಿಷಯಗಳು ಸ್ಕಾಲರ ಶಿಪ್ಪಿನ ರಕಮು ಅವಧಿ ಪರೀಕ್ಷಾ ಫೀ ಮುಂತಾದ ಸಂಗತಿಗಳ ಸಂಬಂಧದ ಸುಧಾರಿಸಿದ ಹೆಚ್ಚಿನ ಮಾಹಿತಿಯು ನಮ್ಮ ಕಡೆಗಾಗಲಿ ಪರೀಕ್ಷಾ ಕವಿಾಟಿಯ ಕಡೆಗಾಗಲಿ ಅರ್ಜಿ ಮಾಡಿದರೆ ಹಣದ ವೆಚ್ಚವಿಲ್ಲದೆ ಸಿಗುವದು.

ಧಾರವಾಡ, ತಾ. ೨೪/೬/೧೯೧೦ } B R. SAHASRABUDHE, ಎ. ಇ. ದಕ್ಷಿಣ ಭಾಗ.

CORRESPONDENCE.

ಪತ್ರವ್ಯವಹಾರ.

(೧೯೯ನೇ ಪುಟದಿಂದ ಮುಂದೆ ಸ್ವಾಗಿದ್ದು.)

'ಉಂ, ಎ, ಓ,' ಇತ್ಯಾದಿ ಸಮುಚ್ಚಯಾರ್ಥಕ ಇಲ್ಲವೆ ನಿಪಾತಕ ಪ್ರತ್ಯಯಗಳನ್ನು ಹೊಂದಿದ ಪದಗಳಲ್ಲಿ 'ಉಂ, ಎ' ಮುಂತಾದ ಪ್ರತ್ಯಯಗಳನ್ನು ಹಚ್ಚಿದ ಮಾತ್ರದಿಂದಲೇ ಅಲ್ಲಿ ಒಂದು ವಿಶೇಷಾರ್ಥವು ಕಂಡು ಬರುತ್ತದೆ. ಮೇಲಾಗಿ ಈ ಪ್ರತ್ಯಯಗಳನ್ನು ತೆಗೆದು ಬಿಟ್ಟರೆ ಉಳಿಯುವ ರೂಪಗಳೂ ವಿಭಕ್ತ್ಯಂತವಾಗಿಯೇ ಉಳಿಯುವವು. ಆದರಿಂದ ಪದಸಂಜ್ಞೆಯಂತೆ ಅಲ್ಲಿಯೂ ಪದಚ್ಛೇದ ಮಾಡತಕ್ಕದ್ದಾಯಿತು. 'ಎಲ್ಲರುಂ' ಎಂಬ ಶಬ್ದದಲ್ಲಿ 'ಎಲ್ಲರ್, ಉಂ' ಹೀಗೆ ಪದಚ್ಛೇದ ಮಾಡಬೇಕು.

ವಿಶೇಷ್ಯಗಳ ವಿಶೇಷಣಗಳನ್ನು ವಿಂಗಡಿಸಬಾರದು. ಇದಲ್ಲದೆ ಒಂದು ವಿಶೇಷ್ಯಕ್ಕೆ ಅನೇಕ ವಿಶೇಷಣಗಳಿದ್ದರೆ ಒಂದು ತೀರ ನಿಕಟವಾದ ವಿಶೇಷಣದ ಹೊರತಾಗಿ ಉಳಿದ ವಿಶೇಷಣಗಳನ್ನು ವಿಂಗಡಿಸಬಹುದು. ಉದಾ :—'ಬಹಳ ದೊಡ್ಡ ಮನೆ' ಎಂಬಲ್ಲಿ 'ಬಹಳ, ದೊಡ್ಡ ಮನೆ' ಹೀಗೆ ಮಾಡತಕ್ಕದ್ದು. ಷಷ್ಠ್ಯಂತ ವಿಶೇಷಣಗಳನ್ನಾದರೂ ಬೇರೆ ಪದ

ವನ್ನಾಗಿ ಮಾಡತಕ್ಕದಲ್ಲ. ಯಾಕಂದರೆ.-ಅದು ಮುಂದಿನ ಪದಕ್ಕೆ ವಿಶೇಷಣವಾಗಿರುತ್ತದೆ. ಉದಾ:—'ನಿಗಡಬಂಧನ ದ ಸಂಕಟಂ' ಎಂಬಲ್ಲಿ 'ನಿಗಡಬಂಧನದ, ಸಂಕಟಂ' ಹೀಗೆ ಪದಗಳನ್ನು ಬಿಡಿಸಲಾಗದು. ಎಲ್ಲ ಕೂಡಿ ಒಂದೇ ಪದಮಾಡಬೇಕು. ಹೀಗೆ ಕನ್ನಡ ಪದ್ಯದಲ್ಲಿ ಪದಚ್ಛೇದಮಾಡುವ ಕಾರ್ಯವು ಕಠಿಣವಾದದ್ದಲ್ಲ.

(೨). ಪದಾರ್ಥೋಕ್ತಿ:—ಅರ್ಥವೆಂದರೆ ವಸ್ತುವೋ ಗುಣವೋ ಕ್ರಿಯೆಯೋ ಇದನ್ನು ಬೋಧಿಸುವದು. ಶಬ್ದಕ್ಕೆ ಪ್ರತಿ ಶಬ್ದವನ್ನು ಹೇಳಬೇಕೆಂದಲ್ಲ. ಯಾವಶಬ್ದಕ್ಕೆ ಅರ್ಥ ಹೇಳುವದಿದೆಯೋ ಅದಕ್ಕೆ ರೂಢಿಯೊಳಗಿನ (ಬಳಕೆಯಲ್ಲಿಯ) ಹಗುರಾದ ಶಬ್ದಗಳಿಂದ ಹೇಳಬೇಕಲ್ಲದೆ ಹುಡುಗರಿಗೆ ಸಹಜವಾಗಿ ಅರ್ಥಬೋಧವಾಗಿರುವ ತೀರ ಹಗುರಾದ ಶಬ್ದಗಳಿಗೆ ಅರ್ಥಹೇಳುತ್ತ ಹೋಗಬಾರದು. 'ಹುಡುಗರು ಮಾಡುವ ಕೆಲಸವನ್ನು ಶಾಲಾಗುರುವು' ಕವಿತಾ ಶಿಕ್ಷಣದಲ್ಲಾದರೂ ಈ ಶಿಕ್ಷಣ ಪದ್ಧತಿಯ ಬೆಲೆಯುಳ್ಳ ನಿಯಮವನ್ನು ಮರೆಯತಕ್ಕದ್ದಲ್ಲ. ಒಂದುವೇಳೆ ಹಗುರಾದ ಶಬ್ದವಿದ್ದರೂ, ಸಂಬಂಧಭೇದದಿಂದ ವಿಶೇಷಾರ್ಥವನ್ನು ಕೊಡುತ್ತಿದ್ದರೆ, ಅದನ್ನು ತಾನು ಹೇಳಬಹುದು. ಒಂದು ಶಬ್ದಕ್ಕೆ ಒಮ್ಮೆ ಹೇಳಿದ ಶಬ್ದಾರ್ಥವು ಬೇರೆಕಡೆಯಲ್ಲಿ ಏನಾದರೊಂದು ಕಾರಣದಿಂದ ಬದಲಾಗುತ್ತಿದ್ದರೆ, ಆ ಸಮಯದಲ್ಲಿ ತಾನು ಹೇಳಲಡ್ಡಿ ಇಲ್ಲ. ಸಂಬಂಧವನ್ನು ನೋಡಿ ಶಬ್ದಾರ್ಥವನ್ನು ಹೇಳಬೇಕೆಂಬದೇ ನಮ್ಮ ಉದ್ದೇಶವು. ಸಾಮಾಸಿಕ ಶಬ್ದಗಳ ಅರ್ಥವನ್ನು ಹೇಳುವಾಗ, ಸಮಾಸ ಕಾರ್ಯದ ಮೂಲಕವಾಗಿ ಘಟಕ ಶಬ್ದಗಳಿಗೆ ಲೋಪ ಬಂದ ವಿಭಕ್ತಿಯನ್ನು ವ್ಯಕ್ತವಾಗಿ ಹೇಳತಕ್ಕದ್ದು. ಅಂದರೆ ವಿಗ್ರಹಮಾಡುವಾಗ ವಿಭಕ್ತಿಯನ್ನು ಇಡುವಂತೆ ಅರ್ಥವನ್ನು ಹೇಳುವಾಗಲೂ ವಿಭಕ್ತಿಯನ್ನಿಟ್ಟೇ ಹೇಳುವದು.

(ಸಶೇಷ.)

ವಸ್ತುಪಾಠ ತಾಮ್ರ

ಎನೇ ಇಯತ್ತೆ ವೇಳೆ ೩೦ ನಿಮ್ಯೂಟು.

ಉದ್ದೇಶ:—ತಾಮ್ರದ ಒಡವೆಗಳ ದ್ವಾರದಿಂದ ತಾಮ್ರದ ವಿಶ್ಯೇಷ ಗುಣಗಳನ್ನೂ ಅವುಗಳನ್ನು ಮಾಡುವ ಕ್ರಿತಿಯಿಂದ ಧಾತುಗಳ ಕೆಲವು ಸಾಮಾನ್ಯ ಗುಣಗಳನ್ನೂ ತಿಳಿಸುವದು.

ಉಪಕರಣ:—ತಾಮ್ರದ ಪಂಚಪಾತ್ರೆ, ತಂಬಿಗೆ, ಕಲಾಯಿ ಮಾಡಿದ ತಾಮ್ರದ ಪಾತೇಲಿ, ಮೊಸರು, ತಾಮ್ರದ ನಾಣ್ಯಗಳು ಇತ್ಯಾದಿ

ಉಪೋದ್ಘಾತ:—ತಾಮ್ರದ ಥಾಲಿಯನ್ನು ತೋರಿಸಿ ಪಾಠವನ್ನು ಆರಂಭಿಸುವದು.

ವಸು, ದರ್ಶನ.	ಫಲಿತ.
೧ ತಾಮ್ರದ ಥಾಲಿಯನ್ನು ನೋಡಿ ಅದರ ಬಣ್ಣ ಹೇಳಲಿ	೧ ತಾಮ್ರದ ಬಣ್ಣವು ನಸುಗೆಂಪು ಇರುತ್ತದೆ
೨ ತಿಕ್ಕದೆ ಇದ್ದ ತಾಮ್ರದ ಥಾಲಿಯನ್ನು ನಿರೀಕ್ಷಿಸಲಿ	೨ ತಾಮ್ರವು ತಿಕ್ಕದಿದ್ದರೆ ಕಳೆ ಕೂತು ಹೊಲಸಾಗುವದು
೩ ತಾಮ್ರದ ಥಾಲಿಯನ್ನು ಕಾಸಲಿ	೩ ತಾಮ್ರವು ಕಾಸಿದರೆ ಸ್ವಲ್ಪ ಕಪ್ಪಾಗುತ್ತದೆ

೪ ತಾಮ್ರದ ಥಾಲಿಯಲ್ಲಿ ಯಾವದೊಂದು ಹುಳಿಯನ್ನು ಹಾಕಿ ನೋಡಲಿ	೪ ತಾಮ್ರವು ಕಿಲಬುತ್ತದೆ

ಟೀಪ್ಪ:— ಹಸರು ಬಣ್ಣದ ಈ ಕಿಲಬು ಹೊಟ್ಟೆಯಲ್ಲಿ ಹೋಗುವದರಿಂದ ಒಕರಿಸಿ ಕಾರಿಕೆ ಬರುತ್ತದೆಂದು ಹೇಳುವದ

ರಿಂದ ತಾಮ್ರದ ಪಾತೇಲಿ ತಪ್ಪೇಲಿಗಳನ್ನು ಹುಳಿ ಹಾಕುವದಿದ್ದಲ್ಲಿ ಕಲಾಯಿ ಮಾಡಿಸುವರೆಂದು ಹೇಳುವದ

೫ ತಾಮ್ರದ, ಹಿತ್ತಾಳೆಯ, ಅಷ್ಟಷ್ಟೇ ತಗಡುಗಳನ್ನು ತೂಗಿ ನೋಡಲಿ	೫ ತಾಮ್ರವು ಹಿತ್ತಾಳೆಗಿಂತ ಜಡವದೆ
೬ ತಾಮ್ರದ ತಗಡು, ಬೆಳ್ಳಿ ಬಂಗಾರದ ತಗಡುಗಳನ್ನು ಕಲ್ಲ ಮೇಲೆ ಸಾವಕಾಶವಾಗಿ ಜಲ್ಲಿ ನೋಡಲಿ	೬ ತಾಮ್ರವು ಹೆಚ್ಚು ನಾದವುಳ್ಳದ್ದು
೭ 'ಒವ್ವಾ' ಹಾಕಿದ ತಾಮ್ರದ ಪಾತ್ರೆ (ಗೋಕಾವಿವವು) ಗಳನ್ನು ನೋಡಲಿ	೭ ಒವ್ವಾಹಾಕಿದಂಥವು ಎಂಬುವವು

ಸೂಚನೆ:-- ತಾಮ್ರದ ತಾಯಿತ, ಡಾಕ, ತಂತಿ ಮುಂತಾದವುಗಳನ್ನು ಮಾಡುವ ಕೃತಿಯಿಂದ ತಾಮ್ರ ಕರಗುವದು

ಗ್ಗುವದು ತಂತಿ ಎಳೆಯುಳಿಕ್ಕೆ ಬರುವದು ಮುಂತಾದ ಗುಣಗಳನ್ನು ಕಲಿಸಬೇಕು

ಸಿದ್ಧನಾಥ ವಾಚನ ಪುಸ್ತಕ
ಮೊರಬ. ಜಿ. ಧಾ...

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಯಮಂ ಸುಕ್ಷೇಮಮೋಕ್ಷಪ್ರಮೋ
ದಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ।
ನಯದಿಂದಿತ್ತವೆನೋದುವರ್ಗಸುಗುಣಂ ತೋರಲ್ಕೆಯೈಕೊಂಮುದ್ದೆ।
ಬಯಿಯಿಂದೋಷವತಿದ್ದ ವೇಳ್ವುದುಮುಧರಿಜ್ಞಾನಾಭಿವೃದ್ಧಿಪ್ರಯು ಗಿ॥

ಪುಸ್ತಕ ೪೧]　　ಅಗಷ್ಟ ೧೯೦೫.　　[ಸಂಚಿಕೆ ೮.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಅಮೇರಿಕೆಯೊಳಗಿನ ಒಂದು ಊರೊಳಗಿನ ಒಬ್ಬ ಸಾಲೇ ಹುಡುಗನು ಒಂದುದಿನ ಸಾಲೆ ಇಲ್ಲದ ದಿವಸ ಒಂದು ತೋಟದೊಳಗೆ ಅಡ್ಡಾಡುತ್ತಿದ್ದನು. ಆಗ ಒಂದು ಗುಳ್ಳೇಬಸಪ್ಪನೆಂಬ ಹುಳವು ಅವನ ಕಣ್ಣಿಗೆ ಬಿತ್ತು. ಅದು ಅವನಿಗೆ ಸೋಜಿಗವಾಗಿ ತೋರಿದ್ದರಿಂದ ಅದನ್ನು ಹಿಡಕೊಂಡು ಮನೆಗ ಬಂದನು. ಬಳಿಕ ಅದನ್ನು ಕೋಣೆಯಲ್ಲಿಟ್ಟು ಅದು ಓಡಿಹೋಗಬಾರದೆಂದು, ಅದರ ಬೊಂಕಕ್ಕೆ ಒಂದು ದಾರವನ್ನು ಕಟ್ಟಿದನು. ಆದರೂ ಅದು ತುಸು ಹೊತ್ತಿನಲ್ಲಿ ಮುಂದೆ ಹೋಗಿರಲು, ಅಚ್ಚರಿಗೊಂಡು ಆ ದಾರದ ಎರಡನೇ ತುದಿಗೆ ಒಂದು ಸಣ್ಣ ಕಲ್ಲು ಕಟ್ಟಿದನು. ಮತ್ತೆ ತಾಸೆರಡುತಾಸು ಆಡಿ ಬಂದು ನೋಡಲು, ಅದು ಮತ್ತೆ ತನ್ನ ಸ್ಥಳಬಿಟ್ಟು ಮುಂದಕ್ಕೆ ಹೋಗಿತ್ತು. ಆಗ ಆ ಹುಡುಗನು, ಒಂದು ಹಲಿಗೆಯನ್ನು ತಂದು ಆ ಹಲಿಗೆಗೆ ಆ ಹುಳವನ್ನು ಕಟ್ಟಹಾಕಿದನು. ಅಷ್ಟಲ್ಲದೆ, ಆ ಹಲಿಗೆಯ ಮೇಲೆ ಒಂದು ಸಣ್ಣ ಕಲ್ಲು ಇಟ್ಟನು. ಆ ಹುಳವು ಅವೆರಡನ್ನು ಎಳಕೊಂಡು ನಡೆಯಿತು. ಇಂಥ ಸಣ್ಣ ಹುಳವು

ಇಪ್ಪು ಬಜೆ ಯನ್ನು ಎಳಕೊಂಡು ಹೋಗುವದು ಆಶ್ಚರ್ಯ ನೆಂದು ಬಗೆದು ಆ ಹುಡುಗನು ಓಡುತ್ತೋಡುತ್ತ ಗುರು ಗಳ ಬಳಿಗೆ ಬಂದನು. ಗುರುವು ಆ ಎಲ್ಲ ಸಂಗತಿಯನ್ನು ಕೇಳಿ ಲಗುಬಗೆಯಿಂದ ಆ ಹುಳವಿದ್ದಲ್ಲಿಗೆ ಬಂದು ಆ ಪ್ರಾಣಿಯಲ್ಲಿರುವ ಭಾರವನ್ನು ಎಳೆಯುವ ಸಾಮರ್ಥ್ಯವನ್ನು ಹಲವು ಬಗೆಯಿಂದ ಪರೀಕ್ಷಿಸಿ ಮನಗಂಡನು. ಒಂದು ಹಲಿಗೆಯ ಎರಡೂ ಬದಿಗಳಿಗೆ ಎರಡು ದಾರಗಳನ್ನು ಕಟ್ಟಿ ಆ ದಾರಗಳಿಗೆ ಈ ಜಾತಿಯ ಎರಡು ಹುಳಗಳನ್ನು ಕಟ್ಟಲು, ಅವು ಸುಮಾರು ಎರಡು ಸೇರು ಬಜ್ಜೆಯನ್ನು ಎಳೆದೊಯ್ಯುವವೆಂದು ಗೊತ್ತಾಯಿತು. ಸದ್ಯಕ್ಕ ಅವನು ಈ ನಿರುಪಯೋಗವೆಂದು ತಿಳಿಯುವ ಪ್ರಾಣಿಗಳಿಂದ ಸಹ ಸ್ವಂತದ ಉಪಯೋಗ ಮಾಡಿಕೊಳ್ಳುವ ಆಲೋಚನೆಯಲ್ಲಿರುವನು.

ನೋಡಿರಿ; ಶೋಧದೃಷ್ಟಿಯ ಮಹಿಮೆಯು ಎಷ್ಟು ಅಗಾಧವಿರುವದು! ಈ ಸಂಗತಿಯನ್ನು ಅಧ್ಯಾಪಕರು ಅವಶ್ಯವಾಗಿ ಲಕ್ಷದಲ್ಲಿಡಬೇಕು.

SOLID AIR

ಹೆಪ್ಪುಗಟ್ಟಿದ ಹವೆಯು.

ಅರ್ವಾಚೀನ ಪಂಡಿತರು ಬಹು ಶ್ರಮದಿಂದ ಶೋಧಿಸಿ ತೆಗೆದ ಅನೇಕ ಸಂಗತಿಗಳು ನಮಗೆ ಕಲ್ಪಿತ ಕಾದಂಬರಿಯೊಳಗಣ ಸಂಗತಿಯಂತೆ ಸಕೃದ್ದರ್ಶನಕ್ಕೆ ಮಿಥ್ಯವಾದವುಗಳೆಂದು ಭಾಸವಾಗುತ್ತದೆ. ಆದರೆ ಅವೇ ಸಂಗತಿಗಳು ಪ್ರಯೋಗದಿಂದ ನಮಗೆ ಮನವರಿಕೆಯಾಗಲು, ಅವುಗಳನ್ನು ಗೊತ್ತು ಹಚ್ಚಿದವರ ಬಗ್ಗೆ ಪೂಜ್ಯ ಬುದ್ಧಿಯು ಉತ್ಪನ್ನವಾಗುತ್ತದೆ. ನೋಡಿರಿ! ಕಬ್ಬಿಣದಂಥ ಕಠಿಣ ಧಾತುಗಳನ್ನು ಕ್ಷಣ ಮಾತ್ರದೊಳಗೆ ಉಗಿಯಾಗಿ ಆಕಾಶಕ್ಕೆ ಹಾರಿಸಿಬಿಡುತ್ತೇವೆ. ಹೊಟ್ಟೆಯೊಳಗಿನ ಕರುಳುಗಳ ಅಥವಾ ಸಜೀವ ಪ್ರಾಣಿಯ ಎಲುವಿನ ಪ್ರತಿಬಿಂಬವನ್ನು ತೆಗೆದುಕೊಳ್ಳಲಿಕ್ಕೆ ಸಮರ್ಥರಾಗಿದ್ದೇವೆ. ತಂತಿಯಿಂದ ಸಾವಿರಾರು ಹರದಾರಿಗಳ ಮೇಲಿರುವ ಸ್ಥಳಗಳಿಗೆ ವರ್ತಮಾನವನ್ನು ಒಂದು ಕ್ಷಣದೊಳಗೆ ನಿರಾಯಾಸವಾಗಿ ಕಳಿಸುತ್ತೇವೆ.

ಡಾಂಬರದಂಥ ದುರ್ಗಂಧ ಪದಾರ್ಥದಿಂದ ಕಣ್ಣು ಕುಕ್ಕಿಸು ವಂಥ ಬಣ್ಣಗಳನ್ನು ಸಿದ್ಧಗೊಳಿಸುತ್ತೇವೆ. ಹಾಗೂ ಇದೇ ಪದಾರ್ಥದಿಂದ ಸಕ್ಕರಿಗಿಂತ ನೂರು ಪಟ್ಟು ಸವಿಯಾಗಿರುವ ಬೇರೊಂದು ಪದಿವೆಯನ್ನು ಹುಟ್ಟಿಸ ಬಲ್ಲೆವು. ಇವೆಲ್ಲ ಸಂಗತಿಗಳು ಇಂದಿಗೆ ಐವತ್ತು ವರ್ಷಗಳ ಮೊದಲು ಸುಸಾ ಧ್ಯವೆಂದು ಯಾವನಾದರೊಬ್ಬ ಮನುಷ್ಯನ ಕನಸು ಮನ ಸಿನಲ್ಲಿಯಾದರೂ ಹೊಳೆದಿರಬಹುದೋ? ಇಲ್ಲ. ಇದೇ ಮಾದರಿಯದೊಂದು ಹೊಸ ಕೋಧವನ್ನು ಇದರಡಿಯಲ್ಲಿ ವಿವರಿಸುತ್ತೇವೆ.

ಹವೆಯನ್ನು ಹೆರಿಸಿ ಗಟ್ಟಿ ಮಾಡುವದೇನು ಸಾಮಾನ್ಯ ಸಂಗತಿಯಲ್ಲ, ವಾಯುರೂಪ ಪದಾರ್ಥವನ್ನು ಘನ ಗೊಳಿಸಿ ಪ್ರವಾಹಿಯಂತೆ ಮಾಡುವದೇನು ಸುಲಭವಾದ ಮಾತೇ, ಆದರೂ ಇಂಥ ಕಠಿಣಕಾರ್ಯವನ್ನಾದರೂ ಅ ರ್ವಾಚೀನ ಕೋಧಕರು ಸಾಧ್ಯ ಮಾಡಿಕೊಂಡಿರುವರು.

ಹವೆಗೆ ಘನರೂಪವನ್ನು ಕೊಟ್ಟು ಪ್ರವಾಹಿಯನ್ನಾಗಿ ಮಾಡಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕಳಿಸುವ ಕಾರ್ಯವು ಸಹ ಸುಯಂತ್ರವಾಗಿ ನಡೆದಿದೆ. ಆದರೆ ಇದ ನ್ನು ಹ್ಯಾಗೆ ಮಾಡುತ್ತಾರೆಂಬುದನ್ನು ವಿವರಿಸುವ ಮೊದಲು ಪದಾರ್ಥ ವಿಜ್ಞಾನಶಾಸ್ತ್ರದೊಳಗಿನ ಕೆಲವು ಸಂಗತಿಗಳು ವಾಚಕರಿಗೆ ಗೊತ್ತಿರುವದು ಅವಶ್ಯವಾಗಿರುವದೆಂದು ಮುಗೆ ದು ಅವುಗಳನ್ನು ಮೊದಲು ಇದರಡಿಯಲ್ಲಿ ಬರೆಯುತ್ತೇವೆ.

ಯಾವತ್ತೂ ಸೃಷ್ಟ ಪದಾರ್ಥಗಳು ಪರಮಾಣುಗಳಿಂ ದುಂಟಾಗಿರುತ್ತವೆ. ಈ ಪರಮಾಣುಗಳು ಘನಪದಾರ್ಥ ದಲ್ಲಿ ಅತಿನಿಕಟವಾಗಿಯೂ ಪ್ರವಾಹಿಯಲ್ಲಿ ಅಲ್ಪ ಸ್ವಲ್ಪ ಅಂತರ್ವರ್ತಿಗಳಾಗಿಯೂ ಇರುತ್ತವೆ. ವಾಯುರೂಪ ಪ ದಾರ್ಥಗಳಲ್ಲಂತೂ ಇವು ಒಂದನ್ನೊಂದು ದೂಡುತ್ತ ಸಿಕ್ಕ ಷ್ಟು ಸ್ಥಳವನ್ನು ವ್ಯಾಪಿಸಹವಣಿಸುತ್ತಿರುತ್ತವೆ. ಈ ಮಾ ತು ಎಲ್ಲರಿಗೂ ಬಹುತರಗೊತ್ತುಂಟು

ಮೂರು ರೂಪದ ಪದಾರ್ಥಗಳೊಳಗಿನ ಪರಮಾಣುಗಳ ವಸ್ತುಸ್ಥಿತಿಯು ಹೀಗಿರಲು, ಈ ಪದಾರ್ಥಗಳಲ್ಲಿ ಒಂದಕ್ಕೆ

ಬೇರೊಂದರ ಸ್ಥಿತಿಯನ್ನುಂಟುಮಾಡಬೇಕಾದರೆ ಅವುಗಳ ಪರಮಾಣುಸ್ಥಿತಿಯಲ್ಲಿಯೇ ಹೆಚ್ಚು ಕಡಿಮೆಯನ್ನು ಮಾಡ ಬೇಕಾಗುತ್ತದೆ. ಆದ್ದರಿಂದ ವಾಯುರೂಪ ಪದಾರ್ಥಕ್ಕೆ ಜಲರೂಪವನ್ನುಂಟುಮಾಡಬೇಕಾದರೆ ವಾಯುರೂಪ ಪದಾರ್ಥದೊಳಗಿನ ದೂರದೂರ ಹಾರಿ ಹೋಗುವದಕ್ಕೆ ಹವಣಿಸುವ ಪರಮಾಣುಗಳಿಗೆ ಹಾಗೆ ಮಾಡಗೊಡದೆ ಅವುಗಳನ್ನು ಒಂದಕ್ಕೊಂದು ತಕ್ಕಷ್ಟು ನಿಕಟವಾಗಿರುವಂತೆ ಯುಕ್ತಿಸಬೇಕಾಗುವದು. ಅಂದರೆ ದೂರದೂರ ಇರುವ ಪರಮಾಣುಗಳನ್ನು ಸಮೀಪದಲ್ಲಿ ತರೋಣ, ಹಾಗೂ ಹಾರಿ ಹೋಗದಂತೆ ಮಾಡೋಣ ಹೀಗೆ ಎರಡು ಕೆಲಸಗಳನ್ನು ಮಾಡಬೇಕು. ಈ ಎರಡು ಕಾರ್ಯಗಳಲ್ಲಿ ಮೊದಲನೇದನ್ನು ಸಾಧ್ಯಮಾಡಿಕೊಳ್ಳಬೇಕಾದರೆ ಹವೆಯನ್ನು ಒಂದು ಪಾತ್ರೆಯಲ್ಲಿ ಹಿಡಿದು ಅದಕ್ಕೆ ಒಂದು ಬೆಣೆಯಿಂದ ಒತ್ತಬೇಕಾಗುವದು. ಹೀಗೆ ಮಾಡುವದರಿಂದ ಹವೆಯು ಆಕುಂಚನ ಹೊಂದುವದು. ಅಂದರೆ ಅದರ ಪರಮಾಣುಗಳು ಸಮೀಪವಾದಲ್ಲಿ ಬರುವವು. ಎರಡನೇ ಕಾರ್ಯವನ್ನು ಕೊನೆಗಾಣಿಸಬೇಕಾದರೆ, ಅದಕ್ಕೆ ಸೀತೋಪಚಾರವನ್ನು ಮಾಡಬೇಕು.

ಯಾವತ್ತು ವಾಯುರೂಪ ಪದಾರ್ಥಕ್ಕೆ ಜಲತ್ವವನ್ನುಂಟುಮಾಡುವಾಗ ಮೇಲೆ ವಿವರಿಸಿದ ಎರಡೂ ಕಾರ್ಯಗಳನ್ನು ಯಾವಾಗಲೂ ಮಾಡಬೇಕಾಗುವದಿಲ್ಲ. ಕೆಲವು ವಾಯುಗಳಲ್ಲಿ ಉಷ್ಣತಾಮಾನವು ಮರ್ಯಾದಿತವಾಗಿರುವದು. ಆ ಅವಧಿಗಿಂತ ಹೆಚ್ಚು ತಂಪು ಕೊಡಲು ಅವು ಒತ್ತುವಿಕೆಯ ಕಾರ್ಯವನ್ನಪೇಕ್ಷಿಸದೆ ಜಲರೂಪವನ್ನು ಹೊಂದುವವು. ಈ ವಿವರಣದಿಂದ ವಾಯುಗಳನ್ನು ಪ್ರವಾಹಿಯಾಗಿ ಮಾಡುವ ಬಗೆಯು ಸ್ಥೂಲ ಕಲ್ಪನೆಯು ವಾಚಕರ ಮನದಲ್ಲಿ ಉದ್ಭವಿಸಿರಬಹುದು. ಆದರೆ ಅಮೋನಿಯಾ, ಕ್ಲೋರಿನ್ ವಾಯುಗಳನ್ನು ಜಲರೂಪದಲ್ಲಿ ತರುವ ಸುಲಭ ಯುಕ್ತಿಯನ್ನು ವರ್ಣಿಸಿದರೆ ಹೆಚ್ಚು ಉಪಯೋಗವಾದೀತೆಂದು ಅದನ್ನು ಕೆಳಗೆ ವಿವೇಚಿಸಿದ್ದೇವೆ.

ಇವೆರಡು ವಾಯುಗಳಿಗೆ ಜಲರೂಪವನ್ನುಂಟು ಮಾಡಲಿಕ್ಕೆ ಯಂತ್ರಗಳ ವಿಶೇಷ ಅವಶ್ಯಕತೆಯಿಲ್ಲ

ಒಂದು ಕಾಚಿನ ಕೊಳವೆಯನ್ನು ದೀಪಕ್ಕೆ ಹಿಡಿದು ಮುಮಾಡಿಸಿರುತ್ತಾರೆ. ಬಾಯಿ ಮುಚ್ಚಿದ ಕೊಳವೆಯ ಭಾಗದಲ್ಲಿ ಈ ವಾಯುಗಳನ್ನು ಹುಟ್ಟಿಸುವ ದ್ರವ್ಯವನ್ನು ಹಾಕಿರುವರು. ಮತ್ತೊಂದು ಬದಿಯ ಬಾಯನ್ನು ಕರಗಿಸಿ ಮುಚ್ಚುವರು. ಬಳಿಕ ದ್ರವ್ಯವಿದ್ದ ಕೊಳವೆಯ ಭಾಗವನ್ನು ದೀಪಕ್ಕೆ ಹಿಡಿಯುವರು. ಎರಡನೇ ಭಾಗದ ಬಾಯಿಯನ್ನು ಬರ್ಫ ಉಪ್ಪುಗಳ ಮಿಶ್ರಣದಲ್ಲಿ ಮುಳುಗಿಸಿರುವರು. ದೀಪದಿಂದ ಕೊಳವೆಯ ಒಂದು ಬದಿಯಲ್ಲಿರುವ ಪದಾರ್ಥವು ಕಾಯಲು, ಅದು ಪ್ರಥಕ್ಕರಣಹೊಂದಿ ನಾವು ಇಚ್ಛಿಸಿದ ವಾಯುವುಂಟಾಗುವದು. ಆ ವಾಯುವಿಗೆ ಕೊಳವೆಯ ಎರಡನೆಯ ಬದಿಯ ಹೊರತು ಮಾರ್ಗವಿಲ್ಲದ್ದರಿಂದ ಅತ್ತ ಬರುವದು. ಹಾಗೂ ಸತತ ಹೊರಡುತ್ತಿರುವ ವಾಯುವಿನ ಒತ್ತುವಿಕೆಯಿಂದ ಒಳಿತಾಗಿ ಒತ್ತಲ್ಪಡುವದು. ಅಲ್ಲಿ ಬರ್ಫಕ್ಕಿಂತ ತಣ್ಣಗಾದ ಪದಾರ್ಥದ ಸಂಸರ್ಗದಿಂದ ತಂಪಾಗಿ ಜಲರೂಪವನ್ನು ಹೊಂದುವದು.

ಆದರೆ ಹವೆಯನ್ನು ಜಲರೂಪವಾಗಿ ಮಾಡುವದು ಇಷ್ಟು ಸುಲಭವಲ್ಲ ಇದಕ್ಕೆ ಹೆಚ್ಚು ಒತ್ತುವಿಕೆಯು ಬೇಕು. ಈ ಕಾರ್ಯಕ್ಕೆ ಅನೇಕ ಜನ ಶೋಧಕರು ಹಲವು ತರದ ಯಂತ್ರಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಅಮೇರಿಕೆಯವನಾದ ಟ್ರಿಪ್ಲರನೆಂಬವನು ರಚಿಸಿದ ಯಂತ್ರವು ತಕ್ಕಷ್ಟು ಸುಲಭ ರಚನೆಯುಳ್ಳದ್ದೆಂದು ಹೇಳಬಹುದು.

ಇವನು ಮೊದಲು ಮನೆಯಮೇಲಿನ ಹವೆಯನ್ನು ಹಿಡಿಪು ಹತ್ತಿಯೊಳಗಿನ ಕಸರು ತೆಗೆಯುವಂತೆ ಅದರೊಳಗಿನ ಧೂಳ ಮುಂತಾದ ಕಸರನ್ನು ತೆಗೆಯುವ ವ್ಯವಸ್ಥೆಯನ್ನು ಮಾಡಿದ್ದಾನೆ. ಬಳಿಕ ಅರಳಿಯನ್ನು ಒತ್ತಿ ಗಂಟು ಕಟ್ಟುವಂತೆ ಉಗಿಯ ಯಂತ್ರದ ಸಹಾಯದಿಂದ ಹವೆಯನ್ನು ವಿಶೇಷವಾಗಿ ಒತ್ತುತ್ತಾನೆ, ಅದರಿಂದ ಹವೆಯು ಕಾಯುತ್ತದೆ. ಆಗ ಅದನ್ನು ನೀರೊಳಗಿರುವ ಕಬ್ಬಿಣದ್ದೊಂದು

ತಂಪಾದ ಕೊಳಿವೆಯೊಳಗಿಂದ ಹೋಗಬಡುತ್ತಾನ. ಇದರ ನುಂದಿನ ವಸ್ತು ಇನ್ನೂ ಗುಪ್ತನೇ ಅದೆ. ಆದರೂ ಪ್ರಕಟವಾದ ಸಂಗತಿಗಳಿಂದ ತಿಳಿಯುವದೇನಂದರೆ, ಕೊಳಿವೆಯದ್ವಾರವಾಗಿ ಹೊರಡುವ ಹವೆದು ಒಂದು ವರ್ತುಲಾಕಾರವಾದಂಥ ಪಾತ್ರೆಯು ಒಳಮುಗ್ಗಲಕ್ಕೆ ಸುತ್ತಿಕೊಂಡ ತಾಮ್ರದ ಕೊಳಿವೆಗಳೊಳಗೆ ಸೇರುವದು. ಈ ಕೊಳಿವೆಗೆ ಎರಡು ಬಾಯಿಗಳಿರುವವು. ಒಂದು ಬಾಯಿಂದ ಸೇರಿದ ಹವೆಯು ಎರಡನೇ ಬಾಯೊಳಗಿಂದ ಹೊರಬೀಳುವ ವೊನಲು ಅನೇಕ ಸುತ್ತುಗಳುಳ್ಳ ಆ ತಾಮ್ರದ ಕೊಳಿವೆಯೊಳಗಿಂದ ಹಾಯಬೇಕಾಗುವದು. ಆಗಲಾ ಹವೆಯು ಪ್ರಸರಣಹೊಂದುವದು. ಪ್ರಸರಣಹೊಂದಿದಹವೆಯಲ್ಲಿ ಶೀತವು ಹೆಚ್ಚಾಗುವದು. ಅದರ ಯೋಗದಿಂದ ಕೊಳಿವೆಯೂ ತಂಪಾಗುವದು. ಹೀಗೆ ಅದು ಹೆಚ್ಚೆಚ್ಚು ತಂಪಾಗುತ್ತ ನಡೆದು ಕಡೆಯಲ್ಲಿ ಜಲರೂಪವನ್ನು ಹೊಂದಿ ಎರಡನೇ ದ್ವಾರದಿಂದ ಹೊರಬೀಳುವದು

ಅತಿಶಯು ತಂಪಾದ ಪದಾರ್ಥವು ಮೈಗೆ ಹತ್ತಲು ಅದು ಸುಟ್ಟ ಹಾಗೆ ಭಾಸವಾಗುವದು. ಆದರೆ ಈ ತಂಪಾದ ಹವೆಯನ್ನು ಮುಟ್ಟಿದರೆ ಹೀಗಾಗುವದಿಲ್ಲ. ಯಾಕಂದರೆ ಈ ಘನೀಭವನವನ್ನು ಹೊಂದಿದ ಹವೆಯಿಂದ ಯಾವಾಗಲೂ ಹವೆಯು ವಾಯುರೂಪವಾಗಿ ಹೊರಬೀಳುತ್ತಿರುವದು. ಆದರಿಂದ ಶರೀರಕ್ಕೂ ಜಲರೂಪ ಹವೆಗೂ ಈ ವಾಯುರೂಪ ಹವೆಯು ಮಧ್ಯದಲ್ಲಿದ್ದುಕೊಂಡು ನಮ್ಮ ಶರೀರಕ್ಕೆ ಅಪಾಯ ಮಾಡಗೊಡುವದಿಲ್ಲ. ಅಂದರೆ ಹೆಪ್ಪುಗಟ್ಟಿದ ಹವೆಯು ನಮಗೆ ಪ್ರತ್ಯಕ್ಷವಾಗಿ ಸ್ಪರ್ಶಮಾಡುವದೇ ಇಲ್ಲ.

ಈ ಜಲರೂಪ ಹವೆಯನ್ನು ಕಾಚಿನ ಪಾತ್ರೆಯಲ್ಲಿ ಸುರವಲು ಕ್ರಿಯೆತೊಡಗುವದು ಆ ಪಾತ್ರೆಯ ಹೊರಗಿರುವ ಹವೆಯೊಳಗಿನ ಉಗಿಯು ಇದರ ಶೀತದಿಂದ ಹೆಪ್ಪು ಗಟ್ಟುವದು ಪಾತ್ರೆಯ ಬಾಯೊಳಗಿಂದ ಮಂಜು ದೃಷ್ಟಿಗೋಚರವಾಗುವದು.

ಜಲರೂಪ ಹವೆಯಲ್ಲಿ ಸೀಸದ ತುಂಡನ್ನಾಗಲಿ ತವರದ ತುಣಕನ್ನಾಗಲಿ ಚಲ್ಲಲು, ಅವು ಕಾಜಿನಂತೆ ಕೂಡಲೆ ಒಡಿಯುವ ಅವಸ್ಥೆಯನ್ನು ಹೊಂದುವವು ಬರೆಯುವ ಟಾಕನ್ನಾಗಲಿ, ಫೊಡಿಯಾಲದ ಕವಾನವನ್ನಾಗಲಿ, ಹಾಕಲು, ಅವು ಉರಿದು ಹೋಗುವವು ಈ ಬಗೆಯ ಹವೆಯ ಸಂಯೋಗದಿಂದ ಪಾರಜವನ್ನು ವಿಕ್ಕ ಧಾತುಗಳಷ್ಟು ಅಂದರೆ ಸುತ್ತಿಗೆಯಿಂದ ಸಂಗಬಡಿಯುವಷ್ಟು ಗಟ್ಟಿಯಾಗಿ ಮಾಡಬಹುದು.

AGRICULTURE.

ಕೃಷಿತಾಸ್ತ್ರವು

ಸಗಣಿಯು ಮೊದಲು ಕೊಳೆಯುತ್ತದೆ. ಆ ಮೇಲೆ ಕಳೆಯು ಉತ್ಪನ್ನವಾಗುತ್ತದೆ ಕಟ್ಟಕಡಿಗೆ ಆ ಹುಲ್ಲಾದರೂ ಕೊಳೆಯುತ್ತದೆ ಆ ಮೇಲೆ ಮೊದಲು ಹೇಳಿದಂತೆ ರಸಾಯನ ವ್ಯಾಪಾರಗಳು ನಡಿಯುತ್ತವೆ.

ಕೊಳೆಯುವ ವ್ಯಾಪಾರವು ತೀವ್ರವಾಗಿ ನಡಿಯಬೇಕಾದರೆ ಗೊಬ ರವನ್ನು ವಿರಳವಾಗಿ ಹಾಕುತ್ತಾರೆ ಕೊಳೆಯುವ ವ್ಯಾಪಾರದಿಂದ ಅಪಾಯವೇನೂ ಆಗದಂತೆ ಮಾಡಬೇಕಾದರೆ ಗೊಬ್ಬರನ್ನು ಬಹಳ ಬಿಸಿಯಾಗಗೂಡಬಾರದು ಮತ್ತು ಇದರಿಂದ ಹಾರಿಹೋಗುವ ದ್ರವ್ಯಗಳನ್ನು ಹೀಗಗೊಡಬಾರದು. ಇದನ್ನು ತಪ್ಪಿಸುವದಕ್ಕಾಗಿ ಆ ರಾಶಿಯುಮೇಲೆ ಕೆಲಕೆಲವು ಪ್ರಸಂಗಗಳಲ್ಲಿ ಪ್ರವಾಹಿರೂಪಿಯಾದ ಗೊಬ್ಬರವನ್ನು ಸುರವಬೇಕು ಇಪಲ್ಲದೆ ಆ ರಾಶಿಯನ್ನು ಪನಗಳಿಂದ ಮತ್ತು ಹಂದಿಗಳಿಂದ ಜನ್ಯಗಿತುಳಿಸಬೇಕು ಹೀಗೆಮಾಡಿದರೆ ಅದಷ್ಟು ಹವೆಯು ಬಾರದಂತಾಗಿ ವ್ಯಾಪಾರವು ಸಾವಕಾಶವಾಗಿ ನಡಿಯುತ್ತದೆ.

ಧಚನೆಯು—ಕುದುರೆಯ ಸಂದಿಯು ಮತ್ತು ಆಕಳ ಸ

ಸಗಣಿಯಿಂದಲೂ ಹುಲ್ಲಿನಿಂದಲೂ ಮಿಶ್ರಿತವಾದ ಗೊಬ್ಬರದ ಪೃಥಕ್ಕರಣವು ಕೆಳಗೆ ಬರದಂತೆ ಇರುತ್ತದೆ.

೧ ತಾಜಾಗೊಬ್ಬರವು. ೨೦ ದಿನಕ್ಕಾಗಿ ಕೊಳೆತದ್ದು.
(ಎರಡು ವಾರ ಇಟ್ಟದ್ದು)(ಆರು ತಿಂಗಳು ಇಟ್ಟದ್ದು.)

ನೀರು ...	೬೬.೧೫ ...	೭೫.೪೦.
ದ್ರವ್ಯವಾದ ಸಜೀವ ತನ ದ್ರವ್ಯವು.	೦.೪೪ ...	೩.೫೧.
,, ಅಜೀವತನ ದ್ರವ್ಯವು.	೧.೫೪ ...	೧.೪೩.
ಅದ್ರಾವ್ಯವಾದ ಸಜೀವತನ ದ್ರವ್ಯವು.	೦೫.೬೬ ...	೧೨.೪೦.
ಅದ್ರಾವ್ಯವಾದ ಅಜೀವತನ ದ್ರವ್ಯವು.	೪.೦೫ ...	೬.೫೪.
	———	———
(೧) ನೈಟ್ರೊಜನ ಉಳ್ಳದ್ದು.	೧೦೦.೦೦	೧೦೦.೦೦
(೨) ಸ ಇಲ್ಲದ್ದು	.೧೪೯	.೦೯೩.
	.೪೯೪	.೩೦೯.
	———	———
ಒಟ್ಟು ನೈಟ್ರೊಜನ್ನ	.೬೪೩	.೬೦೬.

ಕಿಟ್ಟದ ಗೊಬ್ಬರವನ್ನು ಹುಟ್ಟಿಸುವ ಮತ್ತು ಅದನ್ನು ಉಪಯೋಗಿಸುವ ಸ್ಥಿತಿಗಳಮೇಲಿಂದ ಅದರ ರಚನೆಯಾದರೂ ಬೇರೆ ಬೇರೆ ಆಗುತ್ತದೆ. ಕಿಟ್ಟದ ಗೊಬ್ಬರದ ೧ ಟನ್ನಿನ್ನಲ್ಲಿ ಸಾಧಾರಣವಾಗಿ ೯ರಿಂದ ೧೫ ಪೌಂಡುಗಳವರಿಗೆ ನೈಟ್ರೊಜನ್ನವೂ ೯ ರಿಂದ ೧೫ ಪೌಂಡುಗಳವರಿಗೆ ಪೊಟ್ಯಾಶವೂ ೪ ರಿಂದ ೯ ಪೌಂಡುಗಳವರಿಗೆ ಫಾಸಫೊರಿಕ್ಕ ಆಸಿಡ್ಡವೂ ಇರುತ್ತವೆ.

ಕಿಟ್ಟದ ಗೊಬ್ಬರವು ಕೆಳಗೆ ಕಾಣಿಸಿದ ಕಾರಣಗಳಿಂದ ಬೆಲೆಯುಳ್ಳದ್ದಿರುತ್ತದೆ.

೧ ಸಾಧಾರಣ ಗೊಬ್ಬರವಿರುವದರಿಂದ ಅದರಲ್ಲಿ ವನ

ಸ್ಪತಿಗಳ ಬೆಳುವಣಿಗಿಗೆ ಬೇಕಾದ ಎಲ್ಲ ವನಸ್ಪತ್ಯಾಹಾರವು ಇರುತ್ತದೆ.

೨ ಮಣ್ಣು ಭೂಮಿಗಳನ್ನು ಹಗರುಮಾಡುವದರಲ್ಲಿ ತಾಜಾ ಗೊಬ್ಬರದ ಯಾಂತ್ರಿಕ ವ್ಯಾಪಾರದಿಂದ ಬಹಳ ಉಪಯೋಗವಾಗುತ್ತದೆ. ಬಹಳ ಹಳೇದದಾದ ಗೊಬ್ಬರವನ್ನು ಹಗುರು ಭೂಮಿಯಲ್ಲಿ ಹಾಕಿದರೆ ಅದರಿಂದ ಅಪ್ರಗಟ್ಟಿಯಾಗಿ ಆರ್ದ್ರತ್ವವನ್ನು ಹಿಡಿದುಕೊಳ್ಳಲು ಸಮರ್ಥವಾಗುತ್ತೆವೆ.

೩. ಅದರಿಂದ ಭೂಮಿಗೆ ಎಷ್ಟೋ ಸಜೀತನ ದ್ರವ್ಯದೊರಿಯುತ್ತದೆ. ಹೀಗಾಗಿ ಹಸಿಯು ದೊರೆಯುತ್ತದೆ. ಹಸಿಯಿಂದ ಎಷ್ಟೋ ಪ್ರಯೋಜನವುಂಟು ಅದರ ಸಹಾಯದಿಂದ ಭೂಮಿಗಳು ಹವೆಯೊಳಗಿನ ವಾಯುಗಳನ್ನು ಹಸಿಯನ್ನು ತೆಗೆದುಕೊಂಡು ತಮ್ಮಲ್ಲಿ ಇಟ್ಟುಕೊಳ್ಳಲಿಕ್ಕೆ ಸಮರ್ಥವಾಗುತ್ತದೆ.

೪ ಇದರಿಂದ ಭೂಮಿಗೆ ನೈತ್ರೋಜನವನ್ನು ಉಂಟು ಮಾಡುವ ಹುಳಗಳು ಇರುತ್ತವೆ ಹೀಗಾಗಿ ನೈತ್ರೋಜನ್ನ ಉಂಟಾಗಿ ವನಸ್ಪತಿಗಳಿಗೆ ಬೇಕಾದ ಆಹಾರದ ಸಂಗ್ರಹವು ಹೆಚ್ಚಾಗುತ್ತದೆ

೫ ಈ ಗೊಬ್ಬರವು ಬಹಳ ದಿವಸ ತಡೆಯುತ್ತದೆ ಅಂದರೆ ಹೊಲದಲ್ಲಿ ಇದನ್ನು ಹಾಕಿದರೆ ಇದರ ಸತ್ವವು ಒಂದೇ ವರುಷದಲ್ಲಿ ಹೊರಟು ಹೋಗುವದಿಲ್ಲ ಆದರೆ ಅದು ಮುಂದೆ ಎಷ್ಟೋ ವರುಷಗಳ ವರೆಗೆ ಇರುತ್ತದೆ.

೬ ಇದರಲ್ಲಿ ಕಾರ್ಬೊನಿಕ ಆಸಿಡ್ಡದಂಥ ಹೆಲವು ಆಸಿಡ್ಡಗಳು ತುಸು ಅಂಶದಲ್ಲಿರುತ್ತವೆ. ಈ ಆಸಿಡ್ಡುಗಳೂ, ವಾಯುಗಳೂಳೂ ಕೂಡಿ ಮಿಯಲ್ಲಿ ಖನಿಜ ದ್ರವ್ಯವನ್ನು ದ್ರವ್ಯವಾಗುವ ಹಾಗೆ ಮಾಡುತ್ತವೆ. ಈ ಗೊಬ್ಬರದ ಬೆಲೆಯು ಅದರ ರಚನೆಯ ಮಾನದಿಂದ ಹೆಚ್ಚು ಕಡಿಮೆ ಆಗುತ್ತದೆ. ಇದರ ಬೆಲೆಯು ಒಂದು ಟನ್ನಿಗೆ ೩ ಶಿಲಿಂಗ ೬ ಪೇನಶಿನಿಂದ ೬ ಶಿಲಿಂಗು ೬ ಪೇನಸುಗಳವರಿಗೆ ಇರುತ್ತದೆ ಇದರಲ್ಲಿರುವ ನೈಟ್ರೋಜನಕ್ಕೆ ಕೃತ್ರಿಮ ಗೊಬ್ಬರಗಳಲ್ಲಿಯು ನೈತ್ರೊ

ಜನದಷ್ಟು ಬೆಲೆಬೀಳುವದಿಲ್ಲೆಂಬ ಮಾತನ್ನು ಲಕ್ಷದಲ್ಲಿಡಬೇಕು. ಆದರೆ ಪೋಟ್ಯಾಶ ಮತ್ತು ಪೋರಿಕ್ಕ ಆಸಿಡ್ಡವು ಉಳಿದ ಗೊಬ್ಬರಗಳಂತೆ ಬೆಲೆ ಬೀಳುತ್ತವೆ.

MEMORY.

ಸ್ಮರಣಶಕ್ತಿ.

(೧೦೫ನೇ ಪುಟದಿಂದ ಮುಂದೆ ಸಾಗಿದ್ದು.)

ಅದನ್ನು ವರ್ಗೀಕರಿಸಿ, ನೆನಪಿನಲ್ಲಿಡಲಿಕ್ಕೂ ಮಾರ್ಗ ವಾಗುತ್ತದೆ. ಲಕ್ಷ್ಯಪೂರ್ವಕವಾಗಿ ನಿರೀಕ್ಷಿಸಿದ ವಸ್ತುವು ಮೇಲೆ ಮೇಲೆ ಮಾತ್ರ ನೋಡಿದ ವಸ್ತುಗಿಂತ ಹೆಚ್ಚು ಸ್ಮರಣದಲ್ಲಿ ಉಳಿಯುವದು ಇದು ಪ್ರತಿ ಒಬ್ಬರ ಅನುಭವಕ್ಕೆ ಬಂದದ್ದೇ ಇರುವದು ಆದರೂ ಅದರ ಪ್ರತ್ಯಕ್ಷವಾದ ಚಿತ್ರವನ್ನು ಜನರ ಮುಂದೆ ಮೊದಲಿದ್ದಂತೆಯೇ ಇರಿಸುವದು ಬಹು ಕಠಿನವಾದ ಸಂಗತಿಯಾಗಿದೆ. ಆದರೆ ಅದೇ ವಸ್ತುವನ್ನು ಒಮ್ಮೆ ಅವಧಾನಕೊಟ್ಟು ಕಣ್ದೆರೆದು ನೋಡಿ ಅಂತಃಕರಣ (ಒಳ ಇಂದ್ರಿಯ=ಸ್ಮರಣ)ದಲ್ಲಿ, ಆದರ ಪೂರ್ಣ ಚಿತ್ರವನ್ನು ಇರಿಸುವ ಪ್ರಯತ್ನ ಮಾಡಿದರೆ, ಮಾತ್ರ ಆ ಒಡಿವೆಯು ನಮ್ಮ ಸ್ಮರಣದಲ್ಲಿ ಬಹುಕಾಲ ನಿಂತು ಮೊದಲಿದ್ದಂತೆಯೇ ಅದನ್ನು ಮುಂದಿಯ ಮುಂದಿಡಲಿಕ್ಕೆ ಸಮರ್ಥರಾಗಬಹುದು. ಜ್ಞಾನಸಂಬಂಧದ ವಿಷಯಕ್ಕಾದರೂ ಇದನ್ನೇ ಅನುಸರಿಸತಕ್ಕದ್ದು ಲಕ್ಷ್ಯಪೂರ್ವಕವಾಗಿ ಅವಲೋಕನ ಮಾಡಿದ ಸಂಗತಿಯನ್ನು ಮನನ ಮಾಡಿಕೊಂಡರೆ ಮಾತ್ರ ಅದು ಚಿತ್ತದಲ್ಲಿ ಚೆನ್ನಾಗಿ ಚಿರಸ್ಥಾಯಿಯಾಗುವದು

'ವಿಚಾರದಿಂದ ಸ್ಮರಣಶಕ್ತಿಯು ಕಡಿಮೆಯಾಗುತ್ತದೆ;' ಈ ಸಾಮಾನ್ಯ ಸಿದ್ಧಾಂತವು ಸರ್ವರಿಗೂ ಮಾನ್ಯವಿರಲಿಕ್ಕೆ ಬೇಕು. ಸ್ಮರಣಶಕ್ತಿಯು ಹೆಚ್ಚಿಗಿದ್ದವರಿಗೆ ವಿಚಾರಶಕ್ತಿಯು ಕಡಿಮೆ. ಅನುಭವದಿಂದ ನೋಡಿದರೆ, ಗಣಿತವಿಷಯವನ್ನು ಚನ್ನಾಗಿ ಮಾಡಬಲ್ಲ ವಿದ್ಯಾರ್ಥಿಯು ಇತಿಹಾಸವಮಂತಾದ ಬಾಯಪಾಠದ ವಿಷಯಗಳಲ್ಲಿ ಅಷ್ಟು ಬಲ್ಲಿದನಿ

ರಲಾರನು ಯಾಕಂದರೆ, ವಿಚಾರಶಕ್ತಿಯು ಹೆಚ್ಚಿಗಿದ್ದಂತೆ ಸ್ಮರಣಶಕ್ತಿಯು ಕಡಿಮೆಯಾಗುತ್ತದೆ. ಒಮ್ಮೆ ಅವಲೋಕನ ಮಾಡಿದ ವಿಷಯವನ್ನು ಪುನಃ ಪುನಃ ಸ್ಮರಣಶಕ್ತಿಯು ಮುಂದೆ ತರುತ್ತದೆಂದರೆ, ತತ್ಸಂಬಂಧೀಯವಾಗಿ ನಾವು ವಿಚಾರಮಾಡಿದ ಹಾಗಾಯಿತೆಂದು ಕೆಲವರು ಆಕ್ಷೇಪಿಸಬಹುದು. ಆದರೆ ಸೂಕ್ಷ್ಮದೃಷ್ಟಿಯಿಂದ ವಿಚಾರಿಸಿ ನೋಡಿದರೆ, ಅದು ಸಟೆಯೆಂದು ಆಗಲೇ ತಿಳಿಯುವದು. ಕಾರಣವೇನೆಂದರೆ, ಒಮ್ಮೆ ಅಧ್ಯಯನ ಮಾಡಿದ ವಿಷಯವು ನಮ್ಮ ಸ್ಮರಣದಿಂದ ಉತ್ತ್ವಾಗಬಾರದೆಂದು ಅದನ್ನು ಮೇಲೆ ಮೇಲೆ ಅಧ್ಯಯನ ಮಾಡುತ್ತೇವೆ. (ಆ ವಿಷಯವನ್ನು ಕಣ್ಣೆದುರಿಗೆ ತರುತ್ತೇವೆ) ಹೀಗೆ ಮಾಡದೆ ಎರಡನೇ ವಿಷಯದ ಜ್ಞಾನವಮಾಡಿಕೊಳ್ಳುವ ಭರಕ್ಕೆ ಬಿದ್ದರೆ, ಮೊದಲಿನ ವಿಷಯದ ಜ್ಞಾನವು ಕೆಲವಂಶದಿಂದಾದರೂ ನಷ್ಟವಾಗಲಿಕ್ಕೆ ಬೇಕು. ಹೀಗಾಗುವದು ಸಂಭವನೀಯವೇ! ಒಂದೇ ವಿಷಯದ ಅಭ್ಯಾಸವನ್ನು ಮೇಲೆ ಮೇಲೆ ಮಾಡುವದರಿಂದ ಒಂದೇ ವಿಷಯವು ಧ್ಯಾನದಲ್ಲಿ ಉಳಿಯುವದು ಕೆಲಹೊತ್ತು ಬಿಟ್ಟು ಮುಂದೆ ಬೇರೆ ವಿಷಯವನ್ನು ಕಯ್ಕೊಳ್ಳಲು, ಮೊದಲಿನೇ ವಿಷಯದ ಅನೇಕ ಸಂಗತಿಗಳು ಮರೆತು ಹೋಗುತ್ತವೆಂಬದಾದರೂ ಅನುಭವ ಸಿದ್ಧವಾಗಿಯೇ ಅದೆ.

ಸ್ಣಣ ಹುಡುಗರ ಸ್ಮರಣಶಕ್ತಿಯು ಒಳ್ಳೇ ಚುರುಕಾಗಿರುವ ಕಾರಣವೇನು? ಇದಕ್ಕೆ ಉತ್ತರವಿಷ್ಟೇ!— ಚಿಕ್ಕಂದಿನಲ್ಲಿ ಅವರ ಮಿದುಳಿನ ಮೇಲೆ ಅನೇಕ ವಿಷಯಗಳ ವಿಚಾರದ ಹೊರೆಯು ಬಿದ್ದಿರುವದಿಲ್ಲ. ಆದರೆ ಮುಂದೆ ಅವರೇ ವಿದ್ಯಾಭ್ಯಾಸ ಮಾಡತೊಡಗಿ, ಫೋಕಂಪಟ್ಟಿಯು— ಯುಂಸ್ಕ್ರಿದಲ್ಲಿ ಸೇರಲು, ಅವರ ಸ್ಮರಣಶಕ್ತಿಯ ಕಸುವು ಕುಗ್ಗುತ್ತದೆ. ನಮ್ಮ ಈ ದೇಶದ ಸ್ತ್ರೀಯರಿಗೆ ಶಿಕ್ಷಣ ಸಂಬಂಧದಿಂದ ಆವ ಬಗೆಯ ಊಹಾಪೋಹವನ್ನು ಮಾಡಲು, ಸ್ವಾತಂತ್ರ್ಯವಿಲ್ಲದರಿಂದ ಇವರ ವಿಚಾರಶಕ್ತಿಯ ಮೇಲೆ ಏನೂ ಹೊರೆಯು ಬೀಳುವದಿಲ್ಲ. ಇದರಿಂದಲೇ ಅವರ ಸ್ಮರಣ ಶಕ್ತಿಯು ಬಲು ಚುರುಕಾಗಿರುತ್ತದೆ ಲಗ್ನಾದಿ ಶುಭಕಾರ್ಯಗಳಲ್ಲಿ

ಅನ್ನೆತಕ್ಕ ಹಾಡುಗಳೂ ಬಗಟುಗಳೂ, ಅವರು ಮೀಲವಾ
ಲೆ ಅಂದು ರೂಢಿ ಮಾಡದಿರದಿದ್ದರೂ ಸಹ ಏನೂ ತಪ್ಪದ
ತೆ ಅಂದು ಬಿಡುವರು. ಇದಲ್ಲದೆ ಮನೆವಾರ್ತೆಯು
ಷ್ಟೋ ಕೆಲಸಗಳಲ್ಲಿ ಸಹ ಅವರ ಸ್ಮರಣ ಶಕ್ತಿಯು ವರ್ಧಿ
ಸತಕ್ಕಂತಹದಿರುತ್ತದೆಂಬ ಸಂಗತಿಯು ಪ್ರತಿ ಒಬ್ಬ ಚ
ಕ್ಷುಷ್ಮ ಗೃಹಸ್ಥನಿಗೆ ಮನವರಿಕೆಯಾದ ಸಂಗತಿಯಾಗಿದೆ
ಕುರುಡರ ಸ್ಮರಣ ಶಕ್ತಿಯಾದರೂ ಇದೇ ಕಾರಣದಿಂದ ಪ
ಲವತ್ತರವಾಗಿರುತ್ತದೆ. ಸಂಕಲ್ಪಾಂಶ ವಿಚಾರದಿಂದ ಸ್ಮರಣ
ಶಕ್ತಿಯು ಮುಂದಪಾಗುತ್ತದೆ.

ಮೂರನೆಯ ಸಾಧನವು—ವಾಚನವು. ಪುಸ್ತಕವು ಒ
ದು ಬಗೆಯ ಸ್ನೇಹಿತನೇ ಸರಿ. ಗ್ರಂಥಗಳನ್ನೋದುವದರಿ
ದ ಅದನ್ನು ಬರೆದ ಮಹನೀಯರ ಪರಿಚಯವು ನಮಗಾಗ
ವದಿಷ್ಟೇ ಅಲ್ಲ. ಅದರಿಂದ ಐಹಿಕ, ಪಾರಲೌಕಿಕ ಸಂಬಂ
ಧದ ಎಷ್ಟೋ ಸಾಧನೆಗಳನ್ನು ಪಡೆಯಲಿಕ್ಕೆ ಮಾರ್ಗವಾಗು
ತ್ತದೆ. ಪ್ರತಿ ಒಂದು ಗ್ರಂಥವು ಅದನ್ನು ಬರೆದವರ ಫೋ
ಟೊಪಠ(ಫೋಟೋ)ವಿರುತ್ತದೆನ್ನಲಿಕ್ಕೆ ಅಡ್ಡಿಇಲ್ಲ. ಅದರಲ್ಲಿ
ಅವರ ವಿಚಾರಗಳ ಜ್ಞಾನಚಿತ್ರವು ಯಥಾತಥ್ಯವಾಗಿ ಮೂ
ಡಿರುತ್ತದೆ. ಇವರಿಂದ ನಮ್ಮ ಜ್ಞಾನವು ಹೆಚ್ಚಾಗುವದು
ವಾಚನದಿಂದ ಸ್ಮರಣಶಕ್ತಿಗೆ ನೆರವಾಗುವದೆಂದು ಹಲವರ
ಹೇಳುವರು. ಆದರೆ ಸೂಕ್ಷ್ಮ ದೃಷ್ಟಿಯಿಂದ ಆರಯ್ದು
ನೋಡಿದರೆ, ಅದು ಸತ್ಯವೆಂದು ಸಹಸಾ ಅನ್ನಲಾಗದು ವಾ
ಚನದಿಂದ ವಿಚಾರ ಸಾಮರ್ಥ್ಯವು ಮಾತ್ರ ಬರುವದು. ಆ
ದರೆ 'ವಿಚಾರ ಶಕ್ತಿಯಿಂದ ಸ್ಮರಣ ಶಕ್ತಿಯು ಬೆಳಿಗೆಯು
ಕುಂದುತ್ತದೆಂದು' ಮೇಲಿನ ಸಿದ್ಧಾಂತದಿಂದ ನಿರ್ಣೀತವಾಗಿ
ದೆ. ಒಟ್ಟಿಗೆ ವಾಚನದಿಂದ ಸ್ಮರಣಶಕ್ತಿಯು ಬೆಳೆಯುವದ
ಕಡಿಮೆ. ಹೀಗಿದ್ದರೂ, ಒಂದು ವಿಷಯದ ಸಂಬಂಧದಿಂದ
ಒಮ್ಮೆ ನಮಗಾದ ಜ್ಞಾನವು ಓದುವಾಗ ಪುನಃ ಪುನಃ ನ
ಮ್ಮೆದುರು ಬರುವದರಿಂದ ಕೆಲವು ಅಂಶದಿಂದಾದರೂ ಸ್ಮರ
ಣ ಶಕ್ತಿಗೆ ನೆರವಾಗುವದು. " ಇದರಿಂದಲೇ ವಾಚನವು ಸ್ಮ

ಣಶಕ್ತಿಗೆ ಸಹಾಯವಾಗುತ್ತದೆ " ಎಂದು ಗೊತ್ತು ಮಾಡ
ಬಹುದು. ಶ್ರವಣದಿಂದಾದರೂ ಈ ಕೆಲಸವಾಗುವದು

ನಾಲ್ಕನೇಯ ಸಾಧನವು—ಲೇಖವವು: ಲೇಖನ ಕಲೆಯು
ಸಹಾಯದಿಂದಾದರೂ ಸಂಪಾದಿತ ಜ್ಞಾನವನ್ನು ಸ್ಥಿರವಾಗಿ
ಇಡಲಿಕ್ಕೆ ಬರುವದು. ಖರಿಯು ವಿಚಾರದಿಂದ ಮನೋ
ವ್ಯಾಪಾರದಲ್ಲಿ ಗೊಂದಲವಾಗಿ, ವಿಷಯವು ಸ್ಮರಣದಲ್ಲಿ ಉ
ಳಿಯದಂತಾಗುವದು. ಆದರೆ ಅದನ್ನೇ ಬರೆದಿಡಬೇಕಾದರೆ,
ನಮ್ಮ ವಿಚಾರಕ್ಕೆ ವ್ಯವಸ್ಥಿತ ಸ್ವರೂಪವನ್ನು ಕೊಡಬೇಕಾ
ಗುವದು. ಓದಿದ ಸಂಗತಿಯನ್ನು ಬರೆದಿಟ್ಟರೆ ಅದು ನಮ್ಮ
ಸ್ಮರಣದಲ್ಲಿ ನಿಂತಷ್ಟು ಬರಿಯ ವಾಚನದಿಂದ ನಿಲ್ಲಲಾರದು.
ಆದುದರಿಂದ ಪ್ರತಿಯೊಬ್ಬನು ತಾನು ಓದಿದ ವಿಷಯವನ್ನು
ತನ್ನ ಭಾಷೆಯಿಂದ ಬರೆದಿಡಬೇಕು. ಇದರಿಂದ ಜ್ಞಾನಾಭಿ
ವೃದ್ಧಿಯಾಗುವದಲ್ಲದೆ, ಸಣ್ಣ ಪುಟ್ಟ ಸಂಗತಿಗಳನ್ನು ಸಹ
ಸ್ಮರಣದಲ್ಲಿ ಇರಿಸಲಿಕ್ಕೆ ಮಾರ್ಗವಾಗುತ್ತದೆ ಇದಲ್ಲದೆ
ಅದನ್ನು ತನ್ನ ಭಾಷೆಯಿಂದಲೇ ಬರೆಯುತ್ತಿರುವದರಿಂದ
ಭಾಷಾ ಜ್ಞಾನವೂ ಬೆಳೆಯುತ್ತದೆ ಬರೆಯತಕ್ಕ ಶೈಲಿಯೂ
ಬರುತ್ತದೆ. ಹೆರವರ ವಿಚಾರಗಳನ್ನು ನಮ್ಮ ಸ್ವತ್ತಾಗಿ
ಮಾಡಿಕೊಳ್ಳತಕ್ಕ ಸಾಮರ್ಥ್ಯವೂ ಬರುತ್ತದೆ. ವಾಚನದಿಂ
ದ ಕಿರುಕಳ ಸಂಗತಿಗಳು ನಮ್ಮ ಸ್ಮರಣದಲ್ಲಿ ಎಷ್ಟು ವಾ
ಸ್ತವ್ಯವೂ ತಕ್ಕಂತೆ ನಿಲ್ಲುವದಿಲ್ಲ. ಆದುದರಿಂದ ಅವುಗಳ ಟಿ
ಪ್ಪಣಿಗಳನ್ನು ಕ್ರಮಗೊಳಿಸಿ ಬರೆದು, ಮೇಲಿಂದ ಮೇಲೆ
ಕಣ್ಣುಂಬೆ ತಂದುಕೊಳ್ಳಬೇಕಾಗುತ್ತದೆ. ಇದು ಪ್ರತಿಯೊ
ಬ್ಬ ವ್ಯಾಖ್ಯಾನಕಾರನ ಅನುಭವದ ಸಂಗತಿಯಾಗಿದೆ. ಒ
ಬ್ಬ ಪಾಶ್ಚಾತ್ಯ ಪಂಡಿತನು ಬಂದೆಡೆಯಲ್ಲಿ ಬರೆದಿಟ್ಟಿರುವದೇ
ನೆಂದರೆ,—

" ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ' ಟಿಪ
ಣ ವಹಿಯನ್ನು ' ಮಾಡಿಟ್ಟರಬೇಕು- ಅದರಲ್ಲಿ ಅನೇಕ ಪ್ರ
ಕಾರದ ವಿಷಯಗಳ ಬಗ್ಗೆ ಭಾಗಗಳನ್ನು ಮಾಡಿರಬೇಕು.
ದಿನಾಲೂ ಅದರಲ್ಲಿ ತಮಗೊದಗಿದ ಸಂಗತಿಗಳನ್ನು ಬರೆದಿಡ
ಬೇಕು. ಅಂದರೆ ಮಿದುಳಿಗೆ ಏನೂ ತ್ರಾಸ ಬೀಳದೆ, ಎ

ಷ್ಟೋ ವಿಷಯಗಳನ್ನು ಅಲ್ಪಾಯಾಸದಿಂದ ಸ್ಮರಣದಲ್ಲಿಡತಕ್ಕ ಶಕ್ತಿಯು ಬರುತ್ತದೆ.

ಅಭ್ಯಾಸದ ಸಾಧನವು—ಸಂಭಾಷಣವು: ಒಬ್ಬನು ಇನ್ನೊಬ್ಬನಕೂಡ ಮಾತನಾಡುವದೇ ಸಂಭಾಷಣವು. ಭಾಷಣದಲ್ಲಿ ಅನೇಕ ಪ್ರಕಾರಗಳುಂಟು, ಮನೆಯ ಜನರಕೂಡ ಮಾತಾಡತಕ್ಕ ಭಾಷಣವು ಹೆರವರ ಸಂಗಡ ಮಾತಾಡುವ ಭಾಷಣಕ್ಕಿಂತ ಬೇರೆ ಬಣತಿಯದಿರುವದು. ಅದೇ ಭಾಷಣವು ವಿದ್ವಾಂಸರ ಸಭೆಯಲ್ಲಿ ಬೇರೆತರವಾಗುವದು. ಇಂತು ಭಾಷಣಗಳನ್ನು ಮೂರು ಬಗೆಯಾಗಿ ವಿಂಗಡಿಸಬಹುದು.

(೧) ನಮಗಿಂತ ಹೆಚ್ಚು ಜ್ಞಾನವುಳ್ಳವರ ಕೂಡ ಭಾಷಿಸುವದು.

(೨) ನಮ್ಮಷ್ಟೇ ಜ್ಞಾನವಂತರ ಕೂಡ ಭಾಷಿಸುವದು.

(೩) ನಮಗಿಂತ ಕಡಿಮೆ ಜ್ಞಾನವುಳ್ಳವರ ಕೂಡ ಭಾಷಿಸುವದು.

ಈ ಮೂರು ಬಗೆಯ ಭಾಷಣದಿಂದ ಮೂರು ಬಗೆಯ ಲಾಭಗಳಾಗುವವು. ಅದನ್ನೆಲ್ಲ ಇಲ್ಲಿ ವಿವರಿಸುತ್ತ ಕುಳಿತರೆ ಅಪ್ರಾಸಂಗಿಕವೆನಿಸಬಹುದು. ಅದರಿಂದ ಸದ್ಯದ ವಿಷಯಕ್ಕೆ ಮಾತ್ರ ಸಂಬಂಧಿಸಿದ ಭಾಗವಷ್ಟೇ ಇಲ್ಲಿ ವಿವರಿಸಲ್ಪಡುವದು. ಭಾಷಣದಿಂದ ಬೇರೆ ಎಷ್ಟೋ ಲಾಭಗಳು ಆಗುತ್ತವೆ. ಮುಖ್ಯವಾಗಿ ಕಲ್ಪನಾ ಶಕ್ತಿಯು ಬರುತ್ತದೆ. ಸಮಯೋಚಿತವಾಗಿ ಸಂಭಾಷಿಸಲಿಕ್ಕೆ ಬರುತ್ತದೆ ಮತಿಮುಂದತ್ವವು ತೊಲಗುತ್ತದೆ. ಹೀಗೆಯೇ ಸ್ಮರಣಶಕ್ತಿಗಾದರೂ ಭಾಷಣದಿಂದ ತಕ್ಕಮಟ್ಟಿಗೆ ಸಹಾಯವಾಗುವದು. ಗ್ರಂಥಗಳಿಂದಾಗಲಿ ವೃತ್ತಾಂತ ಪತ್ರಿಕೆಗಳಿಂದಾಗಲಿ ಇಲ್ಲವೆ ಪಂಡಿತರ ಮುಖದಿಂದಾಗಲಿ ದೊರೆತ ಜ್ಞಾನವನ್ನು ತನ್ನ ಮಿತ್ರರ ಕೂಡ ಸಂಭಾಷಿಸುತ್ತ (ಚರ್ಚಿಸುತ್ತ) ಇದ್ದರೆ, ಆ ಜ್ಞಾನವು ಬಹುಕಾಲ ತನ್ನಲ್ಲಿ ನಿಲ್ಲುವಂತೆ ಬರಿಯ ಶ್ರವಣ, ವಾಚನ ಇವುಗಳಿಂದ ಅಷ್ಟಕಾಲ ನಿಲ್ಲಲಾರದೆಂಬದು ಅನುಭವಸಿದ್ಧ ಸಂಗತಿಯು. 'ವಾದೇ ವಾದೇ ಜಾಯತೇ ತತ್ತ್ವಬೋಧಃ'

ಮನುಷ್ಯನು ತನ್ನ ಭಾವನೆಯಲ್ಲಿ ಸಂಪಾದಿತ ಜ್ಞಾನದ
ಪುನರುಚ್ಚಾರಣೆಯನ್ನು 'ದೇಶಿಕ ಜ್ಞಾನದ ಉಜಳಿಗು
ನ್ನು) ಧಾರಣೆ ಮಾಡುವದರಿಂದ ಸ್ಮರಣೆ ಶಕ್ತಿಯನ್ನು ಬೆಳಿಸ
ಬೇಕೆಂಬ ಉದ್ದೇಶವಿತನ್ನಲ್ಲಿಲ್ಲದಿದ್ದರೂ ಸಹಜವಾಗಿ ಅದಕ್ಕೆ
ಬಲವು ಬಂದೇ ಬರುತ್ತದೆ ಕುಸ್ತಿಯನ್ನಾಡುವದರಿಂದ ಕರೀ
ರದಲ್ಲಿನ ಶೈಥಿಲ್ಯವೆಲ್ಲ ನಷ್ಟವಾಗಿ ಶರೀರವು ಚಪಲ್ಯವನ್ನೂ
ಕಾಂತಿಯನ್ನೂ ಹೊಂದುವಂತೆ, ಸಂಭಾಷಣೆಯಿಂದ ಸ್ಮರಣ
ಸಾಮರ್ಥ್ಯಕ್ಕೆ ಚಪಲತ್ವವೂ ತೀಕ್ಷ್ಣತ್ವವೂ ಉಂಟಾಗುವದು
ಈ ಬಗೆಯಾಗಿ ಸ್ಮರಣಶಕ್ತಿಯನ್ನು ಸಾಧ್ಯಮಾಡಿಕೊಳ್ಳುವ
ಮುಖ್ಯ ಮುಖ್ಯ ಉಪಾಯಗಳು ಬೀಜರೂಪದಿಂದ ಹೇಳ
ಲ್ಪಟ್ಟವು. ಇನ್ನು ಸ್ಮರಣಶಕ್ತಿಯು ನಾಶಕ್ಕೆ ಕಾರಣೀಭೂತ
ವಾದ ಕೆಲವು ಸಂಗತಿಗಳನ್ನು ಬರೆದು ಈ ಲೇಖನವನ್ನು ತೀ
ರ್ಗಡೆ ಮಾಡಲಾಗುವದು.

(೬):— सर्वमन्यत्परित्यज्य शरीरमनुपालयेत्

ಶರೀರ ರಕ್ಷಣೆಯನ್ನು ಮಾಡುವದು ಮನುಷ್ಯನ ಆದ್ಯ
ಕರ್ತವ್ಯವು ಯಾಕಂದರೆ, ಈ ಜಗತ್ತಿನಲ್ಲಿ ತನಗಾಗುವ
ಸುಖದುಃಖಗಳು ತನ್ನ ಶರೀರ ನಿರೋಗತ್ವವನ್ನು ಅವಲಂಬಿ
ಸಿವೆ ಆದುದರಿಂದ ಸೂಜ್ಞರಾದವರು ಮುಖ್ಯವಾಗಿ ಶ
ರೀರ ಸುರಕ್ಷಣೆಯ ಕೆಲಸದಲ್ಲಿ ಎಷ್ಟು ಲಕ್ಷ್ಯಕೊಟ್ಟರೂ
ಅದು ತೀರ ಕಡಿಮೆಯೆಂತಲೇ ಹೇಳಬೇಕಾಗುವದು ಕು
ರುಡರಿಬ್ಬರಿನ ಕೃಶತ್ವವೂ, ಕಿವುಡರೆಬ್ಬರಿನ ಕರ್ಣ ಮಂ
ಜುಳಗಾನವೂ ನಿರರ್ಥಕವಾದಂತೆ, ಬೇಕಾದ ಸಂಪದ ವಿದ್ಯಾ
ರೀರ ಸಂಪತ್ತಿಯು ಸುರಕ್ಷಿತವಿಲ್ಲದಿದ್ದರೆ ಅದೆಲ್ಲ ವ್ಯ
ರ್ಥವೇ ಸರಿ ಬೇನೆಯಿಂದ 'ಅಯ್ಯೋ!,, ಎಂದು ಬಳಲುವ
ವನಿಗೆ ಸುರೂಪಿಣಿಯಾದ ಸ್ತ್ರೀಯೂ, ಅಮಿತವಾದ ಧನವೂ,
ಮನೋಹರವಾದ ಮನೆಯೂ, ಸಾಕಾಗುವನಿತು ಸುಂದರ
ವಾದ ರಥಾದಿವಾಹನಗಳೂ, ಅಸಂಖ್ಯ ಐಶ್ವರ್ಯವೂ ಅವನಿ
ಗೆ ಆನಂದವನ್ನೀಯುವವೇ? ಸಮಾಧಾನವನ್ನು ಕೊಡುವವೇ?

ಅವ್ವಗಳನ್ನು ಅನುಭೋಗಿಸಲಿಕ್ಕೆ ಅವನ ಮನಸ್ಸಾದರೂ ಎಳೆಸುವದೇ! ಸರ್ವಥಾ ಎಳೆಸದು. ತನ್ನ ಬೇನೆಯದು ಃಖವೇತನಗೆ ಸಾಕುಬೇಕಾಗುವದು. ಹೀಗೆಂತಲೇ ಪ್ರತಿಯೊಬ್ಬನು ತನ್ನ ಶರೀರ ಸಂರಕ ಣೆಯಕಡಿಗೆ ಮೊದಲು ಲಕ್ಷ್ಯಗೊಡಬೇಕು

(ಇ)ಮಾನಸಿಕ ಶ್ರಮವನ್ನು ಮಿತಿಮೀರಿ ಮಾಡುವದರಿಂದ ಸ್ಮರಣಶಕ್ತಿಯು ಕಡಿಮೆಯಾಗುವದು. ಕಾರಣವೇನೆಂದರೆ, ಮಿತಿದಪ್ಪಿದ ಮಾನಸಿಕ ಶ್ರಮದಿಂದ ಮಿದುಳಿಗಿರತಕ್ಕ ಸ್ವಾಭಾವಿಕ ಶಕ್ತಿಗೆ ಹೊರೆ (ದುಡಿತ) ಬಿದ್ದು ಮುಂದೆ ತನ್ನ ಕೆಲಸ ಮಾಡಲಿಕ್ಕೆ ಅದು ಅಯೋಗ್ಯವಾಗುತ್ತದೆ. ಮೀದುಳಿಗೂ ಸ್ಮರಣಶಕ್ತಿಗೂ ತೀರ ನಿಕಟ ಸಂಬಂಧ ವಿರುವದರಿಂದ ಸ್ಮರಣಶಕ್ತಿಗೆ ಅನಿಷ್ಟ ಪರಿಣಾಮವು ಸಂಭವಿಸುವದು. ಅತಿಶಯ ಮಾನಸಿಕ ಶ್ರಮದಿಂದ ತಿಂದ ಅನ್ನವು ಪಚನವಾಗುವದಿಲ್ಲ. ಅದರ ಪರಿಣಾಮವು ಶರೀರದಮೇಲೆ ಆಗಿ, ಅದರಿಂದ ಅನೇಕ ವಿಕಾರಗಳು ಸಂಭವಿಸುತ್ತವೆ. ವ್ಯಾಧಿಗ್ರಸ್ತನಿಂದ ಆವ ಕೆಲಸವೂ ಆಗದೆ ಅಲ್ಪಕಾಲದಲ್ಲಿ ಅವನಿಗೆ ಸಾಯುವ ಸಮಯವು ಒದಗುವದು.

(ಉ) ಅತಿಶಯ ವಿಷಯೋಪ ಭೋಗದಿಂದಲೂ, ಮೇಲಿನಂತೆಯೇ ಅನಿಷ್ಟ ಪರಿಣಾಮವು ಘಟಿಸುತ್ತದೆ. ಆರೋಗ್ಯ ಶಾಸ್ತ್ರದ ನಿಯಮದಂತೆ ನಡೆದು ತಕ್ಕನಿತು ಮಾನಸಿಕ ಶ್ರಮ ಮಾಡಿ, ವ್ಯಾಯಾಮವನ್ನು ಮಾಡುತ್ತಿದ್ದರೆ ಶಾರೀರಕ ಇಲ್ಲವೆ ಮಾನಸಿಕ ಶಕ್ತಿಯು ಏನೂ ಕಡಿಮೆಯಾಗದೆ ಸ್ಮರಣ ಶಕ್ತಿಯು ಜಾಗೃತಾವಸ್ಥೆಯಲ್ಲಿಯೇ ಉಳಿಯುವದು. ಸಾಂಪ್ರತಕಾಲದಲ್ಲಿ ಚಿಕ್ಕಂದಿನಿಂದಲೇ ಕೆಟ್ಟ ಕೆಲಸಕ್ಕೆ ತೊಡಗುವರು. ವಾರನಾರಿಯರ ಮಾಯಾಜಾಲಕ್ಕೆ ಮರುಳಾಗಿ ಘೋರವಾದ ರೋಗಕ್ಕೆ ಗುರಿಯಾಗುತ್ತಾರೆ. ಇಂತಹ ದುಷ್ಟ ರೂಢಿಯಿಂದ ಸ್ಮರಣ ಶಕ್ತಿಗೆ ಅಪಾಯ ಬರುವದಿಷ್ಟೇ ಅಲ್ಲ. ಶರೀರ ಶಕ್ತಿಯು ಕ್ಷೀಣವಾಗಿ ಕೊನೆಗೆ ಕ್ಷಯಾದಿ ಅಪರಿಹಾರ್ಯ ರೋಗಕ್ಕೆ ಗುರಿಯಾಗಿ ಬೇಗ ಮೃತ್ಯುಮುಖಲ್ಲಿಬೀಳುವ ಹೊತ್ತು ಅವರಿಗೆ ಬರುತ್ತದೆ.

CORRESPONDENCE

ಪತ್ರವ್ಯವಹಾರ.

ಉದಾ:—'ಅಸುರಸಂಕುಲಕಾಲ ಕೃಷ್ಣಂ' ಎಂಬಲ್ಲಿ,ಅಸುರ= ರಾಕ್ಷಸ ಸಂಕುಲ= ಸಮೂಹ, ಕಾಲ= ಯಮ, ಕೃಷ್ಣಂ = ಕೃಷ್ಣಂ' ಹೀಗೆವಿಭಕ್ತಿ ಹೀನವಾಗಿಅರ್ಥವನ್ನು ಹೇಳದೆ 'ಅಸುರ= ರಾಕ್ಷಸರ, ಸಂಕುಲ= ಸಮೂಹಕ್ಕೆ, ಕಾಲ = ಯಮ ಸ್ವರೂಪಿಯಾದ, ಕೃಷ್ಣಂ=ಕೃಷ್ಣನು' ಹೀಗೆ ವಿಭಕ್ತಿಯು ಕ್ತವಾಗಿಯೇ ಹೇಳಬೇಕು.

(೩). ವಿಗ್ರಹ:—ಸಾಮಾಸಿಕ ಶಬ್ದಗಳ ಪದಚ್ಛೇದವೇ ವಿಗ್ರಹವು. ವಿಗ್ರಹಗಳನ್ನು ಮಾಡಬೇಕಾದರೆ, ವಿಶೇಷಣ ಗಳ ಜ್ಞಾನವು ಚೆನ್ನಾಗಿರಬೇಕು. ಇಲ್ಲದಿದ್ದರೆ ಅರ್ಥವ್ಯ ತ್ಯಾಸವಾಗುವದು. ಹೇಗೆಂದರೆ:—'ಸದ್ವಿನುತಕರ್ನಾಟಕ ಭಾಷಾ ಚೆತುರಂ' ಹೀಗಿದ್ದಾಗ ಇಲ್ಲಿ ಕರ್ನಾಟಕ ಭಾಷೆ ಯು ಸದ್ವಿನುತವೋ ಕವಿಯು ಸದ್ವಿನುತನೋ ತಿಳಿಯದೆ ಮ ನಬಂದಂತೆ ವಿಗ್ರಹಿಸಲಾಗದು. ಸಮಾಸದ ನಿಯಮಗಳು ಚೆನ್ನಾಗಿ ಗ್ರಹಿಕೆಯಾಗದ ಹೊರ್ತು ವಿಗ್ರಹಮಾಡಲಿಕ್ಕೆ ಸು ಲಭವಾಗಿ ಬರದು.

(೪). ವಾಕ್ಯಯೋಜನೆ:—ಪದ್ಯಗಳಲ್ಲಾದರೂ ಅರ್ಥದಿಂದ ತೀರ ನಿಕಟ-ಸಂಬಂಧವುಳ್ಳ ವಾಕ್ಯಗಳನ್ನು ಕೂಡಿಸಿ, ವಾ ಕ್ಯಸಮುಚ್ಚಯ ಮಾಡಿರುವರು. ಆದುದರಿಂದ, ಆ ಪದ್ಯದ ಲ್ಲಿ ಸ್ವತಂತ್ರವಾಕ್ಯಗಳಾವು? ಅದಕ್ಕೆ ಅಧೀನವಾದ ಉಪವಾ ಕ್ಯಗಳ್ಯಾವು? ಇವುಗಳನ್ನು ಮೊದಲು ಗೊತ್ತುಮಾಡಿಕೊಳ್ಳ ಬೇಕು ಬಳಿಕ ಅನ್ವಯಗಳ ಆಖ್ಯೇಯ, ಆಖ್ಯಾತಗಳಿಗೆ ಸಂ ಬಂಧಿಸಿದ ಕಾರಕ,ವಿಶೇಷಣ ಇಲ್ಲವೆ ಕ್ರಿಯಾ ವಿಶೇಷಣಗಳ ನ್ನು ನೋಡಿ, ಆಯಾ ಪದಗಳಿಗೆ ಜೋಡಿಸಬೇಕು. ವಾಕ್ಯ ಸಮುಚ್ಚಯಮಾಡುವಾಗ್ಗೆ ಕೆಲವು ಪದಗಳು, ಸರ್ವನಾಮ ಗಳು, ಇಲ್ಲವೆ ಸಮುಚ್ಚಯ ಸೂಚೀ ಪ್ರತ್ಯಯಗ ಳು ಲುಪ್ತವಾದ ಸಂದರ್ಭದಲ್ಲಿ ಅವುಗಳನ್ನು ಅನ್ವಯ ಮಾಡ

ತಕ್ಕ ಸ್ಥಳದಲ್ಲಿ ಅಧ್ಯಾಹೃತದಿಂದ ಸೇರಿಸಬೇಕು. ವಾಕ್ಯ ಯೋಜನಾಕ್ರಮವು ತಿಳಿಯದೆ ಅನ್ವಯಮಾಡಲಿಕ್ಕೆ ಬರಲಾರದು. ಮೊದಲು ಬಂದು ಕ್ರಿಯಾಪದವನ್ನು ತೆಗೆದುಕೊಂಡು ಅದರ ಕರ್ತೃವಾವುದು? ಕರ್ಮವಾವುದು? ಕರ್ತೃಕರ್ಮ ಕ್ರಿಯಾಪದಗಳಿಗೆ ಸಂಬಂಧಿಸಿದ ವಿಶೇಷಣಗಳಾವು? ಅವುಗಳಲ್ಲಿ ತೀರ ಅವಶ್ಯವಾದವುಗಳನ್ನೆಲ್ಲಿ ಸೇರಿಸಿದರೆ, ಕವಿಯ ಹೃದ್ಗತವು ವ್ಯಕ್ತವಾಗುವುದು? ಇವುಗಳನ್ನೆಲ್ಲಿ ತಿಳಿಸಿ ಅನ್ವಯವನ್ನು ಮಾಡಿಸಬೇಕು.

(೫). (೬). **ಆಕ್ಷೇಪ ಹಾಗೂ ಸಮಾಧಾನ:**—ಕೆಲವು ಪದ್ಯಗಳಲ್ಲಿ ಕವಿಯು ಲೋಕ ರೂಢಿಯ ವಿರುದ್ಧವಾದಂತೆ ವರ್ಣಿಸಿರುವನು. ಆಗ ಹುಡುಗರಿಗೆ ಅದು ಸರಿಯಾಗಿ ತೋರುವದಿಲ್ಲ. ಇಂತಹ ಸಂದರ್ಭದಲ್ಲಿ 'ಕವಿಸಮಯ' ಮುಂತಾದ ಕಾರಣಗಳನ್ನು ಅವರಿಗೆ ಹೇಳಿ ಸಮಾಧಾನಗೊಳಿಸಬೇಕು ಅನೇಕಾರ್ಥದ ಶಬ್ದಗಳನ್ನು ಉಪಯೋಗಿಸಿದಾಗ ಪ್ರಸ್ತುತಕ್ಕೆ ಯೋಗ್ಯವಾದ ಅರ್ಥವನ್ನು ಹೇಳಬೇಕು ಬೇರೆ ಅರ್ಥಗಳನ್ನು ತೆಗೆದುಕೊಂಡು ಹುಡುಗರನ್ನು ಮಿಥ್ಯಾ ಆಕ್ಷೇಪದಲ್ಲಿ ಸೇರಿಸಬಾರದು. ಕವಿತೆಯಲ್ಲಿ ಆಕ್ಷೇಪವು ಮುಖ್ಯವಾಗಿ, ವ್ಯಾಕರಣ-ಛಂದಸ್ಸು-ಅಲಂಕಾರ ಶಬ್ದಾರ್ಥ-ಧಾರ್ಮಿಕ ಸಂಗತಿ-ಕವಿಸಮಯ ಮುಂತಾದವುಗಳ ಬಗ್ಗೆ ಮಾತ್ರ ಬರುವದು. ಇವೆಲ್ಲವುಗಳಬಗ್ಗೆ ಹುಡುಗರ ಬುದ್ಧಿಗೂ, ಅವರ ವಯಸ್ಸು ತಿಳುವಳಿಕೆಗಳಿಗೂ ಅನುಸರಿಸಿ ಊಹಾಪೋಹವಾಡತಕ್ಕದ್ದು. ಧಾರ್ಮಿಕ ಸಂಬಂಧದಲ್ಲಿ ಇತರ ಮತದವರ ಮನಸ್ಸು ನೋಯದಂತೆ ಅದನ್ನು ಸ್ಪಷ್ಟೀಕರಿಸಬಹುದು. ಕವಿಸಮಯಗಳು ಬಹು ಸೋಜಿಗವಾದವುಗಳು ಇರುತ್ತವೆ. ಪ್ರಸಂಗ ಬಂದಾಗ ವಿದ್ಯಾರ್ಥಿಗಳಿಗೆ ಹೇಳಲಿಕ್ಕೆ ಮರೆಯಲಾಗದು. ಪ್ರಾಥಮಿಕ ಶಾಲೆಗಳಲ್ಲಂತೂ ಅಲಂಕಾರ ಹೇಳಲು ಇಯತ್ತಾ ಪತ್ರಿಕೆಯಲ್ಲಿ ಹೇಳಿಲ್ಲ. ಕಾರಣ ಅದನ್ನು ಹೇಳಲವಶ್ಯವಿಲ್ಲ. ೬|೭ನೆಯ ಇಯತ್ತೆಯವರಿಗೆ ಛಂದಸ್ಸಿನ ಆಕ್ಷೇಪಕ್ಕೆ ಸಮಾಧಾನವನ್ನು ಹೇಳಲೇಬೇಕು.

ಭಾವಾರ್ಥ:—ಹಿಂದು ಮುಂದಿನ ಸಂಬಂಧವನ್ನು ಹೊಂದಿಸುವದೂ ಕವಿಯ ಮರ್ಮವನ್ನು ಸುಲಭ (ರೂಢಿಯ) ಭಾಷೆಯಲ್ಲಿ ಬಿಡಿದು ಹೇಳುವದೂ ಈ ಭಾಗದ ಮುಖ್ಯೋದ್ದೇಶವಾಗಿದೆ. ಭಾವಾರ್ಥವೆಂದರೆ, 'ಶಬ್ದಕ್ಕೆ ಪದ ತಿಶಬ್ದವನ್ನು ಹೇಳುತ್ತ ಅನ್ವಯದಂತೆ ಸಾಗಬೇಕೆಂಬದು' ಹೀಗೆ ಎಷ್ಟೋ ಪ್ರಾಥಮಿಕ ಶಾಲೆಗಳ ಹುಡುಗರು ತಿಳಿದುಕೊಂಡಂತೆ ಅನುಭವದಿಂದ ತಿಳಿದದೆ. ಇದು ಕೇವಲ ತಪ್ಪು. ಕವಿಯ ಇಂಗಿತವನ್ನು ತುಸುವಾಕ್ಯಗಳಲ್ಲಿ ಸಂಗ್ರಹಿಸತಕ್ಕ ರೂಢಿಯು ಹುಡುಗರಿಗೆ ಬರಬೇಕೆಂತಲೇ ಕವಿತೆಗೆ ಭಾವಾರ್ಥವನ್ನು ಹೇಳುವ ಸಾಂಪ್ರದಾಯವು ಬಿದ್ದದೆ.

ಗುರುವರ್ಯರ ಈ ಅಭಿಪ್ರಾಯದ ಭಾಷಣವಾದ ಬಳಿಕ ಕರತಳಮಂಗಳರವದೊಂದಿಗೆ ತಮ್ಮ ಪೀಠವನ್ನು ಅಲಂಕರಿಸಿದರು ಈ ಮಹನೀಯರ ಭಾಷಣಕ್ಕೆ ಅನುಸರಿಸಿ ಮುಂದು ಮಾದರಿಯ ಕವಿತಾ ಪಾಠವನ್ನು ಮುಂದಣ ಸಂಜೆಯಲ್ಲಿ ಕೊಡಲು ನನ್ನ ಯತ್ನವಿದೆ. ಇದರಲ್ಲೇನಾದರೂ ತಪ್ಪು ತಡೆಗಳಿರಲು ಸುಜ್ಞಮಾಜಕರು ಕ್ಷಮಿಸುವುದು ಗುರುಗಳ ಕ್ರೀವವು ಎಂದಿನಂತಿರಲು ಕೋರುವ ತಮ್ಮ ವಿಧೇಯ

ಶಾಲಾ ನೀಲಗುಂದ,
ತಾಲೂಕ ಗದಗ
ತಾ. ೧೫।೪।೧೯೧೦.

ಪ, ಶಿಷ್ಯ
ಕೃಷ್ಣಾಜಿ ಶಂಕರ ಇಂಗಳಗಿ,
ಶಾಲಾಧ್ಯಾಪಕ ನೀಲಗುಂದ.

ಸರಕ್ಯೂಲರ ನಂಬರ ೫೬೬.

ವಿಜಾಪುರ ಜಿಲ್ಲೆಯೊಳಗಿನ ಯಾವತ್ತು ಲೋಕಲ್‌ಬೋರ್ಡ ಮತ್ತು ಮುನಸಿಪಾಲಟಿಗಳ ವಾಸ್ತರ ಜನರಿಗೂ ಇತರ ಸಜ್ಜನಗೃಹಸ್ಥರಿಗೂ ತಿಳಿಯ ಪಡಿಸುವದೇನಂದರೆ:—

ನಮ್ಮ ಕರ್ನಾಟಕ ಪ್ರಾಂತದಲ್ಲಿ ಸ್ತ್ರೀ ಸಿಕ್ಷಣವು ಇತರ ಪ್ರಾಂತಗಳಿಗಿಂತ ಹಿಂದೆ ಬಿದ್ದಿರುತ್ತದೆ. ರಾಷ್ಟ್ರದ ಉನ್ನತಿಗೆ ಸ್ತ್ರೀ ಶಿಕ್ಷಣವು ಅತ್ಯವಶ್ಯವಾದದ್ದೆಂದು ಹೇಳಬೇಕಾಗಿಲ್ಲ ಸ್ತ್ರೀ ಶಿಕ್ಷಣವು ಅಭಿವೃದ್ಧಿಯನ್ನು ಹೊಂದಬೇಕಾದರೆ ಹೆಣ್ಣು ಹುಡಿಗೆಯರಿಗೆ ಯೋಗ್ಯವಾದ ಶಾಲೆಗಳೂ ಅವರಿಗೆ

ತಕ್ಕ ಶಿಕ್ಷಣ ಕ್ರಮವೂ ಮುಖ್ಯವಾಗಿ ಅವರಿಗೆ ಶಿಕ್ಷಣ ಕೊಡಲಿಕ್ಕೆ ಯೋಗ್ಯರಾದ ಶಿಕ್ಷಕಿಯರೂ ಬೇಕು. ಯಾಕಂದರೆ ನಮ್ಮ ದೇಶದಲ್ಲಿ ಸದ್ಯಃಕಾಲಕ್ಕೆ ಆಗಬೇಕಾದಷ್ಟು ಸುಧಾರಣೆಯು ಇನ್ನೂ ಆಗಿಲ್ಲದ ಕಾರಣ ಒಂದೇ ಸಮಾಜಕ್ಕೆ ಸೇರಿದ ಸ್ತ್ರೀ ಪುರುಷರು ಲೌಕಿಕ ವ್ಯವಹಾರದಲ್ಲಿ ಸಹ ಕೂಡಿ ನಡೆಯುವ ಸಾಂಪ್ರದಾಯವಿಲ್ಲ. ಹೆಣ್ಣು ಮಕ್ಕಳು ಸಾಮಾನ್ಯವಾಗಿ ಕೋಮಲ ಮತ್ತು ಮುಗ್ಧ ಸ್ವಭಾವದವರಾಗಿರುವದರಿಂದ ಅವರ ಶಿಕ್ಷಣಕ್ಕೆ ಅವರ ಶೀಲ ಸ್ವಭಾವವನ್ನರಿತಂಥ ಹೆಂಗಸರನ್ನು ನೇಮಿಸುದೇ ವಿಹಿತವು.

ಈ ಅಭಿಪ್ರಾಯವನ್ನು ಲಕ್ಷದಲ್ಲಿ ತಂದು ಪರೋಪಕಾರ ಬುದ್ಧಿಯವರಾದ ಸರಕಾರದವರು ಸ್ತ್ರೀ ಶಿಕ್ಷಣವನ್ನು ಕರ್ನಾಟಕದಲ್ಲಿ ಪ್ರಚುರಗೊಳಿಸಬೇಕೆಂದೆಣಿಸಿ ಈ ಮೊದಲೇ ಧಾರವಾಡದಲ್ಲಿ "ಫಿಮೇಲ ನಾರ್ಮಲ ಸ್ಕೂಲ" ಎಂಬ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಇದರಲ್ಲಿ ಮೊದಲನೇ ವರ್ಷದವರ್ಗ, ಎರಡನೇ ವರ್ಷದ ವರ್ಗ, ಎಂಬ ಎರಡು ವರ್ಗಗಳುಂಟು. ಶಿಕ್ಷಕಿಯರನ್ನು ತಯಾರ ಮಾಡುವದೇ ಈ ಸಂಸ್ಥೆಯು ಮುಖ್ಯ ಉದ್ದೇಶವು. ಈ ನಾರ್ಮಲ ಸ್ಕೂಲಿಗೆ ಸೇರಬೇಕಾದ ಹೆಣ್ಣು ಉಮೇದವಾರರು ೧೪ ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರೂ, ಕನ್ನಡ ಶಾಲೇ ಇಯತ್ತೆಯನ್ನು ತೇರ್ಗಡೆ ಹೊಂದಿದವರೂ, ಶುಶೀಲರೂ, ಕುಲೀನರೂ ಶಾರೀರಿಕ ವ್ಯಂಗಗಳಿಲ್ಲದವರೂ ಇರಬೇಕು. ಪ್ರವೇಶಪರೀಕ್ಷೆಯು ಪ್ರತಿವರ್ಷದಿಜಂಬರದಲ್ಲಿ ಆಗುತ್ತದೆ ಪರೀಕ್ಷೆಯ ಪ್ರಶ್ನೆಗಳು ಸಾಧಾರಣ ಸುಲಭವಾಗಿರುತ್ತವೆ; ಅಷ್ಟು ಬಿರಿಯಾಗಿರುವದಿಲ್ಲ. ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೇಲೆ ನಂಬರು ಬಂದಉಮೇದವಾರರಿಗೆ ಅವರವರ ಯೋಗ್ಯತೆಯನುಸಾರವಾಗಿ ಮಾಸಿಕ ವೇತನವು ಕೊಡಲ್ಪಡುವದು ಈ ವಿದ್ಯಾಲಯದಲ್ಲಿ ಅನುಕೂಲತೆ ಇದ್ದಂತೆ ಒಂದು ಅಥವಾ ಎರಡು ವರ್ಷಗಳ ಪರ್ಯಂತರ ಅಭ್ಯಾಸಮಾಡಿ ಕೊನೆಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರೆ ಶಿಕ್ಷಕಿಯರಾಗಲಿಕ್ಕೆ ಯೋಗ್ಯರಿರುವರೆಂಬ ಬಗ್ಗೆ ಸರ್ಟಿಫಿಕೇಟಗಳು ಕೊಡಲ್ಪಡುವವು; ಮತ್ತು ಕೂಡಲೆ ಕೆಲಸಗಳಾದರೂ ದೊರೆಯುವವು

ಇದಲ್ಲದ, ತಮ್ಮ ಹೆಂಡಂದಿರನ್ನಾಗಲೀ ಹೆಂಣು ಮಕ್ಕಳನ್ನಾಗಲಿ ಈ ವಿದ್ಯಾಲಯಕ್ಕೆ ಕಳಿಸುವ ಮಾಸ್ತರ ಜನರಿಗೆ ಯೋಗ್ಯ ಬಡತಿಯು ಸಹ ದೊರೆಯುವದು. ಧಾರವಾಡ "ಮೇಲ ಟ್ರೇನಿಂಗ ಕಾಲೇಜ"ದಲ್ಲಿ ಅಭ್ಯಾಸ ಮಾಡಿ ಹೆಚ್ಚಿನ ಸರ್ಟಿಫಿಕೀಟುಗಳನ್ನು ಪಡಕೊಳ್ಳಲಿಚ್ಛಿಸುವ ಮಾಸ್ತರ ಜನರು ತಮ್ಮ ಹೆಂಡದಿರನ್ನು ಈನೇ ಅಯತ್ತೈಯವರಿಗೆ ತಯಾರ ಮಾಡಿ ಫಿಮೇಲ ನಾರ್ಮಲ ಸ್ಕೂಲಿಗೆ ಕಳಿಸುವದಾದರೆ ಅಂಥವರಿಗೆ ಟ್ರೇನಿಂಗ ಕಾಲೇಜದಲ್ಲಿ ಕಲಿಯಲಿಕ್ಕೆ ಪರವಾನಗಿ ದೊರೆಯುವದು.

ದಯಾಳುಗಳಾದ ಸರಕಾರದವರು ತಮ್ಮ ಸ್ವಂತ ಹಣ ವೆಚ್ಚ ಮಾಡಿ ಸ್ತ್ರೀ ಶಿಕ್ಷಣಕ್ಕೆ ಬೇಕಾದ ಎಲ್ಲ ಅನುಕೂಲತೆಗಳನ್ನು ಒದಗಿಸಿ ಕೊಟ್ಟರೂ ಈ ವಿದ್ಯಾಲಯಕ್ಕೆ ಸಾಕಷ್ಟು ವಿದ್ಯಾರ್ಥಿನಿಯರು ಇನ್ನೂ ಬರುವದಿಲ್ಲ. ಈಗ ವಿದ್ಯಾರ್ಥಿನಿಯರ ಸಂಖೆಯು ಎರಡೂ ವರ್ಗಗಳಲ್ಲಿ ಇಪ್ಪತ್ತಕ್ಕಿಂತ ಹೆಚ್ಚಿಲ್ಲ. ಇವರಾದರೂ ಬಹುತರ ಧಾರವಾಡ ಮತ್ತು ಕಾರವಾರ ಜೆಲ್ಲೆಯವರೇ ಇದ್ದಾರೆ. ವಿಜಾಪೂರ ಬೆಳಗಾವ ಜಿಲ್ಲೆಯವರು ಯಾರಿಲ್ಲೆಂದರೂ ಸಲ್ಲುವದು. ವಿಜಾಪುರ ಜೆಲ್ಲೆಗೆ ಇದೊಂದು ಲಾಂಛನವು.

ಇತ್ತಿತ್ತಲಾಗಿ ಸರಕಾರದವರು ಸ್ತ್ರೀ ಶಿಕ್ಷಣವನ್ನು ಕುರಿತು ಹೆಚ್ಚು ಉದಾರ ಬುದ್ಧಿಯನ್ನು ತೋರಿಸಿದ್ದಾರೆ. ಇದು ಅವರಿಗೆ ಭೂಷಣವೇ ಸರಿ ಆದೇನೆಂದರೆ--ಧಾರವಾಡ ಫೀಮೇಲ ನಾರ್ಮಲ ಸ್ಕೂಲಿನ ವಿದ್ಯಾರ್ಥಿನಿಯವರ ಸಂಖ್ಯೆಯು ಹೆಚ್ಚು ಆದರೆ—ಸಣ್ಣ ಸ್ಕೂಲನ್ನು ತೆಗೆದು ಅದರ ಬದಲು "ಫಿಮೇಲ ಟ್ರೇನಿಂಗ ಕಾಲೇಜ" ಎಂಬ ದೊಡ್ಡ ವಿದ್ಯಾಲಯವನ್ನು ಏರ್ಪಾಡು ಮಾಡಬೇಕೆಂದು ಅಪೇಕ್ಷಿಸಿದ್ದಾರೆ. ಈ ವಿದ್ಯಾಲಯದ "ಪ್ರಿನ್‌ಸಿಪಲ್" ಅಂದರೆ ಮುಖ್ಯ ಅಧ್ಯಾಪಕರ ಸಂಬಳವು ೧೦೦ ಇನ್ನೂರಕ್ಕಿಂತ ಕಡಮಿಯಾಗಲಿಕ್ಕಿಲ್ಲೆಂದು ತೋರುತ್ತದೆ ಹಾಗೂ ಈ ಮಹತ್ವದ ಸ್ಥಳಕ್ಕೆ ಒಳ್ಳೆ ಸುಶಿಕ್ಷಿತಳಾದ ಒಬ್ಬ ಹೆಣ್ಣುಮಗಳ ನೇಮಣೂಕು ಆಗುವದದೆ. ಇದಲ್ಲದೆ ಉಪಶಿಕ್ಷಕರ ಸ್ಥಳಗಳಿಗಾ

ದರೂ ಬಹುತರ ಹೆಂಗಸರನ್ನೇ ನೇಮಿಸುವದು ಗೊತ್ತಾ
ಗಿದೆ

ಈ ಕಾಲೇಜಕ್ಕಾಗಿ ಧಾರವಾಡದಲ್ಲಿ ಊರಹೊರಗೆ ಬೀ
ದು ಅಂದವಾದ ಹೊಸ ಕಟ್ಟಡವನ್ನು ಕಟ್ಟಿಸುವ ಕೆಲಸವ
ನಡೆದದೆ. ಈ ಕಟ್ಟಡದಲ್ಲಿ ವಿದ್ಯಾರ್ಥಿನಿಯರ ಸಲುವಾಗಿ
" ಬೋರ್ಡಿಂಗ " ಅಂದರೆ ಊಟ ಉಡಿಗೆ ಮುಂತಾದವ್ಕೆ
ಬೇಕಾಗುವ ಕೊಠಡಿಗಳೂ ನಿವಾಂತವಾದ ಅಭ್ಯಾಸಕ್ಕೆ
ಬೇಕಾಗುವ ಖೋಲಿಗಳೂ ಬೇರೆಬೇರೆಯಾಗಿ ಕಟ್ಟಲ್ಪಡುವವು
ಇಲ್ಲಿ ವಿದ್ಯಾಭ್ಯಾಸಕ್ಕಾಗಿ ವಾಸಿಸುವ ವಿದ್ಯಾರ್ಥಿನಿಯವರಿಗೆ
ಯಾರಿಂದ ತೊಂದರೆಯಾಗದಂತೆಯೂ, ಯಾವ ಮಾತಿನ
ಕೊರತೆಯುಂಟಾಗದಂತೆಯೂ, ವ್ಯವಸ್ಥೆ ಇಡಲ್ಪಡುವದು.

ಪ್ರಜಾವತ್ಸಲರಾದ ಸರಕಾರದವರು ಬೇಕಾದಷ್ಟು ಹಣ
ವನ್ನು ವೆಚ್ಚ ಮಾಡಿ ಸ್ತ್ರೀಶಿಕ್ಷಣವನ್ನು ನಮ್ಮ ಕರ್ನಾಟಕ
ದಲ್ಲಿ ಹಬ್ಬಿಸಲಿಕ್ಕೆ ಉದ್ಯುಕ್ತರಾಗಿರಲು ಈ ಬಗ್ಗೆ ನಾವು ನ
ಮ್ಮ ಕರ್ತವ್ಯವನ್ನು ಮರೆತು ಸುಮ್ಮನೆ ಕೂಡ್ರಲಾಗದು.
ಪ್ರತಿಯೊಂದು ಜಿಲ್ಲೆಯಿಂದ ಪ್ರತಿವರ್ಷ ಕನಿಷ್ಟ ಪಕ್ಷಕ್ಕೆ
೧೦ ಜನ ಹುಡುಗಿಯರು ಈ ಹೊಸ "ಫಿಮೇಲ ಟ್ರೇನಿಂಗ
ಕಾಲೇಜ"ಕ್ಕೆ ಹೋಗುವದಾದರೆ ಸ್ವಲ್ಪ ದಿವಸಗಳಲ್ಲಿಯೇ
ಕರ್ನಾಟಕದಲ್ಲಿ ಸ್ತ್ರೀಶಿಕ್ಷಣವು ಊರ್ಜಿತ ದಶೆಗೆ ಬರಬಹು
ದು ಇದರಲ್ಲಿ ಏನೂ ಸಂದೇಹವಿಲ್ಲ.

ಮೇಲೆ ಕಾಣಿಸಿದ ಎಲ್ಲ ಸಂಗತಿಗಳನ್ನು ಜನ್ಮಾಗಿ ಲಕ್ಷ
ದಲ್ಲಿ ತಂದು ವಿಜಾಪುರದ ಜಿಲ್ಲೆಯಲ್ಲಿ ವಿದ್ಯಾಭಿಮಾನಿಗಳೆಂ
ದೆನ್ನಿಸಿಕೊಳ್ಳುವವರೆಲ್ಲರು ನಮ್ಮ ಜಿಲ್ಲೆಗೆ ಹತ್ತಿದ ಕಲಂಕ
ವನ್ನು ಕೆಲಮಟ್ಟಿಗಾದರೂ ದೂರ ಮಾಡಲಿಕ್ಕೆ ತನುಮನಧ
ನಗಳಿಂದ ಯತ್ನಿಸುವರೆಂದು ತುಂಬಾ ನಂಬಿದ್ದೇವೆ.

ವಿಜಾಪುರ
ತಾ. ೧೫ ಜೂನ ೧೯೦೫.

ಕೃಷ್ಣಾಜಿ ಶ್ರೀನಿವಾಸ ಹುನಗುಂದ
ಎ. ಡಿ. ಎ. ಇನಸ್ಪೆಕ್ಟರ ವಿಜಾಪುರ

ಟೀಪು—ಬರುವ ಸಪ್ಟೆಂಬರ ತಿಂಗಳಲ್ಲಿ "ಫಿಮೇಲ ಟ್ರೇನಿಂಗ
ಕಾಲೇಜ"ಕ್ಕೆ ಹೋಗಲಿಚ್ಛಿಸುವ ಅಮೇದವಾದರರ ಹೆಸರುಗಳ
ನ್ನು ನಮಗೆ ತಿಳಿಸಿದರೆ ಅವೇರೆಗೆ ವ್ಯವಸ್ಥೆ ಮಾಡಲ್ಪಡುವದು.

ಬಂದ ಪತ್ರದೊಳಗಿನ ಸಾರಾಂಶವು

ಟೈಲಹೊಂಗಲ— ಈ ಊರ ಹಿಂದುಸ್ಥಾನೀ ಸಾಲೆಗೆ ಈಗ ಬಂದಿರುವ ಮಿ ಬಸ್ಪಮಿಯ್ಯಾ ಎಂಬ ಹೆಡ್‌ಮಾಸ್ತರರ ಯೋಗದಿಂದ ಏರಿಕೆಯು ಕಳೆಯು ಪ್ರಾಪ್ತವಾಗಿದೆ ಪಂಚರೂ ಇತರ ಜನರೂ ವರ್ಗಣಿಯಿಂದ ಹುಡುಗರಿಗೆ ಪುಸ್ತಕ, ಖಣ ಮುಂತಾದವುಗಳಿಂದ ಉತ್ತೇಜನ ಕೊಟ್ಟಿದ್ದಾರೆ.

ಬನವಾಸಿ—ಈ ಊರ ಸಾಲೆಯ ಮಾಸ್ತರರು ಜೂನ ತಿಂಗಳ ೭ನೇ ತಾರೀಖಿನ ದಿವಸ ಚಕ್ರವರ್ತಿಗಳವರ ಜನ್ಮೋತ್ಸವ ಸಮಾರಂಭವನ್ನು ಬಹು ಸಡಗರದಿಂದ ಮಾಡಿದರು ಇದು ರಾಜನಿಷ್ಠೆಯ ಉದಾಹರಣೆಯು

ವಿದ್ಯಾಭಿಮಾನಿಗಳೂ ಉದಾರರೂ ಆದ ಸಿರಿವಂತರು ಏಳ್ಗೆಪ್ಪೊಂದಲಿ!!!

ಶ್ರೀಮತ್ಪರಮ ಪೂಜ್ಯರಾದ ಕನ್ನಡ ಶಾಲಾಪತ್ರದೊಡೆಯರವರ ಅಡಿದಾವರೆಗಳ್ಗೆ

ಅಜ್ಞಾಧಾರಕ ಕರಜಗಿ ತಾಲೂಕ ನೆಗಳೂರ ಶಾಲಾಧ್ಯಾಪಕನ ಪೊಡಮಡಿಕೆ! ಅರಿಕೆ-ಆರ್ಯರೇ! ಕೆಳಗಿನ ಕೆಲವು ಸಾಲುಗಳಿಗೆ ತಮ್ಮಿಂದವಾದ ಪತ್ರಿಕೆಯಲ್ಲಿ ಇಂಬು ಗೊಡುವಿರೆಂದು ತುಂಬಾ ನಂಬಿರುವೆ

ತಾರೀಖು ೯ ಮಿ ನೆಯ ದಿವಸ ಇದೇ ತಾಲೂಕ ಮಣ್ಣೂರ ಗ್ರಾಮದ ಕುಲಕರಣಿಯವರಾದ ಮಿ. ಫಕೀರಗವಡ ಶಿವನಗವಡ ಪಾಟೀಲ ಇವರು ಕಾಟೇನಹಳ್ಳಿ ಶ್ರೀಮಂತ ಶಿವಬಸಪ್ಪ ಬಸಪ್ಪಣ್ಣಾ ನೆಲವಿಗಿ ಇವರನ್ನು ಕರಕೊಂಡು ಈ ಸಾಲೆಯನ್ನು ತೋರಿಸಲಿಕ್ಕೆ ಬಂದರು. ಅದೇ ಶ್ರೀಮಂತರು ಈ ಶಾಲೆಯ ಎಲ್ಲ ಸ್ಥಿತಿಗತಿಗಳನ್ನು ನೋಡಿ ಅಬಗ್ಗೆ ತನುಗಾದ ನಲ್ಮೆಯನ್ನು "ಒಂದು ಮುರಾರಿಗೋಲ್ಲೋಬನ್ನು ಈ ಸಾಲೆಗೆ ಮಚ್ಚು ಗೊಟ್ಟು ಕಳಿಸುತ್ತೇವೆ....." ಈ ಮುಂತಾದ ಬರಹದಿಂದ ಕರಾ ಪುಸ್ತಕದಲ್ಲಿ ಹೊರಗೆಡವಿದರು.

ಬಳಿಕ ಶ್ರೀ. ಶಿವಬಸಪ್ಪಣ್ಣನವರು ತಾವೇ ಪ್ರಣೆಚಿತ್ರ ಶಾಲಾ ಪ್ರೇಸಿನ ಒಡೆಯರ ಕೂಡ ಎ-೩ ಸಾರೆ ಪತ್ರವ್ಯವಹಾರ ನಡಿಸಿ ಉಗೆಬಂಡೆಯು ಮುಖದಿಂದ ಕರಜಗಿಯು ನಿಲ್ಲೆಡೆಗೆ ಬಲು ಮಾಟುಳ್ಳ ಒಂದು ಮಾಡಿದ ನೆಲಗುಂಡ (ಗ್ಲೋಬ) ನ್ನು ತರಿಸಿ ಅದನ್ನು ಇಲ್ಲಿಗೆ ಕಳಿಸಿಕೊಟ್ಟಿದ್ದಾರೆ. ಇದು ಸುಗುಣಾಭಿಮಾನಿಗಳಾದ ಶ್ರೀಮಂತರಿಗೆ ಬಹು ಭೂಷಣವಾದದ್ದು. ಶ್ರೀಮಂತರಾದವರು ಇದರಂತೆಯೇ ತಮ್ಮ ಅಳವಿಗೆ ಸರಿಯಾಗಿ ಸಾಲೆಯ ಕೆಲಸಕ್ಕೆ ನೆರವಾಗಹತ್ತಿದರೆ ಹಳ್ಳಿಗಾಡುಗಳಲ್ಲಿಯು ಬಡಸಾಲೆಗಳು ಬೇಗನೆ ಸುಧಾರಿಸುತ್ತ ಅದರಿಂದ ನಾಡಿನ ಒಳಿತಾಗುವದರಲ್ಲಿ ಸಂದೇಹವಿಲ್ಲ. ಇಷ್ಟೇ ಅಲ್ಲ ಅದರಿಂದ ಅವರ ಶ್ರೀಮಂತಿಕೆಯು ಸಹ ಸಫಲವಾದಂತಾಗುವದು.

ಶ್ರೀ. ಶಿವಬಸಪ್ಪಣ್ಣನವರು ಮೇಲೆ ಕಾಣಿಸಿದ ನೆಲಗುಂಡನ್ನು ಈ ನಮ್ಮ ಸಾಲೆಗೆ ದಯವಿಟ್ಟುಕೊಟ್ಟು, ಸಾಲೆಯ ನುಟ್ಟುಗಳ ಬಗ್ಗೆ ಇಲ್ಲಿದ್ದ ದೊಡ್ಡದೊಂದು ಕೊರತೆಯನ್ನು ನೂರಮಾಡಿದ್ದಕ್ಕಾಗಿ ಈ ಸಾಲೆಯ ವಿದ್ಯಾರ್ಥಿಗಳ ಹಾಗು ಎಲ್ಲ ಶಿಷ್ಟಜರ ಕಡೆಯಿಂದ ನಾನು ಇವರ ಉಪಕಾರವನ್ನು ಶುಂಬೂ ನೆನೆಯುತ್ತೇನೆ.

ಉದಾರ ಮನಸ್ಸಿನ ಈ ಶ್ರೀಮಂತರು ಇದರಂತೆ ಮುಂದಾದರು ದೇಶಹಿತ ಕಾರ್ಯಗಳಿಗೆ ಮೇಲೆ ಮೇಲೆ ನೆರವಾಗುವಂತೆ ದೇವರು ಇವರಿಗೆ ಹೆಚ್ಚು ಹೆಚ್ಚು ತಿಳುವಳಿಕೆಯನ್ನೂ ಒಳಿತನ್ನೂ ಉಂಟುಮಾಡಲಿ! ಎಂದು ಬಯಸಿ ಈ ಬರಹವನ್ನು ಮುಗಿಸುವೆ. ಪೂಜ್ಯರಿಗೆ ಅರಿಕೆ ಇರಲೆಂಬ

ತಮ್ಮ ಕೃಪಾಪೋತ್ರ

ಬೀಡು-ನೆಗಳೂರು
ತಾಃ ೭೦-೭-೦೫

ಶಿವರುದ್ರಪ್ಪ ಸೋಮಪ್ಪ
ಕುಲಕರ್ಣಿ

ಶಾಲಾಪತ್ರಿಕೆ.

ಪದ್ಯ.

ಶ್ರೀಮದ್ವಿದ್ಯಾಗುರುವರ್ಯರಂನ್ನತಿಳಿಯುಂಸಚ್ಛಿಷ್ಯಕೋಳ್ಪರ್ಪಾಂ
ಬಿಯುಸತ್ಕಂ ಪ್ರತಿಮಾಸದಾದಿಗೊಲವಿಂವೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪವೋದುವರ್ಗಸುಗುಣಂ ತೋರಲ್ಕೆಕೈಕೊಂಮುದೈ।
ಬಯೆಯಿಂದೋಪಪತಿದ್ದವೇಳ್ವುದುಮಧರ್ಜ್ಞಾನಾಭಿವೃದ್ಧಿಪ್ರಯ ॥

ಪುಸ್ತಕ ೪೧] ಸಪ್ಟಂಬರ ೧೯೦೫. [ಸಂಚಿಕೆ ೯.

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಉಪ್ಪು ಅತ್ಯುಪಯುಕ್ತ ಪದಾರ್ಥವೆಂಬದು ಎಲ್ಲರಿಗೂ ಗೊತ್ತುಂಟು. ಈ ಪದಾರ್ಥವನ್ನು ಹಾಕದೆ ಅಟ್ಟ ಅಡಿಗೆಯು ರುಚಿಹೀನವಾಗಿರುವದೆಂಬದನ್ನಾದರೂ ಎಲ್ಲರೂ ಬಲ್ಲರು. ಆದರೆ ಇದು ರುಚಿಯನ್ನುಂಟುಮಾಡುವದೊಂದೇ ಕಾರ್ಯವನ್ನು ಮಾಡುವದಿಲ್ಲ. ಇದರ ಯೋಗದಿಂದ ಪಚನಕ್ರಿಯೆಯು ಸರಿಯಾಗಿ ಸಾಗುವದು. ಉಪ್ಪಿನಲ್ಲಿ ಸೋಡಿಯುಮ್ ಎಂಬ ಧಾತುವೂ ಕ್ಲೋರಿನ್ ಎಂಬ ವಾಯುವೂ ಇರುತ್ತದೆಂದು ಪೃಥಕ್ಕರಣದಿಂದ ಗೊತ್ತಾಗಿದೆ. ತಿಂದ ಉಪ್ಪಿನೊಳಗಿರುವ ಕ್ಲೋರಿನ್ ವಾಯುವು ಅನ್ನಾಶಯದಲ್ಲಿ ಪೃಥಕ್ಕರಣವಾಗಿ ಒಡಲೊಳಗಿನ ಹೈಡ್ರೋಜನ್ನದೊಡನೆ ರಸಾಯನ ಸಂಯೋಗವನ್ನು ಹೊಂದಿ ಹೈಡ್ರೋಕ್ಲೋರಿಕ್ ಆಸಿಡ್ ಎಂಬ ತೀವ್ರವಾದ ಮ್ಲವನ್ನುಂಟು ಮಾಡುತ್ತದೆ. ಈ ಆಮ್ಲಗಳು ಧಾತ್ವಾದಿಗಳನ್ನು ಕೂಡ ಕರಿಗಿಸಿ ನೀರ ಮಾಡುವದು ಪ್ರಸಿದ್ಧವು. ಆದ್ದರಿಂದ ಒಡಲೊಳಗಿನ ಅನ್ನವನ್ನು ಪಚವ ಮಾಡುವದೇನಾಶ್ಚರ್ಯ?

ನಾವು ತಿನ್ನುವ ಯಾವತ್ತು ಪದಾರ್ಥಗಳಲ್ಲಿ ತುಸುವಾಗಲಿ ಬಹಳವಾಗಲಿ ಉಪ್ಪಿನ ಅಂಶವು ಇದ್ದೇ ಇರುವದು. ಒಳ್ಳೇ ಸವಿಯಾಗಿರುವ ಪದಾರ್ಥಗಳಲ್ಲಿ ಕೂಡ ಇದು ಇರುವದು. ಹೀಗೆ ಇತರ ಆಹಾರದ ಪದಾರ್ಥಗಳೊಳಗಿರುವ ಉಪ್ಪು ನಮ್ಮ ಶರೀರದಲ್ಲಿ ಸೇರುವದಲ್ಲದೆ, ನಾವು ಪ್ರತ್ಯಕ್ಷ ಉಪ್ಪನ್ನು ಸಹ ಒಂದೆರಡು ತೊಲಿಯಷ್ಟು ನಿತ್ಯ ತಕ್ಕೊಳ್ಳುತ್ತೇವೆ.

ಪಕ್ಷಿಗಳ ಆಹಾರದಲ್ಲಿ ಕೂಡ ಉಪ್ಪಿನ ಅಂಶವು ಇರುವದು. ಅದು ಸಾಲದೆ ಅವು ಒಮ್ಮೊಮ್ಮೆ ಗೋಡೆಯ ಸೌಳನ್ನಾಗಲಿ, ಮೆಟ್ಟಿದ ಮೇಲಿನ ಸೌಳನ್ನಾಗಲಿ ನೆಕ್ಕುತ್ತಿರುವದು ನಿಮ್ಮ ದೃಷ್ಟಿಗೆ ಬಿದ್ದಿರಬಹುದು. ಆದರೆ ಅವುಗಳಿಗೆ ಬಾಯಿ ಇಲ್ಲ. ಆದ್ದರಿಂದ ಸಾಕಿದವರು ಅವುಗಳ ಹೊಟ್ಟೆಯಲ್ಲಿಯೂ ದಿನಾ ಕೆಲವು ಉಪ್ಪು ಸೇರುವಂತೆ ಮಾಡಬೇಕು. ಅಂದರೆ ದನಾಗಳಿಂದರೂ ಬೇನೆ ಬೇಸರಿಕೆಯಿಂದ ಮುಕ್ತವಾಗಬಹುದು. ಒಬ್ಬ ಕೋಧಕನು ಆಕಳಿಗೆ ದಿನವೊಂದಕ್ಕೆ ಐದು ತೊಲೆಯಷ್ಟು ಎತ್ತು ಕುದುರಿಗಳಿಗೆ ದಿನವೊಂದಕ್ಕೆ ಆರು ತೊಲೆಯಷ್ಟು ಉಪ್ಪುಬೇಕೆಂದು ಗೊತ್ತು ಪಡಿಸಿದ್ದಾನೆ.

ಶೇಕವರ ಆಳಿಕೆಯಲ್ಲಿ ಕೆಲವು ಜನರು ಹೊಸದಾಗಿ ಸರದಾರ ಪದಕ್ಕೆ ಬಂದರು. ಅವರಲ್ಲಿ ಪಟವರ್ಧನ, ರಾಸ್ತೆ, ಪುರಂದರೆ, ಭಾವೆ, ಮುಂತಾದವರೇ ಪ್ರಮುಖರು. ರಾಸ್ತೆ ಎಂದು ಇವ್ವೊತ್ತಿಗೂ ಹೆಸರು ಪಡೆದ ಸರದಾರ ಮನೆತನದವರ ಮೊದಲಿನ ಆಡ್ಡ ಹೆಸರು ಗೋಖಲೆ ಎಂಬದು. ಇವರ ಮೂಲ ಪುರುಷನು ಅಥವಾ ಒಬ್ಬ ಹೆಸರಾದ ಪುರುಷನು ಚಿನಿವಾಲನಾಗಿ ಪುಣೆಯಲ್ಲಿ ವಾಸಿಸುತ್ತಿದ್ದನು. ಇವನ ಹೆಸರು ಭಿಕ್ಕಾಜಿಯು. ಇವನು ಇತರ ಚಿನಿವಾಲರಂತೆ ವ್ಯವಹಾರಲ್ಲಿ ತಗಲು ಮಾಡುತ್ತಿದ್ದಿಲ್ಲ. ಸುಳ್ಳು ಹೇಳುತ್ತಿದ್ದಿಲ್ಲ. ಆದ್ದರಿಂದ ಎಲ್ಲರೂ ಇವನಿಗೆ (ಗಕ್ಕ) ಸರಿಯಾಗಿ

ವ್ಯಾಪಾರ ಮಾಡುವನೆಂದು ಅನ್ನತೊಡಗಿದನು. ಆ ರಾಸ್ತೆ ಶಬ್ದವೆ ಬರಬರುತ್ತ ವಿಳಾರ ಹೊಂದಿ ರಾಸ್ತೇ ಎಂಬ ರೂಪದಿಂದ ಅವರ ಅಡ್ಡ ಹೆಸರಾಯಿತು. ಈ ಮನೆತನದಲ್ಲಾದ ಗೋಪಿಕಾಬಾಯಿಯೆಂಬವಳೇ ಬಾಳಾಜೀ ಬಾಜೀರಾಯನೆಂಬ ಮೂರನೇ ಪೇಶವನ ಹೆಂಡತಿಯು.

ಮುಂದಿನ ನವೆಂಬರ ತಿಂಗಳಲ್ಲಿ ಯುವರಾಜರು ಭರತ ಖಂಡಕ್ಕೆ ಬರುವರು. ಆ ಸಮಾರಂಭಕ್ಕಾಗಿ ಈಗಿಂದಲೇ ಅಲ್ಲಲ್ಲಿ ಒತ್ತಡದ ಸಿದ್ಧತೆಗಳು ನಡೆದಿರುವವು.

ಮುಂಬಯಿ ಪಟ್ಟಣದ ಮ್ಯುನಿಸಿಪಾಲಿಟಿಯವರು ಆ ನಗರದಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ನೆಲೆಗೊಳಿಸಬೇಕೆಂದು ಪ್ರಯತ್ನಿಸಿದರು. ಆದರೆ ಆ ಸಭೆಯೊಳಗಿನ ಮೆಂಬರರಲ್ಲಿ ಬಹು ಜನರ ಮನಸಿಗೆ ಇದು ಬಾರದ್ದರಿಂದ ಈ ಕಾರ್ಯವು ಸದ್ಯಕ್ಕೆ ನಿಂತು ಹೋಯಿತು. ಆದರೂ ಶ್ರೀಮಂತ ಗಾಯಕವಾಡ ಸರಕಾರದವರು ತಮ್ಮ ರಾಜ್ಯದಲ್ಲಿ (ಒತ್ತಾಯದ ಶಿಕ್ಷಣ) ಎಲ್ಲರೂ ವಿದ್ಯಾಶಾಲೆಯಲಿಕ್ಕೇ ಬೇಕೆಂಬ ಕಾಯದೆಯನ್ನು ಮಾಡಿರುವರು. ಅದಕ್ಕಾಗಿ ಹೆಚ್ಚಿಗೆ ವೆಚ್ಚ ಮಾಡಬೇಕಾದ ಹಣವನ್ನು ತಮ್ಮ ಸ್ವಂತ ಹಣದೊಳಗಿಂದ ಕೊಡಲೊಡಂಬಟ್ಟಿರುವರು.

ಕಾಲೇಜದ ಸರಟಫೀಕೇಟ ಪರೀಕ್ಷೆಯು ಅಕ್ಟೋಬರ ಎರಡನೇ ತಾರೀಖಿಗೆ ಪ್ರಾರಂಭವಾಗುವದು.

ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ನವೆಂಬರ ೨೫ ನೇ ತಾರೀಖಿನ ದಿವಸ ಪ್ರಾರಂಭವಾಗುವದು.

ಹೆಣ್ಣು ಮಕ್ಕಳ ಟ್ರೇನಿಂಗಸ್ಕೂಲ ಪ್ರದೇಶ ಪರೀಕ್ಷೆಯೂ ದರೂ ೨೫ ನೇ ನವೆಂಬರದ ದಿವಸವೇ ಪ್ರಾರಂಭವಾಗುವದು.

ಸದ್ಯಕ್ಕೆ ಧೋತರ ಶೀರಿಗಳನ್ನು ಕೊಳ್ಳುವಾಗ ಇದು ಎ ಷ್ಟು ನಂಬರ ನೂಲು ಎಂದು ವಿಚಾರಿಸುವ ಪರಿಪಾಠವ್ರಂ ಟು. ಆದರೆ ನೂಲಿನ ನಂಬರ ಅಂದರೇನು? ಎಂಬುದನ್ನು ಬಹು ಜನರು ಅರಿಯರು. ಮೊದಲನೇ ಅಥವಾ ಒಂದನೇ ನಂಬರ ನೂಲೆಂದರೆ ಒಂದು ಪೌಂಡು ಅಥವಾ ಏಳು ಸಾವಿ ರ ಗ್ರೇನು ತೂಕ ಅರಳೆಯಲ್ಲಿ ಎಂಟುನೂರಾನಾಲ್ವತ್ತು ಯಾ ರ್ಡ್ ಉದ್ದವಾಗುವಂತೆ ನೂತದ್ದು. ಅದೇ ಮೇರೆಗೆ ಅಷ್ಟೇ ಅರಳೆಯಿಂದ ೧೬೮೦ ಯಾರ್ಡ್ ಉದ್ದವಾಗುವಷ್ಟು ನೂತ ದ್ದು ಎರಡನೇ ನಂಬರದ ನೂಲೆಂತಲೂ, ೮೪೦×೭೦= ೧೬೮೦ ಯಾರ್ಡ್ ಉದ್ದವಾಗಿ ತೆಗೆದ ನೂಲು ಇಪ್ಪತ್ತನೇ ನಂಬರದ್ದೆಂತಲೂ ತಿಳಿಯತಕ್ಕದ್ದು.

ಈ ಸಂಚಿಕೆಯು ಕೊನೆಯ ಭಾಗದಲ್ಲಿ ಕಾಲೇಜಿನ ಇ ನಾವು ಫಂಡಿಗೆ ಹತ್ತು ರೂಪಾಯಿಗಳು ಹುನಗುಂದದ ಒಬ್ಬ ಪ್ರಸಿದ್ಧ ಸಾವಕಾರರಿಂದ ಜಮೆಯಾಗಿರುವದನ್ನು ಮುದ್ರಿಸಿರುತ್ತೇವೆ. ಈ ಸದ್ಗೃಹಸ್ಥರ ಹೆಸರು ದೊಡ್ಡ ಪ್ಪಾ ತಿಪ್ಪಣ್ಣಾ ನಾಗರಾಳ ಎಂಬುದಿರುತ್ತದೆ. ಇವರು ಸುಶಿ ಕ್ಷಿತರೂ, ಉದಾರರೂ, ದೊಡ್ಡ ಮನುಷ್ಯರೂ ಆಗಿರುವ ರು. ವಿದ್ಯಾವೃದ್ಧಿಗೆ ವಿಶೇಷವಾಗಿ ಚಲೋ ಶಿಕ್ಷಕರಾಗಲಿಕ್ಕೆ ಹವಣಿಸುವವರಿಗೆ ಉತ್ತೇಜನ ಶಿಗಬೇಕೆಂದು ಯತ್ನಿಸುವ ನಮ್ಮ ಫಂಡಿಗೆ ಇಷ್ಟು ಮನಃಪೂರ್ವಕವಾಗಿ ಇವರು ಸ ಹಾಯ ಮಾಡಿದ್ದನ್ನು ನೋಡಿ ನಮಗೆ ತುಂಬಾ ಸಂತೋಷ ವಾಗುವದು. ಈ ಸದ್ಗೃಹಸ್ಥರ ಉದಾಹರಣೆಯನ್ನು ಇ ತರ ಧನಾಢ್ಯ ಜನರು ಅನುಸರಿಸಿ ನಮಗೆ ನೆರವಾದರೆ ನಾ ವು ಕೈಕೊಂಡ ಕೆಲಸವು ಕೊನೆಗಾಣಲಿಕ್ಕೆ ಪ್ರಯಾಸವೆನಿ ಸದು.

ಮೈಸೂರ ಸರಕಾರದವರು ತಮ್ಮ ನಾಡ ಶಿಕ್ಷಣ ಪ್ರಸಾ ರಕ್ಕೆ ವಿಶೇಷ ಲಕ್ಷ ಕೊಡುತ್ತಾರೆಂಬದು ಸರ್ವಪ್ರತವು

ಅವರು ಈ ವರುಷ ಹಿಂದಿನ ಅನುಕೂಲಗಳಲ್ಲದೆ ಸ್ತ್ರೀಯರಿಗಾಗಿ ವಿಶೇಷವಾಗಿ ವಿಧವೆಯರಿಗಾಗಿ ಶಿಕ್ಷಣವು ಸುಲಭವಾಗಿ ಶಿಗಬೇಕೆಂದು ಕೆಲವು ವಿಶೇಷ ಅನುಕೂಲತೆಗಳನ್ನು ಮಾಡಿರುವರು. ಬಾಲವಿಧವೆಯರು ಕಲಿಯಲಪೇಕ್ಷಿಸಿದರೆ ಅವರಿಗೆ ಪ್ರಾಥಮಿಕ ಶಾಲೆಯಲ್ಲಿ ಕೂಡ ಮೂರರಿಂದ ಹತ್ತರವರೆಗೆ ತಿಂಗಳೊಂದಕ್ಕೆ ಸಂಬಳ ಶಿಕ್ಷ್ಯವಂತೆ ಏರ್ಪಾಡು ಮಾಡಿರುವರು. ಇದಲ್ಲದೆ ತೀರ ಹೊಟ್ಟೆಗೆ ಇಲ್ಲದೆ ಇದ್ದ ಅನಾಥ ವಿಧವೆಯರಿಗೆ ಹೊಟ್ಟೆಯ ವೆಚ್ಚಕ್ಕಾದರೂ ಕಿಂಚಿತ್ತು ನೆರವಾಗುವರು. ಇದು ಬಹು ಸಂತೋಷಕರವಾದ ಸುಧಾರಣೆಯೆಂದು ನಿರ್ವಿವಾದವಾಗಿ ಹೇಳಬಹುದು.

ಮುಲಕೀ ಪರೀಕ್ಷೆಗೆ ಬಂದ ೨೧೯ ಮುಂದಿಯಲ್ಲಿ ೧೪೩ ಮಂದಿ ಲೆಖ್ಖದಲ್ಲಿ ನಾಪಾಸಾದರು.

AGRICULTURE.

ಕೃಷಿತಾಸ್ತ್ರವು.

ಹೊಲದಲ್ಲಿ ತಯಾರಿಸಿದ ಗೊಬ್ಬರವು— ಇದು ಯಾಕೆ ಬೆಲೆಯುಳ್ಳದ್ದಿರುತ್ತದಂದರೆ:—

೧ ಸಾವಾನ್ಯ ಗೊಬ್ಬರದವಿದ್ದು, ಇದರಲ್ಲಿ ಗಿಡಗಳ ಬೆಳವಣಿಗೆಗೆ ಬೇಕಾದ ಎಲ್ಲ ವನಸ್ಪತ್ಯಾಹಾರವು ಇರುತ್ತದೆ.

೨ ತಾಜಾಸ್ಥಿತಿಯಲ್ಲಿ ಇದನ್ನು ಹಾಕಿದರೆ ಇದರಿಂದ ಜೆಗಟು ಮಣ್ಣಿನ ಭೂಮಿಗಳು ಹಗುರಾಗುವಂತೆ ಯಾಂತ್ರಿಕ ವ್ಯಾಪಾರವು ಸಾಗುತ್ತದೆ. ಪೂರ್ಣವಾಗಿ ಕೊಳೆತ ಸ್ಥಿತಿಯಲ್ಲಿ ಇದನ್ನು ಹಗುರು ಭೂಮಿಗ ಹಾಕಿದರೆ ಇದರಿಂದ ಆ ಭೂಮಿಯು ಗಟ್ಟಿಯಾಗಲಿಕ್ಕೂ ಆದರಲ್ಲಿಯ ಆರ್ದ್ರತ್ವವು ಉಳಿಯಲಿಕ್ಕೂ ಅನುಕೂಲವಾಗುತ್ತದೆ.

೩ ಇದರ ದ ಭೂಮಿಗೆ ಎಷ್ಟೋ ಸೇಂದ್ರಿಯ ದ್ರವ್ಯವು

ಬೆಳೆಯುತ್ತದೆ ಹೀಗಾಗಿ ಸೇಂದ್ರಿಯ ದ್ರವ್ಯವು ಅಲ್ಲಿಯೇ ಪೃಥಕ್ಕರಣವಾಗುವದರಿಂದ ಒಂದು ತರದ ಭೂಮಿಯು ಉತ್ಪನ್ನವಾಗುತ್ತದೆ. ಇದು ಭೂಮಿಗಳಿಗೆ ಹವೆಯೊಳಗಿಂದ ವಾಯುಗಳನ್ನೂ ಆರ್ದ್ರತ್ವವನ್ನೂ ತೆಗೆದುಕೊಂಡು ಅವುಗಳನ್ನು ಇಟ್ಟುಕೊಳ್ಳಲಿಕ್ಕೆ ಸಹಾಯ ಮಾಡುತ್ತದೆ. ಈ ವ್ಯಾಪಾರದಿಂದ ಭೂಮಿಗಳಿಗೆ ಬಹಳ ಹಿತವಾಗುತ್ತದೆ.

೪. ಇದು ಭೂಮಿಗೆ ನೈತ್ರೊಜನ್‌ವನ್ನು ಹುಟ್ಟಿಸುವ ಕ್ರಿಮಿಗಳನ್ನು ಒದಗಿಸಿಕೊಡುತ್ತದೆ. ಇವು ನೈತ್ರೋಜನ್‌ವನ್ನು ಹುಟ್ಟಿಸಿ ಭೂಮಿಯಲ್ಲಿರುವ ವನಸ್ಪತ್ಯಾಹಾರದ ಸಂಚಯವನ್ನು ಹೆಚ್ಚಿಸುತ್ತವೆ.

ಇದರಿಂದ ಭೂಮಿಯಮೇಲೆ ಶಾಶ್ವತ ಪರಿಣಾಮವಾಗುತ್ತದೆ ಇವರಿಂದಾದ ಪರಿಣಾಮವು ಒಂದೇ ವರ್ಷಕ್ಕೆ ಮುಗಿಯದೆ ಬೆಳೆಗಳ ಮೇಲೆ ಎಷ್ಟೋ ವರ್ಷಗಳವರೆಗೆ ಇರುತ್ತದೆ.

೫ ಇದರಲ್ಲಿ ಕಾರ್ಬಾನಿಕ್ ಮುಂತಾದ ಆಸಿಡ್ಡುಗಳು ಸ್ವಲ್ಪ ಪ್ರಮಾಣದಲ್ಲಿ ಇರುತ್ತವೆ. ಈ ಆಸಿಡ್ಡಗಳಿಂದಲೂ ವಾಯುಗಳಿಂದಲೂ ಭೂಮಿಯೊಳಗಿನ ಖನಿಜ ದ್ರವ್ಯಗಳು ದ್ರಾವ್ಯವಾಗುತ್ತವೆ.

ಹೊಲದಲ್ಲಿ ತಯಾರಿಸಿದ ಗೊಬ್ಬರದ ಬೆಲೆಯು ಅದರ ರಚನೆಯಂತೆ ಬೇರೆ ಬೇರೆ ಆಗುತ್ತದೆ. ಮೂರು ಶಿಲಿಂಗು ೬ ಪೇನಸಿನಿಂದ ೩ ಶಿಲಿಂಗು ೬ಪೇನಸಿನ ವರೆಗೆ ಒಂದೊಂದು ಟನ್ನಿನ ಬೆಲೆಯು ಇರುತ್ತದೆ. ಕೃತಿಮ ಗೊಬ್ಬರದೊಳಗಿನ ನೈತ್ರೋಜನ್‌ದ ಬೆಲೆಯಷ್ಟು ಇದರೊಳಗಿನ ನೈತ್ರೋಜನ್ನದ ಬೆಲೆಯು ಆಗುವದಿಲ್ಲ. ಆದರೆ ಪೊಟಾಶ ಮತ್ತು ಫಾಸಫೊರಿಕ್ ಆಸಿಡ್ಡಗಳ ಬೆಲೆಯು ಉಳಿದ ಗೊಬ್ಬರಗಳೊಳಗಿನ ಪೊಟ್ಯಾಶವು ಫಾಸಫೊರಿಕ್ ಆಸಿಡ್ಡುಗಳ ಬೆಲೆಯಷ್ಟೇ ಆಗುತ್ತದೆ.

ಇದರ ಬೆಲೆಯನ್ನು ಹೆಚ್ಚು ಕಡಿಮೆ ಮಾಡುವ ಕಾರಣಗಳಲ್ಲಿಮುಖ್ಯವಾದವುಗಳು ಯಾವವಂದರೆ—

೧ ಇದನ್ನು ಹುಟ್ಟಿಸುವ ಪ್ರಾಣಿಯ ಜಾತಿಯು:—

ಸಾಧಾರಣವಾಗಿ ರಾಶಿ ರಾಶಿಯಾಗಿ ಶಿಗುವ ಮಲವು ಎತ್ತುಗಳಿಂದಲೂ ಕುದುರೆಗಳಿಂದಲೂ ಹಂದಿಗಳಿಂದಲೂ ದೊರೆಯುತ್ತದೆ. ಎತ್ತಿನ ಮಲವು ನೀರು ನೀರಾಗಿಯೂ ಥಂಡಿಯುಳ್ಳದ್ದೂ ಇರುತ್ತದೆ. ಮತ್ತು ಸಾವಕಾಶವಾಗಿ ಪೃಥಕ್ಕರಣವಾಗುತ್ತದೆ. ಎಲ್ಲವುಗಳಲ್ಲಿ ಎತ್ತಿನ ಮಲವೇ ಕಡಿಮೆ ಬೆಲೆಯುಳ್ಳದ್ದು. ಹಂದಿಯ ಅಥವಾ ಕುರಿಗಿಂತ ಎತ್ತಿನ ಮಲದಲ್ಲಿ ಕಡಿಮೆ ಹಾಗೂ ಮೂತ್ರದಲ್ಲಿ ಹೆಚ್ಚು ಘನ ದ್ರವ್ಯವಿರುತ್ತದೆ. ಹಂದಿಯ ಮಲವು ಸಾಧಾರಣವಾಗಿ ಎತ್ತಿನ ಮಲದಂತೆ ಥಂಡಿಯುಳ್ಳದ್ದೂ ಆದರೆ ಫಿಟ್ಟಿಯಾಗಿರುವದು ಆದ್ದರಿಂದ ಹೆಚ್ಚು ಬೆಲೆಯುಳ್ಳದ್ದೂ ಇರುತ್ತದೆ. ಹಂದಿಯ ಮೂತ್ರದಲ್ಲಿ ಬೇರೆ ಹೊಲದ ಸಂಬಂಧದ ಪ್ರಾಣಿಗಳ ಮೂತ್ರದೊಳಗಿನಕಿಂತ ಕಡಿಮೆ ಘನದ್ರವ್ಯಗಳಿರುತ್ತವೆ.

MEMORY.

ಸ್ಮರಣಶಕ್ತಿ.

(ಏ) ಸೆರೆ, ಅಫು, ಗಾಂಜೆ, ಭಾಂಗ ಮುಂತಾದ ಮಾದಕ ಪದಾರ್ಥಗಳ ಸೇವನದಿಂದಲೂ ಸ್ಮರಣ ಶಕ್ತಿಯು ಕಡಿಮೆಯಾಗುತ್ತದೆ. ಇವುಗಳಿಂದಾಗುವ ದುಷ್ಟ ಪರಿಣಾಮವು ಸರ್ವರಿಗೂ ವಿಕ್ಯಾತ ವಿರುವದರಿಂದ ಆ ಸಂಬಂಧವಾಗಿ ಇಲ್ಲಿ ಹೆಚ್ಚಿಗೆ ಬರೆಯುವದಿಲ್ಲ.

(ಐ) ಜಾಗರಣದಿಂದಲೂ ಸ್ಮರಣಶಕ್ತಿ ಕುಂದುವದು. ನಿದ್ರೆಯು ಕಡಿಮೆಯಾಗುವದರಿಂದ ಪಚನ ವ್ಯಾಪಾರವು ಅಗತ್ಯನಿತು ಆಗುವದಿಲ್ಲ. ಬಳಿಕ ಶರೀರವು ರೋಗಗ್ರಸ್ತವಾಗುತ್ತದೆ. ಶಕ್ತಿಯು ಕ್ಷೀಣವಾಗುತ್ತದೆ ಅದರ ದುಷ್ಪರಿಣಾಮವು ಮನಸ್ಸಿನ ಮೇಲೆ ನಡೆಯುತ್ತದೆ. ಇದರಿಂದ ಬೇಕಾದಷ್ಟು ಬಹಳ ನಿದ್ರೆಯನ್ನು ಮಾಡಬೇಕೆಂದು ಪಮು. ಉದೇಶವಲ. ಅತಿ ನಿದ್ರೆಯಿಂದ ಮನುಷ್ಯನು ಆ

ಶಕ್ತನಾಗುತ್ತಾನೆ. ಇದೇ ಮೇರೆಗೆ ಅತಿ ಶೋಕ, ದುಃಖ ಭೀತಿಗಳಿಂದಲೂ ಸ್ಮರಣವು ಕುಗ್ಗುತ್ತದೆ. "ಆಗಿ ಗರ್ವಿ ಗರ್ವಿಸೆಗೆ" ಈ ಎಲ್ಲ ಪ್ರಕಾರಗಳಿಂದ ಹೃದಯದಲ್ಲಿ ಪ್ರಸರಣಾತ್ಮಕ ಕುಂಚನಗಳ ಕ್ರಿಯೆಯು ಕುಂದುತ್ತದೆ. ಪಕ್ವಾಶಯದಲ್ಲಿಯೂ ಬಹಳ ಅವ್ಯವಸ್ಥೆಯುಂಟಾಗುದು. ಕೊನೆಗೆ ಹುಚ್ಚು ಹಿಡಿದು ಆ ಕಾಲದಲ್ಲಿ ಮೃತ್ಯು ಮುಖದಲ್ಲಿ ಬೀಳುತ್ತಾನೆ.

ಆರೋಗ್ಯ ರಕ್ಷಣಕಾರರು ಬರೆಯುವದೇನಂದರೆ– "ಎಷ್ಟೋ ಮನೋವಿಕಾರಗಳ ಸಂಬಂಧವು ಫುಪ್ಪಸಕ್ಕೂ ಹೃದಯಕ್ಕೂ ಇರುತ್ತದೆ. ಅವು ಅತಿಶಯವಾಗಿ, ಬೆಳೆದರೆ ಕೇಡು ಬರದೆ ಇರದು. ಇವುಗಳ ಸಂಬಂಧವು ಮಿದುಳಿಗೆ ಇರುವದರಿಂದ ಅವುಗಳಿಂದ ಸಂತಾಪವಾಗಿ, ತಲೆ ನೋಯಹತ್ತುತ್ತದೆ. ಒಮ್ಮೊಮ್ಮೆ ಅಪಸ್ಮಾರ ಮುಂತಾದ ಭಯಂಕರ ರೋಗಗಳು ಅಂಟಿಕೊಳ್ಳುತ್ತವೆ. ರಾಗ, ದ್ವೇಷ ಪಂಥ, ಪರೋತ್ಕರ್ಷಾಸಹಿಷ್ಣುತೆ, ಭೀತಿ, ಖೇದ, ನಿರಾಶೆ ಮೊದಲಾದ ಮನೋ ವಿಕಾರಗಳು ಆರೋಗ್ಯ ರಕ್ಷಣೆಗೆ ಅತಿಶಯವಾಗಿ ಹಾನಿ ಕರುತ್ತವೆ. ಆದುದರಿಂದ ಅವುಗಳ ಬೆಳೆಯು ತೀವ್ರ ನಡೆದು, ಅವುಗಳಿಂದೊದಗುವ ಅನಿಷ್ಟ ಪರಿಣಾಮವು ಅಕಸ್ಮಾತ್ತಾಗಿ ಸಂಭವಿಸುತ್ತದೆ."

ಆದುದರಿಂದ ತಿಂಬುವದರಲ್ಲಿಯೂ ವಿಷಯೋಪಭೋಗಾದಿಗಳಲ್ಲಿಯೂ ಮಿತಿ ಮೀರಬಾರದು. ಇಷ್ಟಲ್ಲದೆ ಸದಾ ಸರ್ವಕಾಲದಲ್ಲಿಯೂ ಮನಸ್ಸಿ ಶ್ರಮಮಾಡಲಿಕ್ಕೆ ಸಿದ್ಧವಾಗಿರುವದಿಲ್ಲ. ಅಂತಹ ಹೊತ್ತಿನಲ್ಲಿ ಮಾನಸಿಕ ಶ್ರಮ ಮಾಡುವದನ್ನು ತಪ್ಪಿಸುವದಕ್ಕೆ ಬರುವಷ್ಟು ಮಟ್ಟಿಗೆ ತಪ್ಪಿಸುವದಕ್ಕೆ ಪ್ರತಿಯೊಬ್ಬನು ಜಪ್ತಿಸಬೇಕು. ಸಾರಾಂಶ, ಸ್ಮರಣ ಶಕ್ತಿಯನ್ನು ತಕ್ಕ ಮಟ್ಟಿಗಾದರೂ ಬೆಳೆಸುವದು ಇಲ್ಲವೆ ಕಡಿಮೆ ಮಾಡುವದು ನಮ್ಮ ಕಯ್ಯೊಳಗೆ ಇರುತ್ತದೆ ಎಂದೆನಲು ಏನೂ ಅಡ್ಡಿ ಇಲ್ಲ. ಸ್ಮರಣ ಶಕ್ತಿಯನ್ನು ಬೆಳೆಸುವ ಉಪಾಯಗಳಾದರೂ ತೀರ ಹಗುರಿರುತ್ತವೆ.

॥ ಬಾಲತ್ವದೊಳ್ಬಲಕನಂಸುವಿದ್ಯಾ । ಲೋಲುಪ್ತನಂ
ಮಾಡದ ತಂದೆತಾಯ್ಗಳ್ ॥
॥ ಬಾಲಂಗ ಮಿಶ್ರರ್ ಬಕರಪಕ್ಷಿಯಂತಾ । ಬಾಲಂಸಭಾ
ಹಂಸ ಸಮಾಜಕೊಪ್ಪಂ ॥
ಹಿತೋಪದೇಶಂ.

ಆದುದರಿಂದ ಚಿಕ್ಕಂದಿನಲ್ಲಿಯೇ ಈ ರೂಢಿಯನ್ನು ಅಡು
ವದು ಬಹು ಹಿತಕರವು.

ಶಾಲಾ ನೀಲಗುಂದ
ತಾಲೂಕ ಗದಗ.

ತಮ್ಮ ವಿಧೇಯಂ
ಕೃ. ಶಂ. ಇಂಗಳಿಗಿಕರ

THE DIRECTOR GENERAL.
ಡೈರೆಕ್ಟರ ಜನರಲ್ ದೊರೆಗಳು.

ಲಾರ್ಡ್ ಕರ್ಜನ್ನಸಾಹೇಬರ ಆಡಳಿತೇ ಕಾಲದ ಉತ್ತ
ರಭಾಗದಲ್ಲಿ ನಿಯಮಿಸಲ್ಪಟ್ಟ ಡಾಯರೆಕ್ಟರ ಜನರಲ್ಲರೆಂಬ
ವಿದ್ಯಾಖಾತೆಗೆ ಸೇರಿದ ಹೊಸ ಗೃಹಸ್ಥರನ್ನು ಬಹು ಜನರು
ಬಲ್ಲರು. ಇವರು ಯಾವತ್ತೂ ಹಿಂದುಸ್ಥಾನದ ವಿದ್ಯಾಖಾ
ತೆಯ ಮೇಲ್ವಿಚಾರಕರಾಗಿರುವರು. ಒಂದೊಂದು ಇಲಾ
ಖೆಗೆ ಒಬ್ಬೊಬ್ಬ ಡಾಯರೆಕ್ಟರರು ಇರುವರು. ಅವರು
ತಮ ತಮ್ಮ ಇಲಾಖೆಯಲ್ಲಿ ವಿದ್ಯವನ್ನು ಅಭಿವೃದ್ಧಿಗೊಳಿ
ಸಲಿಕ್ಕೆ ತಮಗೆ ತಮಗೆ ಸರಿತೋರಿದ ಮಾರ್ಗವನ್ನು ಕೈಕೊಂ
ಡಿರುವರು. ಅದರಿಂದ ದೇಶದೊಳಗಿನ ಬೇರೆ ಬೇರೆ ಇಲಾ
ಖೆಗಳಲ್ಲಿ ಪ್ರಾಥಮಿಕ ಮಾಧ್ಯಮಿಕ ಉಚ್ಚ ಶಿಕ್ಷಣಗಳ ಶಾ
ಲೆಗಳಲ್ಲಿ ನಡೆಯುವ ಅಭ್ಯಾಸದ ಕ್ರಮವೂ ವಿಷಯಗಳೂ
ಆ ವಿಷಯಗಳ ಪರಿಪೂರ್ಣವೂ ಭಿನ್ನ ಭಿನ್ನವಾಗಿರುವವು.
ಈ ಕಾರಣದಿಂದ ಒಂದು ಇಲಾಖೆಯ ಪದವೀಧರನು
ಬೇರೊಂದು ಇಲಾಖೆಯಲ್ಲಿ ಕಡಿಮೇ ಯೋಗ್ಯತೆಗೆ ಪಾತ್ರ
ನಾಗುವನು. ಇದಲ್ಲದೆ ಬೇರೆ ಬೇರೆ ಇಲಾಖೆಗಳಿಂದ
ಬಂದ ವಿದ್ಯಾಖಾತೆಯ ವಾರ್ಷಿಕ ರಿಪೋರ್ಟ್‌ಗಳನ್ನು ಏಕೀ
ಕರಿಸಿ ಅದರಲ್ಲಿ ಕಾಣುವ ಕುಂದುಕೊರತೆಗಳನ್ನು ಪೂರ್ಣ
ಗೊಳಿಸುವ ಉಪಾಯಗಳನ್ನು ಸೂಚಿಸುವದಕ್ಕೂ ಉತ್ತಮ

ಸಂಗತಿಗಳ ಬಗ್ಗೆ ಪ್ರೋತ್ಸಾಹನವನ್ನು ಕೊಡುವದಕ್ಕೂ ವೈಸರಾಯರಿಗೆ ನೆರವಾಗುವಂಥ ವಿದ್ಯಾಖಾತೆಯಲ್ಲಿ ನುರಿತಂಥ ಅಥವಾ ಶಿಕ್ಷಣ ಶಾಸ್ತ್ರದಲ್ಲಿ ಅಭಿಜ್ಞನಾದಂಥ ಮಂತ್ರಿ ಇಲ್ಲದಿರಂದ ಇಪ್ಪತ್ತು ದಿವಸ ತೊಂದರೆಯುಂಟಾಗುತ್ತಿತ್ತು. ಈ ತೊಂದರೆಗಳೆಲ್ಲ ಪರಿಹಾರವಾಗಬೇಕಂತಲೂ, ಶಿಕ್ಷಣ ಕಾರ್ಯದಲ್ಲಿ ಸುಧಾರಣೆಯುಂಟಾಗಬೇಕೆಂತಲೂ, ಇದೊಂದು ಸ್ಥಳವನ್ನು ಹೊಸದಾಗಿ ನಿರ್ಮಾಣ ಮಾಡಿರುವರು. ಸದಕ್ಕೆ ಈ ಸ್ಥಳದಲ್ಲಿ ಎಮ್. ಎ. ಪದವಿಯನ್ನು ಪಡೆದಂಥ ವಿಲಾಯತಿಯ ಶಾಲಾಖಾತೆಯಲ್ಲಿ ಇನಸ್ಪೆಕ್ಟರ ಕೆಲಸವನ್ನು ಮಾಡಿದಂಥ ಮಿಷಟರ್ ನ ಆರೇಂಜ ಸಾಹೇಬರೆಂಬವರು ಇರುತ್ತಾರೆ ಇವರು ವಿದ್ವಾಂಸರೂ, ಶಾಂತರೂ ನಿರಾಲಸರೂ ಸದ್ಗ್ರಹಸ್ಥರೂ ಆಗಿರುವರು.

ಈ ದೊರೆಗಳು ಹೋದ ವರುಷ ಬೇರೆ ಬೇರೆ ಇಲಾಖೆಯಲ್ಲಿ ಸಂಚಾರಮಾಡಿ, ಆಯಾ ಸ್ಥಳದಲ್ಲಿ ನಡೆಯುವ ಶಿಕ್ಷಣವನ್ನು ಶಿಕ್ಷಕರ ಯೋಗ್ಯತೆಯನ್ನು ವಿದ್ಯಾರ್ಥಿಗಳ ಗ್ರಾಹಕ ಸ್ಥಿತಿಯನ್ನು ದೇಶದ ಪರಿಸ್ಥಿತಿಯನ್ನು ನೋಡಿಕೊಂಡು ಹೋದವರು ಈ ಸಾರೆ ನಮ್ಮ ಮುಂಬಯಿ ಇಲಾಖೆಯಲ್ಲಿ ಸಂಚಾರಮಾಡಿದರು. ಮುಂಬಯಿ ಪುಣೆ ಮುಂತಾದ ಸ್ಥಳಗಳಲ್ಲಿ ಸಂಚರಿಸಿ ಕಡೆಗೆ ನಮ್ಮ ದಕ್ಷಿಣಭಾಗಕ್ಕೆ ಬಂದರು. ಮೊದಲು ಬೆಳಗಾವಿಗೆ ದಯಮಾಡಿಸಿದರು. ಅಲ್ಲಿಗೇ ನಮ್ಮ ಭಾಗದ ಎಜ್ಯುಕೇಶನಲ್ ಇನಸ್ಪೇಕ್ಟರರು ಹೋಗಿದ್ದರು ಇನಸ್ಪೇಕ್ಟರ ಸಾಹೇಬರು ಬೆಳಗಾವಿಯ ಹಾಯಸ್ಕೂಲ ಮಿಶನ್‌ಸ್ಕೂಲ ಮೊದಲಾದವುಗಳನ್ನು ತೋರಿಸಿ ಕಡೆಗೆ ಅಂದರೆ ಅಗಪ್ಟ ತಿಂಗಳ ೧೬ನೇ ತಾರೀಖಿನ ದಿವಸ ದೊರೆಗಳನ್ನು ಧಾರವಾಡಕ್ಕೆ ಕರೆತಂದರು.

ಈ ದೊರೆಗಳು ಧಾರವಾಡದಲ್ಲಿ ಒಂದುವಾರ ಇದ್ದರು. ಬಂದ ಮರುದಿವಸವೇ ಟ್ರೇನಿಂಗಕಾಲೇಜಿಕ್ಕೆ ಹೋದರು. ಕಾಲೇಜದಲ್ಲಿ ನಾಡಿಕೆಯಂತೆ ವರ್ಗಗಳಲ್ಲಿ ಶಿಕ್ಷಣವು ನಡೆ

ದಿತ್ತು. ಮಿ. ಜಮುಖಂಡಿ ಎಂಬುವರು ಪದಾರ್ಥ ವಿಜ್ಞಾನ ಶಾಸ್ತ್ರವನ್ನು ಕೆಲವೊಂದು ವರ್ಗಕ್ಕೆ ಕಲಿಸುತ್ತಿದ್ದರು. ದೊರೆಗಳು ಆ ವರ್ಗಕ್ಕೆ ಹೋಗಿ ಸ್ವಲ್ಪವಾಗಿ ಕೂತುಕೊಂಡು ಆ ತಾಸಿನವರೆಗೆ ಅವರು ಕಲಿಸುತ್ತಿದ್ದದ್ದನ್ನು ಮನಗೊಟ್ಟು ನೋಡಿದರು. ಬಳಿಕ ಇದೇ ಶಿಕ್ಷಕರು ಬೇರೊಂದು ವರ್ಗಕ್ಕೆ ಯಂತ್ರ ಶಾಸ್ತ್ರವನ್ನು ಕಲಿಸತೊಡಗಲು. ದೊರೆಗಳು ಅಲ್ಲಿಯೂ ಬಂದು ತಾಸು ಕುಳಿತುಕೊಂಡು ಶಿಕ್ಷಣವನ್ನು ಪರೀಕ್ಷಿಸಿದರು. ನಡುನಡುವೆ ಪ್ರಿನ್ಸಿಪಾಲರನ್ನು ವದ್ಧತಿಯ ಬಗ್ಗೆ ಪ್ರಶ್ನೆ ಕೇಳುವರು. ವಿಷಯ ವಿವರಣೆಯ ಸಂಬಂಧದಿಂದ ಮನವರಿಕೆ ಮಾಡಿಕೊಳ್ಳುವರು. ಬಳಿಕ ಡ್ರಾಯಿಂಗ ಕಲಿಸುವ ವರ್ಗಕ್ಕೆ ಬಂದರು ಅಲ್ಲಿ ನೀಲಿಯ ಗೋಡೆಯ ಮೇಲೆ ಖಡುವಿನಿಂದ ತೆಗೆದ ಬ್ಲ್ಯಾಕ್‌ಬೋರ್ಡ ಡ್ರಾಯಿಂಗದ ಚಿತ್ರಗಳನ್ನು ಕಂಡು ಇವುಗಳನ್ನು ವಿದ್ಯಾರ್ಥಿಗಳೇ ತೆಗೆದಿರುವರೇನೆಂಬುದನ್ನು ಕೇಳಿಕೊಂಡರು. ಆದರೂ ಅವರಿಗೆ ಸಮಾಧಾನವೆನಿಸದೆ ಅವೆಲ್ಲವುಗಳನ್ನು ಒರಿಸಹೇಳಿ ತಾವು ಬಬ್ಬೊಬ್ಬರಿಗೆ ಬಂದೊಂದು ಬೇರೆ ಬೇರೆ ಚಿತ್ರಗಳನ್ನು ತೆಗೆಯ ಹೇಳಿದರು. ಅದರಂತೆ ವಿದ್ಯಾರ್ಥಿಗಳು ತೆಗೆಯಲು, ಸಂತುಷ್ಟರಾಗಿ ಒನೇ ವರ್ಷದ ವರ್ಗದಲ್ಲಿ ರಾ॥ ಗಾ॥ ಕುಲಕರ್ಣಿಯವರು ಕಲಿಸುತ್ತಿದ್ದ ಗಣಿತಉಪಪತ್ತಿಯನ್ನು ಕೇಳುತ್ತ ಅರ್ಧ ತಾಸು ಕುಳಿತು ಹುಡುಗರಿಗೆ ವರ್ಗಮೂಲದ ಉಪಪತ್ತಿ ಕೇಳ ತೊಡಗಿದರು ಈ ವಿಷಯವು ಇನ್ನೂ ಅವರಿಗೆ ಅಗಿರದಿದ್ದರೂ ಗಣಿತಾಕಾರದ ಉಪಪತ್ತಿಯಿಂದಾದ ಜ್ಞಾನದ ಬಲದಿಂದ ವಿದ್ಯಾರ್ಥಿಗಳು ಕೊಟ್ಟ ಉತ್ತರಕ್ಕೆ ಬಹಳ ಸಮಾಧಾನ ಹೊಂದಿ ಪುನಃಶಿಕ್ಷಣಕ್ಕಾಗಿ ಬಂದ ಅಧ್ಯಾಪಕರ ವರ್ಗಕ್ಕೆ ಬಂದರು. ಅಲ್ಲಿ ಕೃಷಿಶಾಸ್ತ್ರದ ಶಿಕ್ಷಕರು ಪಾಠ ಹೇಳುತ್ತಿದ್ದರು ಅಲ್ಲಿಯೂ ಕೆಲ ಹೊತ್ತು ಕುಳಿತು ಸಮಾಧಾನಪಟ್ಟು, ಪ್ರಾಕ್ಟಿಸಿಂಗ್‌ಸ್ಕೂಲಿಗೆ ಬಂದರು. ಅಲ್ಲಿ ಬಿನ್ನ ಇಯತ್ತೆಯಲ್ಲಿ ನಡೆದ ಕಿಂಡರಗಾರ್ಟನ್ ಪಾಠಗಳನ್ನು ಅವಲೋಕಿಸುತ್ತ ಚಿಕ್ಕ ಬಾಲಕ

ಆನಂದವೃಷ್ಟಿಯನ್ನೂ ಚಾಪಲ್ಯವನ್ನೂ ಅಧ್ಯಾಪಕರ ದಕ್ಷತೆಯನ್ನೂ ಚಾತುರ್ಯವನ್ನೂ ನೋಡುತ್ತ ಎರಡನೇ ಇಯತ್ತೆಗೆ ಬಂದರು. ಅಲ್ಲಿ ಅರಿವೆಯ ಮೇಲೆ ಎಳೆಯಿಂದ ತೆಗೆದ ಗ್ರಾಮದ ನಕಾಶವನ್ನು ಆ ನಕಾಶದ ಸಂಬಂಧದಿಂದ ಹುಡುಗರ ತಿಳುವಳಿಕೆಯನ್ನು ಮನಗೊಟ್ಟು ನೋಡಿ, ಮೂರನೇ ಇಯತ್ತೆಗೆ ದಯಮಾಡಿಸಿದರು. ಆ ವರ್ಗದಲ್ಲಿ ತಾಲೂಕಿನ ನಕಾಶದ ಪ್ರತಿಮೆಯನ್ನು ಕಂಡು ನಾಲ್ಕನೆ ಇಯತ್ತೆಗೆ ಬಂದರು. ಆ ವರ್ಗದಲ್ಲಿ ಕವಿತೆಯು ನಡೆದಿತ್ತು. ಕಲಿಸುವ ಕವಿತೆಯು ಯಾತನೆಯೊಳಗಿನದೆಂದು ದೊರೆಗಳು ಕೇಳಲು, ರಾಮಾಯಣದೊಳಗಿನದೆಂದು ಉತ್ತರಿಸಿಗಲು, ಆ ಹುಡುಗರಿಗೆ ರಾಮಾಯಣದ ಸಂಬಂಧದ ಹಲವು ಸಂಗತಿಗಳನ್ನು ಕೇಳಿದರು. ವಿದ್ಯಾರ್ಥಿಗಳು ಸರಿಯಾಗಿ ಉತ್ತರ ಕೊಡಲು ಹಿಗ್ಗಿ ಮುಂದಿನ ವರ್ಗಗಳನ್ನು ನೋಡುತ್ತ ಏಳನೆಯ ಇಯತ್ತೆಗ ಬಂದರು. ಅಲ್ಲಿ ವಿದ್ಯಾರ್ಥಿಗಳಿಗೆ ದೊರೆಗಳು ಅಕ್ಷಾಂಶರೇಖಾಂಶಗಳ ಸಂಬಂಧವಾಗಿ ಅನೇಕ ಚಾತುರ್ಯದ ಪ್ರಶ್ನೆಗಳನ್ನು ಮಾಡಿದರು. ಅವುಗಳಿಗಾದರೂ ಹುಡುಗರು ಸಮರ್ಪಕವಾಗಿ ಉತ್ತರ ಕೊಟ್ಟದ್ದರಿಂದ ಸಂತುಷ್ಟರಾಗಿ ಇಳಿದ ಸ್ಥಳಕ್ಕೆ ಹೊರಟುಹೋದರು.

ಮರುದಿವಸ ಹನ್ನೆರಡು ಗಂಟೆಗೆ ಹಾಯಸ್ಕೂಲಿಗೆ ಬಂದರು. ಅಲ್ಲಿಯೂ ಯಾವತ್ತೂ ವರ್ಗಗಳಲ್ಲಿ ಹೋಗಿದ್ದರು. ಒಂದು ವರ್ಗದಲ್ಲಿ ನಿಬಂಧ ರಚನೆಯೂ, ಬೇರೊಂದು ವರ್ಗದಲ್ಲಿ ಕಾಪೀ ಬರೆಯೋಣವೂ ಮತ್ತೊಂದು ವರ್ಗದಲ್ಲಿ ವ್ಯಾಕರಣವೂ ನಡೆದಿತ್ತು. ಆಲ್ಲಿಯಾವದರೂ ನಡೆದಿರುವ ಕಲಿಸುವ ಪದ್ಧತಿಯಿಂದಲೂ, ವಿದ್ಯಾರ್ಥಿಗಳು ಕೊಟ್ಟ ಉತ್ತರದಿಂದಲೂ ಸಂತುಷ್ಟರಾದರು. ಶಾಸ್ತ್ರೀಯ ಸಂಗತಿಗಳನ್ನು ಕಲಿಸುವ ಶಿಕ್ಷಕರ ಶಿಕ್ಷಣಕ್ಕೆ ವಿಶೇಷ ಸಮಾಧಾನಪಟ್ಟು ನಾಲ್ಕು ಗಂಟೆಗೆ ಇಳಿದ ಸ್ಥಳಕ್ಕೆ ಹೋದರು.

ಮರುದಿವಸ, ಮಿಶನ್‌ಹಾಯಸ್ಕೂಲ, ವಿಕ್ಟೋರಿಯಾ

ಹೈಸ್ಕೂಲುಗಳನ್ನು ನೋಡಿಕೊಂಡು ಸವಣೂರು ಬಂದು ಗಂ
ಟಿಗೆ ಶ್ರೀನಿವಾಸ ಟ್ರೇನಿಂಗಸ್ಕೂಲಿಗೆ ದೊರೆಗಳು ಬಂದರು.
ಈ ಸಾಲೆಯಲ್ಲಿ ಎರಡು ವರ್ಗಗಳಿರುವವು. ಎರಡನೇ ವ
ರ್ಷದವರ ವರ್ಗಕ್ಕೆ ಮಾಸ್ತರರು ದಶಾಂಶದ ಉಪವತ್ತಿಯು
ನ್ನು ಕಲಿಸುತ್ತಿದ್ದರು. ಆರಂಭದಲ್ಲಿ ಸಾಲೆಯ ಸಂಬಂಧದ
ಹಲವು ಸಂಗತಿಗಳನ್ನು ಕೇಳಿಕೊಂಡರು ಬಳಿಕ ವರ್ಗದ
ಲ್ಲಿ ಯಾವ ಯಾವ ಜಾತಿಯವರಿರುವರೆಂತಲೂ, ಅವರವರ
ಆರ್ಥಿಕ ಸ್ಥಿತಿಯು ಹ್ಯಾಗಿರುತ್ತದೆಂತಲೂ ಕೇಳಿಕೊಂಡ
ಬಳಿಕ ಅಧ್ಯಾಪಕರಿಗೆ ತಮ್ಮ ಶಿಕ್ಷಣವನ್ನು ಸಾಗಿಸಲಿಕ್ಕೆ
ಹೇಳಿದರು. ಸುಮಾರು ಅರ್ಧ ಮುಕ್ಕಾಲು ತಾಸುಗಳ ವರೆಗೆ
ಕಲಿಸುವದನ್ನು ನೋಡಿದರು. ನಡು ನಡವೆ ಇನಸ್ಪೆಕ್ಟರ ಸಾ
ಹೇಬರಿಗೂ, ಪ್ರಿನ್ಸಿಪಾಲರಿಗೂ, ನಡೆದ ಶಿಕ್ಷಣದ ಸಂಬಂ
ಧದಿಂದ ಪ್ರಶ್ನ ಮಾಡುತ್ತಿದ್ದರು. ಕಡೆಗೆ ಪಾಠ ಮುಗಿದ ಬ
ಳಿಕ ಮುಂದೇನು ಕಲಿಸುವಿರಿ ಎಂದು ಕೇಳಿ ಅದಕ್ಕೆ
ತರಿಯಾದ ಉತ್ತರವು ಹೊರಡಲು, ಮೊದಲನೇ ವರ್ಷದ
ವರ್ಗಕ್ಕೆ ಬಂದರು. ಅಲ್ಲಿ ಕೈಬರಹದ ಕಾಗದಗಳನ್ನು ಓ
ದಿಸುವ ವಿಷಯವು ನಡೆದಿತ್ತು. ಅಲ್ಲಿ ತುಸು ನಿಂತು, ಅದೇ
ಪ್ರಕಾರದಲ್ಲಿರುವ ಮ್ಯುನಿಸಿಪಾಲಟಿಯ ಕನ್ನಡ ಮರಾಠಿ
ಕಿನ್ನಡ ಮಕ್ಕಳ ಕಾಲೆಗಳಲ್ಲಿ ಪ್ರವೇಶ ಮಾಡಿದರು. ಆ ಸಾಲೆ
ಯಲ್ಲಿ ಆದಾ ವರ್ಗಗಳಲ್ಲಿ ನಡೆಯುವ ಶಿಕ್ಷಣವನ್ನು ಅವ
ಲೋಕಿಸುತ್ತ ಕನ್ನಡ ಒಂದನೇ ನಂಬರ ಸಾಲೆಗೂ ಮರಾ
ಠಿ ಗಂಡು ಹುಡುಗರ ಸಾಲೆಗೂ ಭಯಮಾಡಿಸಿದರು. ಅವೆರ
ಡು ಸಾಲೆಗಳಲ್ಲಿಯೂ ದೊರೆಗಳು ಕೆಲಹೊತ್ತು ಶಿಕ್ಷಣವ
ನ್ನು ನೋಡಿಕೊಂಡು ಇಳಕೊಂಡ ಸ್ಥಳಕ್ಕೆ ಹೋದರು.

ಮರುದಿವಸ ರವಿವಾರವಿದ್ದದರಿಂದ ಸಾಹೇಬರು ಶಾಲೆಗ
ಳನ್ನು ನೋಡಲಿಲ್ಲ. ಆದರೆ ಕರ್ನಾಟಕ ವಿದ್ಯಾವರ್ಧಕ
ಸಂಘಕ್ಕೆ ಬಂದಿದ್ದರು. ಸಂಘದಲ್ಲಿ ರಾ. ಸಾ. ರೊದ್ದ ಶ್ರೀನಿವಾ
ಸರಾಯರೇ ಮ್ಯಾನೇಜಿಂಗ ಕಮಿಟಿಯ ಅಧ್ಯಕ್ಷರು ಮತ್ತು

ರಾ. ರಾ. ಕರಗುದರಿ ನಾರಾಯಣರಾಯರು ಕಾರ್ಯದರ್ಶಿಗಳು ಇವರಲ್ಲದೆ ರಾ. ಸಾ ಕಟ್ಟಿ, ಜಮುಸತ್ಯ ಬೋಧರಾವ, ವಿಭೂತಿ, ಕೆರೂರ ಮೊದಲಾದ ಮೆಂಬರರು ಅಂದು ಸಂಘಕ್ಕೆ ಬಂದಿದ್ದರು. ಸಂಘದ ಸಂಬಂಧದ ಹಲವು ಸಂಗತಿಗಳನ್ನು ಕೇಳಿಕೊಂಡರು. ಬಳಿಕ ಶ್ರೀನಿವಾಸ ರಾಯರು ಒಂದು ವಿನ್ನಹಪತ್ರವನ್ನು ಓದಿದರು ಅದರಲ್ಲಿ ದಕ್ಷಿಣಭಾಗದಲ್ಲೊಂದು ಇಂಗ್ಲೀಷ ಕಾಲೇಜ ವಿರಬೇಕೆಂತಲೂ ಈ ಸಂಸ್ಥೆಗೆ ಇನ್ನು ಇಪ್ಪು ಸರಕಾರದ ಸಹಾಯ ದೊರೆಯಬೇಕೆಂತಲೂ ಉಲ್ಲೇಖಿಸಿತ್ತು ಅದಕ್ಕೆ ಸಾಹೇಬರು ಸಮಯೋಚಿತವಾದ ಉತ್ತರವನ್ನು ಕೊಟ್ಟು ಇಳಿದ ಸ್ಥಳಕ್ಕೆ ಹೋದರು. ಮರುದಿವಸ ಸಂಘಕ್ಕೆ ೫೦ ರೂಪಾಯಿಗಳನ್ನು ಕಾಣಿಕೆಯಾಗಿ ಕಳಿಸಿಕೊಟ್ಟಲ್ಲದೆ ಈ ಸಂಸ್ಥೆಯನ್ನು ನೋಡಿ ತಮಗೆ ಸಂತೋಷವಾಯಿತೆಂಬ ಆರ್ಥದ ಪತ್ರವನ್ನು ಬರೆದರು.

ಸೋಮವಾರ ಹನ್ನೆರಡು ಗಂಟೆಗೆ ಮತ್ತೆ ಕಾಲೇಜಕ್ಕೆ ಬಂದರು. ಪ್ರಿನ್ಸಿಪಾಲರು ತಮ್ಮಲ್ಲಿ ನಡೆಯುವ ಟೀಕಾಪಾಠದ ಪದ್ಧತಿಯನ್ನು ತೋರಿಸಲಿಕ್ಕೆ ಕರೆತಂದಿದ್ದರು. ಅಂದು ವರ್ಗದಲ್ಲಿ ಆವರ್ತದಶಾಂಶವನ್ನೂ, ಗಂಗಾನದಿಯನ್ನೂ ಕಲಿಸುವದಿತ್ತು ಮೆ. ವೆಲ್ಪನ್ ಸಾಹೇಬರು, ಟೀಕಾ ಪಾಠವು ನಡೆದಾಗ ಯಾವತತ್ವಗಳನ್ನನುಸರಿಸಿ ಟೀಕೆಯನ್ನು ತೆಗೆಯಬೇಕೆಂಬ ಬಗ್ಗೆ ಬರೆದ ಪುಸ್ತಕವನ್ನು ವಿದ್ಯಾರ್ಥಿಗಳು ಹಿಡಕೊಂಡು ಆತತ್ವಕ್ಕನುಸರಿಸಿ ಟೀಕೆಯನ್ನು ತೆಗೆಯುತ್ತಿದ್ದರು. ಕಲಿಸುವ ವಿಷಯಗಳು ಮುಗಿದ ಬಳಿಕ ದೊಡ್ಡ ಗಳು ಹುಡುಗರಿಗೆ ಗಂಗಾನದಿಯು ಹರಿಯುವ ಪ್ರದೇಶದ ನಕಾಶವನ್ನು ತೆಗೆಯಲಿಕ್ಕೆ ಹೇಳಿದರು. ಹಾಗೂ ಆರ್ಲನಿಂದ ಆಪ್ರದೇಶದ ಪ್ರತಿಮೆಯನ್ನು ಮಾಡ ಹೇಳಿದರು. ವಿದ್ಯಾರ್ಥಿಗಳು ಮಾಡಿದರು. ಟೀಕೆಗೆ ಪ್ರಾರಂಭವಾಯಿತು. ಆ ಆವೇಶದ ಟೀಕೆಯನ್ನು ಕಂಡು ದೊರೆಗಳು "ನೀವು ಇದಕ್ಕೂ ಸರಸಾಗಿ ಕಲಿಸಬಹುದೆಂದು ನಿಮ್ಮ ಟೀಕೆಯಿಂದಲೂ

ಯಾದುಬನಂಬಲೂ ತೋರುವದು. ನಾನು ಬುಧವಾರ ದಿವಸ ಬರುವೆನು, ಅಂದು. ಇನ್ನೊಮ್ಮೆ ಗಂಗಾ ನದಿಯನ್ನು ಕಲಿಸಿರಿ, ಎಂದು ಹೇಳಿ ಬಿಡಾರಕ್ಕೆ ಹೋದರು.

ಮಂಗಳವಾರ ತಾರೀಖು ಎಂಟನೇ ದಿವಸ ದೊರೆಗಳು ನರೇಂದ್ರಕ್ಕೆ ಹೋದರು. ಧಾರವಾಡವು ನಗರವು. ಆದ್ದರಿಂದ ಅಲ್ಲಿಯ ಸಾಲೆಗಳಲ್ಲಿ ನಾಗರಿಕತ್ವವನ್ನು ಕಾಣುವದು ಅರಿದಲ್ಲ. ಹಳ್ಳಿಯಲ್ಲಿ ಎರಡು ಮೂರು ಇಯತ್ತೆಗಳನ್ನು ಒಬ್ಬೊಬ್ಬ ಶಿಕ್ಷಕನು ಹ್ಯಾಗೆ ಕಲಿಸತ್ತಾನೆಂಬದನ್ನು ಅವರು ಮನಗಾಣಬೇಕಾಗಿತ್ತು. ಅದಕ್ಕಾಗಿ ಮೋಹಬಾನ್ ಇನಸ್ಪೆಕ್ಟರ ಸಾಹೇಬರೂ, ರಾವಸಾಹೇಬ ಡಿಪ್ಯೂಟಿ ಇನಸ್ಪೆಕ್ಟರರೂ ಅವರ ಗನೇ ಅಸಿಸ್ಟಂಟರಾದ ಮಿ. ಪಠಾಣ ಸಾಹೇಬರೂ ಕೂಡಿಕೊಂಡು ದೊರೆಗಳನ್ನು ನರೇಂದ್ರಕ್ಕೆ ಕರಕೊಂಡು ಹೋಗಿದ್ದರು ಆ ಶಾಲೆಯಲ್ಲಿ ಆರು ವರ್ಗಗಳಿದ್ದವು. ಕಲಿಸುವವರು ಮೂರೇ ಮಂದಿ. ಅಲ್ಲಿಯೂ ಎಲ್ಲ ವರ್ಗಗಳನ್ನು ಕೆಲಸದಲ್ಲಿ ತೊಡಗಿಸುವಂತೆ ಬಚೆಲ್ಲಟ್ಟ ವೇಳಾಪತ್ರಕ್ಕನುಸರಿಸಿಕಲಿಸತೋರಿಸಿದ ಲೋಹಚುಂಬಕ ಹತ್ತಿ ಇವೆಂಡು ಪಾಠಗಳನ್ನು ನೋಡಿ ಸಮಾಧಾನಪಟ್ಟರು. ದೊರೆಗಳು ಸ್ವತಃ ಗಣಿತದ ಕೆಲವು ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ವಿದ್ಯಾರ್ಥಿಗಳು ಸರಿಯಾಗಿ ಉತ್ತರವನ್ನು ಕೊಡಲು ಸಂತುಷ್ಟರಾಗಿ, ಶಾಲೆಗೆ ಐದು ರೂಪಾಯಿಗಳನ್ನು ಮಂಜೂರ್ ಗೊಟ್ಟು ವ್ಹಿಜಿಟರ್ಸ ಬುಕ್ಕಿನಲ್ಲಿ ಶಾಲೆಯನ್ನೂ ನಡದ ಶಿಕ್ಷಣವನ್ನೂ ನೋಡಿ ತಮಗಾದ ಸಂತೋಷ ವ್ಯಕ್ತಗೊಳಿಸುವ ಅಭಿಪ್ರಾಯವನ್ನು ಬರೆದು ಧಾರವಾಡಕ್ಕೆ ಬಂದರು.

ಬುಧವಾರ ದಿವಸ ಮುಂಜಾವಿನಲ್ಲಿ ಧಾರವಾಡದೊಳಗಿನ ಕೆಲವು ಪ್ರಾಥಮಿಕ ಶಾಲೆಗಳನ್ನು ನೋಡಿ ಒಂದು ಘಂಟೆಗೆ ಸರಿಯಾಗಿ ಮೆ. ಕಲೆಕ್ಟರ ದೊರೆಗಳೊಡನೆ ಕಾಲೇಜಕ್ಕೆ ಬಂದರು. ಅಲ್ಲಿ ಅಂಗಳದಲಿ ವಾದ್ಯಗ

ಳಿಂದೊಡಗೂಡಿ ನಡೆದಂಥ ಪ್ರಾಕ್ಟಿಸಿಂಗಸ್ಕೂಲ ವಿದ್ಯಾರ್ಥಿ
ಗಳ ಈಶಸ್ತವನವನ್ನು ಕೇಳಿದ ಬಳಿಕ, ನಾಲ್ಕನೆ ಆ
ಯತ್ತೆಯ ಹುಡುಗರಿಂದ ಪ್ರತ್ಯಕ್ಷವಾಗಿ ಭೂಮಿಯನ್ನು
ಅಳಿಸಿ ಕ್ಷೇತ್ರಜ್ಞಾನವು ವಿದ್ಯಾರ್ಥಿಗಳಿಗೆ ಸರಿಯಾಗಿ ಆ
ರುವದೆಂದು ಮನಗಂಡು, ಕಾಲೇಜದ ವಿದ್ಯಾರ್ಥಿಗಳ
ಒಂದೇ ಮಾದರಿಯ ಪೋಷಾಕಿನಿಂದ ಮಾಡಿದ ಡ್ರಿಲ್ಲನ್ನು
ನೋಡಿ ಟೀಕಾಪಾಠದ ವರ್ಗಕ್ಕೆ ಬಂದರು. ಅಲ್ಲಿ ಗಂಗಾ
ನದಿಯು ಹರಿಯುವ ಪ್ರದೇಶದ ಪ್ರತಿಮೆಯ ಸಹಾಯದಿಂದ
ಲೂ ನಕಾಶದ ಸಹಾಯದಿಂದಲೂ, ಕಲಿಸಿದ "ಗಂಗಾನದಿ"
ಎಂಬ ವಿಷಯವನ್ನು ಶಾಂತ ಮನಸಿನಿಂದ ನೋಡಿದರು. ನ
ಡು ನಡುವೆ ಪ್ರಿನ್ಸಿಪಾಲರನ್ನು ಪ್ರಶ್ನವಾಡಿ ತಿಳಕೊಳ್ಳುತ್ತಿ
ದ್ದರು. ಇಷ್ಟಾದ ಬಳಿಕ ಪ್ರಾಕ್ಟಿಂಗಸ್ಕೂಲ ಅಸಿಸ್ಟಂಟನಾ
ಮಿ. ಸಾವಕಾರ ಎಂಬವರು ವಾದ್ಯದೊಡನೆ ತಾವು ರಚಿಸಿ
ದ ದೊರೆಗಳ ಸ್ತುತಿಪರವಾದ ಪದ್ಯವನ್ನೆಂದರು. ತರುವಾ
ಯ ಪ್ರಿನ್ಸಿಪಾಲರು ದೊರೆಗಳಿಗೂ ಇನಸ್ಪೆಕ್ಟರ ಸಾಹೇಬರ
ವರಿಗೂ ಪುಷ್ಪಮಾಲಿಕೆಯಿಂದ ಸತ್ಕರಿಸಿದರು. ನಂತರ
ಸಾಹೇಬರು ಕಲೆಕ್ಟರ ದೊರೆಗಳವರೆ ಬಂಗಲೆಗೆ ಹೋಗಿ
ಅಂದೇ ಐದು ಗಂಟೆಯ ಗಾಡಿಗೆ ವಿಜಾಪೂರಕ್ಕೆ ದಯಮಾಡಿ
ಸಿದರು.

ಇವರು ನೋಡಿದ ಬಹುತರ ಯಾವತ್ತೂ ಸಾಲೆಗಳ
ವ್ಹಿಜಿಟರ್ಸ ಬುಕ್ಕಿನಲ್ಲಿ ತಮ್ಮ ಅಭಿಪ್ರಾಯವನ್ನು ಬರೆದಿರು
ವರು. ಒಟ್ಟಿಗೆ ಸಾಹೇಬರು ದಕ್ಷಿಣಭಾಗದಲ್ಲಿ ನಡೆಯು
ವ ಪ್ರಾಥಮಿಕ ಮಾಧ್ಯಮಿಕ, ಉಚ್ಚ ಪ್ರತಿಯ ಶಿಕ್ಷಣದ ಪ್ರ
ಗತಿಯನ್ನೂ ಕಲಿಸುವ ಪದ್ಧತಿಯಲ್ಲಿ ತೋರಿಬಂದ ಸುಧಾರ
ಣೆಯನ್ನೂ ಕಂಡು ತೃಪ್ತರಾದರೆಂದು ಹೇಳಲಿಕ್ಕೆ ಅಡ
ಯಿಲ.

SUITABLE FOOD

ಪಥ್ಯಾಹಾರವು.

ಜೀನೆಗೆ ಮೂಲಕಾರಣವು ಅಪೆಚೆನೆವು. ಅಪೆಚೆನೆಕ್ಕೆ
ು ಮೂಲಕಾರಣವು ಮಿತಿವಿಾರಿ ಅನ್ನ ಗ್ರಹಣವೂ ಅಥವಾ
ುಷ್ಟ ಪದಾರ್ಥಗಳ ಸೇವನೆವೂ ಆಗಿರುವದು. ಕೆಲವೊಂ
ು ಪದಾರ್ಥವನ್ನು ನಾವು ಒಂದು ರೂಪದಿಂದ ತಿಂದರೆ ಅ
ರಿಂದ ಪಚನಕಾರ್ಯವು ಸರಿಯಾಗಿ ಸಾಗಿ ರಕ್ತ ವೃದ್ಧಿ
ಾಗುವದು. ಆದರೆ ಅದೇ ಪದಾರ್ಥವನ್ನು ಬೇರೊಂದು
ಾಗೆಯಿಂದ ತಿಂದರೆ ಪಚನ ಕಾರ್ಯವು ಸರಿಯಾಗಿ ಸಾಗು
ದಿಲ್ಲ. ರಕ್ತ ವೃದ್ಧಿಯು ಮಾತಂತೂ ದೂರತೋಪಾಸ್ತ
ೇ ಸರಿ.

ರಸಾಯನ ವಿದ್ಯುತ್ತನ್ನು ಹುಟ್ಟಿಸುವ ಬ್ಯಾಟರಿಯೆಂಬ
ುಂತ್ರವನ್ನು ಎಲ್ಲರೂ ಬಲ್ಲರು. ಈ ಯಂತ್ರದಲ್ಲಿ ಗಂಧ
ಾವ್ಲ ಸತುವುಗಳನ್ನು ಉಪಯೋಗಿಸುವದು ಎಲ್ಲರಿಗೂ
ೊತ್ತುಂಟು. ಆದರೆ ಆ ಸತುವಿನ ತಗಡಿಗೆ ಬದಲಾಗಿ ಆ
ರೆ ಜೂರನ್ನು ಹಾಕಿದರೆ ವಿದ್ಯುತ್ತು ಉತ್ಪನ್ನವಾಗದು' ಇ
ೇ ತತ್ವವೇ ಮನುಷ್ಯನ ಅನ್ನಕ್ಕೂ ಸಂಬಂಧಿಸಿರುವಡು.

ಆಹಾರದಲ್ಲಿ ಹವೆಯೇ ಮೇಲಾದಂಥ ಮೊದಲನೇ ಪದಾ
ರ್ಥವೆಂದು ನಿರ್ವಿವಾದವಾಗಿ ಹೇಳಬಹುದು. ಆದರೆ ದು
ಷ್ಟ ಹವೆಯು ಪ್ರಾಣಿಗಳ ಶರೀರದಲ್ಲಿ ಸೇರಿದರೆ ಅದು ಶರೀ
ರವನ್ನು ಬಹು ಬೇಗನೆ ಜೀನೆಗೆ ಒಳಗಾಗುವಂತೆ ಮಾಡು
ುದು. ಆದರೆ ಇತರ ದುಷ್ಟ ಆಹಾರಗಳಿಂದ ಇಷ್ಟು
ೀಗನೆ ದುಷ್ಟ ಪರಿಣಾಮವು ಉಂಟಾದದ್ದು ಗೋಚರ
ಾಗದು.

ಅನ್ನ ಪಚನವು ಸರಿಯಾಗಿ ಸಾಗದ್ದರಿಂದ ಉಂಟಾಗುವ
ು ಕೆಲವು ಪರಿಣಾಮಗಳ ಉದಾಹರಣೆಯನ್ನು ಇಲ್ಲಿ ಉ
ಲ್ಲೇಖಿಸಿದರೆ ಅಪ್ರಾಸಂಗಿಕವಾಗದು. ಕೆಲವು ಜನರು ಆ
ಾಹಾರಿತಳಾಗಿದ್ದರೂ ದಿನವೊಂದಕ್ಕೆ ಸ್ಥೂಲಕಾಯರಾಗು

ತ್ತಾರೆ ಇವರಲ್ಲಿ ಅನ್ನದಿಂದ ಪೋಷಕ ರಸವು ಪ್ರಮಾಣಕ್ಕಿಂತ ಹೆಚ್ಚು ಉತ್ಪನ್ನವಾಗುತ್ತದೆ. ಅದೇ ಬೇರೆ ಕೆಲವರು ನಿತ್ಯದಲ್ಲಿ ಬೇಕಾದಷ್ಟು ಪೌಷ್ಟಿಕ ಆಹಾರವನ್ನು ತಕ್ಕೊಳ್ಳುತ್ತಿದ್ದರೂ ಅವರು ದಿನ ದಿನಕ್ಕೆ ಸೊರಗುತ್ತಿವರು. ಇಂಥವರ ಶರೀರದಲ್ಲಿ ಪೋಷಕ ರಸವನ್ನು ಹೀರಿಕೊಳ್ಳುವ ಸಾಮರ್ಥ್ಯವು ತೀರ ಕಡಿಮೆ ಇರುತ್ತದೆ. ಆದ್ದರಿಂದ ಉಂಡ ಅನ್ನವು ಪೂರ್ಣವಾಗಿ ಪಚನವಾಗದೆ ಅಧೋದ್ವಾರದಿಂದ ಕಡೆಗೆ ಬಿದ್ದು ಹೋಗುತ್ತದೆ. ಕೆಲವರು ನಾವು ಪುಷ್ಕಳ ಅನ್ನವನ್ನು ಉಣ್ಣುತ್ತೇವೆ. ಗಟ್ಟಿ ಮುಟ್ಟು ಇದ್ದೇವೆ ಎಂದು ಹೇಳುತ್ತಾರೆ. ಆದರೆ ಇದು ತೀರ ತಪ್ಪು ತಿಳುವಳಿಕೆಯು.

ಮೇಲೆ ಹೇಳಿದ ಎರಡು ತರದ ಮನುಷ್ಯರ ಪಚನ ಕ್ರಿಯೆಯು ಸರಿಯಾಗಿ ಸಾಗುತ್ತಿರುವದಿಲ್ಲೆಂದು ನಿರ್ಬಾಧವಾಗಿ ಹೇಳಬಹುದು. ಇದೇ ದೋಷಯುಕ್ತ ಪಚನ ಕ್ರಿಯೆಯ ಪರಿಣಾಮವು

ಕೆಲಜನ ಪಂಡಿತರು ಬೇಳೆ, ಮಾಂಸ, ಕಾಫಿ, ಮುಂತಾದ ಜಡ ಪದಾರ್ಥಗಳು ಪೌಷ್ಟಿಕ ಆಹಾರವೆಂದು ಪ್ರತಿಪಾದಿಸುತ್ತಾರೆ. ಇವು ಪಚನವಾಗಲಿಕ್ಕೆ ಕಾಲವೂ ವ್ಯಾಯಾಮವೂ ಹೆಚ್ಚು ಬೇಕಾಗುವವು ಆದರೆ ತೀರ ಬೇಗನೆ ಪಚನವಾಗುವಂಥ ಶರೀರ ಪೋಷಣಕ್ಕೆ ಉಪಯುಕ್ತವಾಗುವಂಥ ಅನ್ನವೇ ಹಿತಕರ ವಾದದ್ದೆಂದು ನಮ್ಮ ಅಭಿಪ್ರಾಯ ಉಂಟು. ಜಡಾನ್ನವು ಪಚನವಾಗಲಿಕ್ಕೆ ಹೆಚ್ಚು ಕಾಲಬೇಕೆಂಬದು ಸ್ಪಷ್ಟವಷ್ಟೇ ಆದರೆ ಮನುಷ್ಯರಲ್ಲಿ ಹಾಳು ತಿಂಡಿ ಅನ್ನವು ಪೂರ್ಣವಾಗಿ ಪಚನವಾಗುವವರೆಗೆ ಆಹಾರವನ್ನು ತಕ್ಕೊಳ್ಳ ಕೂಡದೆಂದು ನಿಬಂಧ ಮಾಡಿ ಕೊಂಡವರು ಅಪರೂಪ. ಅಲ್ಪಕಾಲದಲ್ಲಿ ಪಚನವಾಗುವ ಆಹಾರವನ್ನು ಸೇವಿಸುವದರಿಂದ ಅಪಚನವಾಗುವ ಭಯವು ದೂರಾಗುವದು ಅಪಚನವೇ ರೋಗದ ಮೂಲ ಬೀಜವೆಂದು ಹಿಂದೆ ಹೇಳಿ

ಲಘು ಆಹಾರಂಗಳಲ್ಲಿ ಪೂರ್ಣ ಪಕ್ವವಾಗದ ಫಲಗಳೇ ಮೇಲಾದವುಗಳೆಂದು ನನ್ನ ಅಭಿಪ್ರಾಯವುಂಟು. ಅಪಕ್ವವಾಗಿದ್ದಾಗ ತಿನ್ನಲಿಕ್ಕೆ ರುಚಿಯಾಗಿರುವಾಗ ಫಲಗಳು ಪೌಷ್ಟಿಕ ವಿರುವವು ನಾವು ಉಪ್ಪು, ಕಾರ, ಹುಳಿ ಮೊದಲಾದವುಗಳನ್ನು ಹಾಕಿ ಬೇಯಿಸಿ ಬಾಯಿಗೆ ರುಚಿಮಾಡಿಕೊಂಡು ತಿನ್ನುವ ಪದಾರ್ಥಕ್ಕಿಂತ ಈ ಅಪಕ್ವ ಫಲಗಳು ಹೆಚ್ಚು ಹಿತಕರವಾಗಿರುವವು. ಮಾಂಸ ಮೊದಲಾದವುಗಳು ಅಪಕ್ವ ಸ್ಥಿತಿಯಲ್ಲಿರುವಾಗ ತಿನ್ನಲಿಕ್ಕೆ ಹೇಸಿಕೆಯನ್ನು ಉಂಟುಮಾಡುವವು. ಆದ್ದರಿಂದ ಮನುಷ್ಯನ ಕೃತಿಯಿಂದ ಪಕ್ವಮಾಡಿಕೊಂಡು ತಿನ್ನುವ ಈ ಸವಿಗೂಳಿನ ಒಡವೆಗಳು ಅಪಾಯಕರವೆಂದು ಹೇಳಬಹುದು ಪೂರ್ಣ ಪಕ್ವವಾದ ಫಲಗಳಿಗಿಂತ ದೋರೆಯಾಗಿರುವ ಫಲಗಳು ಬೇಗನೆ ಪಚನವಾಗುತ್ತವೆ. ಕಸುಗಾಯಿಗಳನ್ನು ತಿಂದರೆ ಅಪಚನವಾಗಿ ಆ ಮಾಂಶವಾಗುತ್ತದೆಂದು ಕೆಲ ಜನರ ತಿಳುವಳಿಕೆಯುಂಟು. ಆದರೆ ಇದು ತಪ್ಪು ಗ್ರಹಿಕೆ ಎಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಬೆಕ್ಕು, ನಾಯಿ ಮುಂತಾದವುಗಳು ಎಳೆಕರಿಕೆಯನ್ನು ಅಥವಾ ಹುಲ್ಲು ತಿನ್ನುವದನ್ನು ನೀವು ನೋಡಿರಬಹುದು. ಅವು ಹೊಟ್ಟೆ ಕಡಿದು ಹತ್ತಿದ ಕೂಡಲೆ ಇದನ್ನು ತಿಂದು ವಮನ ಮಾಡಿಕೊಳ್ಳುತ್ತವೆ. ಇಲ್ಲವೆ ಮಲವಿಸರ್ಜನೆ ಮಾಡುತ್ತವೆ; ಎಂದು ಹಿರಿಯರು ಹೇಳುವ ಮಾತುಗಳನ್ನಾದರೂ ನೀವು ಕೇಳಿರಬಹುದು. ಇದೇನು ಸುಳ್ಳಲ್ಲ. ಅವು ತಿಂದ ಅನ್ನವು ಜಡತ್ವದಿಂದ ಪಚನವಾಗದೆ ಹೊಟ್ಟೆಯನ್ನು ಕೆಡಿಸಲು, ಅವು ತೀವ್ರ ಪಚನವಾಗುವ ಹಸಿ ಹುಲ್ಲನ್ನು ತಿನ್ನುತ್ತವೆ. ಈ ಹುಲ್ಲು ತೀವ್ರ ಪಚನವಾಗಿ ಅನ್ನಾಶಯದಿಂದ ಬೇಗನೆ ಹೊರಬಿದ್ದು ಕರುಳುಗಳಲ್ಲಿ ಬರುತ್ತದೆ. ಬರುವಾಗ ಆ ಜಡಾನ್ನದ ರಸವನ್ನು ಮೆಲ್ಲ ಮೆಲ್ಲನೆ ಅಲ್ಪ ಪ್ರಮಾಣದಿಂದ ಅನ್ನಾಶಯದಿಂದ ಕರುಳಿಗೆಎಳೆದು ತರುತ್ತದೆ ಅದರಿಂದ ಅವುಗಳ ಅಪಚನ ರೋಗವು ದೂರಾಗುವದು ಈ ತತ್ವವನ್ನು ಯಾವಾಗಲೂ ಅಪಚನ ರೋಗದಿಂದ ಪೀಡಿತರಾದ

ಸ್ತ್ರೀ, ಪುರುಷರು ಚನ್ನಾಗಿ ಧ್ಯಾನದಲ್ಲಿಟ್ಟು ಅಂಥ ಪ್ರಸಂಗದಲ್ಲಿ ಅಥವಾ ನಿತ್ಯದಲ್ಲಿ ತುಂಬಾ ಹಣ್ಣಾದ ಫಲಗಳಿಗೆ ಬದಲಾಗಿ ಹೋರೆಗಾಯಿಯ ಮೇಲಿರುವ ಫಲಗಳನ್ನು ತಿನ್ನತಕ್ಕದ್ದು.

ಧಾನ್ಯಗಳಿಂದ ಬೇರೆ ಬೇರೆ ಪದಾರ್ಥಗಳನ್ನು ಮಾಡಿಕೊಂಡು ತಿನ್ನುವದಕ್ಕಿಂತ ಅವುಗಳನ್ನು ಹಾಗೇ ತಿನ್ನುವದು ಹೆಚ್ಚು ಹಿತಕರವು ಯಾಕಂದರೆ ಅಂಥಾ ಧಾನ್ಯಗಳನ್ನು ತಿನ್ನುವಾಗ ಹೆಚ್ಚು ಬಾಯಾಡಿಸುವದರಿಂದ ಅವು ಸಣ್ಣಾಗುವದಲ್ಲದೆ ಲಾಲಾ ಗ್ರಂಥಿಕೋಶಗಳಿಂದ ಉತ್ಪನ್ನವಾಗುವ ಪಾಚಕರಸವೂ ಹೆಚ್ಚು ದೊರೆಯುತ್ತದೆ. ಇಷ್ಟೇ ಅಲ್ಲ ಆ ಧಾನ್ಯದ ಮೇಲಿನ ಕವಚವು ಪಚನ ಕ್ರಿಯಕ್ಕೆ ಮೇಲಾದ ಸಹಾಯಕಾರಿ ಆಗಿರುತ್ತದೆ.

ಅರ್ವಾಚೀನ ಪಂಡಿತರಲ್ಲಿ ಕೆಲವರು ಮನುಷ್ಯ ಪ್ರಾಣಿಯು ಹಲ್ಲುಗಳ ರಚನೆಯಿಂದ ಅವನು ಉದ್ಭಿಜ್ಜ ಹಾಗು ಮಾಂಸ ಈ ಎರಡೂ ಬಗೆಯ ಆಹಾರವನ್ನು ಸೇವಿಸಲು ಅರ್ಹನಿರುತ್ತಾನೆಂದು ಪ್ರತಿಪಾದಿಸುವರು. ಆದರೆ ಈ ಮಾತು ವಿಚಾರದಿಂದ ಎಷ್ಟರ ಮಟ್ಟಿಗೆ ದಿಟವಾಗಿರುವದೆಂಬದನ್ನು ಮುಂದಿನ ಸಾರೆ ವಿಚಾರಿಸುವೆವು.

DEPARTMENTAL NOTICE.

ನೋಟೀಸುಗಳು.

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಬರುವ ನವೆಂಬರ ತಿಂಗಳ ೨೫ನೇ ತಾರೀಖು ಶುಕ್ರವಾರ ಕಾರ್ತಿಕ (ವದ್ಯ ೧೩) ಕನ್ನಡ ೩ನೇ ಇಯತ್ತೆಯಂತೆ ಆಗುವದು. ಪರೀಕ್ಷೆಗೆ ಬರುವವರು ೨ನೇ ಅಥವಾ ೩ನೇ ಗ್ರೇಡ ಮುಲ್ಕೀ ಸರಟೀಫಿಕೇಟ ಪಡೆದವರು ಇಲ್ಲವೆ ಯುನಿವರ್ಸಿಟಿ ಪರೀಕ್ಷೆಯಲ್ಲಿ ಪಾಸಾದವರು (ಅಂದರೆ ಫಾಯನಲ್, ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ಕೊಟ್ಟವರು) ಸಹ

ಕ್ತರೂ, ವ್ಯಂಗ ರಹಿತರೂ ತಕ್ಕ ಮಟ್ಟಿಗೆ ಎತ್ತರ ಇರುವಂ
ಥವರೂ, ೧೭ರ ಮೇಲೆ ೨೦ರ ಒಳಗೆ ವಯಸ್ಸುಳ್ಳವರೂ
ಇರಬೇಕು. ಅವರು ವಯಸ್ಸಿನ ದಾಖಲೆಯನ್ನು ಮುಲ್ಕೀ
ಸರ್ಟೀ ಫಿಕೇಟನ್ನೂ ಸಂಗಡ ತೆಗೆದುಕೊಂಡು ತಾರೀಖು೨೦ನೇ
ನವಂಬರ ಒಳಗಾಗಿ ನಮ್ಮ ಕಡೆಗೆ ಬಂದು ಹಾಜರಾಗಬೇ
ಕು ಪರೀಕ್ಷೆಗೆ ಬರರುವವರು ಅಸಿಸ್ಟಂಟರೇ ಇರಲಿ ಉ
ಮೇದವಾರರೇ ಇರಲಿ ಅವರಲ್ಲಿ ಉತ್ತಮ ರೀತಿಯಿಂದ ಪಾ
ಸಾದ ಜನರನ್ನು ವಿದ್ಯಾರ್ಥಿಗಳಾಗಿ ತೆಗೆದು ಕೊಳ್ಳುವೆವು.

ಪರೀಕ್ಷೆಗೆ ಬರುವ ಎಲ್ಲ ಉಮೇದವಾರರು ಬಿನ್ ಇಯು
ತ್ತೆಯ ಅಂಕಲಿಪಿ ಮೊದಲ್ಗೊಂಡು ೩ನೇ ಇಯತ್ತೆಯ ವರೆ
ಗೆ ಇರುವ ಯಾವತ್ತೂ ಪುಸ್ತಕಗಳನ್ನು ಚೆನ್ನಾಗಿ ಓದಿ ಮು
ನನೆ ಮಾಡಿಕೊಂಡು ಬರಬೇಕು. ಕಾಲೇಜದಲ್ಲಿ ಸೇರಿಸಿ
ಕೊಳ್ಳಲ್ಪಟ್ಟವರು ದಸ್ತ್ಯೆವಜಗಳನ್ನು ಬರಕೊಡಬೇಕಾಗು
ತ್ತದಪ್ಪೇ ಅದಕ್ಕೆ ೧೫೦ ರೂಪಾಯಿಗಳ ಲಾಯಖಿಯುಳ್ಳ
ಇಬ್ಬರು ಜಾಮೀನದಾರರು ಬೇಕಾಗುವರು. ಅವರನ್ನು
ಸಹ ಗೊತ್ತು ಮಾಡಿಕೊಂಡು ಬರಬೇಕು. ಅಂದರೆಕಾ
ಲೇಜದಲ್ಲಿ ಸೇರಿಸಿಕೊಂಡ ಕೂಡಲೆ ಕಾಲೇಜದ ನಿಯಮು
ಗಳಿಗನುಸರಿಸಿ ಕರಾರ ಪತ್ರ ಬರಕೊಡಲಿಕ್ಕೆ ಅನುಕೂಲ
ವಾಗುವದು. ಕಾಲೇಜದಲ್ಲಿ ನಿಂತವರು ಕಾಲೇಜದ ನಿಯ
ಮದಂತೆ ಅಡವ್ಹಾನ್ಸು ೧೦ ರೂ. ಸ್ಟ್ಯಾಂಪಿಗಾಗಿ ೧ - ೪ - ೦
ಡ್ರಾಯಿಂಗ ಸಾಮಾನಕ್ಕಾಗಿ ೧ರೂ. ಇಷ್ಟು ಹಣವನ್ನು ಕೊ
ಡಬೇಕಾಗುವದು. ಈ ಹಣವನ್ನೂ ತಮ್ಮ ಖರ್ಚು ನೆ
ಚ್ಚಿಕ್ಕಾಗಿ ಬೇಕಾಗುವ ಹಣವನ್ನೂ ತೆಗೆದುಕೊಂಡು ಬರ
ಬೇಕು.

೦ ಹೊದ್ದುಕೊಳ್ಳಲಿಕ್ಕೂ ಹಾಸಿಕೊಳ್ಳಲಿಕ್ಕೂ ತರುವ ಅ
ರಿವೆಗಳಲ್ಲಿ ೦ ಬೆಚ್ಚಗಾದ ಉಣ್ಣೀ ಅಂಗಿಗಳೂ ೧ ಜಡವಾ
ದ ಹಚ್ಚಡವೂ ೦ ಕಂಬಳಿಗಳೂ ಅವಶ್ಯವಾಗಿ ಇರಬೇಕು
ಉಣ್ಣೀ ಅಂಗಿಗಳನ್ನು ಬೇಕಾದರೆ ನಾವು ಇಲ್ಲಿ (ಅವರ
ಯೋಗ್ಯ ಖರ್ಚು ಕೊಟ್ಟಲ್ಲಿ) ಮಾಡಿಸಿ ಕೊಡುವೆವು. ಅವರಿ

ಗೆ ಕ್ಲಾಸಿನಲ್ಲಿ ಹಾಕಲಿಕ್ಕೆ ಯೋಗ್ಯವಾದ ಪೋಷಾಕು ಇರ ಬೇಕು. ಬಿಚ್ಚು ಕೊಟ್ಟರೆ ಇಂಥ ಪೋಷಾಕುಗಳನ್ನುವಾ ಡಿ ಕೊಡುವೆವು. ತಿಳಿಯುವದು.

ಟ್ರೇನಿಂಗ ಕಾಲೇಜ ಧಾರವಾಡ ತಾ॥ ೮ನೇ ಅಗಷ್ಟ ೧೯೦೫ ಇಸ್ವಿ. } S. K. RODDA. *Principal Training College* DHARWAR.

II

ಕಾಲೇಜದ ವಾರ್ಷಿಕ ಪರೀಕ್ಷೆಯು ಅಕ್ಟೋಬರ ೨ನೇ ತಾರೀಖಿಗೆ ಪ್ರಾರಂಭವಾಗುವದು. ಹೊರಗಿನಿಂದ ಪರೀ ಕ್ಷೆಗೆ ಬರಲಪೇಕ್ಷಿಸುವ ಜನರು ಮೆ॥ ಎ॥ ಇ॥ ಪಕ್ಷಿಣಭಾ ಷ ಇವರ ಅಪ್ಪಣೆ ಪಡಕೊಂಡು ಪರೀಕ್ಷೆಗಿಂತ ಒಂದೆರಡು ದಿವಸ ಮುಂಚಿತವಾಗಿಯೇ ಬಂದು ನಮಗೆ ಭೆಟ್ಟಿಯಾಗ ಬೇಕು.

ತಾ॥ ೮ನೇ ಅಗಷ್ಟ ೧೯೦೫ ಸನ್ ಇಸ್ವಿ. } S. K RODDA. *Principla, Training College* DHARWAR.

III

ಹೆಣ್ಣುಮಕ್ಕಳ ಟ್ರೇನಿಂಗ ಸ್ಕೂಲ ಪ್ರವೇಶ ಪರೀಕ್ಷೆಯು ಬರುವ ನವಂಬರ ತಿಂಗಳ ೭ನೇ ತಾರೀಖಿಗೆ ಪ್ರಾರಂ ಭವಾಗುವದು. ಪರೀಕ್ಷೆಗೆ ಬರಲಪೇಕ್ಷಿಸುವಹೆಣ್ಣುಮಕ್ಕಳು ೫ನೇ ಇಯತ್ತೆಯ ಅಭ್ಯಾಸವನ್ನು ಮುಗಿಸಿದವರೂ, ಸಶ ಕ್ತರೂ, ವ್ಯಂಗರಹಿತರೂ, ೧೪ ವರ್ಷ ಮಿಾರಿದವರೂ ಕು ಲೀನ ಮನೆತನದವರೂ ಇರಬೇಕು. ಸಧವೆಯರು ತಮ್ಮ ಗಂಡಂದಿರ ಸಮ್ಮತಿಯನ್ನೂ ವಿಧವೆಯರೂ ಅವಿವಾಹಿತರೂ ತಮ್ಮ ಪಾಲಕರ ಸಮ್ಮತಿಯನ್ನು ಪಡಕೊಂಡಿರಬೇಕು

ಕಾಲೇಜದಲ್ಲಿ (ಟ್ರೇನಿಂಗ ಸ್ಕೂಲಿನಲ್ಲಿ) ಸೇರಿಸಿಕೊಳ್ಳಲ್ಪಟ್ಟ ವರು ದಸ್ತೈವಜುಗಳನ್ನು ಬರಕೊಡಬೇಕಾಗುತ್ತದಷ್ಟೇ ಅವಕ್ಕೆ ನೂರು ರೂಪಾಯಿ ಲಾಯಖಿಯುಳ್ಳ ಇಬ್ಬರು

ಜೀವನದಾರರು ಬೇಕಾಗುವರು. ಅವರನ್ನು ಸಹ ಗೊತ್ತು ಮಾಡಿಕೊಂಡು ಬರಬೇಕು, ತಿಳಿಯುವದು.

ಧಾರವಾಡ ಟ್ರೇನಿಂಗ ಕಾಲೇಜ
ತಾರೀಖು ೩೯-೯-೧೯೦೫

S. K. RODDA,
Principal Trainig College Dharwar.

ನೋಟೀಸು.

ಮಿ॥ ವಿರುಪಾಕ್ಷಪ್ಪ ಚೆನ್ನಪ್ಪ ಹೂಲಿ ಇವರ ಅಂಕಗಣಿತ (೧ನೇಭಾಗ) ಪಕ್ಕ ಲಾಯಬ್ರರಿಯ ಸಲುವಾಗಿ ಮಂಜೂರ ಮಾಡಿರುತ್ತದೆ. ಅವರು ತಮ್ಮ ಪುಸ್ತಕದ ಒಂದು ಪ್ರತಿ ಕ್ಯೂರೇಟರ ಸಾ॥ ಮುಂಬಯಿ ಇವರ ಕಡೆಗೆ ಕಳಿಸುವದಕ್ಕೋಸ್ಕರ ನಮ್ಮ ಕಡೆಗೆ ಕಳಿಸಬೇಕು.

ಪುಣೆ, ಡಾಯರೆಕ್ಟರ ಆಫ
ಪಬ್ಲಿಕ್ ಇನ್ಸಟ್ರಕ್ಶನ್
ಆಫೀಸ್. ೭ನೇ ಜುಲಾಯ
೧೯೦೫ ಇಸ್ವಿ.

(ಸಹೀ) Egils
ಡಾಯರೆಕ್ಟರ ಆಫ್ ಪಬ್ಲಿಕ್
ಇನ್ಸ್ಟ್ರಕ್ಶನ್

ಅಜಂ ಧಾರವಾಡ ಜಿಲ್ಲೆಯೊಳಗಿನ ಯಾವತ್ತು ಲೋಕಲ ಬೋರ್ಡ ಮ್ಯುನಸಿಪಲ ಬೋರ್ಡ ಮತ್ತು ಮತ್ತು ರಜಿಸ್ಟರ ಮಾಡಲ್ಪಟ್ಟ ಮಿಶನ ಮತ್ತು ಗಾವಠಿ ಶಾಲೆಗಳ ಮಾಸ್ತರರಿಗೆ—

ಕೆಳಗೆ ಸಹಿ ಮಾಡಿದವರ ಕಡಿಂದ ತಿಳಿಸಲ್ಪಡುವದೇನಂದರೆ—

ಜಾರ್ಜನ ಪ್ರಾಯಿಝು ಫಂಡಿನೊಳಗಿಂದ ಹೆಣ್ಣು ಹುಡುಗರಿಗೆ ಇನಾಮು ಕೊಡುವ ಸಲುವಾಗಿ ದರವರ್ಷದಂತೆ ಪರೀಕ್ಷೆಯು ಈ ವರ್ಷ ತಾರೀಖು ೧೦ನೇ ಅಗಟೋಬರ ೧೯೦೫ ಇಸ್ವಿ ಮುಂಗಳವಾರ ದಿವಸ ಧಾರವಾಡ ಹೆಣ್ಣು ಮಕ್ಕಳ ಟ್ರೇನಿಂಗ ಸ್ಕೂಲ ಇಮಾರತಿಯಲ್ಲಿ ಆಗುವದು. ಕಾರಣ ಸದರಿ ಪರೀಕ್ಷೆಗೆ ಬರಲಪೇಕ್ಷಿಸುವ ಉಮೇದವಾರರು ಸದರ ತಾರೀಖಿನ ದಿವಸ ಮುಂಜಾನೆ ೭ ಘಂಟೆಕ್ಕೆ ಸದರ ಇಮಾರತಿಯಲ್ಲಿ ತಾವು ಕಲಿಯುತ್ತಿದ್ದ ಅಥವಾ ಕಲಿತು ಬಿ

ಟ್ಟ ಸಾಲೆಯ ಹೆಡ್ ಮಾಸ್ತರರ ಸರ್ಟಿಫಿಕೇಟ ಸಹಿತ ಹೊರ
ರಾಗಬೇಕು.

೭. ಪರೀಕ್ಷೆಯು ಹೆಣ್ಣು ಮಕ್ಕಳಿಗೋಸ್ಕರ ಮಂಜೂ
ರಾದ ಸಿನೇ ಇಯತ್ತೆಯಂತೆ ಆಗುವದು.

೭. ಬಂದು ಸಾರೆ ಇನಾಮು ಪಡೆದವರು ಪುನಃ ಈ ಪ
ರೀಕ್ಷೆಗೆ ಬರಬಾರದು. ಹಾ॥ ೭೪ನೇ ಅಗಷ್ಟ ಸನ್ ೧೯೦೪
ಇಸ್ವಿ.

(Sd) BABACHARYA.Y. KERUR.

ಡಿ॥ ಎ॥ ಇ॥ ಧಾರವಾಡ.

ಬಂದ ಪತ್ರಗಳ ಸಾರಾಂಶ.

I

ಚಿಕ್ಕೋಡಿ ತಾಲೂಕ ಯಾಡಗೂಡ ಸಾಲೆಗೆ ಪಂಚರೂ
ಇತರ ಸದ್ಗೃಹಸ್ಥರೂ ಕೂಡಿ ತಾಲೀಮು ಸಾಮಾನಕ್ಕಾ
ಯೂ ಗಡಿಯಾರ ಮುಂತಾದ ಉಪಯೋಗದ ಸಾಮಾನು
ಗಳಿಗಾಗಿಯೂ ಹದಿನೇಳು ರೂಪಾಯಿಗಳನ್ನು ವರ್ಗಣಿ
ಕೂಡಿಸಿ ಕೊಟ್ಟರು

II

ಹಲ್ಯಾಳ (ಕಾರವಾರ) ಶಾಲೆಗಳ ವಾರ್ಷಿಕ ಪರೀಕ್ಷೆಯ
ಬಗ್ಗೆ ನಡೆದ ಸಮಾರಂಭವನ್ನು ಕುರಿತು ಬಂದು ಪತ್ರವು
ಬಂದಿದೆ. ಆದರೆ ಅದು ಬಹು ಅಶುದ್ಧ ವಿರುವದು ಕಾರಣ
ಮುದ್ರಿಸುವದು ಅಪ್ರಶಸ್ತವೆಂದು ಬಿಟ್ಟಿದ್ದೇವೆ.

ಕಾಲೇಜಿನ ಇನಾಮು ಫಂಡ

.....	ಹಿಂದಿನ ಶಿಲುಕು
೧೦	ದೊಡ್ಡಪ್ಪಾ ತಿಪ್ಪಣ್ಣಾ ನಾಗರಾಳ ಹುನಗುಂ

---

೧೦ ಅಂತೂ ರೂಪಾಯಿಗಳು—

ಹಾ॥ ೭೯-೪-೧೯೦೫ } S. K. Rodda.
Principal.

ಶಾಲಾಪತ್ರಿಕೆ.

ಪದ್ಯ.

ವಿಶ್ವವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಟಶೋತ್ಕರ್ಷಪಾ
ಟವಯುಕ್ತಂ ವ್ರತಿವಾಸದಾದಿಗೊಲವಿಂವೀಪತ್ರಮಂ ಮುದ್ರಿಸಿ ।
ಸಯವಿಂವಿತ್ತಪಪ್ಪೋದುವರ್ಗಸುಗುಣಂ ಪೋರಲ್ಕೆ ಕೈಕೊಂಬುಪೈ।
ಬಯಿಯಿಂದೋಷವತಿಪ್ಪ ವೇಳ್ವುದುಮುಧರಿಜ್ಞಾಸಾಭಿವೃದ್ಧಿಪ್ರಿಯಂ ॥

ಪುಸ್ತಕ ೪೧] ಅಕ್ಟೋಬರ ೧೯೦೫. [ಸಂಚಿಕೆ ೧೦.

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮುಳುಗಿದ ಹಡಗುಗಳನ್ನು ಮೇಲಕ್ಕೆ ತೆಗೆಯುವ ರೀತಿಯು— ಸಮುದ್ರದಲ್ಲಿ ಮುಳುಗಿದ ಹಡಗುಗಳನ್ನು ಮೇಲೆ ತೆಗೆಯುವ ರೀತಿಗಳು ಹಲವುಂಟು. ಈ ರೀತಿಯಿಂದ ಬಹುವಿಶಾಲವಾದ ಯುದ್ಧದಹಡಗುಗಳನ್ನು ಕೂಡ ಮೇಲೆ ತೆಗೆಯುವರು. ಅದಲೆ ಹಡಗುಗಳು ತೀರ ಆಳವಾದ ನೀರಲ್ಲಿ ಮುಳುಗಿದ್ದರೆ ಮೇಲೆ ತೆಗೆಯುವದು ಅಸಾಧ್ಯವು. ಇಂಥ ಪ್ರಸಂಗದಲ್ಲಿ ಅದನ್ನು ಮೇಲೆ ತೆಗೆಯುವ ಗೋಜಿಗೆ ಹೋಗದೆ ಮುಳುಗುವ ಗಂಟೆಯು ಸಹಾಯದಿಂದ ಅದರೊಳಗಿನ ಪದಾರ್ಥಗಳನ್ನು ಮಾತ್ರ ತಕ್ಕೊಂಡು ಬಿಡುತ್ತಾರೆ.

ಹಡಗವು ದಂಡೆಗೆ ಸಮೀಪವಾಗಿ ತುಸು ನೀರಲ್ಲಿ ಮುಳುಗಿದ್ದರೆ, ಅದಕ್ಕೆ ಬಲವಾದ ಹಗ್ಗಗಳನ್ನಾಗಲಿ, ಸರಪಳಿಗಳನ್ನಾಗಲಿ, ಕಟ್ಟಿ ಸಮುದ್ರವು ಉಕ್ಕೇರುವ ಸಮಯವಲ್ಲಿ ಅದನ್ನು ಮೆಲ್ಲಮೆಲ್ಲನೆ ದಂಡೆಗೆ ಎಳೆದು ತರುವರು. ಭರತಿಯು ಈ ಕೆಲಸಕ್ಕೆ ನೆರವಾಗುವದು ಸಹಜವು. ಮುಂದೆ ಏಹೋಟಿಯ ಕಾಲದಲ್ಲಿ ಆ ಹಡಗದ ಎಡ ಬಲ ನೀರು ಕಡಿಮೆಯಾಗಲು, ಬೇಕಾದ ಸಾಧನಗಳಿಂದ ಅದರ ಬಳಿಗೆ ಬಂದು ಅದಕ್ಕೆ ಬಿದ್ದ ತೂತುಗಳನ್ನೆಲ್ಲ ಗಟ್ಟಿಯಾಗಿ ಮುಚ್ಚಿ ಬಿ

ಹುತ್ತಾರೆ. ಒಳಗೆ ಸೇರಿಕೊಂಡಿರುವ ನೀರನ್ನೆಲ್ಲ ಬಂಬಿ ನಿಂದ ಹೊರಗೆ ಹಾಕುತ್ತಾರೆ. ಹೀಗೆ ಮಾಡುವದರಿಂದ ಆ ಹಡಗವು ಮುಂದಿನ ಭರತಿಯ ಕಾಲಕ್ಕೆ ತಾನೇ ತೇಲತೊಡ ಗುತ್ತದೆ.

ಹಡಗನ್ನು ದಂಡೆಯಿಂದ ತುಸು ದೂರವಾಗಿ ಮುಳಗಿದ್ದರೆ ಮೊದಲು ಬೇರೆ ಎರಡು ಉಗೆ ಹಡಗುಗಳನ್ನು ತಂದು ಅದ ರ ಎಡಬಲದಲ್ಲಿ ನಿಲ್ಲಿಸುವರು. ಬಳಿಕ ಮುಳಗುವ ಗಂಟು ಯ ಸಹಾಯದಿಂದ ಮುಳುಗಿದ ಹಡಗಕ್ಕೆ ಸರಪಳಿಯನ್ನಾ ಗಲಿ ಹಗ್ಗವನ್ನಾಗಲಿ ಸುತ್ತರಿಸುವರು. ಆ ಹಗ್ಗ ಅಥವಾ ಸರಪಳಿಗಳನ್ನು ಮೇಲೆ ನಿಂತ ಹಡಗಗಳಿಗೆ ತೊಡಕಿಸುವ ರು. ಭರತಿಯ ಕಾಲದಲ್ಲಿ ಇವೆರಡು ಹಡಗುಗಳ ಸಹಾ ಯದಿಂದ ಮೆಲ್ಲಮೆಲ್ಲನೆ ದಂಡೆಯ ಕಡೆಗೆ ಸರಿಸಿಕೊಂಡು ಬ ರುವರು. ಇವೆರಡೇ ಹಡಗಗಳಿಂದ ಬರದಿದ್ದರೆ ಮತ್ತೆರ ಡು ಹಡಗುಗಳನ್ನು ತರುವರು ದಂಡೆಗೆ ಬಂದ ಬಳಿಕ ಹಿಂ ದೆ ಹೇಳಿದ ಉಪಾಯದಿಂದ ಅದನ್ನೂ ಮೇಲೆ ತೆಗೆಯು ವರು.

ಇನ್ನೊಂದು ರೀತಿಯು ಬಹು ಸೋಜಿಗವಾದದ್ದುಂಟು. ಅದು ಏನ್ಯಾಗಂದರೆ—ಮುಳಗಿದ ಹಡಗದ ತಳಕ್ಕೆ ಪೊಟೂನ ಎಂಬ ಹೆಸರುಳ್ಳ ಹಲವು ಪೊಳ್ಳು ಡೋಣಿಗಳನ್ನು ಸಂಬಂಧಿ ಸುವರು. ಬಳಿಕ ಆ ಡೋಣಿಗಳೊಳಗಿನ ನೀರನ್ನು ಬಂಬಿ ನಿಂದ ತೆಗೆಯುವರು. ಅದರಿಂದ ಸಿಂಗಡಿ ಕಟ್ಟಿಕೊಂಡ ಮು ಮನುಷ್ಯನಂತೆ ಮುಳುಗಿದ ಹಡಗವು ತನಗೆ ತಾನೇ ತೇಲು ವದು. ಒಮ್ಮೊಮ್ಮೆ ಆ ಡೋಣಿಗಳಿಗೆ ನೀರು ಸೇರದಂಥ ಹಲವು ಅರಿವೆಯ ಚೀಲಗಳನ್ನು ಕಟ್ಟಿರುವರು ಡೋಣಿಯೊ ಳಗಿನ ನೀರನ್ನು ಬಂಬಿನಿಂದ ತೆಗೆದ ಬಳಿಕ ಆ ಚೀಲಗಳಲ್ಲಿ ಗಾಳಿಯನ್ನು ತುಂಬುವರು. ಆಗಂತೂ ಮುಳುಗಿದ ಹಡಗ ವು ಸುಲಭವಾಗಿ ಮೇಲಕ್ಕೆ ಬರುವದು.

ಕೆಲವು ಐತಿಹ್ಯ ಸಂಗತಿಗಳು—ಪ್ರಸಿದ್ಧ ಮಂತ್ರಿಯಾದ ನಾನಾಫಡಣವೀಸನು ಅಂತ್ಯಕಾಲದಲ್ಲಿ ತನ್ನ ಯಾವತ್ತೂ ಸ್ಥಾವರ ಜಂಗಮ ಆಸ್ತಿಗಳನ್ನು ಬಹು ಗುಪ್ತರೀತಿಯಿಂದ ವ್ಯವಸ್ಥೆಗೊಳಿಸಿದ್ದನು. ಅವನು ಸತ್ತ ಕೂಡಲೆ ಸಿಂಧ್ಯನೂ ಬಾಜೀರಾಯನೂ ನಾನಾನ ಅಪಾರ ಸಂಪತ್ತಿಗೆ ಆಶೆ ಮಾಡಿ ಅವನ ವಾಡೆಯನ್ನು ಜಪ್ತಿ ಮಾಡಿದರು. ಆದರೆ ಅವರಿಗೆ ಅರಿವೆ ಅಂಚಡಿಗಳ ಹೊರ್ತು ಧನವೇನೂ ದೊರೆಯಲಿಲ್ಲ ನಾನಾನ ಸಂಪತ್ತಿಯು ಎಷ್ಟು? ಏನಾಯಿತು? ಎಂಬುದನ್ನು ನಂಬುಗೆಯಿಂದ ಹೇಳುವವರು ಯಾರೂ ಇಲ್ಲ.

ನಾನಾನ ಬಳಿಯಲ್ಲಿ ಕಾಳೇಲೆ ಎಂಬ ಅಡ್ಡ ಹೆಸರಿನ ಒಬ್ಬ ನಂಬುಗೆಯ ಆಳು ಇದ್ದನು ನಾನಾನು ಮರಣ ಕಾಲಕ್ಕೆ ಮೂರು ಲಕ್ಷ ರೂಪಾಯಿಗಳನ್ನು ಇವನ ಕೈಯಲ್ಲಿ ಕೊಟ್ಟು, ನನ್ನ ಹೆಂಡತಿಯು ದತ್ತಕ ತಕ್ಕೊಂಡು ಆ ಮಗನ ಮದುವೇ ಮಾಡತೊಡಗಿದರೆ, ನೀನು ಆ ಕಾಲಕ್ಕೆ ಹಣವನ್ನು ಆಕೆಗೆ ಒಪ್ಪಿಸಬೇಕೆಂದು ಹೇಳಿದ್ದನು. ಅದರಂತೆ ಆ ಆಳು ಹಣವನ್ನು ಮನೆಗೆ ಒಯ್ದು ಇಟ್ಟುಕೊಂಡನು. ಮುಂದೆ ಎಷ್ಟೋ ದಿವಸಗಳವರೆಗೆ ನಾನಾನು ಹೇಳಿದ ಪ್ರಸಂಗವು ಒದಗಲಿಲ್ಲ. ಆಷ್ಟು ಅವಧಿಯಲ್ಲಿ ಕಾಳೇಲೆಯವರ ಮನೆಯಲ್ಲಿ ಎರಡು ಮೂರು ತಲೆಗಳಾದವು. ಅಣ್ಣ ತಮ್ಮಂದಿರು ಬೇರೆಯಾದರು. ಬೇರೆಯಾಗುವ ಕಾಲಕ್ಕೆ ಈ ಹಣದ್ರವ್ಯವಸ್ಥೆಯ ವಿಷಯವು ಬಹು ಗುಪ್ತವಾಗಿಯೇ ಆಗುವದು. ಹೀಗೆ ಆಗುತ್ತಾಗುತ್ತ ಈಗಿರುವ ನಾನಾನ ಸಂತತಿಯ ತಂದೆಯು ಲಗ್ನ ಸಮಯವು ಪ್ರಾಪ್ತವಾಯಿತು. ಆಗ ಆ ವಿಶ್ವಾಸಿಯಾದ ಸೇವಕನು ಯಾವತ್ತು ಹಣವನ್ನು ತಂದು ಅವರಿಗೆ ಮುಟ್ಟಿಸಿದನು.

ಇದೇ ಮಾದರಿಯದೊಂದು ಸಂಗತಿಯು ನಮ್ಮ ಕರ್ನಾಟಕದಲ್ಲಿಯೂ ವರ್ತಿಸಿರುವದು ರಾಮದುರ್ಗ ಸಂಸ್ಥಾನದ ಒಡತಿಯು ಮೂವತ್ತೈದು ಸಾವಿರ ರೂಪಾಯಿಗಳನ್ನು ಬಾಬಜೀ ಭಟ್ಟನೆಂಬವನ ಬಳಿಯಲ್ಲಿ ಬಹು ಗುಪ್ತವಾಗಿ ಇಟ್ಟಿದ್ದಳು. ಈ ಭಟ್ಟನು ಜನ್ಮದರಿದ್ರನು. ಆದ

ರೂ ಪ್ರಮಾಣಕ್ಕೆ ನು. ಮುಂದೆ ಕೆಲವು ದಿವಸದ ಮೇಲೆ ಬಾ
ಯಿ ಸಾಹೇಬರಿಗೆ ದಣುವಾಯಿತು. ಆ ಜೀನೆಯಲ್ಲಿ ಅವರಿ
ಗೆ ಸ್ಮೃತಿ ತಪ್ಪಿದ್ದರಿಂದ ಅವರು ತಾವಿಟ್ಟ ಹಣದ ವ್ಯವಸ್ಥೆ
ಯನ್ನು ಹೇಳ ಶಕ್ತರಾಗಲಿಲ್ಲ. ಆದರೆ ಅವ್ವನವರು ಸತ್ತ
ಬಳಿಕ ಈ ಭಟ್ಟನು ಬಂದು ಎಲ್ಲ ಹಣವನ್ನು ಯಜಮಾನ
ನಿಗೆ ಒಪ್ಪಿಸಿ ಇದರಲ್ಲಿ ಇಷ್ಟು ಹಣವನ್ನು ನನ್ನ ಮಗನ ಲ
ಗ್ನಕ್ಕೆ ಕೊಡುವೆವೆಂದು ಹೇಳಿದ್ದರು. ಎಂದು ಅಷ್ಟು ಹಣ
ವನ್ನು ಯಜಮಾನನಿಂದ ಇಸಕೊಂಡು ಹೋದನು.

ಸಂಸ್ಥಾನದ ದಿವಾಣನಿಗೆ ಈ ಕೆಲಸವು ಸರಿಯಾದದ್ದೆಂ
ದು ತೋರಲಿಲ್ಲ. ಅದಕ್ಕಾಗಿ ಅವನು ಯಜಮಾನನ ಬಳಿ
ಗೆ ಬಂದು— ಧನಿಯರೆ, ಅವ್ವನವರು ಇಟ್ಟ ದಣವು ಇಷ್ಟೇ
ಅಲ್ಲ. ಇನ್ನೂ ವಿಪುಲವಿರಬಹುದು. ಇವನನ್ನು ಕಟ್ಟಿಬ
ಡಿಸಿದರೆ ಅಬೆಲ್ಲ ಹೊರಬೀಳುವದು ಎಂದು ನುಡಿದನು. ಯ
ಜಮಾನನು ದಿವಾನನ ಈ ಕ್ಷುದ್ರ ದೃಷ್ಟಿಯ ಕಾರ್ಯಕ್ಕೆ
ಮನಸ್ಸು ಮಾಡಲಿಲ್ಲ. ಮುಂದೆ ವರ್ಷಾರು ತಿಂಗಳ ತರುವಾ
ಯ ಅವ್ವನವರಬೊಂದು ಬಂಗಾರದ ತಾಯಿತವನ್ನು ಮು
ರಿಸುವ ಪ್ರಸಂಗ ಬಂತು. ಅಕ್ಕಸಾಲಿಗನು ಯಜಮಾನನ
ಎದುರಿಗೇ ಅದನ್ನು ಬಿಡೆಯುತ್ತಿರಲು ಅದರೊಳಗಿಂದ ಬಿಂ
ದು ಕಾಗದ ಹೊರಟಿತು. ಅದನ್ನು ಬಿಚ್ಚಿ ಓದಲು ಅದರ
ಲ್ಲಿ ಅವ್ವನವರು ಎಲ್ಲೆಲ್ಲಿ ಎಷ್ಟೆಷ್ಟು ತೇವು ಇಟ್ಟಿರುವರೆಂಬ
ದು ಗೆ ಸಾಕ್ಷಿಯಿತ್ತು. ಬಾಬಜೀ ಭಟ್ಟನಲ್ಲಿ ಮೂವತ್ತೈದು
ದು ಸಾವಿರ ತೇವು ಇಟ್ಟಿರುವದೆಂದು ನಿಶ್ಚಯವಾದದ್ದಲ್ಲದೆ
ಅವನ ಮಗನ ಮದುವೆಗಾಗಿ ಅವ್ವನವರು ಕೊಡಲೊಪ್ಪಿದ
ಹಣವಾವರೂ ಆ ಭಟ್ಟನು ಹೇಳಿದಷ್ಟೇ ನಿಜವೆಂಬದು ಮ
ನವರಿಕೆಯಾಯಿತು. ಆದರೆ ದಿವಾನನ ಬಳಿಯಲ್ಲಿ ಐದು
ಸಾವಿರ ಹೊನ್ನುಗಳ ತೇವಿರುವದೆಂಬದೊಂದು ಹೊಸ ಸಂ
ಗತಿಯು ಬೈಲಿಗೆ ಬಂತು. ಆಗ ದಿವಾನನೆ ಮುಖವು ಹಂ
ಚು ಒಡಿದು ಹೋಯಿತೆಂದು ಹೇಳುವ ಕಾರಣವಿಲ್ಲ.

ಫ್ರೀಮೇಲ ಟ್ರೇನಿಂಗಸ್ಕೂಲಿಗಾಗಿ ಹಳೆ ತಾಲೂಕ ಕಚೇರಿಯಲ್ಲಿ ಕಟ್ಟಲ್ಪಡುವ ಇಮಾರತು ಮುಗಿಯಿತು. ಇಪ್ಪರಲ್ಲಿ ಈ ಶಾಲೆಗೆ ಕಾಲೇಜದಸ್ವರೂಪವು ಬಂದದ್ದಲ್ಲದೆ ಇನ್ನೂ ರಾಜುವತ್ತು ರೂಪಾಯಿಯು ಲೇಡೀಸುಪರಿಂಟೆಂಡೆಂಟಳನ್ನು ಸಂಪಾದಿಸುವ ಸುಯೋಗ ಪ್ರಾಪ್ತವಾದದ್ದಕ್ಕಾಗಿ ಇಡೀ ಕರ್ನಾಟಕಕ್ಕೆಲ್ಲಿನಂದವಾಗದೆ ಇರದು. ಕಾಲೇಜ ಇಮಾರತಿಗೆ ಸುಮಾರು ಅರವತ್ತು ಸಾವಿರರೂಪಾಯಿಗಳು ಮಂಜೂರಾಗಿರುವವು. ಕಟ್ಟುವ ಕೆಲಸವು ಜೀಗನೆ ಪ್ರಾರಂಭವಾಗಬಹುದು.

ಬಂಗಾಲ ಇಲಾಖೆಯು ಹಿಂದುಸ್ಥಾನದೊಳಗಿನ ಯಾವ ವತ್ತೂ ಇಲಾಖೆಗಳಲ್ಲಿ ವಿಸ್ತಾರದಿಂದಲೂ ಜನಸಂಖ್ಯೆಯಿಂದಲೂ ದೊಡ್ಡದಾಗಿರುವದರಿಂದ ಒಬ್ಬ ಲೆಫ್ಟಿನೆಂಟ ಗವರ್ನರನಿಂದ ಕಾರ್ಯಭಾರವು ಸರಿಯಾಗಿ ಸಾಗುವದಿಲ್ಲೆಂದು ತಿಳಿದು ಕರ್ಜನ್ ಸಾಹೇಬರು ಆದರಲ್ಲಿ ಎರಡು ಭಾಗಗಳನ್ನು ಮಾಡಿ ಪೂರ್ವದಭಾಗಕ್ಕೆ ಅಸಾಮುವನ್ನು ಕೂಡಿಸಿದರು. ಈ ಕೆಲಸವು ಇದೇ ತಿಂಗಳ ೧೬ನೇ ತಾರೀಖಿನಿಂದ ಅಮಲಿನಲ್ಲಿ ಬರುವದು.

ಲಾರ್ಡ ಕರ್ಜನ್ ದೊರೆಗಳು ರಾಜೀನಾಮೆ ಕೊಟ್ಟದರಿಂದ ಅವರಸ್ಥಳಕ್ಕೆ ಲಾರ್ಡ ಮಿಂಟೋ ದೊರೆಗಳು ವೈಸರಾಯರಾಗಿ ಬರುವರು. ಇವರು ಅಕ್ಟೋಬರ ೨೦ನೇ ತಾರೀಖಿಗೆ ಹೊರಟು ನಾಲ್ಕನೇ ನವಂಬರಕ್ಕೆ ಹಿಂದುಸ್ಥಾನಕ್ಕೆ ಬರುವರು. ಮುಂದೆ ಏಳೆಂಟು ದಿವಸಗಳಲ್ಲಿಯೇ ಯುವರಾಜರೂ ಹಿಂದುಸ್ಥಾನಕ್ಕೆ ಬರುವರೆಂದು ಗೊತ್ತಾಗಿದೆ. ಮಿಂಟೋ ದೊರೆಗಳು ಸರ್ ೧೪ ಜನರಲ್ಲಿ ಹಿಂದುಸ್ಥಾನದ ಗವರ್ನರ ಜನರಲ್ಲರಾಗಿದ್ದ ಲಾರ್ಡ ಮಿಂಟೋ ದೊರೆಗಳ ನಾಲ್ಕನೆತಲೆಯವರು. ಇವರು ಮೊದಲು ಕಾನೆಡಾದ ಗವರ್ನರರಾಗಿದ್ದರು.

ಸಪ್ಟಂಬರ ತಿಂಗಳಲ್ಲಿ ಸಿಮಲಾದಲ್ಲಿ ವಿದ್ಯಾಖಾತೆಯವರ ಪರಿಷತ್ತು ನೆರೆದಿತ್ತು. ಯಾವತ್ತೂ ಇಲಾಖೆಯ ಡೈರೆಕ್ಟರ

ರೂ ಬಂದಿದ್ದರು ಈ ಸಭೆಗೆ ಕರ್ಜನ್ ದೊರೆಗಳೂ ಬಂದಿದ್ದರೆಂದು ತಿಳಿಯುವದು

ಕಾಲೇಜದ ಪ್ರಿನ್ಸಿಪಾಲರ ಸ್ಥಳದ ಸಂಬಳವು ನಾಲ್ಕು ನೂರು ರೂಪಾಯದು ಆಗುವದೆಂದು ತಿಳಿಯುವದು ಅದೇ ವೇರೆಗೆವೈಸಪ್ರಿನ್ಸಿಪಾಲರ ಸ್ಥಳವು ಎರಡುನೂರು ರೂಪಾಯಿಯದೂ. ಧಾರವಾಡ ಜಿಲ್ಲೆಯ ಡಿಪ್ರುಟಿಎಜ್ಯುಕೇಶನಲ್ ಇನಸ್ಪೇಕ್ಟರರ ಸ್ಥಳವು ಮುನ್ನೂರು ರೂಪಾಯಿಯದೂ, ಕಡಿಯ ಡಿಪ್ರುಟಿಯ ಸ್ಥಳವು ಇನ್ನೂರು ರೂಪಾಯಿಯದೂ ಮೊದಲನೇ ಅಸಿಸ್ಟೆಂಟ ಡಿಪ್ರುಟಿಯ ಸ್ಥಳಗಳು ನೂರಾ ಇಪ್ಪತ್ತೈದು ರೂಪಾಯಿಯವೂ ಆಗುವವು ಇದರಂತೆ ಡಿಪ್ರುಟಿಸಬಇಡ ಕಾರಕೂನರ ಸ್ಥಳಗಳ ಸಂಬಳವಾದರೂ ಹೆಚ್ಚಾಗಿರುವವು.

ಹೋದ ವರುಷದಂತೆ ಧಾರವಾಡ ಶಹರ ಮ್ಯುನಿಸಿಪಾಲಿಟಿಯವರು ಕಳೆದ ತಿಂಗಳ ೮ನೇ ತಾರೀಖಿನ ದಿವಸ ಹೊಲಿಗಿ ಕಸೂತಿ, ಹೆಣಿಕೆ ಮುಂತಾದ ಕಲೆಯ ಪ್ರದರ್ಶನ ಸಮಾರಂಭವನ್ನು ಸಾಂಗಗೊಳಿಸಿದರು. ಸಮಾರಂಭಕ್ಕೆ ಊರೊಳಗಿನ ಪ್ರಮುಖ ಗೃಹಸ್ಥರೂ ಮೆ. ಕಲೆಕ್ಟರ ದೊರೆಗಳೂ ಬಂದಿದ್ದರು. ಈ ಪ್ರದರ್ಶನಕ್ಕೆ ಧಾರವಾಡ ಹುಬ್ಬಳ್ಳಿ ಗದಗ, ಗುಳೇದಗುಡ್ಡ ಗಜೇಂದ್ರಗಡ ಕರ್ಜಗಿ, ಬ್ಯಾಡಗಿ, ರಾಣೇಬಿನ್ನೂರ, ನವಲಗುಂದ, ನರಗುಂದ, ಹುಲಗೂರ, ಅಮಿನಭಾವಿ, ಕಿತ್ತೂರ, ಬೈಲಹೊಂಗಲ, ಕಲಾದಿಗಿ ಮುಂತಾದ ಗರ್ಲಸ್ಕೂಲುಗಳಲ್ಲಿ ತಯಾರಾದ ಸಾವಿರಾನುಗಳು ಬಂದಿರುತ್ತವೆ. ಇವುಗಳಲ್ಲಿ ಕೆಲವು ನೋಡತಕ್ಕವುಗಳುಂಟು. ಇದರಿಂದ ದಕ್ಷಿಣ ಭಾಗದಲ್ಲಿ ಬಂದು ಬಗೆಯ ಸ್ತ್ರೀ ಶಿಕ್ಷಣವು ಏಳ್ಗೆಯನ್ನು ಹೊಂದಲಿಕ್ಕೆ ಅನುವಾಯಿತೆಂದು ಹೇಳಬಹುದು. ಈ ಬಗೆಯಿಂದ ಸುಶಿಕ್ಷಿತರು ಸ್ತ್ರೀ ಶಿಕ್ಷಣ ಸುಧಾರಣೆಗೆ ಮುಂದರಿಯುವದು. ಬಹು ಸಮಾಧಾನಕರವಾದ ಸಂಗತಿಯಿನ್ನಲಿಕ್ಕೆ ಅಡ್ಡಿಯಿಲ್ಲ.

AGRICULTURE.

ಕೃಷಿಶಾಸ್ತ್ರವು.

ಹಂದಿಯು ಮಲದಗೊಬ್ಬರದಲ್ಲಿ ಪೊಟಾಶವೂ ಸೋಡಾ ಲವಣಗಳೂ ಬಹಳ ಇರುತ್ತವೆ. ಆದ್ದರಿಂದ ಇದರಿಂದ ಹುಟ್ಟಿದ ಬೆಳೆಗಳಿಗೆ ಬಂದು ಪ್ರಕಾರದ ಕೆಟ್ಟವಾಸನೆಯೂ ಕೆಟ್ಟ ರುಚಿಯೂ ಬರುತ್ತದೆಂದು ಹೇಳುತ್ತಾರೆ. ಹಂದಿಯ ಮತ್ತು ಮನುಷ್ಯನ ಮೂತ್ರಗಳಲ್ಲಿ ಪಾಸ ಫೇಟಗಳು ಇರುತ್ತವೆ ಆದರೆ ಕುದುರೆಗಳ ಕುರಿಗಳ ಮತ್ತು ಎತ್ತುಗಳ ಮೂತ್ರದಲ್ಲಿ ಇವು ಎಷ್ಟು ಮಾತ್ರವೂ ಇರುವದಿಲ್ಲ. ಕುದುರೆಯ ಮಲದಲ್ಲಿ ಅದರ ಮೂತ್ರದಲ್ಲಿಯಂತೆ ಎಷ್ಟೋ ಫಲದ್ರವ್ಯಗಳಿರುತ್ತವೆ. ಕುದುರೆಯ ಮಲವು ಸ್ವಾಭಾವಿಕ ಸ್ಥಿತಿಯಲ್ಲಿ ಬಹಳ ಉಷ್ಣವುಳ್ಳದ್ದಿರುತ್ತದೆ. ಮತ್ತು ತೀವ್ರ ಕೊಳೆಯುತ್ತದೆ. ಅದನ್ನು ಹಾಗೇ ಜನೆಯಾಗುವಹಾಗೆ ಬಿಟ್ಟರೆ ಅದು ಸುಟ್ಟುಹೋಗುವ ಸಂಭವವಿರುತ್ತದೆ. ಆದ ಕಾರಣ ಅದನ್ನು ಉಳಿದವುಗಳ ಕೂಡ ಚನ್ನಾಗಿ ಮಿಶ್ರಮಾಡಬೇಕು. ಕುರಿಯ ಮಲದಲ್ಲಿ ಫಲದ್ರವ್ಯಗಳು ಎಲ್ಲ ಮಲಗಳಲ್ಲಿಯಕಿಂತ ಬಹಳ ಇರುತ್ತವೆ. ಅದು ಸಾಧಾರಣವಾಗಿ ಹೊಲದಲ್ಲಿಯೇ ಬೀಳುವದರಿಂದ ಗೊಬ್ಬರದ ರಾಶಿಗಳಲ್ಲಿ ಅದು ಸಾಧಾರಣವಾಗಿ ಇರುವದಿಲ್ಲ.

ಮಲ ಮೂತ್ರಗಳಲ್ಲಿ ದೊರೆಯುವ ದ್ರವ್ಯಗಳೂ ಅವುಗಳ ಪ್ರಮಾಣಗಳೂ—

	ಕುದುರೆ		ಎತ್ತು		ಹಂದಿ		ಕುರಿ	
	ಮಲ	ಮೂತ್ರ	ಮಲ	ಮೂತ್ರ	ಮಲ	ಮೂತ್ರ	ಮಲ	ಮೂತ್ರ
ನೀರು	೫೫೦	೯೦೦	೮೬೦	೯೧೫	೫೬೦	೯೫೬	೬೪೦	೯೫೦
ಘನದ್ರವ್ಯಗಳು	೨೫೦	೧೦೦	೧೪೦	೮೫	೪೪೦	೨೪	೩೬೦	೫೦
	೧೦೦೦	೧೦೦೦	೧೦೦೦	೧೦೦೦	೧೦೦೦	೧೦೦೦	೧೦೦೦	೧೦೦೦
ನೈತ್ರೋಜನ್	೬	೧೧	೫.೬	೯	೫	೫	೬	೮
ಘಾಸ ಘೂರಿಕ್ಕ ಐಂಟಾಕ್ಸಾಯಿಡ	೪	...	೫	...	೫	೧.೨	೫	...
ಪೊಟಾಶ ಮತ್ತು ಸೋಡಾ	೫೫	೪	೨.೨	೧೬	೬.೫	೨	೫	೮

ಇದನ್ನು ಹುಟ್ಟಿಸುವ ಪ್ರಾಣಿಯ ವಯಸ್ಸು ಹಾಗು ಸ್ಥಿತಿ

ಪ್ರಾಣಿಗಳು ಬೆಳೆಯುವ ಸ್ಥಿತಿಯಲ್ಲಿದ್ದಾಗ್ಗೆ ಅವು ಆಹಾರದೊಳಗಿನ ಬಹಳ ದ್ರವ್ಯಗಳನ್ನು ತಮ್ಮ ಪೋಷಣೆಗಾಗಿ ತೆಗೆದುಕೊಳ್ಳುವದರಿಂದ ಅವುಗಳ ಮಲದಲ್ಲಿ ಸತ್ವವುಳ್ಳ ದ್ರವ್ಯಗಳು ಬಹಳ ಕಡಿಮೆ ಇರುತ್ತವೆ. ಚಿಕ್ಕ ಪ್ರಾಣಿಗಳ ಶರೀರದೊಳಗಿನ ಎಲಬುಗಳು ಬೆಳೆಯುವದಕ್ಕಾಗಿ ಅವುಗಳಿಗೆ ಫಾಸಫೇಟುಗಳು ಬೇಕಾಗುತ್ತವೆ. ಮತ್ತು ಅವುಗಳ ಸ್ನಾಯುಗಳು ರಕ್ತಪ್ತ ಅಭಿವೃದ್ಧಿ ಹೊಂದಬೇಕಾದರೆ. ಅವುಗಳಿಗೆ ನೈತ್ರೋಜನ್‌ವ್ಯ ಲವಣಗಳು ಬೇಕಾಗುತ್ತವೆ ಆದ್ದರಿಂದ ಚಿಕ್ಕ ಪ್ರಾಣಿಗಳ ಮಲದಿಂದಾಗುವ ಗೊಬ್ಬರವು ಬಹಳ ನಿಸ್ಸತ್ವವಾದದ್ದು ಇರುತ್ತದೆ. ಕೃಶವಾದ ಪ್ರಾಣಿಗಳ ಮಲದಿಂದಾಗುವ ಗೊಬ್ಬರವಾದರೂ ಇದೇ ತರದ್ದಿರುತ್ತದೆ. ಪ್ರಾಣಿಗಳು ಸೊಕ್ಕುವ ಸ್ಥಿತಿಯಲ್ಲಿದ್ದಾಗ್ಗೆ ಅವುಗಳ ಮಲವು ಬಹಳ ಕಡಿಮೆ ಬೆಲೆಯುಳ್ಳದ್ದಿರುತ್ತದೆ. ಆದರೆ, ಅವುಗಳ ಬೆಳೆಯುವ ಕೆಲಸವು ಮುಗಿದ ಮೇಲೆ ಅವುಗಳಿಂದ ದೊರೆಯುವ ಮಲದ ಗೊಬ್ಬರವು ಮೊದಲಿಗಿಂತ ಹೆಚ್ಚು ಸತ್ವವುಳ್ಳದ್ದಿರುತ್ತದೆ. ಆವು ಹೆಚ್ಚು ಹೆಚ್ಚು ಸೊಕ್ಕಿದಹಾಗೆ ಅವುಗಳ ಮಲದಲ್ಲಿ ಹೆಚ್ಚು ಹೆಚ್ಚು ನೈತ್ರೋಜನವೂ ಫಾಸಫೋರಿಕ್ಕ ಆಸಿಡ್ಡವೂ ಪೂಟಾಶವೂ ಇರುತ್ತದೆ. ಹಿಂಡುವ ಅಥವಾ ಗಬ್ಬಿದ್ದ ಆಕಳುಗಳಿಗೆ ಫಾಸ ಫೇಟುಗಳೂ ಸತ್ವವುಳ್ಳ ದ್ರವ್ಯಗಳೂ ಬಹಳ ಬೇಕಾಗುವದರಿಂದ ಅವುಗಳ ಮಲದಲ್ಲಿ ಈ ದ್ರವ್ಯಗಳು ಬಹಳ ಇರುವದಿಲ್ಲ. ದುಡಿಯುವ ಪ್ರಾಣಿಗಳ ಮಲವು ದುಡಿಯದೇ ಇದ್ದ ಪ್ರಾಣಿಗಳ ಮಲಕ್ಕಿಂತ ಹೆಚ್ಚು ನಿಃಸತ್ವವಾದದ್ದಿರುತ್ತದೆ. ದುಡಿಯದೆ ಇದ್ದು ದೊಡ್ಡ ಪ್ರಾಣಿಗಳ ಮಲದಿಂದಾಗುವ ಗೊಬ್ಬರವು ಎಲ್ಲಕ್ಕೂ ಉತ್ತಮವಾದದ್ದು. ಯಾಕೆಂದರೆ ಅವು ಆಹಾರದಲ್ಲಿ ತೆಗೆದುಕೊಂಡ ದ್ರವ್ಯಗಳೆಲ್ಲ ಮಲಪ ರೂಪದಿಂದ ಹೊರಟು ಹೋಗುತ್ತದೆ.

೩ ಪ್ರಾಣಿಗಳ ಆಹಾರವು

ಗೊಬ್ಬರದಲ್ಲಿದ್ದ ಕಾರ್ಬನ್, ಆಕ್ಸಿಜನ್, ಹೈದ್ರೋಜನ್ ಇವುಗಳಿಂದ ಪ್ರಾಣಿಗಳ ಆಹಾರಕ್ಕೆ ಏನೂ ಉಪಯೋಗವಾಗುವದಿಲ್ಲ. ಆದ್ದರಿಂದ ಕಾರ್ಬನ್ ಆಕ್ಸಿಜನ್ ಹೈದ್ರೋಜನ್‌ಗಳುಳ್ಳ ಸಕ್ಕರೆ ಅಥವಾ ಎಣ್ಣೆಗಳಿಂದಾಗುವ ಆಹಾರವನ್ನು ತೆಗೆದುಕೊಳ್ಳುವ ಪ್ರಾಣಿಗಳ ಮಲವು ನಿಃಸತ್ವವಾದ್ದು. ಪ್ರಾಣಿಗಳ ಆಹಾರವು ನಿಃಸತ್ವವಾದದ್ದಾಪರೆ ಅವುಗಳ ಮಲವಾದರೂ ನಿಃಸತ್ವವಾದದ್ದಿರುತ್ತದೆ.

SUITABLE FOOD

ಪಥ್ಯಾಹಾರವು.

ಹಿಂದಿನ ಸಂಚಿಕೆಯಲ್ಲಿ ಮನುಷ್ಯ ಪ್ರಾಣಿಗೆ ತಕ್ಕ ಆಹಾರವು ಯಾವದೆಂಬವನ್ನು ಶರೀರರಚನೆಯಿಂದನಿಶ್ಚಯಿಸೋಣವೆಂದು ವಿಶ್ವಾಸನೆ ಕೊಟ್ಟಿರುವದು ವಾಚಕರ ಸ್ಮರಣದಲ್ಲಿರಬಹುದು ಆದರೆ ಈ ಸಂಗತಿಯನ್ನು ಚರ್ಚಿಸಿ ನಿರ್ಣಯಿಸಲಿಕ್ಕೆ ಇದೊಂದೇ ಮಾತು ಸಾಕೆಂದು ತಿಳಿಯಲಾಗದು ಯಾವದೊಂದು ಪ್ರಾಣಿಗೆ ತಕ್ಕ ಆಹಾರವ್ಯಾವದೆಂಬದನ್ನು ನಿರ್ಣರಿಸಲಿಕ್ಕೆ ಕೆಳಗಿನ ನಾಲ್ಕು ಮಾತುಗಳ ವಿಚಾರಗಳು ಅವಶ್ಯವಾಗಿ ಬೇಕು ಅವು— ೧ ಪ್ರಾಣಿಗಳದಂತ ರಚನೆ ೨ ಅಸ್ಥಾಶಯ ಹಾಗು ಕರಳು ೩ ಆ ಪ್ರಾಣಿಯ ಘ್ರಾಣೇಂದ್ರಿಯಕ್ಕೆ ಸ್ವಾಭಾವಿಕವಾಗಿ ಅಪೇಕ್ಷೆ ಹುಟ್ಟುವ ವಸ್ತುಗಳು ೪ ಆ ಪ್ರಾಣಿಯು ತನ್ನ ಮಕ್ಕಳನ್ನು ಪೋಷಿಸುವ ಬಗೆ ಈ ನಾಲ್ಕು ಸಂಗತಿಗಳಲ್ಲಿ ಪ್ರಾರಂಭಕ್ಕೆ ಮೊದಲನೇದಂತ ರಚನೆಯನ್ನು ಕುರಿತು ವಿಚಾರ ನಡಿಸುವಾ

ಹಲ್ಲುಗಳಲ್ಲಿ ಛೇದಕ, ವಿದಾರಕ, ಚೇಕ್ಷಕಗಳೆಂಬ ಮೂರು ವರ್ಗಗಳುಂಟು ಮಾಂಸಭಕ್ಷಕ ಪ್ರಾಣಿಯ ಮುಂದಿನ ಹಲ್ಲುಗಳು ಅಂದರೆ ಛೇದಕ ದಂತಗಳ ಬಹಳ ಬಲವಾಗಿರುವದಿಲ್ಲ ಆಹಾರ ತಿನ್ನುವಾಗ ಅವುಗಳ ಉಪಯೋಗವಾದರೂ ಅಷ್ಟಕ್ಕಷ್ಟೇ ಆದರೆ ಈ ಬಗೆಯ ಪ್ರಾಣಿಗಳ ವಿದಾರಕದಂತಗಳು ಅಂದರೆ ಸೂಲದ ಹಲ್ಲುಗಳು

ಉದ್ದವಾಗಿಯೂ, ಮೊನೆಯಾಗಿಯೂ, ಬಲವಾಗಿಯೂ ಇರುವವಲ್ಲದೆ ತುದಿಯಲ್ಲಿ ತುಸು ಮಣ್ಣಿದಿರುತ್ತವೆ ಇವು ಉಳಿದ ಹಲ್ಲುಗಳಿಗಿಂತ ದೊಡ್ಡವಿರುವದರಿಂದ ಬಾಯಿ ಮುಚ್ಚಿಲಿಕ್ಕೆ ಅನುಕೂಲವಾಗಬೇಕೆಂದು ದೇವರು ಮೇಲ್ದವಡೆಯಲ್ಲಿ ಹಲ್ಲುಗಳ ನಡುವೆ ಸಂದು ಬಿಟ್ಟಿದ್ದಾನೆ. ಈ ಹಲ್ಲುಗಳಿಂದಾದರೂ ಅನ್ನವನ್ನು ಸಣ್ಣ ಮಾಡುವ ಕಾರ್ಯವು ನಡೆಯುವದಿಲ್ಲ. ಸಿಕ್ಕ ಬೇಟೆಯನ್ನು ಗಟ್ಟಿಯಾಗಿ ಹಿಡಿದಿಡುವದೇ ಇವುಗಳ ಮುಖ್ಯ ಕಾರ್ಯವು. ಬೇಟೆಯನ್ನು ಹರಿಯಲಿಕ್ಕೂ ಇವುಗಳ ಉಪಯೋಗವುಂಟು ಈ ಮಾಂಸಾಹಾರೀ ಪ್ರಾಣಿಗಳ ದವಡೆಯ ಹಲ್ಲುಗಳು ಅಂದರೆ ಕೋಪಕದಂತಗಳು ತುದಿಯಲ್ಲಿ ಮುಳ್ಳು ಮುಳ್ಳಾಗಿ ಇರುವವು. ಅದರಿಂದ ಮಾಂಸವನ್ನು ಕತರಿಸಿ ಚೂರು ಚೂರು ಮಾಡಿ ತಿನ್ನಲಿಕ್ಕೆ ಅನುಕೂಲವಾಗುವದು. ಕೆಳದವಡೆಯ ಹಲ್ಲುಗಳ ಮೇಲೆಯೇ ಮೇಲ್ದವಡೆಯ ಹಲ್ಲುಗಳು ಬಂದು ಕೂಡುವದಿಲ್ಲ. ನಡುವಿರುವ ಸಂದಿನೊಳಗೆ ಬಂದು ಕೂಡುತ್ತವೆ. ಇದರಿಂದ ಮಾಂಸದೊಳಗಿನ ಎಳೆಗಳು ಬೇರೆಬೇರೆಯಾಗಿ ಮಾಂಸವು ಸಣ್ಣಗಿ ಹರಿಯಲ್ಪಡುತ್ತದೆ. ಆದರೆ ಮನುಷ್ಯ ಪ್ರಾಣಿಯು, ಹಾಗೂ ಮೆಲಕಾಡಿಸುವ ಪ್ರಾಣಿಯು ದವಡೆಯೊಳಗಿನ ಹಲ್ಲುಗಳ ರಚನೆಯು ಹೀಗಿರುವದಿಲ್ಲ. ಬಾಯಿ ಮುಚ್ಚಲು ಮೇಲ್ದವಡೆಯೊಳಗಿನ ಹಲ್ಲುಗಳು ಕೆಳದವಡೆಯ ಹಲ್ಲುಗಳ ಮೇಲೆಯೇ ಬಂದು ಕೂಡುತ್ತವೆ. ಆದರಿಂದ ಈ ಮಾದರಿಯ ಪ್ರಾಣಿಗಳು ಆಹಾರವನ್ನು ಸಣ್ಣಗಿ ಅರೆದು ತಿನ್ನುತ್ತವೆ ನಾಯಿ ಮುಂತಾದ ಮಾಂಸಭಕ್ಷಕ ಪ್ರಾಣಿಗಳು ರೊಟ್ಟಿಯನ್ನು ತಿನ್ನುವಾಗ, ಅವು ವಿಶ್ವಪ್ರಯತ್ನ ಮಾಡಿದರೂ ರೊಟ್ಟಿಯು ಸಣ್ಣಗದೆ ಸಣ್ಣ ಚೂರುಗಳನ್ನು ಮಾಡಿ ನುಂಗುತ್ತದೆಂಬದನ್ನು ಬಹು ಜನರು ನೋಡಿರಬಹುದು. ನಮ್ಮಂತೆ ಅಥವಾ ಮೆಲಕಾಡಿಸುವ ಪ್ರಾಣಿಗಳಂತೆ ಇವುಗಳಿಗೆ ಬಾಯಿ ಅಡಿಸಲಿಕೆ ಬರುವದೇ ಇಲ.

ಹುಲ್ಲು ತಿನ್ನುವ ಪ್ರಾಣಿಗಳ ಮುಂದಿನ ಹಲ್ಲುಗಳು ಸಂ
ಯೋಗಿರುತ್ತವೆ. ಅವು ಉದ್ದಾಗಿಯೂ ಹರಿತವಾಗಿಯೂ ಇ
ರುವವು. ಈ ಜಾತಿಯ ಪ್ರಾಣಿಯ ಸೂಲದ ಹಲ್ಲುಗಳು
ಸಣ್ಣವಿರುವವು. ಇನೆಯಂಥ ಕೆಲವು ಪ್ರಾಣಿಗಳ ಸೂಲದ
ಹಲ್ಲು ದೊಡ್ಡವಿರುವವು. ಅವು ಅವುಗಳಿಗೆ ಶಸ್ತ್ರದಂತೆ ಉ
ಪಯೋಗಕ್ಕೆ ಬರುತ್ತವಲ್ಲದೆ ಆಹಾರಚರ್ವಣಕ್ಕೆ ಪ್ರಯೋ
ಜನವಿಲ್ಲೆಂದು ಹೇಳಬಹುದು. ದವಡೆಯ ಹಲ್ಲುಗಳು
ತುದಿಯಲ್ಲಿ ಹಲಚಿಯಾಗಿರವವು. ಈ ಹಲ್ಲುಗಳ ಎರಡೂ
ಬದಿಗೆ ಎನಾಮೆಲ್ಲ ಎಂಬ ದ್ರವ್ಯವು ವಿಪುಲವಾಗಿರುವದು.
ಅದರಿಂದ ಆಹಾರ ಪಚನಕ್ಕೆ ಸಹಾಯವಾಗುತ್ತದೆ.

ಭೂಮಿಯಲ್ಲಿ ಕೇವಲ ಫಲಭಕ್ಷಕ ಪ್ರಾಣಿಗಳು ಬಹಳ
ಇಲ್ಲ. ಮಂಗ ಜಾತಿಯ ಪ್ರಾಣಿಗಳು ಮಾತ್ರ ಕೇವಲ ಫ
ಲಾಹಾರಿಯೆಂದು ಹೇಳಬಹುದು. ಈ ಪ್ರಾಣಿಯ ಹಲ್ಲು
ಗಳು ರಚನೆಯಲ್ಲಿ ಪೂರ್ಣತೆಯನ್ನು ಪಡೆದಿರುತ್ತವೆಂದು
ಹೇಳಬಹುದು. ಇವುಗಳ ಯಾವತ್ತೂ ಹಲ್ಲುಗಳು ಬಹು
ತರ ಎತ್ತರದಲ್ಲಿ ಸರಿಯಾಗಿರುತ್ತವೆ. ಸೂಲದ ಹಲ್ಲುಗಳು
ತುಸು ಎತ್ತರವಿರುವವು. ಆದರೂ ಮಾಂಸಭಕ್ಷಕ ಪ್ರಾಣಿಗಳ
ಹಲ್ಲುಗಳಷ್ಟಲ್ಲ. ಮಾಂಸಭಕ್ಷಿ ಪ್ರಾಣಿಯ ಹಲ್ಲುಗಳಂತೆ
ಚೂಪಾಗಿಯೂ ಇರುವದಿಲ್ಲ. ಹಲಚಿಯಾಗಿರುವವು. ಇ
ದರಿಂದ ಈ ಹಲ್ಲುಗಳು ಭಕ್ಷವನ್ನು ಗಟ್ಟಿಯಾಗಿ ಹಿಡಿಯಲಿ
ಕ್ಕೆ ತಕ್ಕವುಗಳಲ್ಲೆಂಬದು ಸ್ಪಷ್ಟವಾಗುತ್ತದೆ. ದವಡೆಯ
ಹಲ್ಲುಗಳ ರಚನೆಯಂತೂ ಮಾಂಸಾಹಾರಕ್ಕೆ ಎಳ್ಳಷ್ಟು ಅ
ನುಕೂಲವಾಗದಿರುವದಿಲ್ಲ. ದವಡೆಯ ಒಂದು ಹಲ್ಲಾದ
ರೂ ಮುಳ್ಳು ಮುಳ್ಳಾಗಿರುವದಿಲ್ಲ. ಆದರೆ ಕರಡಿಯು ಎರ
ಡೂ ವಿಧದ ಆಹಾರವನ್ನು ತಿನ್ನುವದರಿಂದ ಅದರ ದಂತರಚ
ನೆಯಲ್ಲಿ ಎರಡೂ ವಿಧವ ಆಹಾರವನ್ನು ತಿನ್ನುವ ಪ್ರಾಣಿಗಳ
ದಂತರಚನೆಯ ಲಕ್ಷಣವನ್ನು ಕಾಣಬಹುದು. ಅದರ
ಮುಂದಿನ ಹಲ್ಲುಗಳು ಫಲಭಕ್ಷಕ ಪ್ರಾಣಿಗಳ ಹಲ್ಲುಗಳಂ
ತೆಯೂ, ಸೂಲದ ಹಲ್ಲು ಮಾಂಸಭಕ್ಷಕ ಪ್ರಾಣಿಗಳ ಹಲು
ಗಳಂತೆ ತೀಕ್ಷ್ಣವಾಗಿಯೂ ಇರುವವು.

ಮೇಲೆ ವಿವರಿಸಿದ ಮೂರು ಬಗೆಯ ಪ್ರಾಣಿಗಳಲ್ಲಿ ದಂತ ರಚನೆಯಿಂದ ಮನುಷ್ಯನು ಯಾವವರ್ಗದಲ್ಲಿ ಬರುವನೆಂಬುದನ್ನು ವಾಚಕರು ವಿಚಾರಿಸತಕ್ಕದ್ದು. ಇವನಿಗೆ ಸೂಲದ ಹಲ್ಲುಗಳುಂಟು. ಆದರೆ, ಮಾಂಸಾಹಾರೀ ಪ್ರಾಣಿಗಳಂತೆ ಅವು ಹದನಾಗಿಯೂ ಇಲ್ಲ. ಕಡೆತನಕ ಬೆಳೆದುವದೂ ಇಲ್ಲ. ಅವು ಕೇವಲ ಆಹಾರದ ವಸ್ತುವನ್ನು ಗಟ್ಟಿಯಾಗಿ ಹಿಡಿಯಲಿಕ್ಕೆ ಪ್ರಯೋಜನಕರವಾಗಿರುತ್ತವೆ. ಆದ್ದರಿಂದ ಮನುಷ್ಯನ ದಂತ ರಚನೆಯು ತೃಣಭಕ್ಷಕ ಪ್ರಾಣಿಯ ದಂತ ರಚನೆಗೂ ಹೊಂದುವದಿಲ್ಲ. ಮಾಂಸಭಕ್ಷಕ ಪ್ರಾಣಿಯ ದಂತಗಳಂತೆಯೂ ಇವನ ಹಲ್ಲುಗಳಿಲ್ಲ. ಸರ್ವಭಕ್ಷಕ ಪ್ರಾಣಿಗಳ ಹಲ್ಲುಗಳನ್ನೂ ಇವನ ಹಲ್ಲುಗಳು ಹೋಲುವದಿಲ್ಲ. ಫಲಭಕ್ಷಕ ಪ್ರಾಣಿಗಳ ಹಲ್ಲುಗಳನ್ನು ಬಹ್ವಂಶದಲ್ಲಿ ಹೋಲುತ್ತಿರುವ ಕಾರಣ ಇವನು ಫಲಾಹಾರಿಯೇ ಎಂದು ನಿರ್ಧರಿಸಬಹುದು. ಇನ್ನು ಅನ್ನಾಶಯ ಕರಳುಗಳ ರಚನೆಯಿಂದ ಇವನು ಯಾವ ವರ್ಗದಲ್ಲಿ ಬರುತ್ತಾನೆಂಬುದನ್ನು ವಿಚಾರಿಸುವ.

ಮಾಂಸಾಹಾರೀ ಪ್ರಾಣಿಯು ಅನ್ನಾಶಯವು ಚಿಕ್ಕದಾಗಿರುತ್ತದೆ. ಅದರ ಕರಳು ಶರೀರದ ಉದ್ದಳತೆಯ ಮೂರರಿಂದ ಐದು ಪಾಲಷ್ಟು ಇರುವದು. ಶರೀರದ ಉದ್ದಳತೆ ಅಂದರೆ, ಬಾಯಿಂದ ಬಾಲದ ತುದಿಯವರೆಗಿರುವ ಅಳತೆ. ತೃಣಭಕ್ಷಕ ಪ್ರಾಣಿಯು ಅನ್ನಾಶಯವು ಅದರ ಶರೀರ ಮಾನದಿಂದ ದೊಡ್ಡದಾಗಿರುವದಲ್ಲದೆ, ಅದಕ್ಕೆ ಜೀರಿಗಳಿರುತ್ತವೆ. ಅವುಗಳ ಕರಳು ಶರೀರದ ಉದ್ದಳತೆಯ ಇಪ್ಪತ್ತರಿಂದ ಇಪ್ಪತ್ತೊಂಟು ಪಾಲಷ್ಟು ಇರುವದು. ಫಲಭಕ್ಷಕ ಪ್ರಾಣಿಯ ಜಠರವು ಮಾಂಸಭಕ್ಷಕ ಪ್ರಾಣಿಯ ಜಠರಕ್ಕಿಂತ ತುಸು ಅಗಲಾಗಿರುವದು. ಜಠರಕ್ಕೆ ಹೊಂದಿದ ಕರಳು ಉಪಜಠರದಂತೆ ಇರುವದು. ಈ ಜಾತಿಯ ಪ್ರಾಣಿಗಳ ಕರಳು ಶರೀರದ ಉದ್ದಳತೆಯ ಹತ್ತರಿಂದ ಹನ್ನೆರಡು ಪಾಲಷ್ಟು ಇರುವದು. ಕರಳಿನ ಉದಳತೆಯ ಮಾನದಿಂದ ನೋಡಿದರೆ ಮನುಷ್ಯನ

ಮಾಂಸಭಕ್ಷಕ ಪ್ರಾಣಿಗಳೊಳಗೆ ಬರುತ್ತಾನೆ. ಆದರೆ ಇದು ಸರಿಯಲ್ಲ. ಈ ಸಿದ್ಧಾಂತವನ್ನು ಸಿದ್ಧ ಮಾಡುವಾಗ ತುಸು ತಪ್ಪಾಗಿರುವದು. ಅದು ಯಾವದೆಂದರೆ— ಮನುಷ್ಯ ಶರೀರದ ಉದ್ದಳತೆಯನ್ನು ಅಳೆಯುವದು. ವಾಸ್ತವಿಕ ಶರೀರದ ಉದ್ದಳತೆಯೆಂದರೆ, ತಲೆಯಿಂದ ಬೆನ್ನ ಹುರಿಯ ತುದಿಯವರೆಗಿರುವ ಭಾಗದ ಅಳತೆಯು. ಮನುಷ್ಯನ ಕರಳು ಹತ್ತರಿಂದ ಹನ್ನೇಳು ಹದಿನೆಂಟು ಮೊಳ ಇರುವದು. ಅವನ ಶರೀರದ ಉದ್ದಳತೆಯು ಮೇಲಿನ ಲೆಕ್ಕದಿಂದ ನೋಡಲು ಒಂದು ಒಂಭೂವರೆ ಮೊಳ ಆಗುವದು. ಈ ಲೆಕ್ಕದಿಂದ ಅವನ ಕರಳು ಶರೀರದ ಉದ್ದಳತೆಯ ಹತ್ತು ಹನ್ನೆರಡು ಪಾಲಷ್ಟು ಆಗುವದು. ಈ ಪ್ರಮಾಣವು ಫಲಭಕ್ಷಕ ಪ್ರಾಣಿಯದೆಂದು ಹಿಂದಿನ ವಿವರದಿಂದ ಸಹಜವಾಗಿ ತಿಳಿಯುವದು. ಹೀಗೆ ವಿಚಾರ ಮಾಡದೆ ಮನುಷ್ಯನನ್ನು ಮಾಂಸಭಕ್ಷಕ ವರ್ಗದಲ್ಲಿ ಸೇರಿಸಿದರೆ ಇನ್ನೊಂದು ದೊಡ್ಡ ತಪ್ಪಾಗುವದು. ದಂತ ರಚನೆಯಿಂದ ಅವನಲ್ಲಿ ಫಲವನ್ನೂ ವನಸ್ಪತಿಯನ್ನೂ ಭಕ್ಷಿಸುವ ಶಕ್ತಿಯುಂಟೆಂಬದು ಸಿದ್ಧವಾಗುತ್ತಿರಲು, ಅವನ ಕರುಳಿನ ಉದ್ದಳತೆಯನ್ನು ಮಾಡಿದ ದೇವರು ಕೇವಲ ಮಾಂಸಭಕ್ಷಕ ಪ್ರಾಣಿಗಳಂತಿಟ್ಟಿರುತ್ತಾನೆಂಬದು ತೀರ ಅಬದ್ಧವು. ಸೃಷ್ಟಿಕರ್ತನ ನಿರ್ಮಾಣದಲ್ಲಿ ಎಲ್ಲಿಯೂ, ಅಚಾತುರ್ಯವೂ, ಅಪ್ರಯೋಜಕತ್ವವೂ, ಅಯೋಗ್ಯತ್ವವೂ, ದೃಷ್ಟಿಗೋಚರವಾಗಲಿಕ್ಕಿಲ್ಲ. ಆದರಿಂದ ಕರುಳಿನ ಉದ್ದಳತೆಯಿಂದಲೂ ಅವನು ಫಲಭಕ್ಷಕ ಪ್ರಾಣಿಗಳೊಳಗೇ ಬರುತ್ತಾನೆಂಬದು ನಿರ್ವಿವಾದವಾಗಿ ಸಿದ್ಧವಾಗುತ್ತದೆ.

HABIT

ಚಟವು.

ಚಟದ ವ್ಯಾಖ್ಯೆಯನ್ನು ಕಟ್ಟುವದು ಸುಸಾಧ್ಯವೆಲ್ಲ. ಜೇರೆ ಜೇರೆ ಜನರು ಬೇರೆ ಬೇರೆ ವ್ಯಾಖ್ಯೆಗಳನ್ನು ಕಟ್ಟುತ್ತಾ

೬. ಹ್ಯಾಗೆ ಹೇಳಿದರೂ ವಿರೋಧ ಸಂಗತಿಗಳು ಬಂದೇ ಬರುತ್ತವೆ.

ಯಾವ ಕೃತ್ಯಗಳನ್ನು ಮೇಲಿಂದ ಮೇಲೆ ಮಾಡೋಣದರಿಂದ ಮನಸ್ಸಿನ ಪ್ರವೃತ್ತಿ ಇಲ್ಲದೆ ಯಂತ್ರದಂತೆ ಸಾಗುವವೋ ಅದಕ್ಕೆ ಚಟವೆಂಬ ಹೆಸರು.

ಈ ಚಟವು ಬಹು ಕಾಲ ನಡೆಯುವದರಿಂದ ಅದು ಅವನ ಸ್ವಭಾವವೇ ಆಗುತ್ತದೆ. ಚಟವೆಂದರೆ ಸ್ವತಃ ಹಚ್ಚಿಕೊಂಡ ಗುಣವೆನ್ನಲಿಕ್ಕೆ ಅಡ್ಡಿ ಇಲ್ಲ. ಚಟದ ಮೂಲಕ ಮನಸ್ಸಿನ ಇಚ್ಛೆ ಇಲ್ಲದಿದ್ದರೂ ಅದು ಯಂತ್ರದಂತೆ ಕೆಲಸ ಮಾಡುತ್ತದೆ.

ಸ್ವಭಾವಕ್ಕೆ ಆದಿ ಇಲ್ಲ. ಚಟಕ್ಕೆ ಆದಿಯುಂಟು. ಮನಸ್ಸಿನ ಇಚ್ಛೆಯಿಂದ ಆಗತಕ್ಕ ಕೆಲಸಗಳಿಲ್ಲ ಚಟದಿಂದಲೇ ಆಗ ಹೋಗುತ್ತವೆ. ಇದೇ ಚಟದ ಪರಿಣಾಮವು ಇದರಿಂದ ಮನಸ್ಸಿನ ಇಚ್ಛೆಯು ಕೆಲಸವು ಕಡಿಮೆಯಾಗುತ್ತದೆ. ಅಂತೇ ಮನಸಿನ ಇಚ್ಛೆ ಇಲ್ಲದೆ ಆಗುವ ಕೆಲಸಕ್ಕೆ ಚಟವೆಂದು ಹೇಳಲಿಕ್ಕೆ ಬರುತ್ತದೆ.

ಇಂದ್ರಿಯಗಳ ಶಕ್ತಿಯು ರೂಢಿಯಿಂದ ಬೆಳೆಯುತ್ತದೆ. ಅವರಿಂದ ಕೃತ್ಯಗಳು ಸುಲಭವಾಗುತ್ತವೆ. (ಜನಿವಾರ ಮಾಡುವದು ಇತ್ಯಾದಿ) ಆದರೆ ಅದು ಕೌಶಲ್ಯವಲ್ಲ. ರೂಢಿಯು ಜೋರಿನಿಂದ ಆದದ್ದಿರುತ್ತದೆ. ಕುಶಲತೆಯು ಇಚ್ಛಾಮೂಲಕವು ಚಟವು ರೂಢಿಯು ಜೋರಿನಿಂದ ಬಹಳ ಕೆಲಸ ಮಾಡುತ್ತದೆ. ಅದೇ ಕುಶಲತೆ. ಬರೇ ಇಚ್ಛೆ ಇದ್ದರೆ ಕುಶಲತೆಯು ಬರುವದೆಂಬ ನಿಯಮವಿಲ್ಲ. ಗಾಯಕನಾಗಬೇಕೆಂಬ ಇಚ್ಛೆ ಇದ್ದರೆ ಆಗುವದಿಲ್ಲ. ಅದಕ್ಕೆ ರೂಢಿ (ಚಟ) ಬೇಕು ಚಟವೇ ಸ್ವಭಾವವೆಂದು ಕೆಲವರು ಅನ್ನುತ್ತಾರೆ. ಚಟವು ಮನುಷ್ಯ ಮಾತ್ರರಿಗಲ್ಲ. ಪಶುಪಕ್ಷಿಗಳಿಗೆ ಸಹ ಉಂಟು. ಚಟವು ಊಂಟಾಗಲಿಕ್ಕೆ ಮನಸಿನ ಜಾಗರೂಕತನವೂ, ನಿಶ್ಚಯವೂ ಬೇಕು. ಪದೇ ಪದೇ ಮಾಡುವದರಿಂದ ಕೌಶಲ್ಯವೂ ಬರುವದುಂಟು. ವಿಶೇಷ

ಪ್ರಸಂಗದಲ್ಲಿ ವಿಚಾರವು ಮನಸ್ಸಿನಲ್ಲಿ ಹುಟ್ಟಿ, ಅದರಂ
ಕೃತ್ಯ ಮಾಡಲಿಕ್ಕೆ ಮನಸ್ಸಿನ ಪ್ರವೃತ್ತಿಯನ್ನು ಚಟು
ಉಂಟು ಮಾಡುತ್ತದೆ. ಅದು ಒಮ್ಮೊಮ್ಮೆ ಮನಸ್ಸಿಗೆ ಸ
ಜನೆ ಇಲ್ಲದೆ ಸಹಜವೆಂಬಂತಾಗುತ್ತದೆ ಒಬ್ಬನು ಹೋದ
ನಾನೂ ಹೋಗುವೆನು. ನಕ್ಕರೆ ನಗುವೆನು, ನೀರು ಕ
ಡಿಯುವೆನು ಇತ್ಯಾದಿ.

ಚಟದಲ್ಲಿ ಮಾನಸಿಕ ವ್ಯಾಪಾರ ನಡೆಯುವಂತೆ ಶರೀರ
ವ ಯಾವದೊಂದು ಇಂದ್ರಿಯವಾಗಲಿ, ಅವಯವವಾಗಲೆ
ಕೆಲಸ ಮಾಡುತ್ತಿರುತ್ತವೆ. ಯಾವದೊಂದು ಚಟವು ಪೂರ್ಣ
ಹತ್ತಬೇಕಾದರೆ, ಕೃತ್ಯ, ಕೃತ್ಯವನ್ನು ಸೂಚಿಸುವ ಮನಸ್ಸಿ
ನ ತಪ್ಪದ ಮೂಲ ಕಾರಣ. ಇವೆರಡರ ನಿರ್ಧಾರವಾದ ಸಂಬಂ
ಧವಾಗುತ್ತದೆ, ಚಟವು ಹತ್ತುವ ಮೊದಲು ಕೃತ್ಯವನ್ನು
ಪದೇ ಪದೇ ಮಾಡುವದಲ್ಲದೆ ನಿಯಮಿತ ತನದಿಂದಲೂ
ಮಾಡಬೇಕು, ೧೦ ಗಂಟೆಗೆ ಗಡಿಯಾರಕ್ಕೆ ಕೀಲೀ ಕೊ
ಡುವ ಚಟವು ಇದ್ದರೆ ಆ ವೇಳೆಗೆ ಕೈಯು ತಾನೇ ಕೀಲೀ
ಕೊಡುತ್ತಿರುತ್ತದೆ, ದಿನಾಲು ರಾತ್ರಿ ೯ ಗಂಟೆಗೆ ಮಲಗು
ವ ಚಟವಿದ್ದರೆ ಆ ಹೊತ್ತಿಗೆ ಸರಿಯಾಗಿ ನಿದ್ರೆ ಬರುತ್ತದೆ.

ಚಟವನ್ನು ಅಧೀನದಲ್ಲಿಟ್ಟುಕೊಳ್ಳುವ ಮನಸ್ಸಿನ ತತ್ವಗ
ಳು—ಚಟವು ಹತ್ತಲಿಕ್ಕೆ ಏನಾದರೂ ಹೇಳಬೇಕು, ಉ
ದ್ದೇಶದ ಮೂಲಕ ಹೇತು ಇಚ್ಛೆ ಕೃತ್ಯಗಳಾಗುತ್ತವೆ,
ಕೃತ್ಯಗಳನ್ನು ಪದೇ ಪದೇ ಮಾಡುವದರಿಂದ (೪) ಬೇಸರ
ಬರುತ್ತದೆ. ಆಗ ಮನಸ್ಸಿನ ಪ್ರಯತ್ನಬೇಕು, ಮನಸ್ಸಿ
ನ ಪ್ರಯತ್ನವು ಹೆಚ್ಚಾದಂತೆ ರೂಢಿ ಬಿದ್ದು, ಕೃತ್ಯವು ಸು
ಲಭಚಟವಾಗುತ್ತದೆ, ಬಳಿಕ ಮನಸಿನ ಇಚ್ಛೆ ಉಳಿಯು
ವದಿಲ್ಲ, ಅದು ಶೂನ್ಯವಾಗುವದು, ಹೀಗೆ ಚಟವೇ ಭಾವ
ನೆಯಾಗುತ್ತದೆ, ಅದೇ ಪೂರ್ಣ ಚಟವು,

ಚಟ ಹತ್ತುವಾಗ ಶಿಥಿಲತನ (ಕೋಮಲತ್ವ) ಬೇಕು,
ಸಿಡ್ಡವರಿಗೆ ಚಟ ಹಚ್ಚುವದಕ್ಕಿಂತ ಸಣ್ಣ ಮಕ್ಕಳಿಗೆ ಚ
ಟ ಹಚ್ಚುವದು ಸುಲಭ, ಯಾಕಂದರೆ, ದೊಡ್ಡವರಲ್ಲಿ

ಮುಂಚಿತವಾಗಿಯೇ ಹತ್ತಿದ್ದ ಚಟವನ್ನು ತೆಗೆದು ಹಾಕ
ಹೊಸ ಚಟ ಹುಟ್ಟುವದು ಬಿಗಿಯಾದದ್ದು, ಆದರೆ ಚಟ
ವಿಲ್ಲದ ಚಿಕ್ಕ ಹುಡುಗರಿಗೆ ಚಟ ಹಚ್ಚುವದು ಸುಲಭ, ಲ
ಕ್ಷಣಿಕೆಯನ್ನು ಸೊಟ್ಟ ಹಿಡಿಯುವ ರೂಢಿಬಿದ್ದ ದೊಡ್ಡವ
ರಿಗೆ ಸಮವಾಗಿ ಹಿಡಿಸುವದು ಜಡ ಹರಿಯುತ್ತದೆ, ಆದರೆ
ಚಿಕ್ಕವರಿಗೆ ಸಮವಾಗಿ ಲೇಖಣಿ ಹಿಡಿಸುವದು ಸುಲಭ,
ದೊಡ್ಡವರಾದಾಗ ಇಂದ್ರಿಯವೂ ನರಗಳೂ ಬಲತಿರುತ್ತವೆ,
ಈ ಶಾರೀರ ಸ್ಥಿತಿಯು ಮನಸ್ಸಿಗೂ ಉಂಟು. ಚಿಕ್ಕವರ
ಶರೀರವೂ. ಮನಸ್ಸೂ ಕೋಮಲವಿರುತ್ತದೆ, ಆದ್ದರಿಂದ
ಚಿಕ್ಕಂದಿನಲ್ಲಿ ಚಟ ಹಚ್ಚುವದು ಸುಲಭ, ಹತ್ತಿದ ಚಟವ
ನ್ನು ಬಿಡಿಸಿ ಹೊಸ ಚಟ ಹಚ್ಚುವದಕ್ಕಿಂತಲೂ ಮೊದಲು
ಚಟ ಹಚ್ಚುವದು ಸುಲಭ,

ಚಟದಿಂದ ಆಗುವ ಲಾಭ

ಹುಡುಗರು ಬಿಳಿಯ ಜೀಕಾದರೆ ಚಟುವಟಿಕೆಯೇ ಮು
ಖ್ಯ ವುಂಟು. ಆಗ ಚಲೋ ಚಟವನ್ನು ಹುಡುಗರಿಗೆ ಹ
ಚ್ಚುವದು ಉತ್ತಮ. ಯಾಕಂದರೆ ಚಲೋ ಚಟದಿಂದ ಚ
ಲೋ ಕೃತ್ಯಗಳನ್ನು ಚಲೋ ರೀತಿಯಿಂದ ಮಾಡಲಿಕ್ಕೆ ಸು
ಲಭವಾಗುತ್ತದೆ ಇಚ್ಛಾ ಶಕ್ತಿಯು ಕಡಿಮೆಯಾಗುವದರಿಂ
ದ ಬುದ್ಧಿ ಸಾಮರ್ಥ್ಯದ ಇಂದ್ರಿಯಗಳ ಕೆಲಸ ಇವುಗಳನ್ನು
ಬೇರೆ ಕೆಲಸಕ್ಕೆ ಹಚ್ಚಲಿಕ್ಕೆ ಬರುತ್ತದೆ. ಇದರಿಂದ ಶಾರೀ
ರ ಶ್ರಮವೂ ಕಡಿಮೆಯಾಗುತ್ತದೆ. ಮತ್ತು ಅದನ್ನೂ ಇ
ಚ್ಛಾ ಶಕ್ತಿಯನ್ನೂ ಬೇರೆ ಬೇರೆ ಕೆಲಸಕ್ಕೆ ಹಚ್ಚಲಿಕ್ಕೆ ಬರು
ತ್ತದೆ.

ಚಟದಿಂದ ಆಗುವ ಹಾನಿ

ದಿನಾಲು ಚಟದಿಂದ ಮಂತ್ರದಂತೆ ನಡಿಯುವವನಿಗೆ ಚ
ಟವು ಅವನನ್ನು ಬೇರೆ ರೀತಿಯಿಂದ ನಡೆಯಗೊಡುವದಿಲ್ಲ.
(ಅಂದರೆ ಏನೇ ಮನೋಭಾವನೆಯು ಪ್ರಬಲವಾಗುವದಿಲ್ಲ)
ಚಟವು ಮನುಷ್ಯನನ್ನು ಪರತಂತ್ರನನ್ನಾಗಿ ಮಾಡುತ್ತದೆ.
ಚಟದ ಅವಶ್ಯಕತೆ ಇರುವಂತೆ ಶಿಥಿಲತೆಯೂ ಅವಶ್ಯವಿರ

ತ್ತದೆ. ಅಂದರೆ ಮಧ್ಯಮ ಮಾರ್ಗದಿಂದ ನಡೆಯಬೇಕು ನಾವು ಚಟಕ್ಕೆ ಅಧೀನವಾಗಬಾರದು ಚಟವೇ ನಮ್ಮ ಅಧೀನದಲ್ಲಿರಬೇಕು. ಇದರಿಂದ ನೋಡಲು ಬಲಗೈಯೋ ದಕ್ಕೆ ಪ್ರಾಧಾನ್ಯವಿರಬಾರದು. ಪ್ರಸಂಗ ಬಿದ್ದಾಗ ಎಡಗೈ ಯಾದರೂ ಬರಹ ಮುಂತಾದ ಉಪಯೋಗಕ್ಕೆ ಬೀಳುವಂತೆ ಮಾಡಬೇಕು. ಚಟದ ಅಧೀನದಲ್ಲಿದ್ದ ಮುದುಕರು ಚಟವನ್ನು ಬಿಡುವದಿಲ್ಲ. ಅವರು ಹೊಸ ಪ್ರವೃತ್ತಿಗಳಿಗೆ ವಿರುದ್ಧ ನಡೆಯುತ್ತಾರೆ.

ಚಟವು ಕೃತ್ಯ ಮತ್ತು ಶೀಲಸ್ವಭಾವ ಇವುಗಳ ನಡುವಿನ ಧರ್ಮವು. ಯಾಕಂದರೆ ಕೃತ್ಯದಿಂದ ಚಟ ಉಂಟಾಗುತ್ತದೆ. ಚಟಗಳ ಸಮೂಹವೇ ಮನುಷ್ಯನ ನೈತಿಕ ಸ್ವಭಾವವಾಗುತ್ತದೆ ಹುಡುಗರಲ್ಲಿ ಕೆಲವು ಹುಟ್ಟುಗುಣಗಳಿರುವವು. ಅದೇ ಸ್ವಭಾವವು. ಚಟದಿಂದ ಈ ಸ್ವಭಾವವನ್ನು ಕ್ರಮ ಪಡಿಸಿ ಬಲಪಡಿಸಿಕೊಳ್ಳುವದೇ ಮುಖ್ಯ ಕೆಲಸವು.

ಮೊದಲು ಹುಡುಗರ ಚಟುವಟಿಕೆಯು ಉಪಯೋಗವಾಗಿಕೊಳ್ಳಬೇಕು. ಅಂದರೆ ಅವರಿಂದ ಕೃತ್ಯವಾಡಿಸಬೇಕು ಇದರಿಂದ ಹುಡುಗರ ಇಚ್ಛೆಯು ಬೆಳೆಯುತ್ತದೆ. ಈ ಬೆಳೆಯೋಣವು ಅವರ ಕೃತ್ಯಗಳಿಂದ ತಿಳಿಯುತ್ತದೆ. ಸ್ವಭಾವ ಮತ್ತು ಕೃತ್ಯ ಇವೆರಡೂ ಬಂದಕ್ಕೊಂದು ತಳಕು ಹಾಕಲ್ಪಟ್ಟಿರುತ್ತವೆ. ಕೃತ್ಯದಿಂದ ಇಚ್ಛೆಯೂ, ಇಚ್ಛೆಯಿಂದ ಕೃತ್ಯವೂ ಆಗುತ್ತ ಹೋಗಿ ಅವರಲ್ಲಿ ಶೀಲಸ್ವಭಾವ ಉಂಟಾಗುತ್ತದೆ.

ಮಾಸ್ತರನು ಹುಡುಗರಲ್ಲಿ ಚಟ ಹುಟ್ಟಿಸ ಬೇಕಾದರೆ, ಹುಡುಗರ ಪ್ರಕೃತಿ (ಮೂಲಸ್ವಭಾವ) ಅವರ ಸ್ವಾಭಾವಿಕ ಹಾಗು ಸಾಮಾಜಿಕ ಪರಿಸ್ಥಿತಿಯನ್ನು ಕುರಿತು ವಿಚಾರ ಮಾಡಬೇಕು. ಪರಿಸ್ಥಿತಿಯು ಚನ್ನಾಗಿದ್ದರೆ ಅವನಿಗೆ ಸುಲಭವಾಗಿ ಚಲೋ ಚಟುಗಳು ಬೇಗ ಹತ್ತುತ್ತವೆ. ಈ ಚಟವು ಬೆಳೆಯುವ ಮುಂದೆ ಅದಕ್ಕೆ ಯಾವ ವಿರುದ್ಧ ಸಂಗತಿಗಳು ಒದಗುವವೋ ಅವನ್ನು ತೆಗೆದು ಹಾಕಬೇಕು. ಇದು

ನೊಸ್ತರನ ಕೆಲಸವು. ಸ್ವಾಭಾವಿಕ ಸ್ಥಿತಿ, ಮತ್ತು ಪರಿಸ್ಥಿತಿ, ಇವು ಪ್ರತಿಕೂಲ ವಿರುವ ಮೂಲಕ ಗಂಟೇ ಚವಡೇನ ಲ್ಲಿ ಚಲೋ ಶೀಲಸ್ವಭಾವ ಹುಟ್ಟಿಸಲಿಕ್ಕೆ ಕಠಿಣವಾಗುತ್ತದೆ.

ಶಾಲೆಯು ಹುಡುಗರಲ್ಲಿ ಚಟ ಹುಟ್ಟಿಸುವ ಬಗ್ಗೆ.

ಶಾಲೆಯಲ್ಲಿ ಹುಡುಗರಿಗೆ ಚಲೋ ಪದ್ಧತಿಗಳ ಉಪ ಯೋಗದಿಂದ ಚಲೋ ಚಟಗಳು ತೀವ್ರ ಹತ್ಯತ್ನವೆ ಮಾ ಸ್ತರನ ಚಟದ ತತ್ವಗಳ ಮೇಲಿಂದ ಚಲೋ ಚಟಗಳು ಹ ತ್ತುವವು.

ಅರಿಸ್ಟಾಟಲನೆಂಬ ತತ್ವಜ್ಞಾನಿಯು ಹೇಳುವದೇನಂದರೆ ಯಾರೂ ಕೆಟ್ಟವರಾಗಿ ಹುಟ್ಟುವದಿಲ್ಲ. ಆದರೆ ಅವರಿಗೆ ಹ ತ್ತುವ ಚಟ ದೊರಿಯುವ ಶಿಕ್ಷಣ, ಪರಿಸ್ಥಿತಿ, ಇವನ್ನು ಅ ನುಸರಿಸಿ ಎಷ್ಟೋ ಜನರು ಉತ್ತಮರಾಗಲಿ, ಕೆಟ್ಟವರಾಗಲಿ ಆಗುತ್ತಾರೆ. ಆದ ಕಾರಣ ಚಟುವಟಿಕೆಯನ್ನು ಯಾವರೀ ತಿಯಿಂದ ಉಪಯೋಗಿಸುತ್ತೇವೋ ಆ ಪ್ರಕಾರ ಹುಡುಗ ರು ಆಗುತ್ತಾರೆ.

ಹುಡುಗರಲ್ಲಿ ಉತ್ತಮ ಚಟ ಹತ್ತಬೇಕಾದರೆ ಅವರ ಚ ಟುವಟಿಕೆಯನ್ನು ಹ್ಯಾಗೆ ಮಾರ್ಗಕ್ಕೆ ಹಚ್ಚಬೇಕೆಂಬುವ ಬಗ್ಗೆ

೧ ಮೊದಲು ಹುಡುಗರಲ್ಲಿ ತನ್ನ ಕರ್ತವ್ಯವನ್ನು ಯಥಾ ಯೋಗ್ಯವಾಗಿ ಮಾಡಿಕೊಳ್ಳುವ ತಿಳುವಳಿಕೆಯನ್ನು ಮಾಡಿ ಕೊಡಬೇಕು.

೨ ಬಳಿಕ ಇದಕ್ಕೆ ಸಂಬಂಧಿಸಿದ ಇತರ ಸದ್ಗುಣ ಚಟ ಗಳನ್ನು ಹುಟ್ಟಿಸಬೇಕು. ಅವ್ರಯಾವವೆಂದರೆ— ಪ್ರಾಮಾ ಣಿಕತನ ನ್ಯಾಯ, ಮಿತವ್ಯಯ, ದಾನ ಧರ್ಮ ಮುಂತಾ ದವುಗಳ ಬಗ್ಗೆ ಕರ್ತವ್ಯಜ್ಞಾನ ಮಾಡಿಕೊಡಬೇಕು.

PRESENT FEMALE EDUCATION AND THEIR CIVLIZATION.

ಸಾಂಪ್ರತದ ಸ್ತ್ರೀ ಶಿಕ್ಷಣವೂ ಸುಧಾರಣೆಯೂ.

(ಬಬ್ಬ ಸ್ತ್ರೀಯಿಂದ ಬರೆದು ಬಂದದ್ದು)

ಸಾಂಪ್ರತಕ್ಕೆ, ನಮ್ಮ ಸ್ತ್ರೀಯರಿಗೆ ದೊರೆಯುತ್ತಿರುವ ಶಿಕ್ಷಣವು ಯಾವ ತರದ್ದು? ಅದರಲ್ಲಿ ಯಾವ ಯಾವ ಸುಧಾ ರಣೆಗನ್ನುಂಟು ಮಾಡಬೇಕಾಗಿರುವದು. ಅವರಿಗೆ ಮೇಲ್ ರದ ಶಿಕ್ಷಣ ದೊರೆಯುವಂತೆ ಆವಾವ ಉಪಾಯಗಳನ್ನು ಮಾಡಬೇಕು ಮುಂತಾದ ಸಂಗತಿಗಳನ್ನು ಕುರಿತು ದೊ ಡ್ಡ ದೊಡ್ಡ ಪಂಡಿತ ಜನರು ತಮ್ಮ ಅಭಿಪ್ರಾಯಗಳನ್ನು ಪ್ರ ಕಟಿಸಿದ್ದಾರೆ.

" ಸ್ತ್ರೀಯರಿಗೆ ಶಿಕ್ಷಣವು ಅವಶ್ಯವಿರುವದು" ಎಂಬ ಮಾ ತು ಬಹು ಜನ ಸಮ್ಮತವಾದದ್ದು. ಯಾಕಂದರೆ ಹುಡುಗ ರು ಮುಂದೆ ಒಳ್ಳೆಯವರಾಗುವದೂ ಕೆಟ್ಟವರಾಗುವದೂ ಅ ವರ ತಾಯಿಯ ಶಿಕ್ಷಣವನ್ನೇ ಅವಲಂಬಿಸಿರುವದು. ಆದ ದರಿಂದ ಸ್ತ್ರೀಯರಿಗೆ ಯೋಗ್ಯ ಶಿಕ್ಷಣ ದೊರೆಯದಿದ್ದರೆ ಭಾ ವೀ ರಾಷ್ಟ್ರವು ಸುಧಾರಿಸುವದು ಅಸಂಭವವು. ಈ ಮಾ ತು ಎಲ್ಲರಿಗೂ ಗೊತ್ತಿದ್ದದ್ದೇ ಸರಿ.

ಸ್ತ್ರೀಯರ ಹೆಚ್ಚಳವು ಹೇಗಾಗುವದು? ಸಮಾಜದ ಸು ಧಾರಣೆಯಾಗಲಿಕ್ಕೆ ಸ್ತ್ರೀ ಶಿಕ್ಷಣದಲ್ಲಿ ಯಾವ ಯಾವ ಹೆಚ್ಚು ಕಡಿಮೆಗಳನ್ನು ಮಾಡಬೇಕು? ಈ ಬಗ್ಗೆ ಪುರುಷರಂತೆ ಸ್ತ್ರೀಯರಾದರೂ ವಿಚಾರಸ ತೊಡಗಿದ್ದಾರೆ. ತಮ್ಮ ಜ್ಞಾನದ ಅಭಿವೃದ್ಧಿಯಾಗಬೇಕು. ತಮ್ಮ ದೇಶದ ಉನ್ನತಿಗೆ ತಮ್ಮ ಪ್ರಯತ್ನಗಳು ಕಾರಣವಾಗಬೇಕು ಮುಂತಾದ ಕಲ್ಪನೆ ಗಳು ಅವರ ಮನಸ್ಸಿನಲ್ಲಿ ಬರಹತ್ತಿವೆ. ಇದಕ್ಕೋಸ್ಕರ ಕಳೆದ ವರ್ಷ ಮುಂಬಯಿ ನಗರದಲ್ಲಿ ರಾಷ್ಟ್ರೀಯ ಸಭೆ ಯ ಕಾಲಕ್ಕೆ " ಭಾರತ ಮಹಿಲಾ ಪರಿಷತ್ತೆಂಬ ಮಹಾ ಸಭೆಯು ಕೂಡಿತ್ತು. ಆ ಸಭೆಯಲ್ಲಿ ಎಲ್ಲ ಜಾತಿಯ, ಎಲ್ಲ ಧರ್ಮದ ಹಿಂದೂ ಸ್ತ್ರೀಯರ ಭಾಷಣಗಳಾದವು. ಅದರಲ್ಲಿ ಹುಡುಗಿಯರಿಗೆ ಯೋಗ್ಯವಾದ ಶಿಕ್ಷಣವು ದೊರೆಯು ತಕ್ಕ

ದ್ದೆಂತಲೂ ಅವರಿಗೆ ಗೃಹಕೃತ್ಯದ ತಿಳುವಳಿಕೆ ಇರತಕ್ಕ ದ್ದೆಂತಲೂ ಅವರ ಉನ್ನತಿಗೆ ಸಂಪ್ರತಧಲ್ಲಿ ದೊರೆಯುತ್ತಿ ರುವ ಶಿಕ್ಷಣದಲ್ಲಿ ಅನೇಕ ಸುಧಾರಣೆಗಳನ್ನುಂಟು ಮಾಡಿಕೊ ಳ್ಳತಕ್ಕದ್ದೆಂತಲೂ ಹಳ್ಳಿಪಳ್ಳಿಗಳಲ್ಲಿ ಸಹ ಸ್ತ್ರೀ ಶಿಕ್ಷಣವು ಪ್ರ ಚಾರ ಹೊಂದುವಂತೆ ಉಪಾಯಗಳನ್ನು ಕೈಕೊಳ್ಳಬೇಕೆಂತ ಲೂ ಬಹುಜನ ವಿದುಷಿಯರು ಪ್ರತಿಪಾದಿಸಿದರು. ಮುಂಬ ಯಿ ನಗರದಲ್ಲಿ 'ಮಹಿಲಾ ಸಮಾಜ,' 'ಲೇಡಿ ಸೊಸೆಲ್‌ಕ್ಲಬ್' ಎಂಬ ಹೆಸರಿನ ಎರಡು ಸ್ತ್ರೀ ಸಂಸ್ಥೆಗಳು ಬಹು ದಿವಸಗಳ ಪೂರ್ವದಲ್ಲಿಯೇ ಸ್ಥಾಪಿಸಲ್ಪಟ್ಟಿರುವವು. ಇತ್ತಿತ್ತ ಸಾತಾರೆ ಯಲ್ಲಿಯೂ ಇಂಥಾದ್ದೇ ಒಂದು ಸಭೆಯು ನೆರೆಯಹತ್ತಿದೆ. ಸೊಲ್ಲಾಪುರದಲ್ಲಿ ಸುಮಾರು ಎಂಟು ವರ್ಷಗಳ ಪೂರ್ವದಲ್ಲಿ ಇದೇ ತರದ ಒಂದು ಸಭೆಗೂಡುತ್ತಿತ್ತು. ಉಮರಾವತಿ ವರ್ಧಾ ಮುಂತಾದ ಪಟ್ಟಣಗಳಲ್ಲಿಯೂ ಸ್ತ್ರೀ ಸಮಾಜಗ ಳುಂಟು. ಆದರೆ ನಮ್ಮ ಕರ್ನಾಟಕದಲ್ಲಿ ಇಂಥ ಸಂಸ್ಥೆಗ ಳಲ್ಲಿಂದೂ ಇಲ್ಲ. ಇಷ್ಟೇ ಅಲ್ಲ. ಸ್ತ್ರೀಯರಿಗೆ ಮಾರ್ಗದ ರ್ಶಿಗಳಾದಂಥ ಗುರು ಸ್ವರೂಪಿಗಳಾದ ಪುರುಷವರ್ಗವು ಇಂ ಥ ಪ್ರಯತ್ನದಲ್ಲಿ ತೊಡಗಿರುವದು ಸಹ ಕೇಳಿಕೆಯುಲ್ಲಿಲ್ಲ. ಆ ದರೆ ಹೆಣ್ಣು ಮಕ್ಕಳ ಸಾಲೆಗಳಾದಂದಿನಿಂದ ಕೆಲ ಜನ ಸ್ತ್ರೀ ಯರಿಗೆ ಓದ ಬರಿಯಲಿಕ್ಕೆ ಬರುತ್ತದೆ. ಒಟ್ಟಿಗೆ ಇಲಾಖೆ ಯಲ್ಲಿ ಸ್ತ್ರೀ ಶಿಕ್ಷಣವು ಮುಂದಡಿಯನ್ನಿಕ್ಕುತ್ತ ನಡೆದಿರುವ ದೆಂತಲೂ ಅದರಿಂದ ಕಾಲಾವಧಿಯಿಂದಾದರೂ ಪ್ರಯೋಜ ನವಾಗಬಹುದೆಂತಲೂ ಊಹಿಸಲಿಕ್ಕೆ ಆಸ್ಪದವಾಗಿದೆ.

ಪೂರ್ವಕಾಲದಲ್ಲಿ ಸ್ತ್ರೀಯರಿಗೆ ಬಹಳ ಮರ್ಯಾದೆ ಇತ್ತು ಅವರಿಗೆ ಇಂಥ ಪ್ರಕಾರದ್ದೇ ಶಿಕ್ಷಣವು ದೊರೆಯುತ್ತಿತ್ತೆಂ ದು ನಿಶ್ಚಯವಾಗಿ ಹೇಳಲಿಕ್ಕೆ ಬರುವದಿಲ್ಲ. ಪ್ರಾಚೀನ ಕಾ ಲದ ಸ್ತ್ರೀಯರಿಗೆ ಓದೋಣ, ಬರಿಯೋಣ, ಚಿತ್ರ ತೆಗೆಯೋ ಣ ಮುಂತಾದ ವಿದ್ಯಗಳು ಚೆನ್ನಾಗಿ ಬರುತ್ತಿದ್ದವೆಂಬುದು ಭಾರತ ರಾಮಾಯಣಗಳಿಂದಲೂ ವಿಷ್ಣು ಪುರಾಣದಲ್ಲಿರುವ ಚಿತ್ರ[illegible] ವೃತ್ತಾಂತದಿಂದಲೂ ಸ್ಪಷ್ಟವಾಗಿ ಕಂಡು ಬ

ರುತ್ತದೆ. ಕೆಲವರು ತಮ್ಮ ವಿದ್ವತ್ತಿನಿಂದ ಗಂಡಶರನ್ನು ಸಹ ಹಿಂದಕ್ಕೆ ದೂಡಿದ್ದರು. ಎಂಬ ಬಗ್ಗೆ ಹಲವು ಕಥಾನಕಗಳೂ ದಂತಕಥೆಗಳೂ ಆಧಾರವಾಗಿವೆ. ಶೌರ್ಯಾದಿಸದ್ಗುಣಗಳುಹಿಂದೂ ಸ್ತ್ರೀಯರಲ್ಲಿದ್ದವೆಂಬದು ಮೊನ್ನೆ ಮೊನ್ನೆ ಆಗಿ ಹೋದ ಮಹಾರಾಣೀ ಲಕ್ಷ್ಮೀಬಾಯಿ ಗುಲಾಬಬಾಯಿ ಮುಂತಾದವರ ಚರಿತ್ರಗಳಿಂದ ಮನವರಿಕೆ ಯಾಗುತ್ತದೆ. ಪೂರ್ವಕಾಲದ ಸ್ತ್ರೀಯರು ಪತಿವ್ರತೆಯರೂ, ಸ್ವಧರ್ಮನಿರತರೂ ಸದಾಚಾರಿಗಳೂ, ಇದ್ದದ್ದಲ್ಲದೆ ತಮ್ಮ ಮನೆಕೆಲಸದಲ್ಲಿ ದಕ್ಷರಾಗಿದ್ದರು. ಸ್ವಲ್ಪ ವರ್ಷಗಳ ಹಿಂದೆ ಆಗಿ ಹೋದ ಅಹಲ್ಯಾಬಾಯಿ, ಬಾಯಜಾಬಾಯಿ ಲಕ್ಷ್ಮೀಬಾಯಿ ಮುಂತಾದವರ ಚರಿತ್ರಗಳಿಂದ ಕೂಡ ಇವರು ಸದಾಚಾರಿಗಳೂ, ಸುಶಿಕ್ಷಿತರೂ ಪತಿವ್ರತೆಯರೂ ಶೂರರೂ ಆಗಿದ್ದರೆಂಬದು ವ್ಯಕ್ತವಾಗುತ್ತದೆ. ಆದರೂ ಶಿಕ್ಷಣದಿಂದ ಪ್ರಾಪ್ತವಾದ ಉನ್ನತ ವಿಚಾರಗಳೂ, ಸುಗುಣಗಳೂ ಯಾವತ್ತು ಸ್ತ್ರೀಯರಲ್ಲಿ ತೋರಿಬರುತ್ತಿದ್ದಿಲ್ಲ. ಕ್ವಚಿತ ಸ್ತ್ರೀಯರಲ್ಲಿ ಮಾತ್ರ ಇವು ವಾಸ ಮಾಡುತ್ತಿದ್ದವೆಂದು ವ್ಯಕ್ತವಾಗುವದು. ಇದು ವಾಸ್ತವಿಕವೇ ಸರಿ. ಶಿಕ್ಷಣ ಸಂಸ್ಕಾರವು ಸರ್ವರಿಗೂ ಸರಿಯಾಗಿ ಆಗಲಾರದೆಂಬದು ಸ್ಪಷ್ಟವೇ ಇದರಿಂದ ಈಗ ನಡೆದಿರುವ ಸ್ತ್ರೀ ಶಿಕ್ಷಣದ ಚಲನ ವಲನವು ತೀರ ಹೊಸದಲ್ಲವೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಆದರೆ ಅದಕ್ಕೆ ಹೊಸರೂಪ ಮಾತ್ರ ಬಂದಿರುತ್ತದೆ. ಸುಮಾರು ಐವತ್ತು ವರ್ಷಗಳಿಂದಿತ್ತ ಈ ಹೊಸ ಸ್ತ್ರೀ ಶಿಕ್ಷಣದ ಕಡೆಗೆ ನಮ್ಮ ಜನರು ಲಕ್ಷ ಕೊಡಹತ್ತಿದರು ಅವರು ಹೆಣ್ಣು ಮಕ್ಕಳಿಗೋಸುಗ ಶಾಲೆಗಳನ್ನು ಸ್ಥಾಪಿಸಿ ಮಧ್ಯಮ ಪ್ರತಿಯ ಶಿಕ್ಷಣದ ಮಾರ್ಗವನ್ನು ಆರಂಭಿಸಿದರು. ಮುಂದೆ ವಿಚಾರ ಬೆಳೆದಂತೆ ಅದರಲ್ಲಿ ಸುಧಾರಣೆಯೂ ಬೆಳೆಯುತ್ತ ನಡೆಯಿತು. ಬಳಿಕ ಮೇಲ್ತರದ ಶಿಕ್ಷಣವನ್ನು ಕೊಡುವದಕ್ಕೆ ಪ್ರಾರಂಭ ಮಾಡಿದರು, ಪುಣೆ, ಮುಂಬಯಿ, ಅಹಮ್ಮದಾಬಾದ ಮುಂತಾದ ಪಟ್ಟಣಗಳಲ್ಲಿ ಹೆಣ್ಣು ಮಕ್ಕಳಿಗಾಗಿ ಆಂಗ್ಲ ಭಾಷೆಯ ಶಾಲೆಗಳೂ ಪುಣೆ, ಅಹಮ್ಮದಾಬಾದ,

ಸಾರವಾಡಗಳಲ್ಲಿ ಫೀಮೇಲ ಟ್ರೇನಿಂಗ ಕಾಲೇಜಗಳೂ ಸ್ಥಾಪಿತವಾದವು. ಹೆಣ್ಣು ಮಕ್ಕಳ ಶಾಲೆಗಳಿಗೆ ಶಿಕ್ಷಕಿಯರು ದೊರೆಯಲಾರಂಭಿಸಿದರು. ಈ ಬಗೆಯಾಗಿ ನಾಲ್ಕು ಕಡೆಯಿಂದ ಸ್ತ್ರೀ ಶಿಕ್ಷಣವು ವೇಗದಿಂದ ನಡೆದಿರುವದರಿಂದ ಸ್ತ್ರೀಯರು ಸುಧಾರಿಸಿದರೆಂದು ಮಾತ್ರ ತಿಳಿಯಲಾಗದು. ಜನರು ಸುಧಾರಣೆಗೆ ಇನ್ನೂ ಮುಟ್ಟೇ ಇಲ್ಲ, ಮನುಷ್ಯರು ತಮ್ಮ ಹಾಗು ತಮ್ಮ ದೇಶದ ಉನ್ನತಿಯು ಹ್ಯಾಗಾಗುವದೆಂಬದನ್ನು ವಿಚಾರದಿಂದ ನಿರ್ಧರಿಸಿ ಅದಕ್ಕನುಗುಣವಾದ ಮಾರ್ಗವನ್ನು ಹಿಡಿಯುವದೂ ಆ ಮಾರ್ಗವನ್ನು ಹಿಡಿಯಲಿಕ್ಕೆ ತಕ್ಕಂಥ ಮನಃ ಸುಧಾರಣೆಯನ್ನು ಪಡೆಯುವದೂ ನಿಜವಾದ ಶಿಕ್ಷಣದ ಪ್ರಭಾವವೆನಿಸುವದು. ಇಂಥ ಶಿಕ್ಷಣವನ್ನು ಪಡೆಯದವರ ಬಾಳು ವ್ಯರ್ಥವೆಂದು ಹೇಳುವ ಕಾರಣವಿಲ್ಲ ಈ ತತ್ವದಿಂದ ವಿಚಾರ ನಡಿಸಿದರೆ ನಮ್ಮ ಸ್ತ್ರೀ ವರ್ಗವು ನಿಜವಾದ ಶಿಕ್ಷಣವನ್ನು ಬಿಟ್ಟು ಕೇವಲ ಪರರ ಅನುಕರಣ ಮಾಡಲಿಕ್ಕೆ ಪ್ರಾರಂಭಿಸಿರುವದೆಂದು ಕಾಣುವದು. ಈ ಬಗ್ಗೆ ಪುರುಷ ವರ್ಗವೂ ವಿಚಾರ ಮಾಡತಕ್ಕದ್ದು. ಸ್ತ್ರೀಯರಂತೂ ಅವಶ್ಯ ವಿಚಾರ ಮಾಡತಕ್ಕದ್ದು. ಒಳಗಡೆಯ ಹತ್ತೆಂಟು ವರ್ಷಗಳಲ್ಲಂತೂ ಒರ, ಪಿಡುಗುಗಳ ಹಾವಳಿಯಿಂದ ಶಿಕ್ಷಣವು ಬಹು ಮಂದವಾಗಿ ಸಾಗುವದು. ಇವೆರಡು ಬಾಧೆಯಿಂದ ನಾವೆಲ್ಲರು ನಿರ್ವಿಣ್ಣವಾಗಿ ಹೋಗಿದ್ದೇವೆ. ಈ ಪ್ರಕಾರದ ಕಷ್ಟದ ಸ್ಥಿತಿಯಲ್ಲಿ ಶಿಕ್ಷಣವು ಸರಿಯಾಗಿ ಸಾಗುವದು ಅಸಂಭವವೇ ಸರಿ. ಅಂದ ಬಳಿಕ ಸುಧಾರಣೆಯಾಗುವ ಬಗೆಯೇನು?

ಅರ್ವಾಚೀನ ಪದ್ಧತಿಯ ಶಿಕ್ಷಣವು ಮೊದಲು ಪುಣೆ, ಮುಂಬಯಿ ಮುಂತಾದ ಮಹಾರಾಷ್ಟ್ರ ಪ್ರದೇಶಗಳಲ್ಲಿ ತಲೆ ದೋರಿತು. ಅಲ್ಲಿಂದ ಅದು ಮೆಲ್ಲ ಮೆಲ್ಲನೆ ನಮ್ಮ ಕರ್ನಾಟಕಕ್ಕೂ ವಟ್ಟಿತು. ಆದರೂ ಮೇಲ್ತರದ ಶಿಕ್ಷಣವು ಪುಣೆ, ಮುಂಬಯಿ ಇವೆರಡೇ ನಗರಗಳಲ್ಲಿ ದೊರೆಯುವದು ಕರ್ನಾಟಕದಲ್ಲಿ ಅದರ ವಾರ್ತೆಯು ಕೂಡ ಇಲ್ಲ. ಅಲ್ಲಿಯಾದರೂ ಅದು ಕೇವಲ ಶ್ರೀಮಂತ ಜನರ ಸ್ತ್ರೀಯರಿಗೆ ಉ

ಪಯೋಗವಿಲ್ಲದ್ದಾಗಿತ್ತು. ಈ ಪ್ರಕಾರ ಶಿಕ್ಷಣದಿಂದ ಶಿಕ್ಷಿತರಾದ ಹುಡಿಗೆಯರು ನೂರರಲ್ಲಿ ಇಬ್ಬರು ದೊರೆಯುವದು ಸಹ ದುರ್ಲಭ. ಈ ಪರದೇಶದ ಶಿಕ್ಷಣದಿಂದ ದುಷ್ಟ ರಾಷ್ಟ್ರ ಮುಂಬಯಿ ಕಡೆಯ ಸ್ತ್ರೀಯರ ಆಚಾರ ವಿಚಾರ ಉಡಿಗೆ ತೊಡಿಗೆಗಳಲ್ಲೆಲ್ಲ ಸ್ಥಿತ್ಯಂತರ ವುಂಟಾಗಿರುತ್ತದೆ. ಈ ಸ್ಥಿತ್ಯಂತರಗಳು ನಮ್ಮ ಇರುವಿಕೆಗೂ ಬಾಳುವೆಗೂ ಅನು ಕೂಲವಾದವುಗಳೂ ಪ್ರಯೋಜನವಾದವುಗಳೂ ಅಲ್ಲ ವೆಂದು ನಾವು ನಿಷ್ಕರ್ಷವಾಗಿ ಹೇಳುತ್ತೇವೆ.

ಪಾಶ್ಚಿಮಾತ್ಯರ ಶಿಕ್ಷಣ ಪದ್ಧತಿಯನ್ನು ನಾವು ಕುರುಡರಂತೆ ಅನುಸರಿಸಿದ್ದರಿಂದ ನಮ್ಮಲ್ಲಿ ಋಣ ಡೌಲು ಮನೆಮಾಡಿ ಕೊಂಡಿತು. ಪುಣೆ ಮುಂಬಯಿ ಕಡೆಯ ಕಲಿತ ಹೆಣ್ಣುಮಕ್ಕಳನ್ನು ನೋಡಿದರೆ ನಮ್ಮ ಬರಹದ ಸತ್ಯತೆಯು ವ್ಯಕ್ತವಾಗುವದು ಸುಳ್ಳೆವದಿಂದ ಕರ್ನಾಟಕದ ಸ್ತ್ರೀ ಸಮಾಜವು ಈ ಬಲೆಗೆ ಬಿದ್ದಿಲ್ಲ. ಆದರೂ ಅಲ್ಲಲ್ಲಿ ಈ ಋಣಡೌಲಿನ ಬಗೆಯನ್ನು ಕಾಣಬಹುದು. ಚಿಕ್ಕ ಮಕ್ಕಳ ಉಡಿಗೆತೊಡಿಗೆಗಳಲ್ಲಂತೂ ಅತಿ ಚಮತ್ಕಾರವನ್ನುಂಟು ಮಾಡಿದ್ದೇವೆಂದರೂ ಸಲ್ಲುವದು. ಇದೇ ಪ್ರಕಾರದ ಫೋಷಾಕ ಹಾಕಿಕೊಳ್ಳಬೇಕೆಂಬ ನಿರ್ಬಂಧ ವಿರದ್ದರಿಂದ ಇಂಗ್ರೇಜಿ, ಪಾರ್ಶಿ ಗುಜರಾಥಿ, ಕರ್ನಾಟಕಿ ಎಂಬ ಅನೇಕ ತರದ ಮಿಶ್ರ ಪೋಷಾಕಗಳನ್ನು ಅವರಿಗೆ ಹಾಕುತ್ತೇವೆ, ಇಂಗ್ರೇಜಿ ಬೂಟು, ಪಾರ್ಶಿಕೋಟು, ಗುಜರಾಥಿ ಟೊಪ್ಪಿಗೆ ಈ ಎಲ್ಲ ಪ್ರಕಾರದವುಗಳನ್ನು ನಾವು ಪ್ರೀತಿಯಿಂದ ತಕ್ಕೊಳ್ಳುತ್ತೇವೆ. ಸಾಧಾರಣ ಸ್ವಲ್ಪ ಕಲಿತ ಸ್ತ್ರೀ ಇದ್ದಳೆಂದರೆ ಅವಳ ಮಕ್ಕಳಿಗೆ ಬೂಟು ಕಾಲಚೀಲಗಳು ಅವಶ್ಯವಾಗಿ ಬೇಕು ಇಲ್ಲದಿದ್ದರೆ ಸುಶಿಕ್ಷಿತಳೆಂದು ಅನ್ನುವವರು ಯಾರು? ಈ ಪ್ರಕಾರ ಅವಳಿಗೆ ತೋರ ಹತ್ತುತ್ತದೆ.

ನಮ್ಮ ಸ್ತ್ರೀಯರಲ್ಲಿ ಅದರಲ್ಲಿ ಕರ್ನಾಟಕ ಸ್ತ್ರೀಯರ ಉಡಿಗೆತೊಡಿಗೆಗಳಲ್ಲಿ ವಿಶೇಷ ಹೆಚ್ಚು ಕಡಿಮೆಯಾಗಿಲ್ಲ. ಆದರೂ ಅವುಗಳಲ್ಲಿ ಬೇರೆ ಬೇರೆ ಪ್ರಕಾರಗಳುಂಟಾಗಿರುತ್ತವೆ.

ಶಾಲಾಪತ್ರಕ.

ಪದ್ಯ.

ವಿದ್ಯಾವಿಹೀನಗುರುವರ್ಯರುನ್ನತಿಳಿಯುಂಸಚ್ಛಿಷ್ಯಶೋತ್ಕರ್ಷಣಂ
ಬಿಡುಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಸಹವಿಂದಿತ್ತವಪೋದುಪಾಳ್ಸುಗುಣಂ ತೋರಲ್ಕೆಳೈಕೊಂಮುದೈ(೧)
ಬಯಿಯಿಂದೋಪವತಿದ್ದ ವೇಳ್ವುದುಮಧರಿಣ್ಣಾನಾಳಿವೃದ್ದಿಪ್ರಯು

ಪುಸ್ತಕ ೪೧] ನವಂಬರ ೧೯೦೫. [ಸಂಚಿಕೆ ೧೧

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಕಳೆದ ತಿಂಗಳ ಒಂಬತ್ತನೇ ತಾರೀಖಿನ ದಿವಸ ಫ್ರೀನೋಲ್ ನಾರ್ಮಲ್‌ಸ್ಕೂಲಿನ ಪ್ರವೇಶ ಸಮಾರಂಭವು ಪ್ರಸ್ತುತ ಪ ಕಲೆಕ್ಟರರಾದ ಮೆಹಬ್ಬಾನ್ ಗಿಬ್ಬದೊರೆಗಳ ಹಸ್ತದಿಂದ ಸಾಂಗಗೊಳಿಸಲ್ಪಟ್ಟಿತು. ಸಮಾರಂಭಕ್ಕೆ ಊರೊಳಗಿನ ಅನೇಕ ಸಭ್ಯ ಗೃಹಸ್ಥರು ಬಂದಿದ್ದರು. ಶಾಲಾಗೃಹವನ್ನು ಪತಾಕಾದಿಗಳಿಂದ ಒಳಿತಾಗಿ ಸಿಂಗರಿಸಿದ್ದರು. ಆ ಕಾಲದಲ್ಲಿ ಕಾಲೇಜಿನ ಪ್ರಿನ್ಸಿಪಾಲರಾದ ರಾ. ಸಾ. ರೊದ್ದ ಶ್ರೀನಿವಾಸರಾಯರು ಮೊದಲು, ಶಾಲೆಯ ಸಂಬಂಧದ ಸಾಗ್ರವೃತ್ತವನ್ನು ವಿವರಿಸುವಂಥ, ಧಾರವಾಡ ಪ್ರಾಂತದಲ್ಲಿ ಸ್ತ್ರೀಶಿಕ್ಷಣವು ಕ್ರಮವಾಗಿ ಪ್ರಸಾರಗೊಂಡ ಬಗೆಯನ್ನು ವ್ಯಕ್ತಗೊಳಿಸುವಂಥ ಒಂದು ಸರಸವಾದ ಲೇಖನವನ್ನು ಸಭೆಯಲ್ಲಿ ಓದಿದರು. ಅದರ ಸಾರಾಂಶವೇನೆಂದರೆ—

ಸಜ್ಜನರೆ, ಇಂದಿನ ಸಮಾರಂಭವು ಯಾವದೆಂಬದನು ಬಿಡದು ಹೇಳುವ ಕಾರಣವಿಲ್ಲ. ಮಾನವ ಪ್ರಾಣಿಯು ಅದರಲ್ಲಿ ವಿಶೇಷವಾಗಿ ಅಜ್ಞಾನಾಂಧಕಾರದಲ್ಲಿ ಅಳಿದುಳಿದು ಮುಳುಗಿದ ಸ್ತ್ರೀವರ್ಗದ ಶಿಕ್ಷಣದ ಏಳಿಗೆಯನ್ನು ಪ್ರತ್ಯಕ್ಷ ನೋಡುವ ಸುಯೋಗವು ಪ್ರಾಪ್ತವಾದದ್ದಕ್ಕಾಗಿ ನನಗೆ ತುಂಬಾ

ಸೆವಕಾಘಾನವೆನಿಸುತ್ತದೆ. ಅದೇ ಮೇರೆಗೆ ತಮ್ಮೆಲ್ಲರಿಗೂ ಎನಿಸುತ್ತಿರಬಹುದು. ಇದರಲ್ಲೇನೂ ಸಂದೇಹವಿಲ್ಲ. ನಾನು ಇದೇ ಜಿಲ್ಲೆಯಲ್ಲಿ ಎರಡು ಪಟ್ಟು ಅಂದರೆ ಇಪ್ಪತ್ತುನಾಲ್ಕು ವರುಷಗಳಿಗಿಂತ ಹೆಚ್ಚುಕಾಲ ಡಿಪ್ಯೂಟಿ ಇನಸ್ಪೆಕ್ಟರನಾಗಿ ಕೆಲಸ ಮಾಡಿರುವೆನು. ಅದರಿಂದ ಈ ಜಿಲ್ಲೆಯೊಳಗೆ ಸ್ತ್ರೀ ಶಿಕ್ಷಣವು ಹ್ಯಾಗೆ ಹ್ಯಾಗೆ ಪ್ರಸರಣಹೊಂದಿತೆಂಬದು ನನಗೆ ಗೊತ್ತುಂಟು. ಆ ಸಂಗತಿಯನ್ನು ಇಂದು ತಮ್ಮೆದುರಿನಲ್ಲಿಟ್ಟರೆ ಅಪ್ರಸಂಗಿಕವೆನಿಸದೆಂದು ನನ್ನೆ ನಂಬಿಗೆಯುಂಟು.

ಸದ್ಗೃಹಸರೆ, ಸನ್ ೧೮೬೬-೬೭ನೇ ವರುಷಗಳ ಮೊದಲು ಈ ಜಿಲ್ಲೆಯಲ್ಲಿ ಒಂದೂ ಹೆಣ್ಣು ಮಕ್ಕಳ ಶಾಲೆ ಇದ್ದಿಲ್ಲ. ಮುಂದೆ ತುಸು ದಿವಸಗಳಲ್ಲಿ ಐದು ಸಾಲೆಗಳು ತಲೆ ದೋರಿದವು. ಬರಬರುತ್ತ ಆವುಗಳ ಸಂಖ್ಯೆಯು ಬೆಳೆ ಯುತ್ತ ಪ್ರಸ್ತುತಕ್ಕೆ ಜಿಲ್ಲೆಯಲ್ಲಿ ಮೂವತ್ತಾರು ಹೆಣ್ಣು ಮಕ್ಕಳ ಶಾಲೆಗಳಿರುವು. ಆಯಾ ಕಾಲದಲ್ಲಿದ್ದ ಎಜ್ಯುಕೇಶನಲ ಇನಸ್ಪೆಕ್ಟರರೂ, ನಾವೂ ಸ್ತ್ರೀಶಿಕ್ಷಣವು ಉತ್ಕರ್ಷ ಹೊಂದಬೇಕೆಂದು ಅನೇಕ ಬಗೆಯ ಯತ್ನಗಳನ್ನು ಮಾಡಿದೆವು. ಈ ಕಾರ್ಯಕ್ಕೆ ಜಸ್ಟಿಸ್ ಜಾರ್ಡಾಯಿನ್ ಮೆಹ ಬ್ರಾನ್ ಮ್ಯೂರ ಮೊದಲಾದ ಯುರೋಪಿಯನ್ ಸದ್ಗೃಹಸ್ಥರು ಕೂಡ ತಮ್ಮ ತನುಮನೆ ಧನಗಳನ್ನು ವೆಚ್ಚ ಮಾಡಿದರು. ಜಾರ್ಡಾಯಿನ್ ದೊರೆಗಳು ಐದನೇ ಇಯತ್ತೆಯಲ್ಲಿ ಉತ್ತೀರ್ಣರಾದ ಈ ಜಿಲ್ಲೆಯ ಹೆಣ್ಣು ಮಕ್ಕಳಿಗೆ ಉಚಿತವು ದೊರೆಯಬೇಕೆಂದು ಒಂದು ಸಾವಿರ ರೂಪಾಯಿಗಳನ್ನಿಟ್ಟರುವರು. ಅದರ ಬಡ್ಡಿಯಿಂದ ಇಂದಿಗೂ ಇಬ್ಬರು ಹೆಣ್ಣುಮಕ್ಕಳಿಗೆ ಉಚಿತ ಶಿಗುವದು. ಅದೇ ಮೇರೆಗೆ ಮ್ಯೂರಸಾಹೇಬರು ಒಂದು ಸಾವಿರ ರೂಪಾಯಿಗಳನ್ನು ಸರಕಾರದಲ್ಲಿಟ್ಟು ಅದರ ಬಡ್ಡಿಯಿಂದ ಹೆಣ್ಣುಮಕ್ಕಳ ನಾರ್ಮಲ್‌ಸ್ಕೂಲಲ್ಲಿ ಓಲಿತಾಗಿ ಜಾಸ್ತಿಯನ್ನು ತೋರಿಸಿದ ಹೆಣ್ಣುಮಕ್ಕಳಿಗೆ ಪುಸ್ತಕ ರೂಪವಾಗಿ ಉತ್ತೇಜನ ಶಿಗುವಂತೆ ವ್ಯವಸ್ಥೆಯನ್ನು ಮಾಡಿರುವರು.

ಜಲ್ಲಿಯೊಳಗೆ ಅಲ್ಲಲ್ಲಿ ಹೆಣ್ಣುಮಕ್ಕಳ ಸಾಲೆಗಳಾದ ಬಂ ತೃಪ್ತರಾಗದೆ ಈ ಹುಡಿಗಿಯರಿಗೆ ಕಲಿಸುವವರಾದ ರೂ ಸ್ತ್ರೀಯರೇ ಇರಬೇಕೆಂದು ಜಲೋದೆಂತಲೂ, ಉತ್ತರ ಮಧ್ಯಭಾಗಗಳಂತೆ ದಕ್ಷಿಣಭಾಗದಲ್ಲಿಯೂ ಹೆಣ್ಣುಮಕ್ಕಳ ನಾರ್ಮಲ್‌ಸ್ಕೂಲು ಇರಬೇಕೆಂತಲೂ ವಿದ್ಯಾಖಾತೆಯ ಈ ಭಾಗದ ಅಧಿಕಾರಿಗಳು ನೆನಿಸಿದರು. ಆದರೂ ಅದು ಈ ಗಿರುವ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಮೆಹಬ್ಬಾನ ಸಹಸ್ರಬುದ್ಧಿಯವರು ಬರುವವರೆಗೆ ಕೈಗೂಡಲಿಲ್ಲ, ಇ ದೇ ಸಂಧಿಯಲ್ಲಿ ನಮ್ಮ ಸುದೈವದಿಂದ ಈ ಸಂಗತಿಯ ಬ ಗ್ಗೆ ವಿಶೇಷವಾದ ಉತ್ಕಂಠೆಯುಳ್ಳ ಮ್ಯೂರಸಾಹೇಬರೇ ಕಲೆಕ್ಟರರಾಗಿದ್ದರು. ಇವರು ಶಿಕ್ಷಣ ಕಾರ್ಯದಲ್ಲಿ ಹೆ ಚ್ಚು ಮನಸು ಹಾಕುವವರು. ಇವರು ವಸ್ತಿ ಮಾಡಿದಂಥ ಹಾಗೂ ಅದರ ನೆರೆಹೊರೆಯಲ್ಲಿರುವಂಥ ಗ್ರಾಮಗಳ ಸಾ ಲೆಯನ್ನು ಎಂದೂ ನೋಡದೆ ಬಿಡಲಿಲ್ಲ. ಗ್ರಾಮಸ್ಥರು ಪ್ರತಿ ತಿಂಗಳಿಗೆ ಸಾಲೆಗೆ ತಪ್ಪದೆ ಹೋಗುತ್ತಿರಬೇಕೆಂತ ಲೂ, ಮಾಸ್ತರರಿಗೆ ತಟ್ಟುವ ತೊಂದರೆಗಳನ್ನು ದೂರಮಾಡ ಬೇಕೆಂತಲೂ ತಾಲೂಕಿನ ಮುಖಂಡ ಅಧಿಕಾರಿಗಳಿಗೆ ಕಟ್ಟ ಪ್ಪಣೆಯನ್ನು ಕೊಟ್ಟಿದ್ದರು, ತಾವು ಸಾಲೆಗೆ ಹೋದಾಗ ಆ ತಮ್ಮ ಅಪ್ಪಣೆಯು ಎಷ್ಟುಮಟ್ಟಿಗೆ ಪಾಲಿಸಲ್ಪಟ್ಟಿರುವ ದೆಂಬುದನ್ನು ನೋಡುತ್ತಿದ್ದರು. ಇಷ್ಟು ಲೋಕಶಿಕ್ಷಣ ಕಾರ್ಯದಲ್ಲಿ ದಕ್ಷರಾದ ಕಲೆಕ್ಟರರ ನೆರವು ದೊರೆಯಲು, ಇನಸ್ಪೆಕ್ಟರಸಾಹೇಬರು ಸರ್ ಗರ್ಜಿನೇ ಇಸವಿಯ ಫೆ ಬ್ರುವರಿ ತಿಂಗಳಲ್ಲಿ ಈ ಊರೊಳಗೆ ಒಂದು ಫೀಮೇಲ ನಾ ರ್ಮಲ್ ಕ್ಲಾಸನ್ನು ಸ್ಥಾಪಿಸಿದರು. ಆರಂಭಕ್ಕೆ ಎಂಟು ಜನ ವಿದ್ಯಾರ್ಥಿನಿಯರು ಕೂಡಿದರು. ಮುಂದೆ ಎರಡೆರ ಡು ವರುಷ ಅವರಿಗೆ ಕಲಿಸಿ ಕೆಲಸಕೊಟ್ಟು ಕಳಿಸಿ ಮತ್ತೆ ಹೊಸ ವಿದ್ಯಾರ್ಥಿನಿಯರನ್ನು ಕರೆಸಿಕೊಳ್ಳುವ ಪರಿಪಾಠವಿಟ್ಟ ರು. ಮುಂದೆ ಈ ವರ್ಗವು ಚೆನ್ನಾಗಿ ನಡೆಯುವದೆಂಬ ನಂಬುಗೆಯುಂಟಾದ ಬಳಿಕ ಇದಕ್ಕೆ ಸರ್ ಗರ್ಜಿನೇ ಜನ

ವರಿಯಿಂದ ಸಾಲೆಯ ಸ್ವರೂಪವು ಪ್ರಾಪ್ತವಾಯಿತು. ಇಂ
ದಿನ ವರೆಗೆ ಈ ವರ್ಗದಲ್ಲಿ ಕಲಿತು ಕೆಲಸ ಮಾಡುತ್ತಿದ್ದ
ಶಿಕ್ಷಕಿಯರ ಸಂಖ್ಯೆಯು ಇಪ್ಪತ್ತೈದರ ವರೆಗೆ ಬಂದಿದೆ.
ಅವರು ಕರ್ನಾಟಕದ ನಾಲ್ಕೂ ಜಿಲ್ಲೆಯಲ್ಲಿರುವರು. ಅವರ
ಲ್ಲಿ ಎಂಟು ಮಂದಿ ಇಪ್ಪತ್ತು ರೂಪಾಯಿಯ ಸರಟಿಫಿಕೇ
ಟುಗಳನ್ನು, ಉಳಿದವರು ಹದಿನೈದು ರೂಪಾಯಿಯ ಸರ
ಟಿಫಿಕೇಟುಗಳನ್ನು ಪಡೆದವರಿರುವರು. ಇವರೆಲ್ಲರೂ
ಹ್ಯಾಗೆ ಕೆಲಸಮಾಡುತ್ತಾರೆಂಬದು ಪ್ರಸಿದ್ಧವೇ ಉಂಟು.

ನಾರ್ಮಲ್ ಸಾಲೆಯು ಸ್ಥಾಪನವಾದ ಬಳಿಕ ಅದಕ್ಕೊಂ
ದು ಸ್ವತಂತ್ರವಾದ ಮನೆಯುಬೇಕೆಂಬ ಸಂಗತಿಯು ಅಧಿಕಾ
ರಿಗಳ ಮನದಲ್ಲಿ ಉದ್ಭವಿಸಿತು. ಅದಕ್ಕಾಗಿ ಸರಕಾರದ
ವರೆಗೆ ಕೆಲಸ ನಡಿಸಿ ಸುಮಾರು ಹತ್ತುಸಃವಿರ ರೂಪಾಯಿ
ಗಳನ್ನು ವೆಚ್ಚ ಮಾಡಿ ಈ ಇಮಾರತನ್ನು ಕಟ್ಟಿಸಿರುವ
ದು. ಇನ್ನು ಮೆಹಬಾನ್ ಗಿಬ್ಬದೊರೆಗಳು ಈ ಗೃಹದ
ಬಾಗಿಲ್ಲಳಿಗೆ ಹಾಕಿದ ಬೀಗಗಳನ್ನು ತೆಗೆಯುವ ಕಾರ್ಯವ
ನ್ನು ಮಾಡಬೇಕೆಂದು ಸೂಚಿಸಿ ನಾನು ಕುಳಿತುಕೊಳ್ಳು
ತ್ತೇನೆ.

ತರುವಾಯ ಗಿಬ್ಬ ದೊರೆಗಳು ಬಾಗಿಲವನ್ನು ತೆರೆದರು.
ವಿದ್ಯಾರ್ಥಿನಿಯರು ಅದರಲ್ಲಿ ಬಂದು ಕುಳಿತರು. ತರುವಾ
ಯ ಅದೇ ಗೃಹದ ಅಟ್ಟದ ಮೇಲೆ ಎಲ್ಲರೂ ಜಮೆಯಾಗಿ
ಕುಳಿತ ಬಳಿಕ ಗಿಬ್ಬ ದೊರೆಗಳು—ಈಗ ಓದಿದ ರಿಪೋ
ರ್ಟಿನಿಂದ ಇಪ್ಪತ್ತೈದು ವರ್ಷಗಳಲ್ಲಿ ಸ್ತ್ರೀಶಿಕ್ಷಣವು ಹಬ್ಬು
ಗೊಂಡಿರುವದೆಂಬದು ವ್ಯಕ್ತವಾಗುತ್ತದೆ. ಇದೇ ಮೇರೆ
ಗೆ ಮುಂದಾದರೂ ವಿದ್ಯಾಖಾತೆಯ ಅಧಿಕಾರಿಗಳೂ ಇತರ
ಸಭ್ಯ ಗೃಹಸ್ಥರೂ, ಈ ಸ್ತುತ್ಯ ವ್ಯವಸಾಯಕ್ಕೆ ತಮ್ಮ
ತನುಮನ ಧನಗಳನ್ನು ವೆಚ್ಚಮಾಡಿದರ ಮುಂದಿನ ಇಪ್ಪ
ತ್ತೈದು ವರುಷಗಳಲ್ಲಿ ವರ್ಗ ಪ್ರಮಾಣದಂತೆ ಈಗಿನ ನಾ
ಲ್ಕು ಪಾಲಷ್ಟು ಸ್ತ್ರೀಶಿಕ್ಷಣವು ಪ್ರಸಾರಗೊಳ್ಳುವದೆಂದು ನನ್ನ
ನಂಬುಗೆಯುಂಟು, ಎಂದು ನುಡಿದರು.

ಬಳಿಕ ಪುಷ್ಪಮಾಲಿಕಾ ಸುಗಂಧ ದ್ರವ್ಯಾದಿಗಳಿಂದ ಸಭ್ಯ

ರೆಲ್ಲರನ್ನು ಸತ್ಕರಿಸಿದ ಬಳಿಕ ಮೆಹಬ್ಬಾನ್ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರು ಕಲೆಕ್ಟರ ದೊರೆಗಳ ಆಭಾರವನ್ನು ಮನ್ನಿಸುವಾಗ ಅಂದದ್ದೇನೆಂದರೆ, – ನಾನು ಈ ಭಾಗಕ್ಕೆ ಬಂದಂದಿನಿಂದ ಈ ಕಾರ್ಯವು ನೆರವೇರಬೇಕೆಂದು ಹವಣಿಸುತ್ತಿದ್ದೆನು ಅದು ಇಂದಿಗೆ ಸಫಲವಾದದ್ದನ್ನು ಕಂಡು ನನಗೆ ಬಹಳೇ ಆನಂದವಾಗಿದೆ. ಇಷ್ಟೇ ಅಲ್ಲ. ಈ ವರ್ಷ ಲಾರ್ಡ ಕರ್ಜನ್ ದೊರೆಗಳು ಪ್ರಾಥಮಿಕ ಶಿಕ್ಷಣಕ್ಕಾಗಿ ಮುಂಬಯಿ ಇಲಾಖೆಗೆ ಐದು ಲಕ್ಷ ರೂಪಾಯಿಗಳನ್ನು ಕೊಟ್ಟರುವರು. ಆ ಹಣದಿಂದ ಈ ಸಂಸ್ಥೆಯನ್ನು ಇದಕ್ಕೂ ಹೆಚ್ಚಿಗೆ ಬೆಳಿಸಿ ಇದಕ್ಕೆ ಕಾಲೇಜದ ಸ್ವರೂಪವನ್ನು ಕೊಡುವದು ಗೊತ್ತಾಗಿದೆ. ಅದಕ್ಕೆ ಸುಮಾರು ಅರುವತ್ತೊಂಭತ್ತುಸಾವಿರ ರೂಪಾಯಿಗಳು ಸರಕಾರದಿಂದ ಮಂಜೂರಾಗಿರುತ್ತವೆ. ಆ ಕಾರ್ಯವೂ ಹಿಪ್ಪರಗಿಯಲ್ಲಿಯೇ ಪ್ರಾರಂಭವಾಗುವದು. ಇಂದಿನ ವರೆಗೆ ಈ ವರ್ಗವೂ ಶಿಕ್ಷಕಿಯರೂ ತಮ್ಮ ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಿದರೆಂದು ಅಭಿಮಾನದಿಂದ ಹೇಳುತ್ತೇನೆ. ಇಂದಿನ ಸಮಾರಂಭವನ್ನು ಗಿಬ್ಬ ದೊರೆಗಳು ಸಾಂಗಗೊಳಿಸಿದ್ದಕ್ಕಾಗಿ ಅವರ ಆಭಾರವನ್ನು ಮನ್ನಿಸಿ ನಾನು ಕುಳಿತುಕೊಳ್ಳುತ್ತೇನೆ. ಎಂದು ಮಾತಾಡಿ ಕುಳಿತುಕೊಂಡರು.

ತರುವಾಯ ಸಭಿಕರೆಲ್ಲರೂ ತಮ್ಮ ತಮ್ಮ ಮನೆಗೆ ತೆರಳಿದರು ಈ ಮೇರೆಗೆ ಫಿಮೇಲ ನಾರ್ಮಲ್‌ಸ್ಕೂಲ ಪ್ರವೇಶ ಸಮಾರಂಭವು ಯಥಾಸಾಂಗವಾಗಿ ನೆರವೇರಿತು.

ಇಂಗ್ಲಂಡದೊಳಗೆ ಪ್ರಾಥಮಿಕ ಶಿಕ್ಷಣವು ಹ್ಯಾಗೆ ಸಾಗುತ್ತದೆಂಬದನ್ನು ಇದರಡಿಯಲ್ಲಿ ವಿವರಿಸಿದ್ದೇವೆ ಅಧ್ಯಾಪಕರೂ ವಿದ್ಯಾರ್ಥಿಗಳೂ ಈ ವಿವರಣೆಯೊಳಗಿನ ಗ್ರಾಹ್ಯಾಂಶವನ್ನು ಸ್ವೀಕರಿಸಿ ತಮ್ಮ ಏಳಿಗೆಯನ್ನು ಬೆಳಿಸಿಕೊಳ್ಳಬೇಕೆಂದು ಇಚ್ಛಿಸುತ್ತೇವೆ.

ಈ ದೇಶದಲ್ಲಿ ಪ್ರಾಥಮಿಕ ಶಾಲೆಗಳು ನಮ್ಮಲ್ಲಿಯಂತೆ ಮುಂಜಾನೆ ಸಂಜೆ ಎರಡೂ ಹೊತ್ತು ನಡೆಯುವವು ಮುಂ

ಜಾನೆ ಟಂಬತ್ತರಿಂದ ಹನ್ನೆರಡರ ವರೆಗೆ ಸಾಯಂಕಾಲಕ್ಕೆ ಎರಡರಿಂದ ನಾಲ್ಕುವರೆ ಗಂಟೆಯು ವರೆಗೆ. ಆದೇಶದಲ್ಲಿ ಚಳಿ ಬಹಳಿರುವ ಕಾರಣ ಎಂಟರೊಳಗೆ ಬಹುಶಃ ಯಾರೂ ಏಳುದಿಲ್ಲ. ಎದ್ದ ಬಳಿಕ ಪ್ರಾತರ್ವಿಧಿಮುಖಮಾರ್ಜನ ಮುಂತಾದವುಗಳಾದ ಬಳಿಕ ಊಟಮಾಡುವರು. ನಮ್ಮ ದೇಶದೊಳಗಿನ ಮಧ್ಯಾಹ್ನದ ಊಟದಷ್ಟೇ ಈ ದೇಶದ ಮುಂಜಾನೆಯ ಊಟವು ಮಹತ್ವದ್ದದೆ. ಆದರಿಂದ ಇಂಗ್ಲಂಡದಲ್ಲಿ ಹಾಳಹೊಟ್ಟೆಯಿಂದ ಶಾಲೆಗೆ ಬರುವ ವಿದ್ಯಾರ್ಥಿಗಳೇ ಇಲ್ಲ. ಈ ಸಂಗತಿಯನ್ನು ಹೆಚ್ಚು ಕಡಿಮೆ ಮಾಡಿಕೊಂಡು ಭರತ ಖಂಡದವರು ಅನುಕರಿಸಲಿಕ್ಕೆ ತಕ್ಕದ್ದೆಂದು ಹೇಳಬಹುದು.

ಪ್ರಾಥಮಿಕ ಶಾಲೆಯಲ್ಲಿ ನಮ್ಮಲ್ಲಿಯಂತೆ ಐದರಿಂದ ಹದಿನೈದು ವರುಷದ ವಿದ್ಯಾರ್ಥಿಗಳಿರುವರು. ಆದರೆ ನಮ್ಮಲ್ಲಿ ಹೆಣ್ಣು ಗಂಡು ಹುಡುಗರು ಕೂಡಿಯೇ ಓದುವ ಸಾಂಪ್ರದಾಯವಿಲ್ಲ. ಆದರೆ ಆ ದೇಶದಲ್ಲಿ ಈ ನಿರ್ಬಂಧವಿಲ್ಲ. ಪ್ರಾಥಮಿಕ ಶಾಲೆಯಲ್ಲಿ ಎರಡೂ ತರದ ಹುಡುಗರನ್ನು ಕಾಣಬಹುದು. ಹುಡುಗರ ವರ್ಗೀಕರಣದ ತತ್ವವಾದರೂ ಲಕ್ಷದಲ್ಲಿಡತಕ್ಕಂಥಾದ್ದದೆ. ಶಾಲೆಯೊಳಗಿನ ಹುಡುಗರಲ್ಲಿಯೇ ಎರಡು ವರ್ಗಗಳನ್ನು ಮಾಡಿರುವರು. ಜಾಣ ಹುಡುಗರದೊಂದು; ಮಂದ ಹುಡುಗರದೊಂದು. ಗಣಿತ ಕಲಿಸುವ ಪ್ರಸಂಗ ಬಂದಕೂಡಲೆ ಗಣಿತದಲ್ಲಿ ಮುಂದರಿದ ಹುಡುಗರನ್ನು ಬೇರೆ, ಸಾಧಾರಣ ಹುಡುಗರನ್ನು ಬೇರೆ ಕೂಡಿಸಿ ಕೆಲಸ ಸಾಗಿಸುವದು. ಭಾಷಾವಿಷಯ ಕಲಿಸುವದಾದರೆ, ಆ ವಿಷಯದಲ್ಲಿ ಜಾಣರಾದವರನ್ನು ಬೇರೆ, ಸಾಧಾರಣವಿರುವರನ್ನು ಬೇರೆ ಹೀಗೆ ವರ್ಗೀಕರಣ ಮಾಡಿ ಕಲಿಸುವರು. ಇದರಿಂದ ಮಂದ ಹುಡುಗನಿಂದ ಜಾಣಹುಡುಗನ ಜ್ಞಾನವರ್ಧನಕ್ಕೆ ಪ್ರಾಪ್ತವಾಗುವ ಅತಂಕವು ತಪ್ಪುತ್ತದಿಪ್ಪೇ ಅಲ್ಲ. ಚುರುಕು ಹುಡುಗರಲ್ಲಿ ಚುರುಕುತನವು ಬೆಳೆಯುವದು ಮಂದ ವಿದ್ಯಾರ್ಥಿಗಳು ಕ್ರಮವಾಗಿ ಸುಧಾರಿಸುವರು. ಹೀಗೆ ಮಾಡಲಿಕ್ಕೆ ಆ ದೇಶದವರಿಗೆ ಒಂದು

ಅನುಕೂಲವುಂಟು. ನಮ್ಮಲ್ಲಿಯಂತೆ ಇಷ್ಟು ಅವಧಿಯಲ್ಲಿ ಇಷ್ಟು ವಿಷಯವು ಮುಗಿಯಬೇಕೆಂಬ ನಿರ್ಬಂಧವಿಲ್ಲ. ಇದೂ ಅನುಕರಣ ಮಾಡತಕ್ಕ ಸಂಗತಿಯು.

ಇನ್ನು ಪ್ರಾಥಮಿಕ ಶಾಲೆಗಳಲ್ಲಿ ನಡೆಯುವ ವಿಷಯಗಳನ್ನು ನೋಡುವಾ—ಈ ಶಾಲೆಗಳಲ್ಲಿ ಲೇಖನ, ವಾಚನ, ಗಣಿತ ಇತಿಹಾಸ, ಭೂಗೋಲ, ಚಿತ್ರವಿದ್ಯೆ, ಶಾಸ್ತ್ರೀಯವಿಷಯ, ಗಾಯನ ಧಾರ್ಮಿಕ ವಿಷಯ, ಅಂಗಸಾಧನ ಇವೇ ಮುಖ್ಯವಾದವುಗಳು. ಈಗಿನ ಹೊಸ ಇಯತ್ತೆಗಳನ್ನು ನೋಡಿದರೆ ನಮ್ಮಲ್ಲಿಯ ಪ್ರಾಥಮಿಕ ಶಾಲೆಗಳಲ್ಲಿಯೂ ಇಷ್ಟು ವಿಷಯಗಳು ಸಮಾವೇಶವಾಗಿರುತ್ತವೆಂದು ವ್ಯಕ್ತವಾಗುವದು. ಹುಡುಗರು ಎರಡೂ ಕೈಗಳಿಂದ ಕರೀ ಹಲಿಗೆಯ ಮೇಲೆ ಖಡುವಿನಿಂದ ಚಿತ್ರ ತೆಗೆಯುವ ಕೆಲಸವು ಪ್ರಶಂಸನೀಯವಾಗಿರುವದು.

ಸಾಲೆಯ ಮುಖ್ಯ ಧ್ಯಾಪಕನಿಗೆ ಅಭ್ಯಾಸದ ಇಯತ್ತೆಗಳಲ್ಲಿ ಪರಿಸ್ಥಿತಿಗೆ ಅನುಸರಿಸಿ ಬೇಕಾದ ಹೆಚ್ಚು ಕಡಿಮೆಯನ್ನು ಮಾಡುವ ಅಧಿಕಾರವುಂಟು ಆದರಲ್ಲೇನೂ ಸರಕಾರದವರ ಕೈಯಿಲ್ಲ. ಮುಖ್ಯಾಧ್ಯಾಪಕನು ಒಂದು ವರುಷದಲ್ಲಾಗಬಹುದಾದಷ್ಟು ವಿಷಯವನ್ನು ಗೊತ್ತುಪಡಿಸಿ ಅದನ್ನು ವರುಷದ ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಕಲಿಸಬಹುದೆಂಬದನ್ನು ನಿಶ್ಚಯಿಸಿ ಅದರಂತೆ ಕೆಲಸ ನಡಿಸುತ್ತಾನೆ. ಇಷ್ಟೇ ಅಲ್ಲ. ಒಂದು ವಾರದಲ್ಲಿ ಕೆಂಬಹುನಾ ಒಂದು ದಿವಸದಲ್ಲಿ ಎಷ್ಟು ಕಲಿಸತಕ್ಕದ್ದೆಂಬದನ್ನು ಕೂಡ ಗೊತ್ತು ಮಾಡಿಟ್ಟಿರುವರು. ಅದರಂತೆ ಆಯಾ ಶಿಕ್ಷಕರು ಆಯಾ ವಿಷಯದ ಟಿಪ್ಪಣಿಗಳನ್ನು ತೆಗೆದುಕೊಂಡು ಬಂದು ಕಲಿಸುವರು. ಈ ವ್ಯವಸ್ಥೆಯು ಅತ್ಯುತ್ತಮವಾಗಿರುತ್ತದೆ. ಯಾವನೊಬ್ಬ ಶಿಕ್ಷನು ಬಾರದಿದ್ದರೆ ಹೊಸ ಶಿಕ್ಷಕನು ಆ ವರ್ಗಕ್ಕೆ ಏನು ಕಲಿಸಬೇಕೆಂದು ಯೋಚಿಸುತ್ತ ಕೂಡುವ ಕಾರಣವೇ ಇಲ್ಲ.

ಸಾಲಯು ಪರೀಕ್ಷೆಯನ್ನಾದರೂ ಮುಖ್ಯಧ್ಯಾಪಕನೇ ತ ಕ್ಕೊಳ್ಳತಕ್ಕವನು, ಇನಸ್ಪೆಕ್ಟರರು ಕೇವಲ ತಪಾಸ ಮಾ ಡುವರು. ಇಷ್ಟೇ ಅವಧಿಯಲ್ಲಿ ಇಷ್ಟೇ ಕಲಿಸಬೇಕು. ಇಂ ಥ ವಿಷಯಗಳನ್ನೇ ಕಲಿಸಬೇಕು. ಇಂಥ ಪುಸ್ತಕಗಳ ನ್ನೇ ಓದಿಸಬೇಕು. ಮುಂತಾದ ನಿರ್ಬಂಧಗಳಿಲ್ಲ. ಇವೆ ಲ್ಲ ಮಾತಿನ ಹೊರೆಯು ಮುಖ್ಯಧ್ಯಾಪಕನ ತಲೆಯ ಮೇ ಲಿರುವದು. ಆದ್ದರಿಂದ ಈ ದೇಶದ ಪ್ರಾಥಮಿಕ ಶಾಲೆಯ ಮುಖ್ಯಧ್ಯಾಪಕನ ಜವಾಬದಾರಿಯು ದೊಡ್ಡದಿರುತ್ತದೆಂದು ಹೇಳಬಹುದು. ಇನಸ್ಪೆಕ್ಟರನು ಅನೇಕ ಸಂಗತಿಗಳನ್ನು ವಿಚಾರಿಸಿ ಸಾಲೆಯು ಸರಿಯಾಗಿ ಸಾಗುತ್ತದೋ ಇಲ್ಲವೋ ಎಂಬದನ್ನು ಮಾತ್ರ ರಿಪೋರ್ಟ ಮಾಡಬಲ್ಲರು.

ವಸ್ತು ಶಿಕ್ಷಣಕ್ಕಾಗಿ ಸಾಲೆಗಳಲ್ಲಿ ತರತರದ ಅನೇಕ ವ ಸ್ತುಗಳನ್ನು ಸಂಗ್ರಹಿಸಿಟ್ಟಿರುತ್ತಾರೆ. ಅದರಿಂದ ಸಾಲೆಗೆ ಭೂಷಣ ಬರುವದಲ್ಲದೆ ಜ್ಞಾನ ವರ್ಧನಕ್ಕೆ ಅನುಕೂಲವಾ ಗುತ್ತದೆ. ಈ ಪದಾರ್ಥ ಸಂಗ್ರಹಣ ಕಾರ್ಯವನ್ನು ಮಾ ಸ್ತರರೂ ಹುಡುಗರೂ ಕೂಡಿಯೇ ಮಾಡುತ್ತಾರೆ.

ಈ ದೇಶದಲ್ಲಿ ದೇಹದಂಡದ ಶಿಕ್ಷೆ ಇಲ್ಲ. ಈ ಶಿಕ್ಷೆಯ ನ್ನು ಕೊಡುವ ಪ್ರಸಂಗ ಬಂದರೆ ಮುಖ್ಯ ಶಿಕ್ಷಕನೇ ಕೊ ಡುವನು. ಚಲೋ ನಡತಿ, ಚನ್ನಾಗಿ ಅಭ್ಯಾಸ ಮಾಡೋಣ ನಿಯಮಿತತನ ಮುಂತಾದವುಗಳಿಗಾಗಿ ಇನಾಮುಗಳನ್ನಿಟ್ಟಿ ರುತ್ತಾರೆ. ಅದರಿಂದ ಹುಡುಗರು ಬಹುಶಃ ಚಲೋ ರೀತಿ ಯಿಂದ ವರ್ತಿಸುತ್ತಾರೆ.

ಕಾಲೇಜವು ಅಕ್ಟೋಬರ ತಿಂಗಳ ಎಳ ರಿಂದ ಬಂದಾಗಿ ೧೬ ನೇ ದಿಸಂಬರದ ದಿವಸ ಪ್ರಾರಂಭವಾಗುವದು. ಆದರೂ ಪ್ರವೇಶ ಪರೀಕ್ಷೆಯು ಮೊದಲು ಗೊತ್ತಾದಂತೆ ನವಂಬರ ಎಳ ನೇ ತಾರೀಖಿನ ದಿವಸವೇ ಪ್ರಾರಂಭವಾಗುವದು.

ಧಾರವಾಡ ಜಿಲ್ಲೆಯ ಮುಲಖೀ ಪರೀಕ್ಷೆಯು ದರಿಯಾ

ನುವ ಪ್ರಸಿದ್ಧವಾಗಿದೆ. ಒಟ್ಟಿಗೆ ನಾಲ್ವತ್ತೈಂಟು ಹುಡುಗರ ಶೀರ್ಗಡೆ ಹೊಂದಿರುವರು.

ಕಾಫಿ ಅಥವಾ ಬುಂದು, ಸೇವನಕ್ಕೆ ಯೋಗ್ಯವಾದ ಬಗೆಯು ಬಹು ಸೋಜಿಗದ ರೀತಿಯಿಂದ ಗೊತ್ತಾಯಿತು. ಅರಬಸ್ತಾನದಲ್ಲಿ ಹಲ ಜನ ಕಾದವಾನರು ತಮ್ಮ ಒಂಟೆಗಳೊಡನೆ ಪ್ರವಾಸಮಾಡುತ್ತಿರಲು ಒಂದು ದಿವಸ ಒಂದು ಸ್ಥಳದಲ್ಲಿ ಇಳಕೂಂಡು ರಾತ್ರಿ ತಾವೆಲ್ಲ ಉಂಡು ಮಲಗಿಕೊಳ್ಳಲು, ಸರಿರಾತ್ರಿಯಲ್ಲಿ ಒಂಟೆಗಳೆಲ್ಲ ದಣಿದು ಮಲಗಿಕೊಳ್ಳದೆ ಒಂದಕ್ಕೊಂದು ಬಡಿದಾಡುತ್ತ ಗೊಂದಲವೆಬ್ಬಿಸಿದವು. ಆಗ ಅವರು ಇವು ಹೀಗೆ ಏಕೆ ಮಾಡುತ್ತವೆಂದು ಆಲೋಚಿಸಲು, ಅಲ್ಲಿ ಬೆಳೆದಿರುವ ಕೆಲವೊಂದು ತರದ ವನಸ್ಪತಿಯನ್ನೂ ಅವುಗಳ ಬೀಜವನ್ನೂ ತಿಂದಿರುವದರಿಂದ ಅವುಗಳಿಗೆ ಉತ್ತೇಜಕವಾಗಿ ಗೊಂದಲ ಹಾಕುತ್ತವೆಂದು ತರ್ಕಿಸಿದರು. ಮರುದಿವಸ ತಾವೂ ಆ ಕಾಳುಗಳನ್ನು ತಿನ್ನಲು, ತಮಗೂ ನಿದ್ದೆ ಬರಲಿಲ್ಲವಿಷ್ಟೇ ಅಲ್ಲ. ಒಂದು ತರದ ಆವೇಶವು ತಮ್ಮಲ್ಲಿ ಬಂದಿರುವದೆಂದು ಅವರು ಮನಗಂಡರು. ಅಂದಿನಿಂದ ಈ ಕಾಳುಗಳಲ್ಲಿ ನಿದ್ರಾನಾಶಕಗುಣವೂ ಉತ್ತೇಜಕಗುಣವೂ ಉಂಟೆಂದು ಅವುಗಳನ್ನು ಸೇವಿಸುವ ಪ್ರಚಾರವು ಜನರಲ್ಲಿ ನೆಲೆಗೊಂಡಿತು.

SUITABLE FOOD

ಪಥ್ಯಾಹಾರವು.

ದಂತರಚನೆ, ಕರಳುಗಳಿಂದ ಇವನು ಮಾಂಸಾಹಾರಿಯುಲ್ಲೆಂತಲೂ, ಫಲಾಹಾರಿಯೆಂತಲೂ ಹಿಂದೆ ಸಿದ ಮಾತಿದೇವಷ್ಟೆ. ಇನ್ನು ಮನುಷ್ಯನಿಗೆ ಮಾಂಸಾಹಾರವು ತಕ್ಕದ್ದಲ್ಲೆಂಬ ಬಗ್ಗೆ ಅವನ ಘ್ರಾಣೇಂದ್ರಿಯ ರಸನೇಂದ್ರಿಯಗಳನ್ನು ಸಾಕ್ಷಿಗಾಗಿ ಕರೆಯುವಾ. ಯಾವ ಪ್ರಾಣಿಯಾದರೂ ತನ್ನ ಆಹಾರವನ್ನು ಮೂಗಿನಿಂದ ಕಂಡು ಹಿಡಿ

ಬುವದು. ಹುಲಿ, ಕರಡಿ, ಬಹಳ ಏಕೆ ಚಿಕ್ಕ ಕೂಡ ನಾತದಿಂದ ತನ್ನ ಭಕ್ಷ್ಯವನ್ನು ಗೊತ್ತು ಹಿಡಿಯುವದು. ಹಿಂಸ್ರ ಪ್ರಾಣಿಗಳಿಗೆ ತಮ್ಮ ಬೇಟೆಯ ವಾಸನೆಯು ಬಡೆದ ಕೂಡಲೆ ಕಣ್ಣು ಕೆರಳಿಸಿ ಅದನ್ನು ಹಿಡಿಯುವ ಸನ್ನಾಹಕ್ಕೆ ಹತ್ತುತ್ತವೆ. ಅಗರಂತೆ ತೃಣಭಕ್ಷಕ ಪ್ರಾಣಿಗಳೂ ತಮ್ಮ ಭಕ್ಷ್ಯದ ನಾತ ಬಡಿದ ಕೂಡಲೆ ಅತ್ತಕಡೆ ನಡೆಯುತ್ತವೆ. ಅದರಂತೆ ಮನುಷ್ಯನು ಹಸಿ ಮಾಂಸವನ್ನು ಊಂಡ ಕೂಡಲೆ, ಅಥವಾ ಅದರ ನಾತ ಬಡಿದ ಕೂಡಲೆ ಅದಕ್ಕೆ ಅಪೇಕ್ಷಿಸುವದಕ್ಕೆ ಬದಲಾಗಿ ಹೇಸಿಕೊಳ್ಳುವನು. ದೊಡ್ಡ ದೊಡ್ಡ ನಗರಗಳಲ್ಲಿ ಮಾಂಸ ಮಾರುವವರು ಅದನ್ನು ಮುಚ್ಚಿಕೊಂಡು ಒಯ್ಯಬೇಕೆಂದು ಕಟ್ಟು ಮಾಡಿರುವರು. ಮಾಂಸಕ್ಕೆ ಮಸಾಲೆ ಮುಂತಾದ ಜೀನಸುಗಳನ್ನು ಹಾಕಿದರೆ ಮಾತ್ರ ಅದಕ್ಕೆ ರುಚಿ ಬರುವದು. ಆದರೆ ಪಕ್ವಫಲವನ್ನು ನೋಡಿರಿ! ಎಂದೂ ಫಲವನ್ನು ನೋಡದ ಹುಡುಗನ ಕೈಯಲ್ಲಿ ಬಳೇರಲ ಹಣ್ಣುಗಳನ್ನು ಕೊಟ್ಟ ಕೂಡಲೆ ಅವನು ಅದರ ಕಮ್ಮಗಿನ ವಾಸನೆಯಿಂದ ಮೋಹಿತನಾಗಿ ಅದನ್ನು ತಿನ್ನ ತೊಡಗುವನು. ಆದೇ ಅವನ ಕೈಯಲ್ಲಿ ಮಾಂಸದ ತುಂಡನ್ನು ಕೊಟ್ಟರೆ ಹೇಸಿಕೊಳ್ಳುವನು. ಇದರಿಂದ ಪ್ರಾಣಿಗಳಿಗೆ ಭಕ್ಷ್ಯದ್ರವ್ಯದ ಆಹಾರವನ್ನು ನಿರ್ಣಯಿಸುವ ಕೆಲಸದಲ್ಲಿ ಮನುಷ್ಯನ ಕಣ್ಣು ಮೂಗು ನಾಲಿಗೆಗಳ ಪ್ರಮಾಣವು ಬಲವತ್ತರವಿರುವದೆಂಬದು ಸ್ಪಷ್ಟವು.

ಇನ್ನು ಪ್ರಾಣಿಗಳು ಕೂಸಾಗಿರುವಾಗ ತಿನ್ನುವ ಆಹಾರದಿಂದ ಅದರ ಆಹಾರವನ್ನು ನಿರ್ಣಯಿಸುವಾ. ಮನುಷ್ಯ ಪ್ರಾಣಿಗಳು ಕೂಸಾಗಿರುವಾಗ ತಾಯಿಯ ಹಾಲೇ ಮೇಲಾದ ಆಹಾರವೆಂದು ಗೊತ್ತಾಗಿದೆ. ಯುರೋಪಖಂಡದಲ್ಲಿ ಮಕ್ಕಳಿಗೆ ಹೊಲೆ ಕುಡಿಸಲಿಕ್ಕೆ ಒಕ್ಕಲಗಿತ್ತಿಯರನ್ನಿಡುವ ಪರಿಪಾಠವುಂಟು. ಅವರು ಮೂಲತಃ ಬಡವರಿರುವರು. ಹೀಗೆ ಹಾಲುಣಿಸುವವರು ಶ್ರೀಮಂತರ ಮನೆಗೆ ಬರಲು,

ಉತ್ತಮೋತ್ತಮವಾದ ಮಾಂಸಾಹಾರಕ್ಕೆ ಸವಿಗೊಂಡು ಅ
ದನ್ನೇಹೆಚ್ಚು ತಿನ್ನುವರು. ಅದರಿಂದ ಅವರ ಮೊಲೆಯೊಳಗಿ
ನಹಾಲುಗಳೂ ಕೆಲದಿವಸಗಳಲ್ಲಿ ಕಡಿಮೆಯಾಗುವವು ತಾಯಿ
ಗಳ ಮೊಲೆಯಲ್ಲುಂತೂ ಹಾಲು ಬಾರದ್ದರಿಂದಲೇ ಈ ಹೆ
ಣ್ಣುಮಕ್ಕಳನ್ನು ಇಟ್ಟಿರುವರು. ಇದರಿಂದಲೂ ಮನುಷ್ಯ
ಪ್ರಾಣಿಗೆ ಮಾಂಸಾಹಾರವು ತಕ್ಕದ್ದಲ್ಲೆಂದು ಸಿದ್ಧವಾಗು
ವದು.

ಇನ್ನು ಮನುಷ್ಯನು ಸಾವಿರಾರು ವರ್ಷದಿಂದ ಮಾಂ
ಸ ತಿನ್ನುವ ಪರಿಪಾಠವನ್ನಿಟ್ಟಿರುವನೆಂದು ಕೆಲವರು ಆಕ್ಷೇ
ಪಿಸಬಹುದು. ನಾಯಿ ಬೆಕ್ಕು ಮುಂತಾದ ಮಾಂಸಾಹಾರಿ
ಪ್ರಾಣಿಗಳಿಗೆ ನಾವು ವನಸ್ಪತಿಯ ಅನ್ನದ ರುಚಿಯನ್ನೂ
ಹಚ್ಚಿಲ್ಲವೆ! ಅದರಂತೆ ಸಾಕಿದ ಜಿಗಣಿ, ಮುಂಗಗಳಿಗೆ ಮಾಂ
ಸ ತಿನ್ನುವ ಚಟವನ್ನು ಹಚ್ಚಬಹುದು. ಇಂಥವೆಷ್ಟೋ
ಉದಾಹರಣೆಗಳುಂಟು. ಆದರೆ ಇವು ವಿಪರೀತಾಹಾರವ
ನ್ನೂ ತಿನ್ನ ತೊಡಗಲು, ಬೇನೆಬಿದ್ದು ಸತ್ತು ಹೋಗಿರು
ವವು.

ಸಾರಾಂಶ ಶರೀರರಚನೆಯಿಂದ ಮನುಷ್ಯನು ಯಾವ ಆ
ಹಾರವನ್ನು ಸೇವಿಸಬೇಕೆಂಬುದನ್ನೂ ಶಾರೀರ ಶಾಸ್ತ್ರಜ್ಞ
ರೋಧದಿಂದ ನಿರ್ಧರಿಸಿದಂತಾಯಿತು. ಆದರೆ ಮನುಷ್ಯರ
ಲ್ಲರಿಗೆ ಸಾಕಷ್ಟು ಹಣ್ಣುಗಳೆ ದೊರೆಯುವವು? ಎಂದು
ಯಾರಾದರೂ ಶಂಕಿಸಬಹುದು: ಹೌದು ಮನುಷ್ಯನು ಪೃ
ಥ್ವಿಯ ಯಾವತ್ತು ಭಾಗದಲ್ಲಿ ವಾಸಮಾಡಿಕೊಂಡಿರಲು ಆ
ರ್ಹನೆನಿಸುವನು. ಆದರೆ ಯಾವತ್ತೂ ಉದ್ಭಿಜ್ಜಗಳು ಎಲ್ಲ
ಭೂಪ್ರದೇಶದಲ್ಲಿ ಬೆಳೆಯಲಾರವು. ಆದರೂ ದೇವರು
ಆಯಾ ಪ್ರದೇಶದ ಹವೆ, ಮಳೆ, ನೆಲ, ಮುಂತಾದವುಗಳ
ರಚನೆಗೆ ಅನುಗುಣವಾಗಿ ಎಷ್ಟೋ ವನಸ್ಪತಿಗಳನ್ನು ನಿ
ರ್ಮಾಣ ಮಾಡಿದ್ದಾನೆ. ಹಣ್ಣುಗಳು ಶಿಗದಿದ್ದರೂ, ಗಡ್ಡೆ
ಬೇರುಗಳೂ, ಒಣಗಿದ ಫಲಗಳೇ ಆಗಿರುವ ಕಾಳುಗಳು
ಮನುಷ್ಯನಿಗೆ ತಕ್ಕವುಗಳೆಂದು ನಿರ್ವಾದನಾಗಿ ಹೇ

ಬಹುದು ಇನ್ನೆಗಳಲ್ಲಿ ಕೂಡ ಮನೆಯನು ಸಂರಾಸಾರ ವಿಚಾರ ಮಾಡಿ ಸೇವಿಸಬೇಕು.

ಬಲೆಬಾಯಿಂದ, ಕಾಳು ಹಣ್ಣುಗಳಲ್ಲಿ ವಿಸೊಂದು ಕೂಡಿಸಿಕೊಳ್ಳಬೆ ಅಂದರೆ ನಾಲಿಗೆಗೆ ರುಚಿಯನೂ ಕಣ್ಣು ಮೂಗು ಬಗಗಳಿಗೆ ಆನಂದವನ್ನೂ ಉಂಟು ಮಾಡುವಂಥ ಒಡವೆಗಳನ್ನು ತಿನ್ನುವದು ಹಿತಕರವು. ಅದರಿಂದ ಮನುಷ್ಯನು ನಿರೋಗಿಯೂ ನಿರಾಲಸವೃತ್ತಿಯುವನೂ ಆಗುವನೆಂಬದಕ್ಕೆ ಸಂದೇಹವಿಲ್ಲ.

DREAM.

ಕನಸು.

(ಬರೆದುಬಂದದ್ದು.)

ಒಂದು ರಾತ್ರಿ ನನಗೊಂದು ಕನಸು ಬಿತ್ತು. ಕನಸಿನಲ್ಲಿ ನನಗೆ ಅಲೌಕಿಕ ಶಕ್ತಿಯೂ ದಿವ್ಯ ದೃಷ್ಟಿಯೂ ಪ್ರಾಪ್ತವಾಗಿದ್ದವು. ನನ್ನೆದುರಿಗೆ ಒಂದು ಉರಿಯುವ ಗುಂಡು ಕಾಣಿಸಿತು. ಅದರ ವ್ಯಾಸವು ಸುಮಾರು ಹನ್ನೆರಡು ಮೂಳ ಇತ್ತು. ಅದು ನನ್ನಿಂದ ಅಜಮಾಸು ಮುಕ್ಕಾಲು ಮೈಲುಗಳ ಅಂತರದಲ್ಲಿತ್ತು. ಅದರ ಮೈಬಣ್ಣವು ಕಮ್ಮಾರನ ಕುಲಿಮೆಯೊಳಗಿನ ಒಲೆತಾಗಿ ಕಾಯ್ದ ಕಬ್ಬಿಣದಂತೆ ಹೊಳೆಯುತ್ತಿತ್ತು. ಗುಂಡಿನಿಂದ ಬಿದ್ದ ಬೆಳಕು ಬಹು ಸ್ವಚ್ಛವಿತ್ತು.

ನನ್ನ ಬಲೆಯಲ್ಲಿಯೇ ಒಂದು ಸಣ್ಣ ಗುಂಡು ಕಾಣಿಸಿತು. ಅದರ ವ್ಯಾಸವು ನಾಲ್ಕು ಇಂಚು ಇತ್ತು. ಈ ಗುಂಡು ಮೆಲ್ಲಮೆಲ್ಲನೆ ನಡೆಯುತ್ತಿತ್ತು. ಪರಂತು ಅದರ ಗತಿಯು ಆ ಉರಿಯುವ ಗುಂಡಿನ ಆನುರೋಧದಿಂದ ಸಾಗುತ್ತಿರುವಂತೆ ತೋರಿತು. ಹೀಗೆ ತಿರಗುವಾಗ ಈ ನನ್ನ ಬಳಿಯ ಗುಂಡು ತನ್ನ ಮೈಸುತ್ತಲೂ ತಿರುಗುವದೆಂದು ತಿಳಿಯಿತು. ಆ ಉರಿಯುವ ಗುಂಡಿನ ಬೆಳಕು ಈ ಗುಂಡಿನ ಅರ್ಧ ಮೈಮೇಲೆ ಬಿದ್ದದ್ದರಿಂದಲೇ ಇದು ನನಗೆ ದೃಷ್ಟಿಗೋಚರವಾಯಿತು. ಇಲ್ಲದಿದ್ದರೆ ಆ ಕಾ

ರ್ಕತ್ತಲೆಯಲ್ಲಿ ಕಾಣುವ ಬಗೆಯೇನು? ನಾನು ನನ್ನ
ಎಡ್ಡ ದೃಷ್ಟಿಯಿಂದ ನೆಟ್ಟಗೆ ನೋಡಲು, ನನ್ನ ಬಳಿದು
ಗುಂಡಿನ ಹತ್ತರವೇ ಮತ್ತೊಂದು ಸಣ್ಣ ಗುಂಡು ಆ
ದೊಡ್ಡ ಗುಂಡಿನ ಸುತ್ತು ತಿರಗುತ್ತಿತ್ತು. ಈ ಸಣ್ಣಗುಂ
ಡಿನ ವ್ಯಾಸವು ಒಂದು ಇಂಚು ಇದು ದೊಡ್ಡ ಗುಂಡಿನಿಂ
ದ ಹತ್ತು ಘೂಟಿನ ಅಂತರದಲ್ಲಿರುವದು. ಈ ಉರಿಯು
ವ ಗುಂಡಿನ ಬೆಳಕು ಇದರ ಅರ್ಧ ಭಾಗದ ಮೇಲೆಯೂ
ಬಿದ್ದಿತ್ತು. ಈ ನನ್ನ ಬಳಿಯಲ್ಲಿರುವ ಎರಡು ಗುಂಡು
ಗಳಲ್ಲಿ ದೊಡ್ಡದರ ಕೆಲವು ಭಾಗವು ಜಿಣದಾಗಿಯೂ ಕೆ
ಲವು ಭಾಗವು ನೀರಿನಿಂದ ಆಚ್ಛಾದಿತವಾಗಿಯೂ ಇರುವ
ದೆಂದು ಕಾಣಿಸಿತು. ಆ ನೀರಿನಲ್ಲಿ ಕೋಟ್ಯಾವಧಿ ಜೀ
ವಜಂತುಗಳು ಅತ್ತಿಂದ ಇತ್ತ ಇತ್ತಿಂದ ಅತ್ತ ಚರಿಸುತ್ತಿ
ರುವವು. ಏನು ಹೇಳಲಿ! ಆ ಜೀವಗಳಲ್ಲಿ ಕೆಲವು ಮು
ತ್ತೊಂದನ್ನು ತಿನ್ನ ಹವಣಿಸಿ ಅದರ ಬೆನ್ನು ಹತ್ತಿದ್ದವು.
ಕೆಲವು ಜೀವರಕ್ಷಣಕ್ಕಾಗಿ ದಿಕ್ಕೆಟ್ಟು ಓಡುತ್ತಿದ್ದವು. ಜಿ
ಣದಾದ ಭಾಗದಲ್ಲಿಯೂ ಎಷ್ಟೋ ಜೀವಜಂತುಗಳು ಇ
ದ್ದವು. ಅವು ಹಲವು ಪ್ರದೇಶದಲ್ಲಿ ದಟ್ಟವಾಗಿಯೂ ಕೆಲ
ವು ಪ್ರದೇಶದಲ್ಲಿ ಅಂಗಲಾಗಿಯೂ ವಾಸ ಮಾಡಿದ್ದವು.
ತೋಲೀ ಗುಂಡಿನಷ್ಟು ಕಾಣಿಸುವ ಈ ಗುಂಡಿನ ಮೇಲಿ
ರುವ ಅಸಂಖ್ಯ ಸೂಕ್ಷ್ಮ ಜಂತುಗಳನ್ನು ಕಂಡು ಬೆರಗಾ
ದೆನು. ಆ ಜಂತುಗಳ ಸೂಕ್ಷ್ಮತ್ವವನ್ನು ವಿಚಾರಿಸುತ್ತ
ಇವುಗಳನ್ನು ಜೀವಿಗಳೊಳಗೆ ಎಣಿಸಬೇಕೋ ಎಣಿಸ
ಬಾರದೋ ಎಂಬ ಸಂಶಯವು ಮನದಲ್ಲಿ ಉದ್ಭವಿಸಿತು.
ಜಿಣದಾದ ಪ್ರದೇಶದೊಳಗಿನ ಜೀವಿಗಳಲ್ಲಿ ಕೆಲವು ವಿ
ಕ್ಷಣ ಜಂತುಗಳಿರುವವೆಂದು ಕಾಣಿಸಿತು. ಇವು ಬೇ
ರೆ ಜಂತುಗಳಿಂದ ದೊಡ್ಡವು ಇದ್ದಿಲ್ಲ. ಇವುಗಳ ಅವ
ಯವ ರಚನೆಯಲ್ಲಿಯೂ ವಿಶೇಷ ಭಿನ್ನತ್ವ ತೋರಲಿಲ್ಲ.
ಇಷ್ಟೇ ಅಲ್ಲ. ಇವು ಬೇರೆ ಕೆಲವು ಜಂತುಗಳಿಗಿಂತ ಸ
ಣ್ಣವೇ ಇದ್ದವು. ಆದರೂ ಈ ಜೀವಿಗಳಿಗೆ ಬುದಿ ಇ

ರುವದೆಂದು ಮನವರಿಕೆಯಾಯಿತು. ಈ ಜೀವಿಗಳು ಇ
ರಲಿಕ್ಕೆ ಮನೆ ಕಟ್ಟಿಕೊಂಡದ್ದಲ್ಲದೆ, ತಮಗೂ ತಮ್ಮ ವ
ರ್ಗದ ಜೀವಿಗಳಿಗೂ ಆಡ್ಡಾಡಲಿಕ್ಕೆ ದೊಡ್ಡ ದೊಡ್ಡ ದಾ
ರಿಗಳನ್ನು ಮಾಡಿಕೊಂಡಿದ್ದವು. ಬಂಡಿಯನ್ನೇರಿಕೊಂಡು
ಆ ದಾರಿಗುಂಟ ಚಕ್ಕಂದದಿಂದ ಪ್ರವಾಸ ಮಾಡುವವು.
ಕೆಲವು ಬಂದು ತರದ ಒಡವೆಯುಲ್ಲ ಕುಳಿತುಕೊಂಡು
ನೀರಿನ ಕವಚದ ಮೇಲೆಯೂ ಸಂಚರಿಸುತ್ತಿದ್ದವು. ನೀ
ರಿನ ಅಳವಾದರೂ ಹೆಚ್ಚಿರುವದೆಂದು ತಿಳುಕೊಂಡೆನು.
ಅವು ಆ ತೇಲುವ ಪಾತ್ರೆಯೊಳಗಿಂದ ಸಂಚರಿಸುವಾಗ
ನನ್ನಂಥಾದ್ದೊಂದು ಪ್ರಾಣಿಯು ಆ ಪಾತ್ರೆಯಲ್ಲಿ ಊದು
ತ್ತಿರುವಂತೆ ತೋರಿತು. ಇಪ್ಪರಲ್ಲಿಯೇ ಆ ತರಣ ಪಾ
ತ್ರೆಯು ಬುಡಮೇಲಾಗಿ ನೀರೊಳಗೆ ಮುಳುಗಿತು. ನೂ
ರಾರು ಜೀವಿಗಳು ಆ ನೀರಲ್ಲಿ ಮುಳುಗಿ ಅಸುದೊಕೆದ
ವು. ಇಷ್ಟಾದರೂ ಈ ವರ್ಗದ ಬೇರೆ ಎಷ್ಟೋ ಜೀವಿಗ
ಳು ಹೆದರದೆ ತರಣ ಪಾತ್ರೆಯೊಳಗಿಂದ ಆ ಜಲಕವಚ
ದ ಮೇಲೆ ಪ್ರವಾಸ ಮಾಡುತ್ತಿರುವಂತೆ ಗೋಚರವಾ
ಯಿತು. ಆ ಜಲಕವಚದಲ್ಲಿ ಜೇಡಹುಳದ ತಂತುವಿನಂ
ಥ ಜಿನುಗಾದ ತಂತಿಗಳನ್ನು ಹಾಕಿರುವದು ಕಣ್ಣಿಗೆ ಬಿ
ತ್ತು. ಆ ತಂತಿಯ ದ್ವಾರದಿಂದಲೇ ಅವು ತಮ್ಮ ತಮ್ಮೊ
ಳಗೆ ಸುದ್ದಿಯನ್ನು ಮುಟ್ಟಿಸುತ್ತಿರುವವೆಂದು ನಂಬಿದೆನು.

ಆ ಚಿಕ್ಕ ಗುಂಡಿನ ಮೇಲೆ ನಡೆದಿರುವಂಥ ನನ್ನ ಕ
ಣ್ಣಿಗೆ ಬಿದ್ದ ಯಾವತ್ತು ವ್ಯಾಪಾರಗಳನ್ನು ನನ್ನಿಂದ ಹೇ
ಳುವದಾಗದ್ದು. ಆದರೂ ಅದರೊಳಗಿನ ಒಳ್ಳೇ ಅರಿದಾ
ಗಿ ತೋರಿದ ಕೆಲವು ಸಂಗತಿಗಳನ್ನು ನಿಮಗೆ ಹೇಳುವೆ
ನು. ಆ ಗುಂಡಿನ ಮೇಲಿರುವ ಬುದ್ಧಿವಾನ ಪ್ರಾಣಿಯು
ಇಂದಿನವರೆಗೆ ಯಾಸೆಪ ಪ್ರಾಣಿಯು ಬುದ್ಧಿಕೌಶಲ್ಯದ ಪ್ರ
ಭಾವದಿಂದ ಉಂಟಾದ ಅತ್ಯುತ್ತಮವಾದ ಸೂಕ್ಷ್ಮದರ್ಶ
ಕ ಯಂತ್ರದೊಳಗಿಂದ ಕೂಡ ಕಾಣಿಸದಷ್ಟು ಸೂಕ್ಷ್ಮವಾ
ಗಿದ್ದರೂ ಅವು ತಮ್ಮ ಗುಂಡಿನಿಂದ ಬಹು ದೂರವಾಗಿ

ರುವ ಎಷ್ಟೋ ಗುಂಡುಗಳ ಸಂಬಂಧದ ಹಲವು ಸಂಗ
ತಿಗಳನ್ನು ಚರಿತುಕೊಂಡಿರುವಂತೆ ತೋರಿತು. ಈ ಜೀವಿ
ಗಳು ನಾನು ಬೊಟ್ಟಿನಿಂದ ತಗಣಿಯನ್ನೊರೆಸಿದಂತೆ ಒರೆಯು
ಲಿಕ್ಕೆ ಬರುವಷ್ಟು ಸಣ್ಣವೂ ಕಸುವಿಲ್ಲದವೂ ಇದ್ದರೂ ಇವು
ಆ ಉರಿಯುವ ಗುಂಡನ್ನು ನಿರ್ಭಯದಿಂದ ನೋಡುತ್ತ, ಅ
ದರ ವ್ಯಾಸ, ಅಂತರ, ಉಷ್ಣತೆ, ಪ್ರಕಾಶ. ಭಾರ ಮುಂ
ತಾದ ಸಂಗತಿಗಳನ್ನು ಅರಿತಿದ್ದವು. ಅವುಗಳಿಗೆ ತಮ್ಮ
ಗುಂಡನ್ನು ಬಿಟ್ಟು ಬೇರೊಂದು ಗುಂಡಿಗೆ ಹೋಗಲಿಕ್ಕೆ
ಮಾತ್ರ ಬರುತ್ತಿದ್ದಿಲ್ಲ. ಅವು ಅರ್ಧ ಹೊತ್ತು ಕತ್ತಲೆ
ಯಲ್ಲಿಯೂ ಅರ್ಧ ಹೊತ್ತು ಬೆಳಕಿನಲ್ಲಿ ಕಾಲಕ್ಷೇಪ ಮಾ
ಡುವವು. ಅವುಗಳಿಗೆ ಕೈಗಳು ಇದ್ದಪ್ಪೋ ಇಲ್ಲಪ್ಪೋ ನ
ನಗೇನೂ ಗೊತ್ತಾಗಲಿಲ್ಲ. ಇದ್ದರೂ ಅವು ತಮ್ಮ ಮೊ
ಳಗಳಿಂದ ಉರಿಯುವ ಗುಂಡಿನ ಅಂತರವನ್ನು ಗೊತ್ತು
ಹಚ್ಚುವದು ಕೇವಲ ಅಸಾಧ್ಯವೇ ಎಂದು ನಿಶ್ಚಯಿಸಿದೆ
ನು. ಹೀಗಿದ್ದರೂ ಅವು ಆ ಉರಿಯುವ ಗುಂಡು ತಮ್ಮಿಂ
ದ ಎಷ್ಟು ದೂರವಿರುವದೆಂಬದನ್ನು ನಿರ್ಧರಿಸಿರುವವೆಂ
ದು ಮನಗಂಡೆನು. ಅವು ತಮ್ಮ ಬುದ್ಧಿ ಶಕ್ತಿಯಿಂದ ಆ
ಉರಿ ಗುಂಡು ಕೇವಲ ತೇಜದ ಮುದ್ದೆಯುಂಟೆಂತಲೂ ಆ
ತೇಜವು ಗುಂಡಿನಿಂದ ನಾಲ್ಕು ನಾಲ್ಕು ಫೂಟು ಸುತ್ತರಿಯು
ತ್ತದೆಂತಲೂ ತಿಳಕೊಂಡಿದ್ದಾವೆಂದು ತೋರಿತು. ಈ ತೇಜ
ದ ವೇಪ್ಪನವು ಸುಮಾರು ಎರಡು ಇಂಚು ಇರಬಹುದೆಂ
ದು ಅವು ತರ್ಕಿಸಿದ್ದವು. ಈ ವೇಪ್ಪನವು ಯಾವಾಗಲೂ
ಕ್ಷೋಭಿಸುತ್ತಿರುತ್ತದೆಂತಲೂ ಈ ಕ್ಷೋಭದ ಹೆಚ್ಚು ಕಡಿ
ಮೆ ಸಮಯದಲ್ಲಿ ತೇಜೋ ಮಂಡಲದ ವಿಸ್ತಾರವು ಮೂ
ರರಿಂದ ಮೂವತ್ತು ಫೂಟುಗಳವರೆಗೆ ಪ್ರಸರಣಾಕುಂಚ
ನವನ್ನು ಹೊಂದುತ್ತಿರುವದೆಂತಲೂ ಅವುಗಳಿಗೆ ಗೊತ್ತಿತ್ತು
ಇಷ್ಟೇ ಅಲ್ಲ. ಆ ಉರಿಗುಂಡಿನಲ್ಲಿ ಸುಡುತ್ತಿರುವ ಬಡ
ವೆಗಳನ್ನು ಸಹ ಅವು ಕಂಡು ಹಿಡಿದಿದ್ದವೆ.

ಇವೆಲ್ಲ ಸಂಗತಿಗಳಿಂದ ನಾನು ಆಶ್ಚರ್ಯ ಚಕಿತನಾ

ದೆನು ಬಳಿಕ ನನಗೆ ಕುತೂಹಲವು ಹೆಚ್ಚಾಗಲು ಆ ಉರಿಗುಂಡಿನ ಸಂಬಂಧದಿಂದ ಆ ಪ್ರಾಣಿಗಳು ಗೊತ್ತು ಹಚ್ಚಿದ ಸಿದ್ಧಾಂತಗಳು ಎಷ್ಟು ಮಟ್ಟಿಗೆ ದಿಟವಾಗಿರುತ್ತವೆಂಬವನ್ನು ಮನಗಾಣುವದಕ್ಕಾಗಿ ಅದರ ಸಮೀಪಕ್ಕೆ ಹೊರಟೆನು. ನಾನು ಅದು ನನ್ನಿಂದ ಮುಕ್ಕಾಲು ಮೈಲು ದೂರದಲ್ಲಿರುವದೆಂದು ಮೊದಲು ಹೇಳಿದ್ದೇನಪ್ಪೇ ಆದರೆ ಆಬುದ್ಧಿಯುಳ್ಳ ಪ್ರಾಣಿಗಳು ಅದು ತಮ್ಮಿಂದ ೧೦೪೦ ಯಾರ್ಡು ಅಂತರದಲ್ಲಿರುವದೆಂದು ಗೊತ್ತು ಹಚ್ಚಿದ್ದವು ಅವುಗಳು ಮಾಡಿದ ಅಳತೆಯು ಸರಿಯಾಗಿರುವದೆಂದು ನನಗೆ ಮನವರಿಕೆಯಾಯಿತು. ಆ ಉರಿಗುಂಡಿನ ಸಮೀಪಕ್ಕೆ ಹೋದ ಹೋದಂತೆ ಸೆಕೆಯು ಅಸಹ್ಯವಾಯಿತು. ಸಾರಾಂಶ ಆ ಪ್ರಾಣಿಗಳು ಈ ಉರಿಗುಂಡಿನ ಬಗ್ಗೆ ಮಾಡಿದ ಶೋಧಗಳೆಲ್ಲ ನಿಶ್ಚಯವಾಗಿ ಸರಿಯಾಗಿರುವವೆಂದು ನನ್ನ ನಿರ್ಧಾರವಾಯಿತು ಆ ಉರಿಗುಂಡು ಸ್ಥಿರವಾಗಿ ನಿಂತಿರದೆ ತನ್ನ ಆಚ್ಛಿನಸುತ್ತು ಭ್ರಮಣ ಮಾಡುತ್ತಿತ್ತು.

ನಾನು ನಿಂತ ಸ್ಥಳದಿಂದ ಹಿಂದಕ್ಕೆ ಹೊರಳಿ ನೋಡಿದೆನು. ಆಗ ಆ ಗಾಢಾಂಧಕಾರ ಪ್ರದೇಶದಲ್ಲಿ ಎರಡು ಚಿಕ್ಕಗಳು ದೃಷ್ಟಿಗೋಚರವಾದವು. ಅವುಗಳಲ್ಲಿ ಒಂದು ಬುದ್ಧಿವಾನ ಪ್ರಾಣಿಗಳಿಂದ ವಾಸಿಸಲ್ಪಟ್ಟಿದ್ದಿಂದೂ ಮತ್ತೊಂದು ಅದರ ಸುತ್ತು ತಿರುಗುತ್ತಿರುವದೆಂದೂ ಬಿಚ್ಚಿ ಹೇಳುವ ಪ್ರಯೋಜನವಿಲ್ಲ. ತುಸು ಸೂಕ್ಷ್ಮದೃಷ್ಟಿಯಿಂದ ನೋಡಲು, ನಡುವೆ ನನ್ನ ಬಳಿಯಲ್ಲಿಯೇ ಮತ್ತೊಂದು ಗುಂಡು ತಿರುಗುತ್ತಿರುವದೆಂದು ತೋರಿತು. ಅದರ ಮೇಲೆ ಸ್ವಚ್ಛವಾದ ಪ್ರಕಾಶವು ಬಿದ್ದಿತ್ತು. ಅದು ಹಿಂದೆ ಹೇಳಿದ ಪರಿಚಾರಕ ಗುಂಡಿಗಿಂತ ಸ್ವಲ್ಪ ದೊಡ್ಡದಿತ್ತು. ಅದರ ವ್ಯಾಸವು ಸುಮಾರು ಒಂದೂವರೆ ಇಂಚಿನಷ್ಟಿತ್ತು. ಅದು ಆ ಉರಿಗುಂಡಿನಿಂದ ಸುಮಾರು ಐದು ನೂರು ಯಾರ್ಡಿನ ಅಂತರದಲ್ಲಿ ತನ್ನ ಮೈಸುತ್ತು

ತಿರಗುತ್ತ ಉರಿ ಗುಂಡಿನಸುತ್ತು ಪ್ರದಕ್ಷಿಣೆಯನ್ನು ಹಾ
ಕುತ್ತಿರುವಂತೆ ಕಾಣಿಸಿತು. ಅಲ್ಲಿಂದ ಸುಮಾರು ೯೫೦
ಯಾರ್ಡಗಳ ಅಂತರದಲ್ಲಿ ಮತ್ತೊಂದು ಗುಂಡು ಮೇಲಿ
ನದರಂತೆ ತನ್ನ ಮೈಸುತ್ತ ತಿರಗುತ್ತ ಉರಿ ಗುಂಡನ್ನು
ಸುತ್ತರಿಯುತ್ತಿತ್ತು. ಅದರ ವ್ಯಾಸವು ಸುಮಾರು ನಾಲ್ಕು
ಇಂಚು ಇತ್ತು. ಇವೆರಡೂ ಗುಂಡುಗಳು ಬೆಳಕನ್ನು ಕ
ಡವಾಗಿ ತಂದುಕೊಂಡಿರುವವೆಂದು ಮನಗಂಡೆನು. ಬು
ದ್ಧಿಯುಳ್ಳ ಪ್ರಾಣಿಗಳ ಗುಂಡಿನ ಮೇಲೆ ನಿಂತು ನೋಡ
ಲು, ಉರಿಗುಂಡು ಎಷ್ಟು ದೊಡ್ಡದಾಗಿ ಕಾಣುವದೋ, ಆ
ದರ ಏಳಷ್ಟು ದೊಡ್ಡದಾಗಿ ಇವೆರಡರಲ್ಲಿ ಮೊದಲಿನ ಗುಂ
ಡಿನ ಮೇಲಿಂದಲೂ, ಎರಡಷ್ಟು ದೊಡ್ಡದಾಗಿ ಎರಡನೇ
ಗುಂಡಿನ ಮೇಲಿಂದಲೂ ಕಾಣುವದು. ಬಳಿಕ ಮುಂದೆ
ಉರಿಗುಂಡಿನಿಂದ ೧೯೫೦ ಯಾರ್ಡುಗಳ ಅಂತರದಲ್ಲಿ ಮು
ತ್ತೊಂದು ಗುಂಡು ತಿರುಗುತ್ತಿತ್ತು. ಇದರ ವ್ಯಾಸವು ಬ
ರೇ ಎರಡೇ ಇಂಚಿನಷ್ಟಿತ್ತು. ಇದರ ಸುತ್ತು ಎರಡು
ಕ್ಷಣಗಳು ತಿರುಗುತ್ತಿದ್ದವು. ಇದರಾಚೆಯಲ್ಲಿ ಕೆಲವಂತ
ರದಲ್ಲಿ ಉಸುಬಿನ ಕಾಳಿನಷ್ಟು ಸೂಕ್ಷ್ಮವಾದ ಎಷ್ಟೋ ಚಿ
ಕ್ಕ ಚಿಕ್ಕ ಗುಂಡುಗಳು ಬಳಿ ಗಟ್ಟಿ ತಿರಗುತ್ತಿರುವಂತೆ ಕಾ
ಣಿಸಿತು. ಅವೆಲ್ಲವುಗಳ ಕಡಿವಾಣವು ಉರಿಗುಂಡಿನ ಕೈ
ಯಲ್ಲಿರುವಂತೆ ತೋರಿತು.

ಇನ್ನೂ ಹೆಚ್ಚಿಗೇನಾದರೂ ಕಾಣುವವೋ ಏನೋ ಎಂ
ಬ ಜಿಜ್ಞಾಸೆಯಿಂದ ಮುಂದಕ್ಕೆ ನಡೆದೆನು. ಸುಮಾರು
ನಾಲ್ಕು ಮೈಲುಗಳ ಅಂತರದಲ್ಲಿ ಮತ್ತೊಂದು ಗುಂಡು ತಿ
ರಗುತ್ತಿರುವಂತೆ ಕಾಣಿಸಿತು. ಅದು ಉರಿಗುಂಡಿನ ಹೊ
ತ್ತು ಮಿಕ್ಕ ಎಲ್ಲ ಗುಂಡುಗಳಿಗಿಂತ ದೊಡ್ಡದಿತ್ತು. ಅ
ದರ ವ್ಯಾಸವು ಮೂರುವರಿ ಫೂಟು ಇರಬಹುದು. ಅ
ದರ ಮೇಲೆ ಗೋಡೆಗೆ ಹಚ್ಚಿದ ಸುಣ್ಣ ಕೆಮ್ಮಣ್ಣುಗಳ
ಪಟ್ಟಿಯಂತೆ ಕೆಲವು ಹಳದಿಬಣ್ಣದ ಪಟ್ಟಿಗಳು ಕಂಡವು
ಇದು ಬುದ್ಧಿಯುಳ್ಳ ಪ್ರಾಣಿಗಳ ಗುಂಡಿನ ಐದುಮಡಿಯ

ಷ್ಟು ವೇಗದಿಂದ ತಿರಗುತ್ತಿದ್ದರೂ ಉರಿಗುಂಡಿನ ಆಳಿಕೆಯಲ್ಲಿಯೇ ಇರುವದೆಂದು ಮನಗಂಡೆನು. ಇದರ ಸುತ್ತುಮುತ್ತು ಪರಿಚಾರಕರಂತೆ ನಾಲ್ಕು ಗುಂಡುಗಳು ತಿರಗುವವು. ಇವು ತಮ್ಮ ನಾಯಕನಿಂದ ಕ್ರಮವಾಗಿ ೧೧, ೧೪, ೨೪, ೪೪ ಫೂಟುಗಳ ಅಂತರದಲ್ಲಿರುವವು. ಇವುಗಳ ವ್ಯಾಸವು ಒಂದರಿಂದ ಒಂದೂವರೆ ಇಂಚಿನಷ್ಟು ಉಂಟು.

ಉರಿಗುಂಡಿನಿಂದ ಸುಮಾರು ಏಳು ಮೈಲುಗಳ ಮೇಲೆ ಒಂದು ವಿಲಕ್ಷಣ ಗುಂಡು ನೋಡಿದೆನು. ಅದರ ಸುತ್ತು ಬೆಳಕಿನ ಸುತ್ತುಗಳಿದ್ದವು. ಒಳಗಿನ ಗುಂಡು ಹಿಂದೆ ಹೇಳಿದ್ದರಷ್ಟು ದೊಡ್ಡದಿರದಿದ್ದರೂ ಅದರ ವ್ಯಾಸವು ಮೂವತ್ತೈದು ಇಂಚಿನಷ್ಟು ಇತ್ತು. ಇದರ ಮೇಲಿನ ಪಟ್ಟಿಗಳು ತುಸು ಕಪ್ಪು ಛಾಯವುಳ್ಳವು. ಇದರ ಮೇಲಿನ ಬೆಳಕಿನ ಸುತ್ತುಗಳು ಇದರ ಮೈಗೆ ಹೊಂದಿರದಿದ್ದರೂ ಅದರ ಅಂಕೆಯೊಳಗಿರುವಂತೆ ತೋರಿತು. ಈ ಸುತ್ತುಗಳ ವ್ಯಾಸವು ಎಂಬತ್ತು ಇಂಚು ದಪ್ಪ ಹದಿನೇಟು ಇಂಚು ಇರುವವು. ಇದಕ್ಕೆ ಎಂಟು ಪರಿಚಾರಕ ಗುಂಡುಗಳಿರುವವು. ಅವುಗಳಲ್ಲಿ ಅರನೇದು ಎಲ್ಲಕ್ಕೂ ದೊಡ್ಡದು. ಇದರ ವ್ಯಾಸವು ಒಂದೂವರೆ ಇಂಚಿನಷ್ಟಿರುವದೆಂದೂ ಇದು ಮುಖ್ಯ ಗೋಲದಿಂದ ಮೂವತ್ತಮೂರು ಫೂಟುಗಳ ಅಂತರದಲ್ಲಿರುವದೆಂದೂ ಆರಿತುಕೊಂಡೆನು. ಕಡೆಯದು ತೀರಸಣ್ಣದು ಅದರ ವಿಸ್ತಾರವು ಒಂದು ಇಂಚಿನಷ್ಟಿದೀತು ಆದರೂ ಅದರ ಮಂಡಲದ ಅಗಲವು ಇನ್ನೂರು ಫೂಟು ಇರುವದು.

ನಾನು ಉರಿಗುಂಡಿನಿಂದ ೫ ಮೈಲು ದೂರ ಬಂದಿದ್ದೆನು ಇಲ್ಲಿಂದ ಅದು ತೀರ ಚಿಕ್ಕದಾಗಿ ಕಾಣುತ್ತಿತ್ತು. ಅದರಿಂದ ಸುಮಾರು ಹದಿನಾಲ್ಕು ಮೈಲುಗಳ ಅಂತರದಲ್ಲಿ ಮತ್ತೊಂದು ಗುಂಡು ಕಂಡೆನು. ನಾನೊನ್ನು ಅದರ ತನಕ

ಹೋಗಲಿಲ್ಲ. ಆದರೂ ನನಗೆ ಪ್ರಾಪ್ತವಾದ ದಿವ್ಯದೃಷ್ಟಿ
ಯಿಂದ ಅದರ ವ್ಯಾಸವು ಹದಿನಾರು ಇಂಚು ಇರುವದೇ
ತಲೂ ಅದಕ್ಕೂ ಸುತ್ತರಿಯುವ ನಾಲ್ಕು ಗುಂಡುಗಳಿರು
ವ್ಹವೆಂತಲೂ ಗೊತ್ತು ಮಾಡಿಕೊಂಡೆನು. ಆದರಾಚೆಯು
ಲ್ಲಿ ಇಪ್ಪತ್ತೆರಡು ಮೈಲುಗಳ ಅಂತರದಲ್ಲಿ ಮತ್ತೊಂದು
ಗುಂಡನ್ನು ಕಂಡೆನು. ಆದಾದರೂ ಆ ಉರಿಗುಂಡನು
ಸುತ್ತರಿಯುತ್ತಿತ್ತು. ಅದು ತಿರುಗಾಡುವ ಹಾಡಿಯು ಎ
ಷ್ಟು ದೂರವಾದದ್ದು! ನಾನು ಸಾಯುವವರೆಗೆ ನಡೆದರೂ
ಸನ್ನಿಂದ ಒಂದು ಸುತ್ತಾದರೂ ನಡೆಯುವದಾಗದು.

ನನಗೆ ದಿವ್ಯದೃಷ್ಟಿಯು ಪ್ರಾಪ್ತವಾಗಿತ್ತಿಂತಲೇ ನಾನು
ಇಪ್ಪು ದೂರದಲ್ಲಿದ್ದರೂ ಆ ಬುದ್ಧಿಯುಳ್ಳ ಪ್ರಾಣಿಗಳ ಸ
ಣ್ಣ ಗುಂಡು ನನಗೆ ನಿಚ್ಚಳವಾಗಿ ಕಾಣುತ್ತಿತ್ತು. ಈ
ಗುಂಡಿನ ಮೇಲೆ ಏನೇನು ನಡೆದಿರುವದೋ ನೋಡಬೇ
ಕೆಂದು ಹೊರಳಿದೆನು. ಅದರ ಮೇಲಿರುವ ಪ್ರಾಣಿಗಳು
ತರತರದ ಉದ್ಯೋಗದಲ್ಲಿ ತೊಡಗಿದ್ದವು. ಕೆಲವು ಮ
ನೆ ಕಟ್ಟುತ್ತಿದ್ದವು. ಹಲವು ದಾರೀ ಮಾಡುತ್ತಿದ್ದವು. ಬೇ
ರೆ ಕೆಲವು ಜಲಪರ್ಯಟನದಲ್ಲಿ ತೊಡಗಿದ್ದವು. ಮತ್ತೆ
ಕೆಲವೆ ಕಾಳಗದಲ್ಲಿ ತೊಡಗಿದ್ದವು. ಅವುಗಳಲ್ಲಿ ಲಕ್ಷಾವ
ಧಿ ಜೀವಿಗಳು ರಣಾಂಗಣದಲ್ಲಿ ಪತನ ಹೊಂದುತ್ತಿದ್ದವು
ಇದನ್ನು ಕಂಡು ನಾನು ಅವರಿಗೆ ಬುದ್ಧೀ ಹೇಳಿ ಈ ಕ್ರೂ
ರ ಕೆಲಸದಿಂದ ಅವರನ್ನು ಹಿಂದಿರುಗಿಸಬೇಕೆಂದು ಹವಣಿ
ಸಿದೆನು. ಅವರಲ್ಲಿಯೂ ಕೆಲವರು ಭೂತದಯೆಯಿಂದ ಪ
ರಿಪೂರ್ಣರಾಗಿರುವವೆಂದು ತೋರಿತು. ಆ ಪ್ರಾಣಿಗಳಿಗೆ ತ
ಮ್ಮ ಬುದ್ಧಿ ಬಲದ ಹೆಮ್ಮೆ ಬಹಳವಿರುವಂತೆ ಕಾಣಿಸಿತು.
ನಾನು ಅವರ ಬಳಿಗೆ ಬಂದು ವಿಶಾಲವಾದ ವಿಶ್ವದ ಮಹಿ
ಮೆಯನ್ನು ಹೇಳಬೇಕೆಂದು ಬಯಸಿದೆನು. ಅಷ್ಟರೊಳ
ಗೆ ನನ್ನ ಶಕ್ತಿಯು ಕಡಿಮೆಯಾಗುತ್ತ ನನಗೆ ಪ್ರಾಪ್ತವಾ
ದ ದಿವ್ಯದೃಷ್ಟಿಯು ನಷ್ಟವಾಯಿತು. ಇವೆಲ್ಲ ಅದ್ಭುತಸಂ
ಗತಿಗಳಿಂದ ಬೆದರಿ ಕಣ್ಣು ತೆರೆದನು, ಏನದೆ! ನಾನೂ

ಕನಸಿನಲ್ಲಿ ಕಂಡ ಬುದ್ಧಿಯುಳ್ಳ ಪ್ರಾಣಿಗಳ ಗುಂಡಿನ ಮೇಲಿರುವ ಜೀವಿಗಳಲ್ಲೊಂದಾಗಿರುವೆನೆಂದು ಅರಿತೆನು. ಮಿತ್ರರೇ ಇನ್ನು ಈ ನನ್ನ ಕನಸಿನ ಫಲವನ್ನು ನೀವೇ ವಿಚಾರಿಸಿರಿ.

ಕನಸಿನೊಳಗೆ ಕಂಡ ಗುಂಡುಗಳ ಅಂತರ ಪರಿಮಾಣಗಳಿಗೆ ೧೯೬೬೦೦೦೦೦ ದಿಂದ ಗುಣಿಸಿದರೆ ಈ ಸಂಗತಿಯು ದಿಟವಾದದ್ದೆಂದು ನಿಮಗೆ ಹೊಳೆಯದಿರದು.

DHARWAR TRAINING COLLEGE CERTIFICATE EXAMINATION. 1905.

೩ನೇ ವರ್ಷ

ಸೋಮವಾರ, ೩ನೇ ಅಕ್ಟೋಬರ.

(೧೦೫ ರಿಂದ ೩.)

ಭಾಷಾವಿಷಯ-ಗದ್ಯ ಪದ್ಯ.

(ಬಲಕ್ಕೆ ಬರೆದ ಅಂಕೆಗಳು ಪ್ರಶ್ನೆಗಳ ಪೂರ್ಣ ಗುಣಿಗಳು.)

೧ (ಅ) ರುದ್ರಭಟ್ಟನೂ ಷಡಕ್ಷರಿಯೂ ಸಮಕಾಲದವರೆಂದು ಕೆಲವರೂ ಅಲ್ಲವೆಂದು ಕೆಲವರೂ ಹೇಳುವರು. ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವನ್ನು ಸಪ್ರಮಾಣವಾಗಿ ಬರೆಯಿರಿ. ೪

(ಬ) ರುದ್ರಭಟ್ಟನು ಸ್ತುತಿಸಿರುವ ಕವಿಗಳು ಯಾರು? ಅವರ ಬಂಧಗಳಲ್ಲಿ ಯಾವ ಗುಣಗಳಿರುವವೆಂದು ಅವನು ಹೇಳುತ್ತಾನೆ. ಹಾಗೂ ತನ್ನ ಕೃತಿಯ ವಿಷಯದಲ್ಲಿ ಏನು ಹೇಳಿಕೊಳ್ಳುತ್ತಾನೆ? ೪

೨ ರುದ್ರಭಟ್ಟನು ಜಗನ್ನಾಥವಿಜಯದ ಒಂದೆರಡು ಪದ್ಯಗಳಲ್ಲಿ ದ್ವಾಪರಯುಗವು ಕಲಿಯುಗಕ್ಕಿಂತ ಮೊದಲು ೪

ಯಿತೆಂಬದನ್ನು ಮರೆತಂತೆ ತೋರುತ್ತದೆ. ಆ ಪದ್ಯ
ಗಳನ್ನಾಗಲಿ ಅವುಗಳ ಭಾವವನ್ನಾಗಲಿ ಬರೆಯಿರಿ.

೩ ಕೆಳಗೆ ಬರೆದ ಪದ್ಯಗಳ ಅರ್ಥವನ್ನು ಹೊಸಗನ್ನಡದಲ್ಲಿ ಗದ್ಯದಲ್ಲಿ ಬರೆದು ಅವುಗಳ ವೃತ್ತಗಳನ್ನೂ ಅವುಗಳಲ್ಲಿ ಕಾಣಿಸುವ ಅಲಂಕಾರಗಳನ್ನೂ ಹೇಳಿರಿ:—

ಪದಿನಾಲ್ಕುಂ ಲೋಕಮುಂ ಕಿಳ್ದೊಡೆಯೊಳೆ ತಳೆದಾ ವಿ
ಷ್ಣು ತನ್ನೇಳ ದೇಶಾ।
ಗ್ರದೊಳಿರ್ದಂ ವಾರಿದಂ ತನ್ನೊಳೆ ಕತಿಪಯ ವಾರ್ಬಿಂದು
ವಂ ಕೇರಿ ತಂದಂ॥
ತದರಿಂದಂ ಲೋಕಮುಂ ತೀವ್ರವೃದು ಪವಿಭಯ ಭ್ರಾಂತಿ
ಯಿಂದಂ ಶರಣ್ಹೊ।
ಕ್ಕುದು ತನ್ನಂ ಗೋತ್ರ ಧಾತ್ರೀಧರ ತತಿಯನೆ ಸಂಪರ್ಣ
ವಕ್ಕೇನೊ ಚೋದ್ಯಂ॥
ಫೆನ ಶುಂಡಾದಂಡ ಪಾತಚ್ಯುತ ಏರಳರಬಿಂಬಂ ಜೊ
ಲಿಂಬಾಗೆ ಶುಂಭ।
ತ್ಕಸದುದ್ಯದ್ದರ್ಪಣಂ ಫಾಲದೊಳೆ ಶೃಣಿಚಲತ್ಕುಂಭೆ
ಕೂಟಾಗ್ರ ಸಂಘ॥
ಟ್ಟನದಿಂ ಬೀಳ್ದರ್ಧ ಚಂದ್ರಂಬೊಲಿರ ಪೃಥುಶಿರೋವ
ದ್ಯದೊಳ್ಮಕ್ತದಾನಾಂ।
ಬುಧಿಯುಶ್ಮಂ ಕರ್ಣಮಬ್ದಂ ತೊಡರ್ದವೊಲಿರೆ ಕ
ಣ್ಗೊಪ್ಪಿ ಬಂದತ್ತಿಭೇಂದ್ರಂ॥

೪ ರಾಜಶೇಖರದೊಳಗಿನ ಕೆಳಗಣ ವರ್ಣನೆಗಳ ಒಳ್ಳಂದರ ಮುಖ್ಯಾಂಶಗಳನ್ನು ಹೊಸಗನ್ನಡದಲ್ಲಿ ಸಂಕ್ಷಿಪ್ತವಾಗಿ ಬರೆಯಿರಿ:—

(ಅ) ರಾಜಶೇಖರನ ದಂಡಯಾತ್ರೆಯ ವರ್ಣನೆ.

(ಬ) ಮಣಿಕಟಕ ಪರ್ವತದ ವರ್ಣನೆ.

(ಕ) ರಾಜಶೇಖರನಿಗೂ ಸಿಂಹಳೇಂದ್ರನಿಗೂ ಆದ ಯುದ್ಧದ ವರ್ಣನೆ.

೫. ನೀವು ಓದಿದ ಪದ್ಯ ಪುಸ್ತಕಗಳಲ್ಲಿ ನಾಗವ ೧೨
ರ್ಮನು ಚಂದ್ರಾಪೀಡನ ಧ್ವಜ ಪಟಲವನ್ನೂ ಧವಳಾ
ತಪತ್ರವನ್ನೂ, ಪಡಕ್ಷರಿಯು ರಾವುತರನ್ನೂ ಅನೇಗಳ
ಬಾಯಿಂದ ಹರಿಯುತ್ತಿರುವ ರಕ್ತವನ್ನೂ, ರುದ್ರಭಟ್ಟ
ನು ಹೇಮಾಚಲವನ್ನೂ ಕ್ಷೀರ ಸಮುದ್ರವನ್ನೂ ಯಾ
ತಕ್ಕೆ ಹೋಲಿಸಿದ್ದಾರೆ? ಉತ್ತರವನ್ನು ಪದ್ಯದಿಂದಾಗಲಿ
ಗದ್ಯದಿಂದಾಗಲಿ ನಿವುಗೆ ಬಂದಂತೆ ಬರೆಯಿರಿ

೬. ಶುಕನಾಸ ಮಂತ್ರಿಯು ಚಂದ್ರಾಪೀಡನಿಗೆ ಹೇ ೧೨
ಳಿದ ಉಪದೇಶದೊಳಗಿನ ಮುಖ್ಯಾಂಶಗಳನ್ನು ಸಾಧ್ಯ
ವಾದ ಮಟ್ಟಿಗೆ ಹಳಗನ್ನಡ ಗದ್ಯದಲ್ಲಿ ಬರೆಯಿರಿ. ೧೦
ಪಂಕ್ತಿಗಳಿಗಿಂತ ಹೆಚ್ಚು ಬರೆಯಬಾರದು

೭ ಕೆಳಗೆ ಕಾಣಿಸಿದ ಸ್ಥಳಗಳು ಎಲ್ಲಿ ಇದ್ದವು? ಅವು ೬
ಗಳ ಈಗಿನ ಹೆಸರುಗಳನ್ನು ಬರೆಯಿರಿ:—

ಲಾಳ, ಕೇರಳ, ಬರ್ಬರದೇಶ, ತ್ರಿಗರ್ತ, ಮತ್ಸ್ಯದೇಶ,
ಖಾಂಡವವನ

೮ ಕೆಳಗೆ ಬರೆದ ಶಬ್ದಗಳ ಅರ್ಥಗಳನ್ನು ಸಂಪೂ ೧೨
ರ್ಣವಾಗಿ ಬರೆಯಿರಿ:—

ಉಕ್ಕಡ, ಹವ್ಯ, ಕವ್ಯ, ಯಜ್ಞ, ಯಾಗ, ಅತಿರಥ,
ಮಹಾರಥ, ಘೋಷಯಾತ್ರೆ ಸಾಂಗೋಪಾಂಗವಾದ
ನಾಲ್ಕು ವೇದಗಳು, ಕಲಾ, ಕಾಷ್ಠ, ಮುಹೂರ್ತ

HABIT

ಚಟುವು.

ಚಟದ ವ್ಯಾಖ್ಯೆಯು ನಿಯಮಿತವಲ್ಲ. ಅನೇಕ ಜನರು
ಬೇರೆ ಬೇರೆ ಪ್ರಕಾರದ ವ್ಯಾಖ್ಯೆಯನ್ನು ಮಾಡುತ್ತಾರೆ.
ಹ್ಯಾಗೆ ಹೇಳಿದರೂ ಅದಕ್ಕೆ ವಿರೋಧವು ಇದ್ದೇ ಇರುತ್ತದೆ.
ಕಾರಣ ಚಟದ ವ್ಯಾಖ್ಯೆಯನ್ನು ಹೇಳುವದು ಸುಲಭವಲ್ಲ.
ಯಾವ ಕೃತ್ಯಗಳು ಮೇಲಿಂದ ಮೇಲೆ ಮಾಡುವದರಿಂದ
ಅವು ಮನಸ್ಸಿನ ಪ್ರವೃತ್ತಿಯಿಲ್ಲದೆ ಯಂತ್ರದಂತೆ ತಮ್ಮಷ್ಟ

ಕ್ಕೆ ತಾವೇ ಸಾಗುತ್ತವಯೋ ಅವಕ್ಕೆ ಚಟಗಳನ್ನು ತ್ತಾರೆ. ಚಟಗಳು ಬಹುಕಾಲ ನಡೆಯುವೆದರಿಂದ ಅವು ಅವನ ಸ್ವಭಾವವೇ ಆಗಿ ಹೋಗುತ್ತವೆ. ಚಟಕ್ಕೆ ಹೊಸದಾಗಿ ಸಂಪಾದಿಸಿದ ಗುಣವೆಂದೆನ್ನಲಿಕ್ಕೆ ಆಡ್ಡಿ ಇಲ್ಲ. ಸ್ವಭಾವವು ದೇವರು ಕೊಟ್ಟದ್ದು. ಚಟವು ಹಚ್ಚಿಕೊಂಡದ್ದು. ಸ್ವಭಾವಕ್ಕೆ ಆದಿ ಇಲ್ಲ. ಚಟಕ್ಕೆ ಆದಿಯುಂಟು.

ಮನೋ ಇಚ್ಛೆಯಿಂದ ಮಾಡುವ ಕೆಲಸಗಳೆಲ್ಲ ಚಟದಿಂದಲೇ ಆಗಿ ಹೋಗುತ್ತವೆ. ಇದೇ ಚಟದ ಪರಿಣಾಮವು ಇದರಿಂದ ಇಚ್ಛೆಯು ಕೆಲಸವು ಕಡಿಮೆಯಾಗುತ್ತದೆ. ಇದರಿಂದ ಮನೋ ಇಚ್ಛೆಯಿಲ್ಲದೆ ಯಾವ ಕೆಲಸಗಳು ತಾವೆ ಆಗುತ್ತವೆಯೋ ಇದೇ ಚಟವು.

ರೂಢಿಯಿಂದ (ಚಟದಿಂದ) ಇಂದಿಯ ಶಕ್ತಿಗಳು ಬೆಳೆಯುತ್ತವೆ. ಕೃತ್ಯಗಳು ಸುಲಭವಾಗುತ್ತವೆ ಮತ್ತು ಕುಶಲತನವೂ ಬರುತ್ತದೆ. ಇಚ್ಛೆ ಇದ್ದರೆ ಕುಶಲತನ ಬರುತ್ತದೆಂದು ನಿಯಮವಿಲ್ಲ. ಕುಶಲತನವಿದ್ದರೆ ಇಚ್ಛೆ ಇರುತ್ತದೆಂಬ ನಿಯಮವಿಲ್ಲ. ಕೆಲವು ಕೃತ್ಯಗಳು ಪದೇ ಪದೇ ಮಾಡುವದರಿಂದ ಕುಶಲತನವು ಬರುತ್ತದೆ.

ಚಟಕ್ಕೆ ಕೆಲವು ಜನರು ಎರಡನೇ ಸ್ವಭಾವವೆಂದು ಅನ್ನುತ್ತಾರೆ. ಇದು ಕೆಲವಂಶದಿಂದ ನಿಜವಿರುತ್ತದೆ. ಎರಡನೇ ಸ್ವಭಾವ ಅಥವಾ ಚಟ ಉಂಟಾಗಲಿಕ್ಕೆ ಮನಸ್ಸಿನ ಜಾಗರೂಕತನವೂ ನಿಶ್ಚಯವೂ ಬೇಕು.

ಆದ್ದರಿಂದ ಸಾಮಾನ್ಯ ರೀತಿಯಿಂದ ಹೇಳುವದೇನಂದರೆ ವಿಶೇಷ ಪ್ರಸಂಗದಲ್ಲಿ ಮನಸ್ಸಿನಲ್ಲಿ ಯಾವದಾದರೊಂದು ವಿಶೇಷ ವಿಚಾರ ಹುಟ್ಟಿ ಅದರಂತೆ ಕೃತ್ಯ ಮಾಡೋಣವೇ ಚಟವೆಂದು ಹೇಳಲ್ಪಡುತ್ತದೆ

ಯಾವದಾದರೊಂದು ಚಟ ಹತ್ತಬೇಕಾದರೆ ಮಾನಸಿಕ ಮತ್ತು ಶಾರೀರಿಕ ಶಕ್ತಿಗಳು ಕೆಲಸಮಾಡಲಿಕ್ಕೆ ಹತ್ತಬೇ

ಕು. ನಾವು ಮಾಡುವ ಕೃತ್ಯಕ್ಕೂ ಅದನ್ನು ಸೂಚಿಸುವ ತ
ತ್ವಕ್ಕೂ ಸಂಬಂಧವಿರಬೇಕು. ಚಟದಲ್ಲಿ ಮೇಲೆ ಮೇಲೆ
ಮಾಡುವದಕ್ಕಿಂತ ನಿಯಮಿತ ವೇಳೆಗೆ ಮಾಡುವದು ಹೆ
ಚ್ಚು ಮಹತ್ವವಾದದ್ದು. ಮನಸ್ಸಿನ ಪ್ರೇರಣೆ ಇಲ್ಲದೆ
ವೇಳೆ ವೇಳೆಗೆ ತನ್ನಷ್ಟಕ್ಕೆ ತಾನೇ ಕಾರ್ಯತಪ್ಪದೇ ಆಗು
ವದೇ ಪೂರ್ಣ ಚಟವೆಂದು ಹೇಳಲ್ಪಡುತ್ತದೆ.

ಚಟ ಹತ್ತಲಿಕ್ಕೆ ಏನಾದರೂ ಉದ್ರೇಕ ಬೇಕು. ಆ ಉ
ದ್ರೇಕದ ಮೂಲಕ ಕೃತ್ಯ ಉಂಟಾಗುತ್ತದೆ. ಆ ಕೃತ್ಯ ಪ
ದೇ ಪದೇ ಮಾಡಬೇಕಾದರೆ ಬೇಸರ ಬರುತ್ತದೆ. ಆಗ ಮ
ನಸ್ಸಿನ ಪ್ರಯತ್ನ ಬೇಕಾಗುತ್ತದೆ. ಹೀಗೆ ಮನಸ್ಸಿನ ಹೆ
ಚ್ಚು ಹೆಚ್ಚು ಪ್ರಯತ್ನವಾದ ಬಳಿಕ ಅದು ರೂಢೀ ಬೀಳ್ಳು
ದೆ. ಆ ಮೇಲೆ ಸುಲಭವಾಗುತ್ತದೆ. ಬಳಿಕ ಮನಸ್ಸಿನ ಇ
ಚ್ಛೆಯು ಉಳಿಯುವದಿಲ್ಲ. ಅಂದರೆ ಮನಸ್ಸಿನ ಇಚ್ಛಾ ಆಥ
ವಾ ಪ್ರವೃತ್ತಿಶೂನ್ಯವಾಗುವದು. ಈಗ್ಗೆ ಚಟ ಪೂರ್ಣವಾ
ಯಿತಾಯಿತು.

DEPARTMENTAL NOTICE.
ನೋಟೀಸುಗಳು.

ಟ್ರೇನಿಂಗ್ ಕಾಲೇಜದ ಪ್ರವೇಶ ಪರೀಕ್ಷೆಯು ೧೯೧೮ನೇ
ಇಸವಿಯ ಡಿಸೆಂಬರದ ದಿವಸ ನಡೆಯುವದೆಂದು ಈ ಮೊದಲೇ ನೋ
ಟೀಸಿನಿಂದ ಪ್ರಸಿದ್ಧಿಸಲ್ಪಟ್ಟಿದೆ. ಉದ್ದೇಶವಾರರು ತಪ್ಪದೆ
೧೯೧೮ನೇ ತಾರೀಖಿನ ಹನ್ನೊಂದು ಗಂಟೆಗೆ ಹಾಜರಾಗಿ ತ
ಮ್ಮ ಹೆಸರು ಹಚ್ಚಿಸಬೇಕು. ಪರೀಕ್ಷೆಯು ದರಬಾರ ಹಾ
ಲಿನಲ್ಲಾಗುವದು. ೧೯೧೮ನೇ ತಾರೀಖಿನ ದಿವಸ ಗಣಿತ ಸಿಬಂ
ಧಗಳೂ ೧೯೧೯ನೇ ತಾರೀಖಿನ ದಿವಸ ಭಾಷಾವಿಷಯ ಇತಿ
ಹಾಸ ಭೂಗೋಲಗಳೂ ನಡೆಯುವವು. ಕಾಲಕ್ಕೆ ಸರಿ
ಯಾಗಿ ಬಾರದ ವಿದ್ಯಾರ್ಥಿಯ ಬಗ್ಗೆ ಏನೂ ವಿಚಾರ ಮಾಡ
ಲಾಗದು ತಿಳಿಯುವದು.

ಧಾರವಾಡ,
೨೨.೧೧.೧೮. } S K. RODDA,
Principal Trg. College

ಶಾಲಾಪತ್ರಿಕೆ.

ಪದ್ಯ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಷ್ಯಸೋತ್ಕರ್ಷಮೆ
ಬಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ಸಯದಿಂದಿತ್ತಪವೋದುವರ್ಗಸುಗುಣಂ ತೋರಲ್ಕೆಕೈಕೊಂಬುದೈ ॥೧॥
ಬಯಿಯಿಂದೋಷಪತಿದ್ದ ವೇಳ್ವುದುಖಧರ್ಜ್ಞಾನಾಭಿವೃದ್ಧಿಪ್ರಿಯ

ಪುಸ್ತಕ ೪೧] ದಶಂಬರ ೧೯೦೫. [ಸಂಚಿಕೆ ೧೨.

EDUCATIONAL INTELLIGENCE AND. USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮೊದಲಿಗೆ ತಿಳಿಸಿದಂತೆ ಹೋದ ತಿಂಗಳ ಒಂಬತ್ತನೇ ತಾರೀಖಿನ ದಿವಸ ಯುವರಾಜರು ತಮ್ಮ ಧರ್ಮಪತ್ನಿಯೊಂದಿಗೆ ಮುಂಬಯಿ ಪಟ್ಟಣಕ್ಕೆ ಬಂದು ತಲ್ಪಿದರು. ಇವರು 'ರಿನೌನ್' ಎಂಬ ಹಡಗದಲ್ಲಿ ಕುಳಿತು ಆದಿವಸ ನಾಲ್ಕು ಘೆಂಟೆಗೆ ಸರಿಯಾಗಿ ಬಂದರಕ್ಕೆ ಬರಲು, ವೈಸರಾಯರಾದ ಲಾರ್ಡ್‌ಕರ್ಜನ್ ದೊರೆಗಳು ತಾವೊಂದು ಡೋಣಿಯನ್ನೇರಿಕೊಂಡು ಯುವರಾಜರ ಹಡಗದ ವರೆಗೆ ಹೋಗಿ ಅರಸುಮಕ್ಕಳ ಸ್ವಾಗತವನ್ನು ಮಾಡಿದರು. ತರುವಾಯ ಮುಂಬಯಿ ಗವರ್ನರರಾದ ಲಾರ್ಡ್ ಲ್ಯಾಮಿಂಗಟನ್ನ ಘೊರೆಗಳು ಮುಂಬಯಿ ಮುನಸಿಪಾಲಿಟಿಯ ಸಭಾಸದರೊಂದಿಗೆಯೂ, ತಮ್ಮ ಕೌನ್ಸಿಲರರೊಂದಿಗೆಯೂ ಯುವರಾಜರ ಹಡಗದ ವರೆಗೆ ಹೋಗಿ ರಾಜದಂಪತಿಗಳನ್ನು ಸತ್ಕರಿಸಿದರು. ತರುವಾಯ ಒಂದು ಸುಂದರವಾದ ಡೋಣಿಯಲ್ಲಿ ಕುಳಿತು ಯುವರಾಜರು ಪತ್ನಿಯೊಂದಿಗೆ ಬಂದರದ ಮೆಟ್ಟಿಲ್ಲಿ ಬರಲು ನೆರೆದ ಜನರೆಲ್ಲ ಜಯಘೋಷ ಮಾಡಿದರು. ಸನ್ಮಾನಾರ್ಥವಾಗಿ ತೋಪುಗಳು ಹಾರಿಸಲ್ಪಟ್ಟವು. ಬಳಿಕ ಸಮಾರಂಭದ ಉದ್ದೇಶಕ್ಕಾಗಿ ಹಾಕಿದ ಮಂಟಪದಲ್ಲಿ ಉ

ಚ್ಚಾಸನದಲ್ಲಿ ಯುವರಾಜರು ಆರ್ಧಾಂಗಿಯೊಡನೆ ವಿಶ್ರಮಿಸಲು, ಅದರ ಬಲಬದಿಗೆ ಕೊಲ್ಹಾಪುರ, ಖಂಬಾಯತ ಮೊದಲಾದ ಅನೇಕ ಜನ ಮಾಂಡಲಿಕ ಪ್ರಭುಗಳೂ ಎಡಗಡೆಗೆ ಸರಕಾರದ ಉದ್ಯೋಗಸ್ಥರೂ ಇತರ ಸಭ್ಯಗೃಹಸ್ಥರೂ ಕುಳಿತುಕೊಂಡರು. ತದನಂತರ ಮುಂಬಯಿ ಮುನಸಿಪಾಲಟಿಯ ಅಧ್ಯಕ್ಷರಾದ ಮೆಹಬಾನ ಫೇರೋಜಶಹಾ ಮೇಥಾ ಎಂಬ ಪ್ರಸಿದ್ಧರಾದ ಪಾರ್ಸೀಗೃಹಸ್ಥರು ಮಾನಪತ್ರವನ್ನು ಓದಿದರು. ಅದರ ಸಾರವೇನಂದರೆ:—

ಯುವರಾಜರೇ, ಅವರಧರ್ಮ ಪತ್ನಿಯವರೆ, ಇಂದಿನ ದಿವಸ ಮುಂಬಯಿ ನಗರವಾಸಿಗಳಾದ ನಮ್ಮೆಲ್ಲರಿಗೂ ಅತಿ ಆನಂದವನ್ನು ವರ್ಣಿಸುವದು ಮಾನವ ಪ್ರಾಣಿಯ ಅಳವಿಗೆ ಮೀರಿರುವದು. ಇದೇ ಮೇರೆಗೆ ಯಾವತ್ತು ಭರತಖಂಡದ ನಿವಾಸಿಗಳೂ ಆನಂದೋದಧಿಯಲ್ಲಿ ಮುಳುಗಿರುವರೆಂದು ಹೇಳಲಿಕ್ಕೆ ಅಡ್ಡಿಇಲ್ಲ. ಈ ಮುಂಬಯಿ ನಗರವು ಸನ್ ೧೬೬೦ರಲ್ಲಿ ಪೋರ್ತುಗಾಲದ ಅರಸನಿಂದ ಇಂಗ್ಲಂಡದ ಅರಸು ಮನೆತನಕ್ಕೆ ಸೇರಿರುವದರಿಂದ ಇದು ಯುವರಾಜರಾದ ತಮ್ಮ ಸ್ವಂತದ ಆಸ್ತಿಯಾಗಿರುತ್ತದೆ. ಮೊದಲು ಇದು ನಗರವಾಗಿರದೆ ಹಲವು ಚಿಕ್ಕ ಚಿಕ್ಕ ನಡುಗಡ್ಡೆಗಳಿಂದೊಡಗೂಡಿತ್ತು. ಆಗ ಇಲ್ಲಿಯ ನಿವಾಸಿಗಳು ಸಮುದ್ರದೊಗಿನ ಮೀನುಗಳನ್ನು ಹಿಡಿದು ಅವುಗಳ ವ್ಯಾಪಾರದಿಂದ ಉಪಜೀವಿಸುತ್ತಿದ್ದರು. ಬರಬರುತ್ತ ಬ್ರಿತಿಶರ ಆಳಿಕೆಯ ಶಾಂತಿ ಸಮಾಧಾನಗಳ ಯೋಗದಿಂದ ಇದು ನಗರದ ಸ್ವರೂಪವನ್ನು ಪಡೆಯಿತು. ಪ್ರಸ್ತುತಕ್ಕೆ ಪಂಚಖಂಡಗಳಲ್ಲಿಯೂ ಹಬ್ಬಿರುವ ಬ್ರಿತಿಶ ಸಾಮ್ರಾಜ್ಯದಲ್ಲಿ ಎರಡನೇ ಪಟ್ಟಣವಾಗಿದೆ. ಈ ಪಟ್ಟಣದ ಕೀರ್ತಿ, ವ್ಯಾಪಾರ, ಸಂಪತ್ತುಗಳ ಬೆಳವಣಿಗೆಗೆ ಈಗ ನಾಲ್ಕೆಂಟು ವರುಷದಿಂದ ಪಿಡುಗಿನ ಹಾವಳಿಯು ದಕ್ಕಿಯು ಬಡೆಯುತ್ತ ಬಂದಿದ್ದರೂ ಇದು ಪೂರ್ವಸ್ಥಿತಿಯನ್ನು ಕಾಯ್ದು ಕೊಂಡಿರುವೆಬೆಂಬದಕ್ಕೆ ಸಂಶಯವಿಲ್ಲ.

ಯುವರಾಜರೆ, ತಾವು ಚಕ್ರವರ್ತಿಗಳಾದ ಎಡ್ವರ್ಡ

ಬೋದಶಹರ ಅನುಮತಿಯೊಂದಿಗೆ, ನಿಮ್ಮ ಛತ್ರದ ನೆರಳಿನಲ್ಲಿ ವಾಸ ಮಾಡುವ ಈ ಭರತ ವರ್ಷದ ಪ್ರಜಾಜನದ ಯೋಗಕ್ಷೇಮವನ್ನು ಕಣ್ಣಾರೆ ನೋಡಿ ಅರಿತುಕೊಳ್ಳುವದಕ್ಕಾಗಿ ಇಷ್ಟು ಶ್ರಮದಿಂದ ಇಲ್ಲಿಗೆ ಆಗಮನ ಮಾಡಿಸೋಣವಾಗಿದೆಯಷ್ಟೇ; ಅದಕ್ಕಾಗಿ ಭರತಖಂಡದ ತುಂಬಾ ಸಂಚರಿಸೋಣವೂ ಆಗುವದು. ಆ ಕಾಲದಲ್ಲಿ ತಮ್ಮ ಮುಕ್ಕಳಾದ ಪ್ರಜೆಗಳ ಸುಖದುಃಖಗಳ ಸಮಾಚಾರವನ್ನು ತಕ್ಕೊಳ್ಳುವಿರೆಂದು ಪೂರ್ಣ ನಂಬಿದ್ದೇವೆ

ಇಂದಿಗೆ ಸುಮಾರು ಮುವತ್ತು ವರುಷಗಳ ಮೊದಲು ಈಗಿನ ಬಾದಶಹರಾದ ತಮ್ಮ ತಾತಂದಿರು ತಾವು ಯುವರಾಜರಾಗಿದ್ದಾಗ ಇದೇ ಉದ್ದೇಶದಿಂದಲೇ ಭರತಖಂಡಕ್ಕೆ ದಯಮಾಡಿಸಿದ್ದರು. ಅದರಂತೆ ತಾವಾದರೂ ನಮ್ಮಾ ದೇಶಕ್ಕೆ ಬಂದಿರುವಿರಿ. ಆದರೆ ಈ ಸಾರೆ ತಮ್ಮ ಜೆತೆಗೆ ಯುವರಾಜ್ಞೆಯವರಿರುವದರಿಂದ ಮೊದಲಿಗಿಂತ ಹೆಚ್ಚು ಸಂತೋಷವು ನಮಗಾಗಿರುವದೆಂದು ಹೇಳಲಿಕ್ಕೆ ನನಗೆಬಹು ಸಮಾಧಾನವೆನಿಸುತ್ತದೆ.

ಇಂದು ಚಕ್ರವರ್ತಿಗಳ ವರ್ಧಂತಿಯ ದಿವಸವಾದ್ದರಿಂದ ಹಿಂದೂ ಪ್ರಜೆಗಳಾದ ನಮಗೆ ಪರಮಾವಧಿ ಸಂತೋಷವಾಗಿದೆ.

ಯುವರಾಜರೆ, ತಾವೂ ತಮ್ಮ ಧರ್ಮಪತ್ನಿಯೂ ಒಹು ದೂರದಲ್ಲಿರುವ ಮುಕ್ಕಳನ್ನು ಮರೆಯದೆ, ಆಯಾಸಗೊಂಡು ನಮಗೆಲ್ಲರಿಗೂ ದರ್ಶನಕೊಟ್ಟದ್ದಕ್ಕಾಗಿ ನಾವು ತುಂಬಾ ಕೃತಜ್ಞರಾಗಿದ್ದೇವೆ."

ಬಳಿಕ ಈ ಮಾನಪತ್ರವನ್ನು ರತ್ನ ಖಚಿತವಾದ ಕರಡಿಗೆಯೊಳಗೆ ಹಾಕಿ ಯುವರಾಜರಿಗೆ ಸಮರ್ಪಿಸಿದರು. ತರುವಾಯ ಯುವರಾಜರು ಸಭ್ಯರೇ, ಇಂದು ಭರತಖಂಡವಾಸಿಗಳ ವತಿಯಿಂದ ನೀವು ಅಂತಃಕರಣ ಪೂರ್ವಕವಾಗಿ ಉಭಯರ ಸ್ವಾಗತವನ್ನು ಮಾಡಿದ್ದಕ್ಕೆ ನಾವು ತುಂಬಾ ಸಂತುಷ್ಟರಾಗಿದ್ದೇವೆ. ನಮ್ಮ ತಾತಂದಿರು ಭರತಖಂಡಕ್ಕೆ

ಬಂದು ಪ್ರಜೆಗಳನ್ನು ಕಂಡು ಹೋದಂತೆ ನಾನೂ ನೆನ್ನೆ ಭಾವೀ ಪ್ರಜೆಗಳ ಸ್ಥಿತಿಗತಿಯನ್ನು ಕಣ್ಣಾಟ್ಟ ನೋಡಿ ಹೋಗಬೇಕೆಂತಲೇ ಬಂದಿದ್ದೇನೆ. ಇನ್ನು ಮುಂದೆ ಯುವರಾಜ ಪದವಿಯನ್ನು ಪಡೆದವರು ತಪ್ಪದೇ ನಿಮ್ಮ ಈ ದೇಶಕ್ಕೆ ಬರುವರೆಂದು ನಂಬುಗೆಯಿಂದ ಹೇಳುತ್ತೇನೆ.

ಈ ನಗರವು ಯಾವತ್ತೂ ಬ್ರಿತಿಶ ರಾಜ್ಯಕ್ಕೆ ಭೂಷಣವಾಗಿರುವದೆಂದು ಸಾರಿ ಹೇಳಬಹುದು. ಹಾಗೂ ಇದರ ಕೀರ್ತಿ ಸಂಪತ್ತುಗಳಿಗಾಗಿ ನೀವು ಶ್ರಮಬಡುವದಕ್ಕೆ ನನ್ನ ಪೂರ್ಣ ಸಹಾನುಭೂತಿಯುಂಟು.

ಇನ್ನು ಈ ದೇಶದಲ್ಲಿ ನಾನು ಸಂಚರಿಸಿದ ಪ್ರದೇಶಗಳಲ್ಲಿ ಪ್ರಜೆಗಳ ಸ್ಥಿತಿಗತಿಗಳನ್ನು ಅರಿತುಕೊಳ್ಳಲಿಕ್ಕೆ ಕೈಲಾದ ಮಟ್ಟಿಗೆ ಯತ್ನಿಸುತ್ತೇನೆ.

ನೀವೆಲ್ಲರೂ ಬಂದಾಗಿ ವ್ಯಕ್ತಗೊಳಿಸಿದ ರಾಜನಿಷ್ಠೆಗೂ ಮಾಡಿದ ಆದರಾತಿಥ್ಯಕ್ಕೂ ಸಂತುಷ್ಟನಾಗಿದ್ದೇನೆಂದು ಇನ್ನೊಂದು ಸಾರೆ ಹೇಳುತ್ತೇನೆ.

ಬಳಿಕ ಯುವರಾಜರೂ ಪತ್ನಿಯೊಂದಿಗೆ ರಥಾರೂಢರಾಗಿ ಮಾಂಡಲಿಕರನ್ನೂ ಅಧಿಕಾರಿಗಳನ್ನೂ ಒಡಗೊಂಡು ನಗರದ ಮುಖ್ಯ ಮುಖ್ಯ ರಾಜವೀಥಿಗಳಲ್ಲಿ ಮೆರೆಯುತ್ತ ಸರಕಾರದ ಬಂಗಲೆಗೆ ಬಂದು ಇಳುಕೊಂಡರು.

ಮರುದಿವಸ ಯುವರಾಜ್ಞಿಯವರಿಂದ ಬಂದು ನೂತನ ರಾಜಮಾರ್ಗವು ಬಳಿಕೆಯಲ್ಲಿ ಬಂತು, ಹಾಗೂ ಇವರಿಂದಲೇ ಹೊಸದೊಂದು ಹಡಗ ನಿಲ್ಲುವ ಸ್ಥಳದ ತಳಗಲ್ಲು ಕೂಡ್ರಿಸಲ್ಪಟ್ಟಿತು. ಮುಂದೆ ಎರಡು ದಿವಸ ಬಂದ ಮಾಂಡಲಿಕರನ್ನು ಕಾಣಿಸಿಕೊಂಡು ಅವರ ಕರಭಾರವನ್ನು ಕೈಕೊಳ್ಳುವ ಸಮಾರಂಭವಾಯಿತು. ಹದಿನಾಲ್ಕನೇ ತಾರೀಖಿನ ದಿವಸ ದೀಪೋತ್ಸವವಾಯಿತು. ಈ ಮೇರೆಗೆ ಯುವರಾಜರು ಸತ್ಕಾರ ಹೊಂದಿ ಮುಂದೆ ಇಂದೂರಿಗೆ ದಯಮಾಡಿಸಿದರು.

ಯುವರಾಜರ ಸಂಪೂರ್ಣ ನಾಮವು— ಯುವರಾಜ

ಜಾರ್ಜ್‌ಫ್ರೆಡರಿಕ್ ಅರ್ನೆಸ್ಟ್ ಆಲ್ಬರ್ಟ್ ಕೇ. ಜಿ. ಕೆ. ಟಿ. ಕೇ. ಪಿ ಜಿ. ಓ. ವ್ಹಿ. ಸೀ ಪಿ. ಸೀ. ಇ. ಇ. ಯುವರಾಜ್ಞಿ ಯವರದು—ಯುವರಾಜ್ಞೀ. ವ್ಹಿಕ್ಟೋರಿಯಾ ಮೇರಿ. ಸಿ. ಆಯ್. ಎಮ್. ವ್ಹಿ. ಓ ಇ. ಇ. ಎಂದು ಇರುತ್ತದೆ. ಎ ಪ್ರೇಲ ತಿಂಗಳ ವರೆಗೆ ಹಿಂದುಸ್ಥಾನದಲ್ಲಿ ಸಂಚರಿಸುವರು.

ಕಾಲೇಜದ ಪ್ರವೇಶ ಪರೀಕ್ಷೆಯು ಪ್ರಾರಂಭವಾಗಿದೆ, ಧಾರವಾಡ, ಬೆಳಗಾವ ಕಾರವಾರ, ಬಿಜಾಪೂರಗಳಿಂದ ಕ್ರಮವಾಗಿ (೯೧,೩೫,೭೧,೩೭) ಇಪ್ಪು ಜನ ಉಮೇದವಾರರು ಬಂದಿರುವರು. ಪರಿಣಾಮ ಇನ್ನೂ ತಿಳಿದಿಲ್ಲ. ಈ ಸಾರೆ ಅಜವಾಸ ೫೦ ಮಂದಿಯನ್ನು ತಕ್ಕೊಳ್ಳುವರು.

ಹೆಣ್ಣು ಮಕ್ಕಳ ನಾರ್ಮಲಸ್ಕೂಲ ಪ್ರವೇಶ ಪರೀಕ್ಷೆಯೂ ಆಯಿತು ಕು. ಧಾರವಾಡ, ಬೆಳಗಾವ, ಬಿಜಾಪೂರಗಳಿಂದ ಕ್ರಮವಾಗಿ(೧೧,೦,೦)ಮಂದಿ ಬಂದಿರುವರು. ಕಾರವಾರದವರು ಬಂದಿಲ್ಲ. ಇದಲ್ಲದೆ ನಾಲ್ವರು ಕ್ರಿಸ್ತಿಯನ್ನರಿದ್ದಾರೆ.

ಈ ಸಾಲೆದು ವಾರ್ಷಿಕ ಪರೀಕ್ಷೆಯು ಮುಗಿಯಿತು. ಪರೀಕ್ಷೆಗೆ ಕುಳಿತ ಎರಡನೇ ವರುಷದ ಹದಿಮೂರು ಮಂದಿಯಲ್ಲಿ ಏವರಿಗೆ ಇಪ್ಪತ್ತು ರೂಪಾಯಿಯ ಸರಟೀಫಿಕೇಟುಗಳೂ ಆರುಮಂದಿಗೆ ೧೫ರೂ. ಸರಟಫಿಕೇಟುಗಳೂ ಇಬ್ಬರಿಗೆ ಹದಿನೈದು ರೂಪಾಯಿಯ ಸರಟಫಿಕೇಟುಗಳೂ ದೊರೆತವು.

METHOD

ಶಿಕ್ಷಾಕ್ರಮ

೬ನೇ ಅಧ್ಯಾಯ.

ವಸ್ತುಪಾಠ ಕಲಿಸುವದರಿಂದ ವಿದ್ಯಾರ್ಥಿಗಳಿಗೆ ನಿಜವಾಗಿ ಉಪಯೋಗವಾಗಬೇಕೆಂದು ನೆನಸುವ ಶಿಕ್ಷಕರು ಅದರ ಎರಡು ಪ್ರಕಾರಗಳ ಕಡೆಗೆ ಹೆಚ್ಚು ಲಕ್ಷ ಕೊಡಬೇಕು.

ಅವು ಯಾವವೆಂದರೆ— ೧ ಪದಾರ್ಥದ ನಿರೀಕ್ಷಣವು ಅಥವಾ ಲಕ್ಷಪೂರ್ವಕವಾಗಿ ನೋಡುವದು ಮತ್ತು ೨ ಆ ಪದಾರ್ಥದ ವರ್ಣನೆಯನ್ನು ಹೇಳುವದು, ಈ ಎರಡು ಪದತಿಗಳು ಬೇರೆ ಬೇರೆ ಎಂದು ತಿಳಿಯುಬೇಕು. ಹೀಗೆ ಭೇದ ಮಾಡುವದು ಮಹತ್ವವಾದದ್ದು. ಯಾಕಂದರೆ— ಪಾಠಗಳು ಭಿನ್ನವಿದ್ದಂತೆ ಕಲಿಸುವ ರೀತಿಯಾದರೂ ಭಿನ್ನವಾಗಬೇಕು ವಸ್ತುಪಾಠ ಕಲಿಸುವದರಿಂದ ವಿದ್ಯಾರ್ಥಿಗಳ ನಿರೀಕ್ಷಣ ಶಕ್ತಿಯೂ ಅನುಭವವೂ ಬೆಳೆಯುತ್ತವೆ. ಇದರಿಂದ ಅವರ ಜ್ಞಾನವು ಬಲಪಡಬೇಕಾದರೆ ಕಲಿಯುವವರ ಮುಂದೆ ವಸ್ತುಗಳನ್ನು ತಂದಿಡಬೇಕು. ಅಥವಾ ಅವರಿಗೆ ನೋಡಗೊಡಬೇಕು. ಇದಿಲ್ಲದೆ ಏನು ಕಲಿಸಿದರೂ ಅದು ಶಿಕ್ಷಣವೆನಿಸಿಕೊಳ್ಳುವದಿಲ್ಲ

ಎಷ್ಟೋ ಶಾಲೆಗಳಲ್ಲಿ ಪಾಠ ಕಲಿಸುವಾಗ ವಿದ್ಯಾರ್ಥಿಗಳ ನಿರೀಕ್ಷಣ ಸಾಮರ್ಥ್ಯಕ್ಕೆ ತಕ್ಕ ಪ್ರೋತ್ಸಾಹನೆಯನ್ನು ಕೊಡುವದಿಲ್ಲ ಇಂಥ ಪಾಠಗಳಿಗೆ ವಸ್ತುಪಾಠವೆಂಬ ಹೆಸರು ಸಲ್ಲದು. ಉದಾಹರಣಾರ್ಥವಾಗಿ ಆನೆಯ ಪಾಠವನ್ನು ಕಲಿಸುವಾಗ ಆ ಪ್ರಾಣಿಯನ್ನು ತೋರಿಸದೆ ಅದರ ವಿಷಯವಾಗಿ ಎಷ್ಟು ಸಂಗತಿಗಳನ್ನು ಹೇಳಿದರೂ ವಿದ್ಯಾರ್ಥಿಯು ನಿರೀಕ್ಷಣ ಸಾಮರ್ಥ್ಯ ಬೆಳೆಯಲಾರದು. ಆದರೆ ಸ್ಮರಣಶಕ್ತಿಯ ಮೇಲೆ ಇಲ್ಲದ ಭಾರವನ್ನು ಹಾಕಿದಂತೆ ಆಗುವದು. ಹುಡುಗರ ಕೈಯಲ್ಲಿ ವಸ್ತುವನ್ನು ಕೊಡದೆ ಚಿತ್ರಗೊಂಬೆಗಳ ಸಹಾಯದಿಂದ ಎಷ್ಟು ಚೆನ್ನಾಗಿ ಪಾಠ ಕಲಿಸಿದರೂ ಅದು ವಸ್ತುಪಾಠವೆನಿಸುವದಿಲ್ಲ. ಆದರೆ ವರ್ಣನಾಪಾಠ ಮಾತ್ರ ಆಗಬಹುದು. ವಸ್ತುಪಾಠ ಕಲಿಸುವವರಲ್ಲಿ ನಿರೀಕ್ಷಣ ಸಾಮರ್ಥ್ಯವನ್ನು ಬಲಪಡಿಸುವದೊಂದೇ ಹೆಚ್ಚು ಮಹತ್ವವಾದದ್ದು ಅದರೆ ಬರೇ ವರ್ಣನೆಯನ್ನು ಹೇಳುವದಲ್ಲ.

ವಸ್ತುಪಾಠ ಕಲಿಸುವದು, ಖನಿಜ ವನಸ್ಪತಿ ವಿಜ್ಞಾನ ಮುಂತಾದ ಶಾಸ್ತ್ರಗಳನ್ನು ಕಲಿಸುವದಕ್ಕಿಂದ ಭಿನ್ನ

ವಾದವೆಂದು ತಿಳಿಯಬೇಕು. ವಸ್ತುಪಾಠವು ಶಾಸ್ತ್ರೀಯ ವಿಷಯದ ಮೂಲತತ್ವವೆಂಬದು ಅಂಕತಃ ನಿಜವು. ಯಾ ಕಂದರೆ—ಅದರಿಂದ ಶಾಸ್ತ್ರೀಯ ವಿಷಯಗಳಿಗೆ ಆಧಾರವಾ ದ ಸೃಷ್ಟಪದಾರ್ಥಗಳನ್ನೂ ಅವುಗಳ ಕಾರ್ಯಗಳನ್ನೂ ನಿರೀಕ್ಷಣ ಮಾಡುವ ಚಟವು ಹತ್ತುತ್ತದೆ. ವಿಷಯಗ ಳ ಹೊಂವಿಕೆ ಇಲ್ಲದೆ ಪಾಠಗಳನ್ನು ಕಲಿಸುವದರಿಂದ ವ ಸ್ತುಪಾಠವು ಶಾಸ್ತ್ರೀಯ ವಿಷಯದ ಕ್ರಮವಾದ ಅಭ್ಯಾಸ ದಿಂದ ಭಿನ್ನವಾಗಿದೆ. ವಸ್ತುಪಾಠದಿಂದ ಇಂದ್ರಿಯಗಳನ್ನು ಉಪಯೋಗಿಸುವ ಚಟವು ಹತ್ತುತ್ತದೆ. ಇಂದ್ರಿಯಗಳ ತಕ್ಕ ಉಪಯೋಗದಿಂದ ಮಿದುಳು ಬಲಪಡುವದು. ಮಿ ದುಳು ಬಲಪಟ್ಟ ಮೇಲೆ ಸಶಾಸ್ತ್ರವಾಗಿ ವರ್ಗೀಕರಣ ಮಾ ಡುವ ತತ್ವವೂ, ಒಂದೇ ತರದ ಸೃಷ್ಟಿಯ ವ್ಯಾಪಾರಗಳ ಅಭ್ಯಾಸವೂ, ಸಂಗತಿಗಳಿಂದ ಅನುಮಾನ ತೆಗೆಯುವದೂ ಸೃಷ್ಟಿಯ ನಿಯಮಗಳನ್ನು ಗೊತ್ತು ಹಚ್ಚುವದೂ, ಇ ವೇ ಮುಂತಾದವು ಗೊತ್ತಾಗುವವು. ಮುಂದೆ ವನಸ್ಪತಿ ಶಾಸ್ತ್ರದ ಅಭ್ಯಾಸವಾಗಬೇಕೆಂಬ ಉದ್ದೇಶದಿಂದಲೇ ಗಿಡಗ ಳ ಪಾಠಗಳನ್ನೂ, ಪ್ರಾಣಿಶಾಸ್ತ್ರಕ್ಕೆ ಆರಂಭವಾಗಬೇಕೆಂ ದು ಪ್ರಾಣಿಗಳ ಪಾಠಗಳನ್ನೂ, ಕಲಿಸುವದಿರುವದಿಲ್ಲ. ಆ ದರೆ ವಸ್ತುಪಾಠ ಕಲಿಸುವದರಲ್ಲಿ ವಸ್ತುಗಳ ಕಡೆಗೇ ಲ ಕ್ಷವಿರಬೇಕೆಂಬದು ಮುಖ್ಯ ಉದ್ದೇಶವು.

ವಸ್ತುಪಾಠ ಕಲಿಸುವಾಗ್ಯೆ ಲಕ್ಷದಲ್ಲಿಡತಕ್ಕ ಸಂಗತಿಗಳು.

೧ ಪ್ರತ್ಯಕ್ಷ ವಸ್ತುಗಳನ್ನು ಅಥವಾ ಅವುಗಳ ಚಿತ್ರ ಗೊಂಬೆಗಳನ್ನು ತೋರಿಸಲಿಕ್ಕೆ ಉಪಕರಣಗಳಿಲ್ಲದೆ ಪಾ ಠಗಳನ್ನು ಕಲಿಸಕೂಡದು. ೨ ಪಾಠದ ಉಪಕರಣಗ ಳನ್ನು ಕೂಡಿಸಿ ತರಲಿಕ್ಕೆ ಹುಡುಗರಿಗೆ ಉತ್ತೇಜನ ಕೊ ಡತಕ್ಕದ್ದು.

೩ ಪಾಠವು ಮುಗಿದ ಮೇಲೆ ಹುಡುಗರು ತಾವು ನೋ

ಡಿದ ವಸ್ತುಗಳ ಚಿತ್ರವನ್ನು ತೆಗೆಯತಕ್ಕದ್ದು. ಮಣ್ಣಿನ ಆಟಿಗೆ, ಮುಂತಾದವುಗಳನ್ನು ಮಾಡಿಸಿ, ಹುಡುಗರ ಮನಸ್ಸಿನಲ್ಲಿ ಪಾಠದ ದೃಢ ಭಾವನೆಯಾಗುವಂತೆ ಮಾಡತಕ್ಕದ್ದು, ಕರೇ ಹಲಗೆಯ ಮೇಲೆ ಶಿಕ್ಷಕನು ವಸ್ತುವಿನ ಚಿತ್ರವನ್ನು ತೆಗೆಯತಕ್ಕದ್ದು. (ಸಶೇಷ.)

POORNAYYA.

ಪೂರ್ಣಯ್ಯನ ಚರಿತ್ರೆಯು.

(ಬರೆದುಬಂದದ್ದು.)

ಕತ್ತಲೆಯಿಂದ ಪ್ರಕಾಶದ ಮಹತ್ವವು ಹೆಚ್ಚಾಗುತ್ತದೆ. ಆದೇ ಪ್ರಕಾರ ಕಠಿಣ ಪ್ರಸಂಗಗಳಿಂದ ಮಹಾತ್ಮರ ಬುದ್ಧಿವೈಭವವು ಅನುಭವಕ್ಕೆ ಬರುತ್ತದೆ. ರಾಜ್ಯಕ್ರಾಂತಿಯು ಬಹು ಕಠಿಣವಾದ ಪ್ರಸಂಗವೆಂದು ಹೇಳಬಹುದು. ಯಾಕಂದರೆ ಇಂಥ ಪ್ರಸಂಗಗಳಲ್ಲಿ ಸಾರ್ವಭೌಮನು ದರಿದ್ರನಾಗುತ್ತಾನೆ. ದರಿದ್ರನು ಸಾರ್ವಭೌಮನಾಗುತ್ತಾನೆ. ಶ್ರೀಮಂತನು ತಿರುಕನಾಗುತ್ತಾನೆ. ತಿರುಕನು ಪಲ್ಲಕ್ಕಿಯೊಳಗೆ ಕುಳಿತು ಮೆರೆಯುತ್ತಾನೆ. ಮತ್ತು ಆ ಕಾಲದಲ್ಲಿ ನಿಜವಾದ ಕರ್ತೃತ್ವ ಶಕ್ತಿಯುಳ್ಳಂಥ ಪುರುಷರ ಗುಣಗಳು ಬರೆಗೆ ಹತ್ತಿ ಬೈಲಿಗೆ ಬರುತ್ತವೆ. ಅವರ ಕೀರ್ತಿಯು ಇತಿಹಾಸದಲ್ಲಿ ಚಿರಕಾಲ ಉಳಿಯುತ್ತದೆ. ಇಂಥ ಕೆಲ ಪುರುಷರು ಇಂಗ್ಲಿಷರು ಈ ದೇಶದಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸುವ ಕಾಲಕ್ಕೆ ಆಗಿ ಹೋದರು. ಅವರಲ್ಲಿ ಪೂರ್ಣಯ್ಯನೊಬ್ಬನು. ಅವನ ಚರಿತ್ರೆ ಎಲ್ಲಿಯೂ ಪ್ರಸಿದ್ಧವಾಗಿಲ್ಲ. ಆದರೂ ಅವನ ವಿಷಯವಾಗಿ ತಿಳಿದ ಕೆಲವು ಸಂಗತಿಗಳನ್ನು ಸಂಕ್ಷೇಪವಾಗಿ ಬರೆಯುತ್ತೇವೆ.

ಪೂರ್ಣಯ್ಯನು ಕೊಯಿಮತ್ತೂರ ಗ್ರಾಮದಲ್ಲಿ ಒಬ್ಬ ಬ್ರಾಹ್ಮಣನ ಮಗನು ಇವನು ಎಲ್ಲಕ್ಕೂ ಮೊದಲು ಮೈಸೂರ ದೇಶದ ಶೂರ ಸುಲ್ತಾನನಾದ ಹೈದರಅಲ್ಲಿಯ ಕೈಕೆಳಗೆ ಉದ್ಯೋಗಕ್ಕೆ ಹತ್ತಿದನು ಇವನು ಓದುಬರಹವನು ಎಷ್ಟು ಮಾತ್ರವೂ ಅರಿತವನಲ್ಲ. ಆದ್ದರಿಂದ ಹೈದರನು ಬರೇ ಬಾಯಿಂದ ಆ

ಗುವಂಥ ಮೇಲ್ವಿಚಾರಣೆಯ ಕೆಲಸದ ಮೇಲೆ ಇವನನ್ನು ನೇ ಮಿಸಿದ್ದನು. ಹೈದರಅಲ್ಲಿಗೆ ಇವನು ಸಂಬುಗೆಯ ಸೇವಕನಾಗಿ ದ್ದನು. ಅದರಿಂದ ಅವನು ಪೂರ್ಣಯ್ಯನನ್ನು ಯಾವಾಗಲೂ, ತನ್ನ ಬಳಿಯಲ್ಲಿಯೇ ಇಟ್ಟುಕೊಂಡು ವಿಶ್ವಾಸದ ಕೆಲಸಗಳನ್ನು ಇವನಿಗೇ ಹೇಳುತ್ತಿದ್ದನು. ಒಮ್ಮೆ ಹೈದರಅಲ್ಲಿಯು ಅರ್ಕಾಟ ಪ್ರಾಂತಕ್ಕೆ ದಂಡೆತ್ತಿ ಹೋಗುವಾಗ ದಾರಿಯಲ್ಲಿ ಇಸವಿ ಸನ್ ೧೭೮೨ರಲ್ಲಿ "ಒಮ್ಮಿಂದೊಮ್ಮೆ" ಮರಣ ಹೊಂದಿದನು. ಆಗ ಅವನ ಮಗನಾದ ಟೀಪೂಸುಲ್ತಾನನು ಅಲ್ಲಿಂದ ೨೦೦-೩೦೦ ಮೈಲುಗಳ ಅಂತರದ ಮೇಲೆ ಇದ್ದನು. ಅಪನ ದಂಡಿನ ಸ್ಥಿತಿಯು ವಿಲಕ್ಷಣವಾಗಿತ್ತು. ಹೈದರನ ಮರಣದ ವಾರ್ತೆಯು ಕೂಡಲೆ ತಿಳಿದಿದ್ದರೆ, ದಂಡಿನಲ್ಲಿ ಬಹಳ ಅವ್ಯವಸ್ಥೆಯಾಗುವ ಸಂಭವವಿತ್ತು. ಮತ್ತು ಎಷ್ಟೋ ಜನರು ದಂಗೆ ಎಬ್ಬಿಸುವ ಎತ್ತುಗಡೆಯಲ್ಲಿ ಇರುವರೆಂಬದು ಸಹ ಪೂರ್ಣಯ್ಯನಿಗೆ ಗೊತ್ತಾಗಿತ್ತು. ಹೀಗಾಗುವದಕ್ಕೆ ಮುಖ್ಯ ಕಾರಣವೇನಂದರೆ ಹೈದರನು ಮೊಟ್ಟಮೊದಲು ಮೈಸೂರ ಹಿಂದೂ ರಾಜನ ದಂಡಿನಲ್ಲಿ ಸಾಮಾನ್ಯ ತರದ ಅಧಿಕಾರಿಯಿದ್ದನು, ತನ್ನ ಮೇಲಧಿಕಾರಿಗಳನ್ನೆಲ್ಲ ಹಿಂದಕ್ಕೆ ದೂಡಿ, ಅರಸನನ್ನು ಪದಚ್ಯುತ ಮಾಡಿ, ತಾನೇ ಸುಲ್ತಾನನಾಗಿದ್ದನು. ಇದರಿಂದ ಅವನ ಸರದಾರರಲ್ಲಿ ಮಾತ್ಸರ್ಯವು ಬೆಳೆದಿತ್ತು. ಎಷ್ಟೋ ಸರದಾರರು ಹೈದರಅಲ್ಲಿಯನ್ನು ಹಿಂದಕ್ಕೆ ಮಾಡಿ ತಮ್ಮ ಕೈವಶಮಾಡಿಕೊಳ್ಳುವ ಬಗ್ಗೆ ಸಣ್ಣ ಸಣ್ಣ ಒಳಸಂಚುಗಳನ್ನು ಗುಪ್ತ ರೀತಿಯಿಂದ ಮಾಡುತ್ತಿರುವರೆಂಬ ಸಂಗತಿಯು ಪೂರ್ಣಯ್ಯನಿಗೆ ತಿಳಿದಿತ್ತು. ಅಂತೆಯೇ ಟೀಪೂನನ್ನು ಕರೆಯಲಿಕ್ಕೆ ಒಬ್ಬ ಸ್ವಾರನನ್ನು ಗಸ್ತಾಗಿ ಕಳುಹಿಸಿ, ಕೆಲವು ನಂಬಿಗೆಯ ಸೇವಕರ ಸಹಾಯದಿಂದ ಯಾವತ್ತೂ ಸೈನ್ಯದ ವ್ಯವಸ್ಥೆಯನ್ನು ನೋಡಹತ್ತಿದನು. ಮತ್ತು ಸೈನ್ಯದಲ್ಲಿ, "ಹೈದರನು ಅತಿಶಯ ಬೇನೆಯಿಂದ ಬಳಲುತ್ತಾನೆ. ಹೋದಗೆ ಹೊಂಡುವಷ್ಟು ತ್ರಾಣವಿಲ್ಲ. ಒಮ್ಮಿಂದೊಮ್ಮೆ ಬಹಳ ಅಶಕ್ತತೆಯುರಟಾಗಿರುವದು." ಎಂದು ಸುದ್ದೀ ಬೀರಿದನು. ಮತ್ತು ಹೈದರನ ಶವವು ಕೊಳೆಯದಂತೆ ಅದಕ್ಕೆ ಸುಗಂಧ ದ್ರವ್ಯಗಳನ್ನು

ಕೊಡೆದು ಮಸಾಲೆಯ ಪದಾರ್ಥಗಳಿಂದ ತುಂಬಿದ ಪೆಟ್ಟಿಗೆಯಲ್ಲಿ ಹಾಕಿಟ್ಟು ಔಷಧೋಪಚಾರ ನಡಿಸುವವನಂತೆ ಕ್ರಮವನ್ನಿಟ್ಟನು. ಮತ್ತು ಸುಲ್ತಾನನ ಅಪ್ಪಣೆಯನ್ನು ಪಡೆಯುಲು ಒಂದವರ ಮಾತುಗಳನ್ನೆಲ್ಲ ಪೂರ್ಣವಾಗಿ ಕೇಳಿಕೊಂಡು ಅವೇ ಮಾತುಗಳನ್ನು ಪಡದಿಯೊಳಗೆ ಸುಲ್ತಾನನಿಗೆ ಹೇಳಿದ ಹಾಗೆಯೂ ಅದಕ್ಕೆ ಸುಲ್ತಾನನು ಕೊಟ್ಟ ಅಪ್ಪಣೆಯನ್ನು ಕೇಳಿದ ಹಾಗೆಯೂ, ಕಾಣಿಸಿಕೊಂಡು ಸ್ವಂತ ಅಪ್ಪಣೆಗಳಿಂದಲೇ ಕೆಲಸ ನಡಿಸ ಹತ್ತಿದನು." ಇದೇ ಕ್ರಮದಿಂದ ಮೂವತ್ತೂ ಸೈನಿಕರೊಡನೆ ಶ್ರೀರಂಗ ಪಟ್ಟಣದ ಕಡೆಗೆ ನಡೆದನು. ಇಪ್ಪತ್ತೊಂದು ದಿವಸಗಳಂದ ಬಳಿಕ ಟೀಪೂಸುಲ್ತಾನನು ಶಿಬಿರಕ್ಕೆ ಬಂದು ಮುಟ್ಟಿದನು. ಕೂಡಲೆ ಪೂರ್ಣಯ್ಯನು, ಹೈದರನು ಮರಣಹೊಂದಿದನೆಂತಲೂ ಟೀಪೂನು ಮೈಸೂರ ಸುಲ್ತಾನನೆಂತಲೂ ದಂಡಿನಲ್ಲಿ ಡಂಗುರ ಹೊಡಿಸಿದನು. ಇದರಿಂದ ಯಾವ ತರದ ವಿಘ್ನಗಳೂ ಸಂಭವಿಸಲಿಲ್ಲ. ದಂಡಿನ ವ್ಯವಸ್ಥೆಯೂ ಮೊದಲಿನಂತೆ ಸ್ಥಿರವಾಗಿ ಉಳಿಯಿತು. ಸೈನ್ಯದಲ್ಲಿ ಈ ಪ್ರಕಾರ ಅವ್ಯವಸ್ಥೆಯೂ ಬೊಕ್ಕಸದಲ್ಲಿ ಮೂರು ಕೋಟ ರೂಪಾಯಿಗಳೂ, ಸರ್ವಾಧಿಕಾರವೂ ಇರುತ್ತಿರಲು, ಪೂರ್ಣಯ್ಯನು ಯಾವ ಪ್ರಕಾರದ ಮೋಹರಗಳಿಗೂ ವಶನಾಗದೆ, ಬೊಕ್ಕಸವನ್ನು ಟೀಪೂನ ಸ್ವಾಧೀನ ಮಾಡಿದನು. ಇದರಿಂದ ಅವನ ಮನೋಧರ್ಯವೂ, ಸ್ವಾಮಿಭಕ್ತಿಯೂ ಗೊತ್ತಾಗುತ್ತವೆ ಈ ಕರ್ತೃತ್ವ ಶಕ್ತಿಯ ಪಸೆಯಿಂದ ಯಾವತ್ತು ಇತಿಹಾಸಕರ್ತರು ಪೂರ್ಣಯ್ಯನ ಸ್ತುತಿಯನ್ನು ಮಾಡುತ್ತಾರೆ. ಇಂಥ ಇಕ್ಕಟ್ಟಿನ ಪ್ರಸಂಗದಲ್ಲಿ ಈ ಪ್ರಕಾರದ ವ್ಯವಸ್ಥೆಯನ್ನು ಪೂರ್ಣಯ್ಯನು ಮಾಡದಿದ್ದರೆ ಮೈಸೂರಿನ ಇತಿಹಾಸವು ಈಗಿರುವ ಸ್ಥಿತಿಗೆ ಬರದೆ ಬೇರೆತರದ್ದಾಗಿ ಹೋಗುತ್ತಿತ್ತೆಂಬುದಕ್ಕೆ ಏನೂ ಸಂದೇಹವಿಲ್ಲ.

ಪೂರ್ಣಯ್ಯನು ಹೈದರಜಲ್ಲಿಯ ಕಾಲದಲ್ಲಿ ಮಹತ್ವದ ಕೆಲಸಗಳನ್ನು ಮಾಡಿದನು. ಮತ್ತು ನಿರಾಯಾಸವಾಗಿ ಟೀಪೂಸುಲ್ತಾನನಿಗೆ ಪಟ್ಟವನ್ನು ಸಂಪಾದಿಸಿ ಕೊಟ್ಟನು. ಇವುಗಳಿಂದ ಸ್ಪಷ್ಟವಾಗುವದೇನಂದರೆ ಪೂರ್ಣಯ್ಯನಲ್ಲಿ ಕಾರ್ಯದಕ್ಷತೆಯು ಮ

ತ್ತು ಅವೇಕವು ಲೋಕೋತ್ತರವಾಗಿದ್ದವೆ. ಇನ್ನು ಮೇಂದಿನ ಇವನ ಚರಿತ್ರೆಯು ಆಶ್ಚರ್ಯವನ್ನುಂಟು ಮಾಡತಕ್ಕದ್ದಿರುತ್ತದೆ. ಪೂರ್ಣಯ್ಯನು ಮೈಸೂರ ಸಂಸ್ಥಾನದಲ್ಲಿ ಕೆಲಸ ಮಾಡಿದರೂ ಪಾಶ್ಚಿಮಾತ್ಯರ ಸಂಬಂಧವು ಇವನಿಗೆ ವಿಶೇಷವಿತ್ತು. ಇವರು ತಲೆದೂಗುವಂತೆ ಪೂರ್ಣಯ್ಯನು ಕೆಲಸ ಮಾಡಿರುತ್ತಾನೆ ಇನ್ನೆಲ್ಲ ಸಂಗತಿಗಳು ತಿಳಿಯುವಂತೆ ಕೆಲವು ಇತಿಹಾಸದ ಸಂಗತಿಗಳನ್ನು ಬರೆಯುತ್ತೇವೆ.

ಸನ್ ೧೭೯೨ರಲ್ಲಿ ಟೀಪೂಸುಲ್ತಾನನು ತನ್ನ ಅರ್ಧ ರಾಜ್ಯವನ್ನು ಇಂಗ್ಲಿಷರಿಗೆ ಕೊಟ್ಟು ಒಪ್ಪಂದ ಮಾಡಿಕೊಂಡನು ಈ ಒಪ್ಪಂದವು ಟೀಪೂವಿನ ಮನಸಿಗೆ ಬಂದಿದ್ದಿಲ್ಲ. ಅಗ್ರಹದಿಂದ ಒಪ್ಪಿಕೊಳ್ಳುವ ಪ್ರಸಂಗ ಬಂದಿತ್ತು. ಆದ ಕಾರಣ ಅವನು ಮಾರೀಶಸ್ ದ್ವೀಪಕ್ಕೆ ಫ್ರೆಂಚರ ಕಡೆಗೆ ತನ್ನ ವಕೀಲರನ್ನು ಕಳುಹಿಸಿ, ಅವರ ಸಂಗಡ ಸ್ನೇಹದ ಒಡಂಬಡಿಕೆಯನ್ನು ಮಾಡಿಕೊಂಡು, ಇಂಗ್ಲಿಷರ ಕೂಡ ಪುನಃ ದ್ವೇಷ ಬೆಳಿಸಿದನು. ಉಭಯ ಪಕ್ಷದವರಿಗೂ ಯುದ್ಧವು ಪ್ರಾರಂಭವಾಯಿತು. ಇಂಗ್ಲಿಷರ ದಂಡು ನಿಜಾಮನ ಸೈನ್ಯದೊಡನೆ ಶ್ರೀರಂಗ ಪಟ್ಟಣಕ್ಕೆ ಮುತ್ತಿಗೆ ಹಾಕಿತು. (೧೭೯೯) ಎರಡೂ ಕಡೆಯ ದಳದವರು ಜೀವದ ಹಂಗು ದೊರೆದು ಕಾದಿದರು. ಕಡೆಗೆ ಟೀಪೂ ಸುಲ್ತಾನನು ರಣರಂಗದಲ್ಲಿ ಮರಣ ಹೊಂದಿದನು. ಮೈಸೂರಿನ ಯಾವತ್ತೂ ರಾಜ್ಯವು ಇಂಗ್ಲಿಷರ ವಶವಾಯಿತು. ಆಗ್ಗೆ ಅವರು ಕಾನಡಾ ವಾಯುನಾಡು ಕೊಯಿಮುತ್ತೂರು ಈ ಪ್ರಾಂತಗಳನ್ನು ತಾವು ಇಟ್ಟುಕೊಂಡು, ಸರಹದ್ದಿನ ಸೀಮೆಗಳನ್ನು ನಿಜಾಮನಿಗೆ ಹಂಚಿಕೊಟ್ಟರು. ಮುಂದೆ ಇದೇ ಸೀಮೆಗಳನ್ನು ದಂಡಿನ ವೆಚ್ಚಕ್ಕಾಗಿ ಇಂಗ್ಲಿಷರು ಅವನಿಂದ ತೆಗೆದುಕೊಂಡರು ಆ ಮೇಲೆ ಉಳಿದ ಸ್ವಲ್ಪ ಭಾಗವನ್ನು ಮೈಸೂರಿನ ಮೂಲ ಅರಸನ ವಂಶಸ್ಥನಾದ ಯದುವೀರ ಕೃಷ್ಣರಾವ ಎಂಬವರಿಗೆ ಕೊಟ್ಟರು. ಆಗ ಕೃಷ್ಣರಾಯನು ೫ ವರ್ಷದವನಿದ್ದನು.

ಯದುವೀರ ಕೃಷ್ಣರಾಯರು ಚಿಕ್ಕವರಿದ್ದರಿಂದ ರಾಜ್ಯವನ್ನಾಳುವ ಸಾಮರ್ಥ್ಯವು ಆವರಿಗಿದ್ದಿಲ್ಲ. ಇಂಗ್ಲಿಷರು ಇವರಿಗೆ

ರಾಜ್ಯಪದವನ್ನು ಕೊಟ್ಟಿದ್ದರಿಂದ ಯೊಗ್ಯರಾಜರಂತೆ ರಾಜ್ಯ ಕಾರಭಾರ ನಡೆಯುವಂತೆ ವ್ಯವಸ್ಥೆ ಮಾಡುವದು ಅವರ ಕರ್ತವ್ಯವಾಗಿತ್ತು. ಆದಕಾರಣ ದಿವಾನಗಿರಿಯ ಕೆಲಸಕ್ಕೆ ಯಾರನ್ನು ನೇಮಿಸ ಬೇಕೆಂಬ ಬಗ್ಗೆ ಇಂಗ್ಲಿಷರಿಗೆ ಬಲವಾದ ವಿಚಾರ ಬಿತ್ತು. ಆ ವೇಳೆಯಲ್ಲಿ ಈ ಕೆಲಸವು ಅವರಿಗೆ ಬಹಳ ಭಾರವಾಯಿತು. ಯಾಕಂದರೆ ಆಗೆ ಶಿಕ್ಷಣದ ಪ್ರಸಾರವು ಮೂಲತಃ ಇದ್ದೇ ಇಲ್ಲ. ವಿದ್ಯಾಗಲಿತ ಜನರು ವಿರಳವಾಗಿದ್ದರು. ಆಗ ಸಾಮರ್ಥ್ಯವನ್ನು ಬೆಳಿಸಿದ ಹುಂಬು ಜನರೇ ವಿಶೇಷವಾಗಿದ್ದರು. ಇಂಗ್ಲಿಷರಿಗೆ ಈ ದೇಶದ ಸ್ಥಿತಿಯು ಪೂರ್ಣವಾಗಿ ಗೊತ್ತಿದ್ದಿಲ್ಲ. ಮತ್ತು ಈ ದೇಶದಲ್ಲಿ ಹೊಸ ವ್ಯವಸ್ಥೆಯನ್ನು ನೆಲೆಗೊಳಿಸ ಬೇಕಾದ್ದರಿಂದ ಯಾವ ಪ್ರಕಾರದ ವ್ಯವಸ್ಥೆಯನ್ನು ಮಾಡಿದರೆ ದೇಶದಲ್ಲಿ ಸುಖ ಶಾಂತಿಗಳು ನೆಲೆಗೊಳ್ಳುವವು. ಎಂಬದನ್ನು ತಿಳಕೊಳ್ಳುವದು ದುಸ್ತರವಾಗಿತ್ತು. ಬಡೋದೆಯ ರಾಜ್ಯವ್ಯವಸ್ಥೆಯನ್ನು ಮಾಡಲಿಕ್ಕೆ ಲಾರ್ಡ ನಾರ್ಥಬ್ರೂಕ ದೊರೆಗಳು. ಸರಿಯೇ ಮಾಧವರಾವ ಇವರನ್ನು ಕೂಡಲೆ ನೇಮಿಸಿಬಿಟ್ಟರು. ಆದರೆ ಆ ಕಾಲದ ಇಂಗ್ಲಿಷ ಕವಿಾಶನರ ಜನರಲ್ ವೆಲ್ಲಸ್ಲಿಗೆ ಇಷ್ಟು ಅನುಕೂಲ ಸ್ಥಿತಿಯು ಇರಲಿಲ್ಲ. ಅಂತರಂಗದಲ್ಲಿ ವಿಚಾರಿಸತಕ್ಕ ಅನೇಕ ಸಂಗತಿಗಳಿದ್ದವು. ಯಾವ ಮನುಷ್ಯನಿಂದ ರಾಜ್ಯವ್ಯವಸ್ಥೆಯು ಸುಸೂತ್ರ ಸಾಗೀತು! ಯಾವನು ತವಗೆ ಅನುಕೂಲನಾಗಿ ರಾಜನಿಷ್ಠೆಯಿಂದ ನಡೆದಾನು; ಯಾವನು ಬಂಡುಗಾರರಲ್ಲಿ ಸೇರಲಿಕ್ಕಿಲ್ಲ, ಯಾವನು ನಿರಪೇಕ್ಷ ಬುದ್ಧಿಯಿಂದಲೂ ವಿಶ್ವಾಸದಿಂದಲೂ ವರ್ತಿಸುವನು, ಇವೆಲ್ಲ ಸಂಗತಿಗಳನ್ನು ಆಗಿನ ಕಾಲಕ್ಕೆ ವಿಚಾರ ಮಾಡಿ, ಯೋಗ್ಯನಾದ ಮನುಷ್ಯನನ್ನು ಆರಿಸುವದು ಒಳ್ಳೇ ಜವಾಬದಾರಿಯ ಕೆಲಸವಾಗಿತ್ತು. ಇಂಥ ಪ್ರಸಂಗದಲ್ಲಿ ಮೈಸೂರ ದಿವಾನಗಿರಿಯ ಕೆಲಸಕ್ಕೆ ಪೂರ್ಣಯ್ಯನೇ ತಕ್ಕವನೆಂದು ಇಂಗ್ಲಿಷ ಶೋಧಕ ಬುದ್ಧಿಯ ಅಧಿಕಾರಿಗಳು ಆರಿಸಿದರು. ಹಿಂದೂ ರಾಜನನ್ನು ಮುರಿಬಡಿದು ಮೂಲೆಗೊತ್ತಿದಹೈದರಅಲ್ಲಿಯೂ ಟೀಪೂಸುಲ್ತಾನನೂ ಸುಲ್ತಾನ

ರಾಗಿ ಆಳಿದ ಕಾಲದಲ್ಲಿಯೂ ನಂಬುಗೆಯ ದಿವಾನನಾಗಿದ್ದ ಪೂರ್ಣಯ್ಯನು ಅದೇ ಅದೇ ರಾಜವಂಶದ ಅರಸನು ಮತ್ತೆ ತಲೆದೋರಲು ಅಗೂನಂಬುಗೆಯ ದಿವಾನನಾಗಿ ಆರಿಸಲ್ಪಟ್ಟನು. ಇದರಿಂದ ಪೂರ್ಣಯ್ಯನ ಸತ್ಯಾಭಿಮಾನತನವನ್ನೂ ಸ್ವಾಮಿಭಕ್ತಿಯನ್ನೂ ನಿರಪೇಕ್ಷಬುದ್ಧಿಯನ್ನೂ ವಾಚಕರೇ ಊಹಿಸತಕ್ಕದ್ದು.

ಪೂರ್ಣಯ್ಯನು ಯಾವ ಪ್ರಕಾರದ ಶಿಕ್ಷಣವನ್ನೂ ಹೊಂದಿದವನಲ್ಲ ಇವನು ನಿರಕ್ಷರ ಕುಕ್ಷಿಯೆಂದು ಪ್ರಸಿದ್ಧವಿತ್ತು. ಮುಸಲ್ಮಾನರ ಕಾಲದಲ್ಲಿ ಯಾವದೋ ಬಂದು ತರದ ಅನುಭವ ಮಾತ್ರ ಇವನಿಗೆ ಬಂದಿತ್ತು. ಇಂಗ್ಲಿಷ ಜನರ ಸಂಪರ್ಕವೆ ಮೂಲತಃ ಇವನಿಗಿದ್ದಿಲ್ಲ. ರಾಜ್ಯಭಾರ ಕ್ರಮದ ಗೊತ್ತು ಸಹ ಇವನಿಗಿದ್ದಿಲ್ಲ. ಹೀಗಿದ್ದು ಇಂಗ್ಲಿಷ ಅಧಿಕಾರಿಗಳು ಪೂರ್ಣಯ್ಯನನ್ನೇ ಹೇಗೆ ಆರಿಸಿದರು? ಅವನ ವಿಷಯಕ್ಕೆ ಅದರ ಬುದ್ಧಿಯು ಅವರಲ್ಲಿ ಹೇಗೆ ಉತ್ಪನ್ನವಾಯಿತು? ಇದಕ್ಕೆ ಅವನ ಕರ್ತೃತ್ವ ಶಕ್ತಿಯೇ ಕಾರಣವೆಂದು ಹೇಳಬಹುದು. ಪೂರ್ಣಯ್ಯನ ರಾಜ್ಯಕಾರಭಾರದ ಸಂಗತಿಗಳು ಪ್ರಸಿದ್ಧವಾಗಿಲ್ಲ. ಆದರೂ ಆ ಕಾಲದ ಕಾಗದಪತ್ರಗಳಿಂದ ಕಂಡು ಬರುವದೇನಂದರೆ ಪೂರ್ಣಯ್ಯನು ನಾನಾಫಡನೀಸ, ಉಲಿಯುವ'ಪಿಟ್' ಇವರಂತೆ ಹುಟ್ಟಾ ಮುತ್ಸದ್ದಿ ಇದ್ದನು. ಪ್ರಾರಂಭದಲ್ಲಿ ಇವನು ರೈತರ ಕಡೆಗೆ ಇದ್ದ ಹಣವನ್ನು ಸೂಟಬಿಟ್ಟು ಬಿಟ್ಟನು. ಕಂದಾಯದ ಹೊಸ ಪದ್ಧತಿಯನ್ನು ಗೊತ್ತು ಮಾಡಿದನು. ದೇಶದಲ್ಲಿ ಶಾಂತತೆಯನ್ನು ಕಾಯುವ ಬಗ್ಗೆ ಟೀಪೂಸುಲ್ತಾನನ ದಂಡಿನವರನ್ನೇ ಅಧಿಕಾರಿಗಳನ್ನಾಗಿ ನೇಮಿಸಿದನು. ಅದ್ದರಿಂದ ದಂಡಿನ ಜನರು ಸಂತುಷ್ಟರಾದರು. ಮತ್ತು ಪ್ರಾಚೀನ ಹಿಂದೂ ಸರದಾರರಿಗೂ ದೊಡ್ಡ ದೊಡ್ಡ ಅಧಿಕಾರದ ಕೆಲಸಗಳನ್ನು ಕೊಟ್ಟನು. ಅವರಲ್ಲಿ ವಿಶೇಷ ಕರ್ತವ್ಯದಕ್ಷತೆಯನ್ನು ತೋರಿಸಿದವರಿಗೆ ಪಡಭೂಮಿಯನ್ನು ಉಂಬಳಿ ಹಾಕಿ ಕೊಟ್ಟನು. ಇದರಿಂದ ಭೂಮಿಯು ಸಾಗುವಳಿಯಾಯಿತಿಷ್ಟೇ ಅಲ್ಲ. ಆ ಜನರೂ ಸಂತುಷ್ಟರಾದರು. ಒಕ್ಕಲತನಕ್ಕೆ ಉತ್ತೇಜನ ದೊರೆಯಬೇಕೆಂದು ರೈತರಿಗೆ ಭೂಮಿಯ ಮೇಲೆ ಅವರಸ್ವತ್ತನ್ನುಂಟು ಮಾಡಿದನು. ಈ

ತ್ತು ಅವರ ಬೇಡಿಕೆಗಳನ್ನು ಪೂರೈಸಿದನು. ಕೇವಲ ಜನರಿಗೂ ಮಂತ್ರಿಗಳಿಗೂ ಅವರವರ ಧರ್ಮಶಾಸ್ತ್ರದ ಪ್ರಕಾರ ನ್ಯಾಯವು ಪೂರ್ಣವಾಗಿ ದೊರೆಯಬೇಕೆಂದು ಆಯಾ ಶಾಸ್ತ್ರಗಳಲ್ಲಿ ಪ್ರವೀಣರಾದ ಶಾಸ್ತ್ರಿಗಳನ್ನೂ ಕಾಜಿಗಳನ್ನೂ ನೇಮಿಸಿದನು. ಪೂರ್ಣಯ್ಯನು ಯಾವತ್ತೂ ಬಾಬುಗಳಲ್ಲಿ ಕೈ ಬಿಗಿ ಹಿಡಿದು ವೆಚ್ಚ ಮಾಡುತ್ತಿದ್ದನು. ಅದರೂ ಅವಶ್ಯವಿದ್ದ ವೆಚ್ಚವನ್ನು ಮಾಡಲಿಕ್ಕೆ ಎಂದೂ ಹಿಂದುಮುಂದೆ ನೋಡುತ್ತಿದ್ದಿಲ್ಲ. ಇವನು ಹನ್ನೊಂದು ವರ್ಷ ರಾಜ್ಯಕಾರಭಾರ ಮಾಡಿ ಸಾರ್ವಜನಿಕ ಹಿತದ ಕೆಲಸಗಳಿಗೆ ವಿಶೇಷವಾಗಿ ಕೆರೆ, ಬಾವಿ, ಮಾರ್ಗ, ಧರ್ಮಶಾಲೆ, ದೇವಾಲಯ ಮುಂತಾದವುಗಳ ಬಗ್ಗೆ ೭೬ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದನು. ಇವನು ರಾಜ್ಯಕಾರಭಾರವನ್ನು ಬಿಡುವಾಗಲಕ್ಕೆ ಮೈಸೂರ ಸಂಸ್ಥಾನದಲ್ಲೆಲ್ಲ ಸುಖ ಶಾಂತಿಗಳು ನೆಲೆಗೊಂಡಿದ್ದವಲ್ಲದೆ, ಬೊಕ್ಕಸದಲ್ಲಿ ಎರಡೂವರೆ ಕೋಟಿ ರೂಪಾಯಿಗಳಿದ್ದವು.

ಜನರಲ್ ವೆಲ್ಲೆಸ್ಲಿಯು (ಇವನೇ ಮುಂದೆ ಇಡೀ ಯುರೋಪ ಖಂಡದಲ್ಲಿ ಡ್ಯೂಕ ಆಫ್ ವೆಲಿಂಗಟನ್ ಎಂದು ಹೆಸರು ಪಡೆದನು.) ಎಂಥ ಪ್ರಸಂಗಗಳಲ್ಲಿಯೂ ಯಾರನ್ನೂ ಹೊಗಳುತ್ತಿದ್ದಿಲ್ಲ. ಇವನಿಂದ ಹೊಗಳಿಕೆಯ ಒಂದು ಶಬ್ದವನ್ನು ದೊರಕಿಸುವದೂ, ಸರಿಯೆಂದು ಹೇಳಬಹುದು. ಇವನು ಮೈಸೂರಿನ ರೆಸಿಡೆಂಟನಾದ ಕರ್ನಲ್‌ಕ್ಲೋಜ ಇವನಿಗೆ ಪೂರ್ಣಯ್ಯನ ವಿಷಯವಾಗಿ ಕೆಳಗೆ ಅವತರಿಸಿದ ಲೇಖವನ್ನು ಬರೆದಿರುತ್ತಾನೆ. "ನಮ್ಮ ಸ್ವಾಧೀನದಲ್ಲಿರುವ ರಾಜ್ಯಭಾಗದಲ್ಲಿ ಸದ್ಯಕ್ಕೆ ಇರುವ ದಿವಾಣರು ರಾಜನೀತಿಯ ಸಂಬಂಧದಿಂದ ಯಾವ ಕ್ರಮವನ್ನು ಹಿಡಿದಿರುವರೋ ಅದರಿಂದ ಅವರ ರಾಜ್ಯದಲ್ಲಿ ಸಾದ್ಯೋಗದ ಮತ್ತು ಸಂಪತ್ತಿಯ ಅಭಿವೃದ್ಧಿಯು ಆಗುತ್ತಾ ನಡೆದದೆ. ಜನರ ಸಂರಕ್ಷಣೆಯು ಉತ್ತಮ ರೀತಿಯಿಂದ ನಡೆದಿರುತ್ತದೆ. ಮತ್ತು ಪ್ರಾಂತದಲ್ಲಿ ಎಲ್ಲ ಕಡೆಯಲ್ಲಿಯೂ ಸುಖಶಾಂತಿಗಳು ನೆಲೆಗೊಂಡಿವೆ. ಈ ಕ್ರಮವು ಅತ್ಯಂತ ಸ್ತುತ್ಯವಾದದ್ದು." ಇದೇ ಜನರಲ್ಲನು ಇಸವಿ ಸನ್ ೧೮೦೫ರಲ್ಲಿ ಸ್ವದೇಶಕ್ಕೆ ಹೋಗುವಾ

ಕ್ಕೆ ಪೂರ್ಣಯ್ಯನಿಗೆ ಸ್ವತಃ, ಬರೆದಿದ್ದೇನೆಂದರೆ, ನನ್ನ ಮೇಲೆ ನಿಮ್ಮ ಉಪಕಾರ ಬಹಳವಾಗಿರುವುದರಿಂದ ನಾನು ನಿಮ್ಮ ಗೆ ಅಭಾರಿಯಾಗಿದ್ದೇನೆ. ನಿಮ್ಮಿಂದ ಸಾರ್ವಜನಿಕ ಹಿತದ ಬ ಗ್ಗೆ ಯಾವ ಕೃತ್ಯಗಳು ಸಂಭವಿಸಿರುತ್ತವೆಯೋ ಅವುಗಳ ಬಗ್ಗೆ ನನ್ನ ಪ್ರೇಮ ಬುದ್ಧಿಯು ಬೆಳೆಯುತ್ತ ನಡೆದಿದೆ. ಇಂಥ ಕೃತ್ಯ ಗಳು ನಿಮ್ಮಿಂದ ಸರ್ವದಾ ನಡೆಯುತ್ತಿರಲೆಂದು ನಾನು ಅಪೇಕ್ಷಿ ಸುತ್ತೇನೆ, ನಾನು ಎಲ್ಲಿ ಇದ್ದರೂ ನಿಮ್ಮ ಸತ್ಕೃತ್ಯಗಳ ವಿಷಯ ವಾಗಿ ಶ್ಲಾಘನೆ ಮಾಡಲಿಕ್ಕೆ ಎಂದೂ ಮರೆಯಲಿಕ್ಕಿಲ್ಲೆಂದು ನೀ ವು ನಿಶ್ಚಯವಾಗಿ ತಿಳಿದುಕೊಳ್ಳಿರಿ. ನಿಮಗೆ ಹಿತ ಮಾಡುವ ಪ್ರಸಂಗವನ್ನು ನಾನು ಎಂದೂ ವ್ಯರ್ಥ ಹೋಗಗೊಡಲಿಕ್ಕಿಲ್ಲ. " ಇಷ್ಟರ ಮೇಲಿಂದ ಪೂರ್ಣಯ್ಯನ ವಿಷಯವಾಗಿ ಡ್ಯೂಕ ಆಫ್ ವೆಲ್ಲಿಂಗಟನ್ನನ ಅಭಿಪ್ರಾಯವು ಯಾವ ಪ್ರಕಾರದ್ದಿತ್ತೆಂಬದು ಸ ಹಜವಾಗಿ ಲಕ್ಷದಲ್ಲಿ ಬರುವದು. ಇದೇ ಪ್ರಕಾರ ಇವನ ಅಣ್ಣ ನಾದ ಮಾರ್ಕ್ವಿಸ ವೆಲ್ಲೆಸ್ಲಿಯು ಹಿಂದುಸ್ಥಾನದ ಗವರ್ನರ ಜ ನರಲ್ಲನಿದ್ದಾಗ್ಗೆ ಒಂದು ಕಥೆಯಲ್ಲಿ ಹೀಗೆ ಒರೆದಿರುತ್ತಾರೆ. " ದಿ ವಾಣನಾದ ಪೂರ್ಣಯ್ಯನು ತನ್ನ ಕರ್ತವ್ಯ ಕರ್ಮವನ್ನು ಉತ್ತ ಮ ರೀತಿಯಿಂದ ಮಾಡಿದನು. ಇದನ್ನು ತಿಳಿಸಲಿಕ್ಕೆ ನನಗೆ ಬ ಹಳ ಆನಂದವಾಗುತ್ತದೆ ಮೊದಲು ನಾನು ಇಚ್ಛಿಸಿದಂತೆ ಮೈ ಸೂರಿನ ರಾಜ್ಯದ ಉತ್ಕರ್ಷವಾಗಿರುತ್ತದೆ. ಇದಕ್ಕೆ ದಿವಾಣ ರ ವ್ಯವಹಾರಕತನ, ಕರ್ತವ್ಯದಕ್ಷತೆ ಸ್ವದೇಶ ಹಿತದ ಉತ್ಕ ಟೇಚ್ಛೆ ಮೊದಲಾದ ಗುಣಗಳೇ ಸರಿ. ಮಹಾರಾಷ್ಟ್ರರ ಜೊತೆ ಒದಗಿದ ಯುದ್ಧ ಪ್ರಸಂಗದಲ್ಲಿ ಈ ದಿವಾಣರ ಚಾತುರ್ಯದಿಂದ ಲೇ ಮೈಸೂರ ಪ್ರಾಂತದಲ್ಲಿ ಇದ್ದ ಸೈನ್ಯಗಳು ದೊರಕಿದವು. ಪೂರ್ಣಯ್ಯನವರನ್ನು ದಿವಾನಗಿರಿಯ ಕೆಲಸದ ಮೇಲೆ ನೇಮಿಸು ವ ಪೂರ್ವದಲ್ಲಿ ನಾನು ಅನುಮಾನ ಮಾಡಿದಷ್ಟಕ್ಕಿಂತ ಹೆಚ್ಚು ಕಾರ್ಯಗಳು ನೆರವೇರಿರುತ್ತವೆ. ಆದ್ದರಿಂದ ಇವರ ಗುಣಗಳನ್ನು ಎಷ್ಟು ವರ್ಣಿಸಿದರೂ ತೀರದು.

ಇಲ್ಲಿಗೆ ಪೂರ್ಣಯ್ಯನ ವಿಷಯಕ್ಕೆ ಗೊತ್ತಾದಷ್ಟು ಚರಿತ್ರೆ ಯು ಸಂಪೂರ್ಣವಾಯಿತು. ಸಾಂಪ್ರತ ಕಾಲದಲ್ಲಿ ಮೈಸೂರ

ಮಹಾರಾಜರವರು ಬಾಲ್ಯದಿಂದಲೂ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಶ್ರದ್ಧೆಯನ್ನು
ರೆ. ಇವರು ಪೂರ್ಣಯ್ಯನ ಮೊಮ್ಮಕ್ಕಳು. ಇವರು ತಮ್ಮ ಕ
ಲಸವನ್ನು ಉತ್ತಮ ರೀತಿಯಿಂದ ಮಾಡುತ್ತಿದ್ದಾರೆ. ಅವರ ಮೇ
ಲೆ ಮೈಸೂರ ಮಹಾರಾಜರವರ ಪ್ರೇಮವು ಬಹಳ. ಮೈಸೂರ
ಸಂಸ್ಥಾನದ ಪ್ರಜೆಗಳು, ತಮ್ಮ ದಿವಾಣಬಹಾದ್ದೂರರವರಿಗೆ ದೇ
ವರು ಸುಖ ಸಂಪತ್ತುಗಳನ್ನು ಕೊಟ್ಟು ರಕ್ಷಿಸಲೆಂದು ಯಾವಾ
ಗಲೂ ಪ್ರಾರ್ಥಿಸುತ್ತಿರುತ್ತಾರೆ. ಪಾಶ್ಚಾತ್ಯರಿಗೆ ಸರಿದೋರುವಂಥ
ರಾಜ್ಯಕಾರಭಾರ ಪಟುತ್ವವು. ನಮ್ಮ ದೇಶದಲ್ಲಿ ಸರ್ ಟೀ ಮಾಧ
ವರಾವ ಆರ್ ರಘುನಾಥರಾವ, ಸರ್ ಸಾಲರಜಂಗ ಮುಂತಾದವ
ರಲ್ಲಿ ಒಬ್ಬೇ ಪಾಶ್ಚಾತ್ಯ ಜನರ ಸಹವಾಸದಿಂದಲೂ, ಅವರ ಶಿಕ್ಷ
ಣದ ಪ್ರಸಾದದಿಂದಲೂ ಇತ್ತಿತ್ತಲಾಗಿ ಬಂದದ್ದಲ್ಲ. ಅದು ನ
ಮ್ಮೊಳಗೆ ವಂಶಪರಂಪರಾಗತವಾದದ್ದು. ಈ ವಿಷಯವಾಗಿ ನಾ
ವು ಅಭಿಮಾನ ಪಡುವದು ಸ್ವಾಭಾವಿಕವು. ಈ ಕಾರಣದಿಂದಲೇ
ನಮ್ಮ ಸಾರ್ವಭೌಮರಿಗೆ ರಾಷ್ಟ್ರೀಯ ಸಭೆಯ ಮೂಲಕ
ವಾಗಿ ಬೇಡಿಕೊಳ್ಳುವದೇನಂದರೆ, ನಮ್ಮಲ್ಲಿರುವ ಗುಣವು ಸಾ
ಪ್ರತ ರಾಜ್ಯಕಾರಭಾರದಲ್ಲಿ ಉಪಯೋಗಿಸಲ್ಪಡಬೇಕೆಂದು ನಮ
ಗೆ ರಾಜ್ಯಕಾರಭಾರದೊಳಗೆ ದೊಡ್ಡ ದೊಡ್ಡ ಹುದ್ದೆಯ ಕೆಲಸ
ಗಳನ್ನು ಕೊಟ್ಟು ನೋಡತಕ್ಕದ್ದು. ಇದರಿಂದ ನಮ್ಮ ಪ್ರಭು
ಳಿಗೆ ಗುಣಜ್ಞತೆಯು ಕೀರ್ತಿಯು ದೊರೆಯುತ್ತದೆಂಬದಿಷ್ಟೇ ಅಲ್ಲ
ಸ್ವಲ್ಪ ಖರ್ಚಿನಲ್ಲಿ ರಾಜ್ಯಕಾರಭಾರವು ಚನ್ನಾಗಿ ನಡೆಯುವದು
ಮತ್ತು ನಮ್ಮ ರಾಷ್ಟ್ರದ ಹಿತಕ್ಕಾಗಿ ಈ ಗುಣವು ಉಪಯೋ
ಗಿಸಲ್ಪಟ್ಟಂತೆ ಆಗುವದು. ಬರಬರುತ್ತ ಈ ಗುಣವು ನಮ್ಮಲ್ಲಿ
ವೃದ್ಧಿ ಹೊಂದುವದು. ಇದಕ್ಕಿಂತ ಹೆಚ್ಚಿನ ಲಾಭವು ಆಡಾವ
ದುಂಟು?

HABIT

ಚಟವು.

ಯಾದೊಂದು ಚಟವು ದೃಢವಾಗಬೇಕಾದರೆ ಅದನ್ನು ಮೇಲೆ
ಮೇಲೆ ಮತ್ತು ನಿಯಮಿತ ವೇಳೆಗೆ ಮಾಡಬೇಕು. ಹೀಗೆ

ಮಾಡುವದರಿಂದ ಒಂದು ಭಾವನೆ ಹುಟ್ಟುವದು. ಭಾವನೆ ಉಂಟಾದ ಕೂಡಿಲೆ ಆದು ತನ್ನಿಂದ ತಾನೇ ಪೂರ್ಣವಾದ ರೆ ಪಕ್ಕಾ ಚಟವಾಯಿತು.

ಚಟದಲ್ಲಿ ಸಿಥಿಲತನವೂ ಅಥವಾ ಕೋಮಲತನವೂ ಬೇಕು. ದೊಡ್ಡವರಿಗೆ ಚಟ ಹಚ್ಚುವದಕ್ಕಿಂತ ಸಣ್ಣ ಹುಡುಗರಿಗೆ ಚಟ ಹಚ್ಚುವದು ಸುಲಭ. ಯಾಕಂದರೆ ದೊಡ್ಡವರಿಗೆ ಮೊದಲು ಕೆಲವು ಚಟ ಹತ್ತಿರುತ್ತವೆ. ಅವುಗಳನ್ನು ತೆಗೆದು ಹೊಸ ಚಟ ಹಚ್ಚಬೇಕಾದರೆ ಕಠಿಣವಾಗುತ್ತದೆ. ಸಣ್ಣ ಹುಡುಗರಿಗೆ ಚಟ ಹತ್ತಿರುವದಿಲ್ಲ. ಕಾರಣ ಅವರಿಗೆ ಹೊಸ ಚಟ ಹಚ್ಚುವದು ಸುಲಭವಾಗಿರುತ್ತದೆ. ಉದಾ—ಹುಡುಗರಿಗೆ ಲೇಖನೀ ಹಿಡಿಯಲಿಕ್ಕೆ ಮೊದಲು ಕಲಿಸುವದು ಸುಲಭ ಈ ನೇಮವು ಶಾರೀರ ಶಾಸ್ತ್ರಕ್ಕೂ ಹತ್ತುವದು. ಯಾಕಂದರೆ ದೊಡ್ಡವರಾದಾಗ ಇಂದ್ರಿಯಗಳೂ ನರಗಳೂ ಬಲತಿರುತ್ತವೆ. ಇದೇ ತತ್ವವು ಮನಕ್ಕೂ ಉಂಟು.

ಚಟದಿಂದಾಗುವ ಲಾಭ—ಹುಡುಗರು ಬೆಳೆಯಬೇಕಾದರೆ ಮನಸ್ಸಿನ ಹಾಗು ಶಾರೀರಕ ಚಟವಟಕೆಯು ಮುಖ್ಯ ಉಂಟು. ಆಗ ಚಲೋಚಟ ಹಚ್ಚುವದೇ ಉತ್ತಮ ಯಾಕಂದರೆ ಚಲೋ ಚಟದಿಂದ ಚಲೋ ಕೃತ್ಯಗಳು ಚಲೋ ರೀತಿಯಿಂದ ಮಾಡಲಿಕ್ಕೆ ಸುಲಭವಾಗುತ್ತವೆ. ಆಗ ಇಚ್ಛೆಯ ಕೆಲಸವು ಕಡಿಮೆಯಾಗುತ್ತದೆ. ಆಗ ಆ ಇಚ್ಛಾಶಕ್ತಿಯನ್ನು ಬೇರೆ ಕೆಲಸಕ್ಕೆ ಹಚ್ಚಲಿಕ್ಕೆ ಸುಲಭವಾಗುತ್ತದೆ ಇದರಂತೆ ಶಾರೀರಕ ಕ್ರಮವೂ ಕಡಿಮೆಯಾಗುತ್ತದೆ. ದಿನಾಲು ವ್ಯಾಯಾಮ ಮಾಡುವ ಚಲೋ ಚಟದಿಂದ ಶರೀರ ಸಾಮರ್ಥ್ಯವು ಬೆಳೆಯುವದು.

ಚಟದಿಂದಾಗುವ ಹಾನಿ— ದಿನಾಲು ಯಂತ್ರದಂತೆ ಕೆಲಸ ಮಾಡುವ ಚಟ ಬಿದ್ದವನಿಗೊಂದು ಹೊಸ ಪ್ರಸಂಗ ಬರಲು ಎರಡನೇ ರೀತಿಯಿಂದ ನಡೆಯುವದಕ್ಕೆ ಅವನಿಗೆ ತೊಂದರೆ ಯಾಗುತ್ತದೆ. ಅಂದರೆ ಚಟವು ಇವನ ಇಚ್ಛೆಯಂತೆ ಅಥವಾ ಮನೋಭಾವನೆಯಂತೆ ಅವನನ್ನು ನಡೆಯಗೊಡು-

ದಿಲ್ಲ. ನಾವು ಚಟಗಳಿಗೆ ಅಧೀನರಾಗಿರಬಾರದು ಚಟ
ಗಳು ನಮ್ಮ ಅಧೀನದಲ್ಲಿರಬೇಕು. ಕಾರಣ ವಿದ್ಯಾರ್ಥಿಗ
ಳಿಗೆ ಪೂರ್ಣ ಚಟ ಹತ್ತಗೊಡಬಾರದು. ಚಟವು ಇರುವ
ದು ಅವಶ್ಯ ವಿದ್ದಷ್ಟೇ ಕೆಲವು ಪ್ರಸಂಗದಲ್ಲಿ ಅದರ ಸಿಥಿಲ
ತ್ವವು ಇರುವದು ಅವಶ್ಯವದೆ. ಅಂದರೆ ಮಧ್ಯಮ ಮಾರ್ಗ
ದಿಂದ ನಡೆಯುಬೇಕು.

ಒಬ್ಬ ಗ್ರಂಥಕಾರನು ಬಲಗೈಗೇ ಪ್ರಾಧಾನ್ಯವನ್ನು ಕೊ
ಡಬಾರದೆಂದು ಅನ್ನುತ್ತಾನೆ. ಚಟಗಳ ಬಲದಿಂದ ಮುದ
ಕರು ತಮ್ಮ ಹಿಡಿದ ಹಟವನ್ನು ಬಿಡುವದಿಲ್ಲ. ಹೊಸಪ್ರ
ವೃತ್ತಿಗಳಿಗೆ ವಿರುದ್ಧವಾಗಿ ನಡೆಯುವರು.

ಕಟೆಂದರೆ ಕೃತ್ಯ ಮತ್ತು ಸೀಲಸ್ವಭಾವ ಇವುಗಳ
ನಡುವಿನ ಸ್ಥಿತಿಯು. ಯಾಕಂದರೆ ಕೃತ್ಯಗಳ ಹೊರ್ತು ಚ
ಟಹತ್ತುವದಿಲ್ಲ. ಚಟಗಳ ಸಮೂಹವೇ ಮನುಷ್ಯನ ಸೀ
ಲಸ್ವಭಾವ. ಹುಡುಗರಲ್ಲಿ ಕೆಲವು ಹುಟ್ಟುಗುಣಗಳು ಭಾ
ವನೆಗಳು ಇರುತ್ತವೆ. ಇವುಗಳನ್ನು ಕ್ರಮಗೊಳಿಸಿ, ಒ
ಲಪಡಿಸಿ ಚಲೋ ಮಾರ್ಗಕ್ಕೆ ಹಚ್ಚುವದೇ ಮುಖ್ಯ
ಅಂದರ ಅವನ ಚಟವಟಿಕೆಯನ್ನು ಉಪಯೋಗ ಮಾಡಿಕೊ
ಳಬೇಕು. ಹುಡುಗನ ಕಡೆಯಿಂದ ಕೃತ್ಯ ಮಾಡಿಸಿದರೆ
ಅವನಲ್ಲಿ ಇಚ್ಛೆಯು ಬೆಳೆಯುತ್ತದೆ. ಅವನ ಇಚ್ಛೆಯು
ಅವನ ಕೃತ್ಯಗಳಿಂದ ವ್ಯಕ್ತವಾಗುವದು ಸ್ವಭಾವ ಮತ್ತು
ಕೃತ್ಯಗಳು ಒಂದಕ್ಕೊಂದು ತಳಕು ಹಾಕಲ್ಪಟ್ಟಿರುತ್ತವೆ
ಕೃತ್ಯಗಳಿಂದ ಇಚ್ಛೆಯೂ, ಇಚ್ಛೆಯಿಂದ ಕೃತ್ಯಗಳೂ
ಗತ್ತ ಹೋಗಿ ಅವನಲ್ಲಿ ಸೀಲಸ್ವಭಾವಗಳುಂಟಾಗುತ್ತವೆ.

ಮಾಸ್ತರನು ಹುಡುಗನಲ್ಲಿ ಚಟವನ್ನು ಹೆಚ್ಚಿಸಬೇಕ
ದರೆ ಅವನ ಪ್ರಕೃತಿ ಸ್ವಭಾವ ಅವನ ಸ್ವಾಭಾವಿಕ ಹ
ಗು ಸಾಮಾಜಿಕ ಪರಿಸ್ಥಿತಿಯನ್ನು ವಿಚಾರ ಮಾಡಬೇಕು.
ಮೂಲಸ್ವಭಾವವು ಚಲೋಸ್ವಭಾವ ಆಗಲಿಕ್ಕೆ ಸಾಮಾಜಿ
ಕ ಹಾಗು ನೈತಿಕ ಪರಿಸ್ಥಿತಿಯು ನೆಟ್ಟಗಿದ್ದರೆ ಸುಲಭವಾಗು
ತ್ತದೆ. ಹೀಗೆ ಸ್ವಭಾವ ಹುಟ್ಟಿಸುವಾಗ್ಗೆ ಇದಕ್ಕೆ ಬರುವ

ವಿರುದ್ಧ ಸಂಗತಿಗಳನ್ನು ತೆಗೆದು ಹಾಳಜೇಕು. ಇದು ಮಾ
ಸ್ತರನ ಮುಖ್ಯ ಕೆಲಸವು. ಅಂದರೆ ಅವರನ್ನು ಅಡ್ಡ ಮಾ
ರ್ಗದಿಂದ ಹೋಗಗೊಡಬಾರದು. ಉದಾ:— ಗಂಟಿಚವ
ಡೇರ ಹುಡುಗರಿಗೆ ಸಾಮಾಜಿಕ ಮತ್ತು ನೈತಿಕ ಪರಿಸ್ಥಿ
ತಿ ಹಟ್ಟಿಸಲಿಕ್ಕೆ ಕಠಿಣವಾಗುತ್ತದೆ.

ಶಾಲೆಯಲ್ಲಿ ಹುಡುಗರಿಗೆ ಚಟವನ್ನು ಹ್ಯಾಗೆ ಹುಟ್ಟಿಸಬೇ
ಕು—ಶಾಲೆಯಲ್ಲಿಯ ಚಲೋ ಪದ್ಧತಿಗಳ ಉಪಯೋಗ
ದಿಂದ ಹುಡುಗರಿಗೆ ಚಲೋ ಚಟಗಳು ತೀವ್ರವಾಗಿ ಹತ್ತು
ತ್ತವೆ. ಚಟದ ಪದ್ಧತಿಗಳಿಗನುಸರಿಸಿ ಗೊತ್ತು ಪಡಿಸಿದ ನಿ
ತಿಗಳೇ ಚಲೋ ಪದ್ಧತಿಗಳು.

DEPARTMENTAL NOTICE.

ನೋಟೀಸುಗಳು.

I

ದಕ್ಷಿಣ ಭಾಗದೊಳಗಿನ ಯಾವತ್ತು ಶಾಲಾಧ್ಯಾಪಕರು
ಗೆ ತಿಳಿಸುವದೇನಂದರೆ— ಹೊಸದಾಗಿ ರಚಿಸಲ್ಪಟ್ಟ ಗುಜ
ರಾಥಿ, ಮರಾಠಿ, ಕನ್ನಡ ಬಂದನೇ ಎರಡನೇ ಪುಸ್ತಕಗಳು
ಸರಕಾರದಿಂದ ಮಂಜೂರಾಗಿರುತ್ತವೆ. ಅವು ಮುದ್ರಿಸಲ
ಟ್ಟು ವಾರಾಟಕ್ಕೆ ಸಿದ್ಧವಾಗಿರುವವು. ಈ ಪುಸ್ತಕಗಳ
ನ್ನು ಪ್ರಾಥಮಿಕ ಶಾಲೆಗಳ ಬಂದನೇ ಎರಡನೇ ಇಯತ್ತೆ
ಯ ವಿದ್ಯಾರ್ಥಿಗಳಿಗೆ ಓದಿಸತಕ್ಕದ್ದು. ಈಗಿರುವ ಕನ್ನ
ಡ ಮರಾಠಿ, ಗುಜರಾಥಿ ಬಂದನೇ ಎರಡನೇ ಪುಸ್ತಕಗಳು
ರದ್ದೆಂದು ತಿಳಿಯಬೇಕು.

ಉಳಿದ ಪುಸ್ತಕಗಳು ಮಾರ್ಚ್ ತಿಂಗಳ ಕೊನೆಯೊ
ಳಗೆ ಸಿದ್ಧವಾಗುವದು.

ಪುಣೆ ಡಾಯರೇಕ್ಟರ
ಸಾರವರ ಆಫೀಸು
ತಾ. ೧೦—೧೧—೦೫

(Sd). B. LORY,
for Director of Public Instruction
BOMBAY

II
PUBLIC SERVICE CERTIFICATE EXAMINATION SOUTHERN DIVISION.
ಮುಲಖೀ ಪರೀಕ್ಷೆಯು.

ದಕ್ಷಿಣಭಾಗದೊಳಗೆ ಅಂದರೆ ಧಾರವಾಡ ಬೆಳಗಾಂ ಕಾರವಾರ ಬಿಜಾಪೂರ ರತ್ನಾಗಿರಿ ಕುಲಾಬಾ ಕೊಲ್ಹಾಪೂರವೇ ಮೊದಲಾದ ದೇಶೀಯ ಸಂಸ್ಥಾನಗಳಲ್ಲಿ ಮುಲಖಿ ಪರೀಕ್ಷೆಗೆ ಕೊಡ್ರುವ ಯಾವತ್ತೂ ಉಮೇದವಾರರಿಗೆ ನ್ ೧೯೦೬-೦೭ನೇ ಇಸವಿಯಲ್ಲಾಗುವ ಪರೀಕ್ಷೆಗಾಗಿ ಗಿನ ಪುಸ್ತಕಗಳು ಆರಿಸಲ್ಪಟ್ಟಿವೆ. ೧೯೦೭ನೇ ಇಸವಿಯ ಜುಲೈ ೧೬ನೇ ತಾರೀಖಿನ ಮುಂಬಯಿ ಗವರ್ನಮೆಂಟ ಗ್ಯಾ ಝೀಟಿನ ೪೭೩—೪೭೪ನೇ ಪುಟಗಳಲ್ಲಿ ಈ ಸಂಗತಿಯು ರ್ತಿಸಿದ್ಧಿಸಲ್ಪಟ್ಟಿದೆ.

೨ ಬೆಳಗಾವಿ, ಬಿಜಾಪೂರ ಕಾರವಾರಗಳಲ್ಲಿ ಈ ಪರೀಕ್ಷೆಯು ಮರಾಠಿ ಕನ್ನಡ ಇವೆರಡೂ ಭಾಷೆಗಳಲ್ಲಿ ನಡೆಯುವದು. ಧಾರವಾಡದಲ್ಲಿ ಬರೇ ಕನ್ನಡ ಭಾಷೆಯಲ್ಲಿಯೂ ರತ್ನಾಗಿರಿ, ಕುಲಾಬಾ ಕೊಲ್ಹಾಪುರಗಳಲ್ಲಿ ಬರೇ ಮರಾಠಿ ಭಾಷೆಯಲ್ಲಿಯೂ ನಡೆಯುವದು.

೩ ಮರಾಠಿಯಲ್ಲಿ ಪರೀಕ್ಷೆಗೆ ಕೂಡ್ರಲಿಚ್ಛಿಸುವ ಧಾರವಾಡ ಜಿಲ್ಲೆಯ ಉಮೇದವಾರ ಮೆಹರ್ಬಾನ ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾ. ರವರ ಅಪ್ಪಣೆಯಿಂದ ಬೆಳಗಾವಿಯಲ್ಲಾಗುವ ಪರೀಕ್ಷೆಗೆ ಕೂಡ್ರಬಹುದು.

ಮಾಠ.

೧ ವಾಚನಪುಸ್ತಕ— ೬ನೇ ಪುಸ್ತಕ ಪೂರಾ.

೨ ಕವಿತೆ—ಮರಾಠಿ ೬ನೇ ಪುಸ್ತಕದ ೧೪೯ರಿಂದ ೩೦೦ ಪುಟಗಳೊಳಗಿನ ೩೦೦ ಪಂಕ್ತಿಗಳು ಅರ್ಥ ಸಹಿತ ಬಾಯಿಪಾಠ ಅನ್ನತಕ್ಕದ್ದು

ಕನ್ನಡ

೧ ವಾಚನೆ—ಕನ್ನಡ ೬ನೇ ಪುಸ್ತಕದ ಮೊದಲಿನ ೫ ನ್ನೂರು ಪುಟಗಳು

೨ ಕವಿತೆ—ಜೈಮಿನಿಯ ೪ನೇ ಸಂಧಿಯು ಆರಂಭದಿಂ ದ ೫೦ ಶ್ಲೋಕುಗಳು ಅರ್ಥ ಸಹಿತ ಬಾಯಿಪಾಠ ಬರತ ಕ್ಕದ್ದು.

ಉರ್ದು.

ಮೌಲವೀನಾಝೀರ ಅಹಮ್ಮದ ಎಂಬವರು ರಚಿಸಿದ ತೌಬತನ್ ನಾಸೂಹ ಎಂಬ ಪುಸ್ತಕವ

DHARWAR,
31-10-1905.

B. R. SAHASRABUDHE,
Edl Inspector S. D.

ಪ್ರಕಟನೆ.

ಮುಲಕೀ ಪರೀಕ್ಷೆಯ ಅಭ್ಯಾಸಕ್ಕೋಸ್ಕರ ಪ್ರಾಕ್ಟಿಸಿಂಗ ಸ್ಕೂಲಿಗೆ ಬರಲಪೇಕ್ಷಿಸುವ ವಿದ್ಯಾರ್ಥಿಗಳು ೧೯೦೬ನೇ ಇಸವಿಯ ಜನವರಿ ತಿಂಗಳ ೨ನೇ ತಾರೀಖಿನ ದಿವಸ ನಮ್ಮ ಲ್ಲಿಗೆ ಬಂದು ಹಾಜರಾಗಬೇಕು. ಅಂದರೆ ಪರೀಕ್ಷೆಯು ತ ಯಾರಿಯು ಚನ್ನಾಗಿ ಆಗುವದು.

ಪರಜಿಲ್ಲೆಯವರು ಜುಲಾಯಿತಿಂಗಳಿಗಿಂತ ಮೊದಲೇ ೬ ತಿಂಗಳು ಈ ಜಿಲ್ಲೆಯಲ್ಲಿರಬೇಕಾದದರಿಂದ ಮೇಲೆ ಬರೆದ ತಾರೀಖಿಗೆ ತಪ್ಪದೆ ಬರಬೇಕು. ತಡವಾಡಿ ಬಂದವರಿಗೆ ಪರೀಕ್ಷೆಗೆ ಕೂಡಲಿಕ್ಕೆ ಪರವಾನಗಿ ದೊರೆಯುವದಿಲ್ಲ.

ನಮ್ಮ ಸಾಲೆಯಲ್ಲಿ ಕಳೆದ ವರ್ಷ ೨೫೯. ಈ ವರ್ಷ ೨೬೯ ಪಾಸಾಗಿರುವದಲ್ಲದೆ ಎರಡೂ ವರ್ಷ ನಮ್ಮ ಸಾಲೆಯವ ರೇ ಒಂದನೇ ಎರಡನೇ ನಂಬರುಗಳನ್ನು ಪಡೆದಿರುವರು.

ಪ್ರಾಕ್ಟಿಸಿಂಗಸ್ಕೂಲ
ಟ್ರೇನಿಂಗಕಾಲೇಜ
ಧಾರವಾಡ
ತಾ. ೩೧—೧೦—೦೫

G. N. Deshpande,
ಹೆಡಮಾಸ್ತರ.

DHARWAR TRAINING COLLEGE CERTIFICATE EXAMINATION.
1905.

೩ನೇ ವರ್ಷ.

ಬುಧವಾರ, ೪ನೇ ಅಗಟೋಬರ
(೧೦½ ಯಿಂದ ೧½.)

ಭಾಷಾವಿಷಯ—ವ್ಯಾಕರಣ

(ಬಲಕ್ಕೆ ಬರೆದ ಅಂಕೆಗಳು ಪ್ರಶ್ನೆಗಳ ಪೂರ್ಣ ಗುಣಗಳು)

೧. ಶಬ್ದಮಣಿದರ್ಪಣದಲ್ಲಿ ನಿರ್ದೇಶಿಸಿದಂಥ ಪುರಾತನ ಕವಿಗಳ ಹೆಸರುಗಳಿಂದಲೂ ಬೇರೆ ಗ್ರಂಥಗಳಿಂದ ತೆಗೆದುಕೊಂಡ ಅವತರಣಗಳಿಂದಲೂ ಕೇಶಿರಾಜನ ದೇಶ ಕಾಲ ಮುಂತಾದವುಗಳ ಬಗ್ಗೆ ತಿಳಿದು ಬರುವಂಥ ಸಂಗತಿಗಳನ್ನು ವಿವರಿಸಿರಿ. ೧೦

೨. (ಅ) "ಸೂತ್ರ" ವೆಂದರೇನು? ಶಬ್ದಮಣಿದರ್ಪಣದೊಳಗಿನ ಸೂತ್ರಗಳಿಗೆ "ಸೂತ್ರ" ವೆಂಬ ಹೆಸರು ಎಷ್ಟು ಮಟ್ಟಿಗೆ ಯೋಗ್ಯವಾಗಿರುತ್ತದೆ? ಉತ್ತರವನ್ನು ಕಾರಣ ಸಹಿತವಾಗಿ ಬರೆಯಿರಿ. ೫

(ಆ) ಶಬ್ದಮಣಿದರ್ಪಣದಲ್ಲಿ ಕೊಟ್ಟಿರುವ ಧಾತು ಶಬ್ದದ ವ್ಯಾಖ್ಯೆಯನ್ನು ಬರೆದು ಅದರಲ್ಲಿರುವ ಕೊರತೆಗಳನ್ನು ವಿವರಿಸಿರಿ. ೫

೩. ಶಬ್ದಮಣಿದರ್ಪಣಕಾರನು "ಲಿಂಗ" "ವಿಭಕ್ತಿ" ಮತ್ತು "ನೇಯ" ಶಬ್ದಗಳನ್ನು ಯಾವ ಅರ್ಥಗಳಲ್ಲಿ ಉಪಯೋಗಿಸಿದ್ದಾನೆ? ಉತ್ತರವನ್ನು ಉದಾಹರಣೆಗಳಿಂದ ವಿವರಿಸಿರಿ. ೧೦

೪. ಶಬ್ದಮಣಿದರ್ಪಣದಲ್ಲಿ ಕೆಳಗೆ ಬರೆದ ಉದಾಹರಣ ೧೦

ರಣೆಗಳು ಯಾವ ನಿಯಮಗಳನ್ನು ವಿವರಿಸುವದಕ್ಕೆ ಕೂಟ್ಟರುತ್ತೆವೆ! :—

ಕಲ್ಲಾನೇರಿದಂ|
ವೇದಂಗಳ್ಪ್ರಮಾಣಂ।
ಮಾರ್ಗಿಡಿಗೆ ತೋಳಬಾಳ ಕೂರ್ಪಂ ತೋರ್ಪಂ!
ತಪ್ಪಂತನ್ನೊಳಪಳಂಚಿ ಕಿಡುಗುಟ್ಟಿ ತಪ್ಪುವಂಬುಗಳ ರವಂ
ಇಂತಟಾನೆ|

೫. ಕೆಳಗೆ ಬರೆದ ಸೂತ್ರದ ಅರ್ಥವನ್ನು ಬರೆದು ೧೫ ಉದಾಹರಣೆಗಳಿಂದ ಚನ್ನಾಗಿ ವಿಶದಪಡಿಸಿರಿ:—

ಸತತಂ ಮಧ್ಯಮ ಪುರುಷ
ಪ್ರತಿಷೇಧದ ವಿಧಿಯೊಳಂ ಪ್ರಯೋಜನವಸ್ತ್ವಾ|
ಶ್ರಿತಹೇತು ಕಿಯಿಯೊಳ ಮು
ನ್ನಿತಸುಳ್ಕ್ರಿಯೆ ತಾಂ ಕ್ರಿಯಾರ್ಥಮುಸ್ಪಡೆಗಳೊಳಂ|

೬. (ಅ) ಕೆಳಗೆ ಬರೆದ ಕಬ್ಬಗಳ ವುತ್ಪತ್ತಿಯನ್ನು ೫ ಬರೆಯಿರಿ:—

ಸೊಬಗು, ಹೊಡಮ, ಜಸೋಯಿಗುಡಾರ, ಮುಲಕಾಯಿ, ಕಿತ್ತಡಿ, ಕಳುಹಿಸು, ನಾಚಿಕೆ, ಅವಲಕ್ಕಿ ಪದಿಂಬಂ.

(ಬ) ಬಿಡು, ಕುಡು, ಸುಡು ಧಾತುಗಳಿಂದ ಭಾವನಾಮಗಳನ್ನು ಬರೆಯಿರಿ (ಇಕೆ, ಉದು ಎಂಬ ಪ್ರತ್ಯಯುಗಳನ್ನು ಸೇರಿಸ ಕೂಡದು).

೭. ನೀಸ, ಉತ್ಸಾಹ ರಗಳೆ, ಗೀತಿಕೆಗಳ, ಲಕ್ಷಣಗಳನ್ನು ಪ್ರಸ್ತಾರ ಸಹಿತವಾಗಿ ಬರೆಯಿರಿ, ಹಾಗೂ ಯಾವತ್ತು ಪಟ್ಟದಿಗಳಲ್ಲಿರುವ ಸಾಮ್ಯ ವೈಷಮ್ಯಗಳನ್ನು ತೋರಿಸಿ, ಯಾವತ್ತು ಪಟ್ಟದಿಗಳು ಕರಪಟ್ಟದಿಯಿಂದ ಹುಟ್ಟಿದುತ್ತವೆಂಬ ಅಭಿಪ್ರಾಯವನ್ನು ಎಷ್ಟು ಮಟ್ಟಿಗೆ ಯೋಗ್ಯವಾಗಿರುತ್ತದೆ ಬರೆಯಿರಿ.

೮. ಕೆಳಗಣ ಅಲಂಕಾರಗಳಿಗೆ ಲಕ್ಷಣಗಳನ್ನು ಬರೆ ೫ ದು ಉದಾಹರಣೆಗಳಿಗಾಗಿ ನೀವು ಓದಿದ ಪುಸ್ತಕಗಳೂ

ಳಿಗಿನ ಪದ್ಯಗಳನ್ನು ಕೊಡಿರಿ. ಅಥವಾ ಹಳಗನ್ನಡ ವಾಕ್ಯಗಳನ್ನು ಕಲ್ಪಿಸಿರಿ:—

ವಿರೋಧ, ವಿರೋಧಾಭಾಸ, ವಕ್ರೋಕ್ತಿ, ವಿಭಾವನೆ ಸ್ವಭಾವೋಕ್ತಿ,

೯. "ಪುರುಷಾರ್ಥಕ ಸರ್ವನಾಮಗಳು ವಿಕಾರಗಳಾಗಿ ಧಾತುಗಳಿಗೆ ಹತ್ತುವ ಪ್ರತ್ಯಯಗಳು ಪುರುಷ ಪ್ರತ್ಯಯಗಳೆನಿಸುತ್ತವೆ" ಎಂಬ ಈ ನಿಯಮವನ್ನು ಎಲ್ಲಿ ಖ್ಯಾತ ಪ್ರತ್ಯಯಗಳನ್ನು ತೆಗೆದುಕೊಂಡು ವಿವರಿಸಿರಿ.

೧೦ ಕೆಳಗೆ ಬರೆದ ಗದ್ಯವನ್ನು ಅದಷ್ಟು ಮಟ್ಟಿಗೆ ದೇಶೀ ಶಬ್ದಗಳನ್ನೇ ಉಪಯೋಗಿಸಿ ಹಳಿಗನ್ನಡದಲ್ಲಿ ಬರೆಯಿರಿ :—

ಪೂರ್ವ ಕಾಲದಲ್ಲಿ ಈ ಪೃಥ್ವಿಯಲ್ಲಿ ತ್ರಿಶಂಕುವೆಂಬ ಒಬ್ಬ ಸೂರ್ಯವಂಶದ ಅರಸು ಕೆಲವು ಕಾಲ ರಾಜ್ಯವನ್ನು ಮಾಡುತ್ತಿದ್ದನು. ಈತನಿಗೆ ಸರ್ವ ಲಕ್ಷಣ ಲಕ್ಷಿತೆಯಾದ ಪದ್ಮಾವತಿ ಎಂಬ ಹೆಸರುಳ್ಳ ಪಟ್ಟದ ರಾಣಿ ಇದ್ದಳು. ಈ ದಂಪತಿಗಳು ಶರೀರಗಳೆರಡಾದರೂ ಮನವೊಂದೆಂಬಂತೆ ಪ್ರೀತಿಯಿಂದಿದ್ದರು. ಅವರಿಗೆ ಯಾವತ್ತು ಸುಖಗಳಲ್ಲಿ ಕೊರತೆ ಇಲ್ಲದಿದ್ದರೂ ಬಹು ಕಾಲಕ್ಕೆ ಸಂತತಿಯಾಗಲಿಲ್ಲವೆಂಬ ಕುಂದು ಎಲ್ಲ ಭೋಗಗಳಲ್ಲಿಯೂ ನೈರಾಶ್ಯವನ್ನು ಹುಟ್ಟಿಸಿತು ಅದರಿಂದ ಇವರಿಬ್ಬರುಯಾವಾಗಲೂ ಚಿಂತೆಯನ್ನು ಹೊರತು ರಾಜ್ಯ ವಿಷಯಗಳನ್ನೂ ಭೋಜ್ಯ ವಿಷಯಗಳನ್ನೂ ಬಿಟ್ಟರು. ಬಳಿಕ ಆ ಮಹಾರಾಯನು ಸಂಪತ್ತು ಸತಿ ತನುಜ ಸುಖವೆಲ್ಲವೂ ಪೂರ್ವ ಕರ್ಮಾನುಸಾರವಾಗಿ ಉಂಟಾಗುತ್ತದೆಂತಲೂ ನಿರಾಶೆಯೇ ಪರಮ ಸುಖವೆಂತಲೂ ತಿಳಿದು ಚಿಂತೆಯನ್ನು ಬಿಟ್ಟು ಬ್ರಾಹ್ಮಣರಿಗೆ ನಾನಾ ವಿಧದ ದಾನ ಧರ್ಮಗಳನ್ನು ಮಾಡುವದರಲ್ಲಿ ತನ್ನ ವಿತ್ತವನ್ನು ವಿಶೇಷವಾಗಿ ವಿನಿಯೋಗಿಸಿ, ಯಜ್ಞಾದಿಗಳನ್ನು ಮಾಡಿಸಿ, ಕೆರೆ ಭಾವಿಗಳನ್ನು ಏರ್ಪಡಿಸಿ, ಅರವಟ್ಟಿಗೆಗಳನ್ನು ಸತ್ರಗಳನ್ನು ಕಟ್ಟಿಸಿ ಜನರ ಪ್ರೀತಿಗೆ ಈಡಾದನು.